॥ ಶ್ರೀಃ ಹರಿಃ ಓಂ ॥

॥ ಶ್ರೀಗರುಡವಾಹನ ಲಕ್ಷ್ಮೀನರಸಿಂಹಾಯ ನಮಃ ॥

॥ ಶ್ರೀ ಜಗನ್ನಾಥವಿಠಲಾಯ ನಮಃ ॥

# ಸಂಧಿ (೧೦)

# ಸರ್ವಪ್ರತೀಕ ಸಂಧಿ

## ಸಂಧಿಯ ಸಾರ :

ಚರಾಚರಾಯುಕ್ತವಾದ ಈ ಸಮಗ್ರಬ್ರಹ್ಮಾಂಡವೇ ಸರ್ವತ್ರವ್ಯಾಪ್ತನಾದ ಶ್ರೀಪರಮಾತ್ಮನಿಗೆ ನಿವಾಸಸ್ಥಾನವು. ಸರ್ವಜೀವರೂ ಹಾಗೂ ಜಡ ವಸ್ತುಗಳೂ ಬಿಂಬನಾದ ಶ್ರೀಹರಿಗೆ ಪ್ರತೀಕವೆನಿಸುವುವು. ಸರ್ವಜೀವರಲ್ಲಿ ಬಿಂಬರೂಪನಾಗಿ, ಸಮಸ್ತಜಡವಸ್ತುಗಳಲ್ಲಿ ವ್ಯಾಪಕನಾಗಿ, ಆ ಜಗದ್ಭರಿತನು ಅಣುರೇಣುತೃಣಕಾಷ್ಠಾದಿಗಳಲ್ಲಿ ಸರ್ವತ್ರವ್ಯಾಪಕನಾಗಿದ್ದಾನೆ. ಇಂತು ಸರ್ವತ್ರ ವ್ಯಾಪಕನಾದ ಆ ಜಗತ್ಪ್ರಭುವಿನ ಭಗವದ್ರೂಪಗಳ ಚಿಂತನೆ, ಧ್ಯಾನೋಪಾಸನಾ ಕ್ರಮವನ್ನು ಈ ಸಂಧಿಯಲ್ಲಿ ವಿವರವಾಗಿ ತಿಳಿಸುತ್ತಾರೆ. ಈ ಕಾರಣದಿಂದ ಈ ಸಂಧಿಗೆ **"ಸರ್ವಪ್ರತೀಕ ಸಂಧಿ"** ಎಂದು ಹೆಸರು.

ಹೀಗೆ ಸರ್ವಸ್ಥಳಗಳಲ್ಲಿ ಪರಿಪೂರ್ಣವಾಗಿ ವ್ಯಾಪ್ತನಾಗಿರುವ ಆ ಜಗದ್ವ್ಯಾಪ್ತನಿಗೆ ತತ್ತತ್ಸ್ಥಾನಗಳಲ್ಲಿ ಸ್ಮರಣಪೂರ್ವಕವಾಗಿ ಚಿಂತನೆ, ಅಯಾಯಾ ಸ್ಥಾನಗತನಾದ ಪರಮಾತ್ಮನ ಪಾದಪದ್ಮಗಳಿಗೆ ಸಮಸ್ತಕರ್ಮಗಳನ್ನೂ ಅರ್ಪಣ ಮಾಡಬೇಕೆಂಬ ತತ್ತ್ವವು ಪ್ರತಿಪಾದಿತವಾಗಿರುವುದರಿಂದ ಈ ಸಂಧಿಗೆ **"ಸರ್ವ ಸಮರ್ಪಣ ಸಂಧಿ"** ಎಂತಲೂ ಕರೆಯುವರು.

ಅನಂತಕಲ್ಯಾಣಗುಣಗಣಪರಿಪೂರ್ಣನೂ, ಅತಏವ ಸಮಸ್ತದೋಷ ವಿದೂರನೂ ಆದ ಶ್ರೀಮನ್ನಾರಾಯಣನ ಪರಮಾನುಗ್ರಹದಿಂದ ಅಂಗ ಸಾಯುಜ್ಯರೂಪವಾದ ಮುಕ್ತಿಸಾಮ್ರಾಜ್ಯವನ್ನು ಪಡೆಯುವ ಪರಮಾಧಿಕಾರಿ ಗಳಾದ ಚತುರ್ಮುಖಬ್ರಹ್ಮದೇವರು ಇತ್ಯಾದಿ ದೇವತಾವರ್ಗ ನಿರಂತರ ದಲ್ಲಿಯೂ ಶ್ರೀಹರಿಯ ಚರಣಕಂಜಗಳನ್ನು ಸೇವಿಸುತ್ತಿರುವ ಭಕ್ತರಿಗೆ ಯಾವಾ ಗಲೂ ಅನುಕೂಲರಾಗಿರುವರು. ದೇಹಗತ ತತ್ತ್ವಾಭಿಮಾನಿ ಅಸುರರಾಗಲೀ ಬಾಹ್ಯಗತ ದೈತ್ಯರಾಗಲೀ, ಅಂತಹ ಭಗವದ್ಭಕ್ತರಿಗೆ ಎಂದೆಂದಿಗೂ ಕೆಡಕನ್ನು ಉಂಟುಮಾಡಲಾರರು. ಶ್ರೀಲಕ್ಷ್ಮೀವಿಲಾಸಾಸ್ಪದನಾದ ಶ್ರೀನಿವಾಸನ ನಿಜ ದಾಸರಿಗೆ ಎಂದೆಂದಿಗಾದರೂ ಅಪಜಯವುಂಟೇ ?

ಸಮಸ್ತಮಂಗಳಪ್ರದನಾದ ಶ್ರೀದನಾಮಕ ಶ್ರೀಪರಮಾತ್ಮನ ಚರಣಾರ ವಿಂದಗಳನ್ನು ಏಕಾದಶೇಂದ್ರಿಯವಾದ ಮನಸ್ಸಿನಲ್ಲಿ ಸದಾ ಸಂಸ್ಮರಿಸುತ್ತಿರುವ ಅಂತರಂಗಭಕ್ತರಿಗೆ ಚಂದ್ರಾದಿ ನವಗ್ರಹ ವರ್ಗಗಳೂ, ತತ್ತ್ವಾಭಿಮಾನಿ ದೇವತೆ ಗಳೂ, ಅವರಿಗೆ ಅನುಕೂಲರಾಗಿದ್ದು, ದೈಹಿಕ, ಮಾನಸಿಕ ಹಾಗೂ ಆಧ್ಯಾತ್ಮಿಕ ಆಧಿ ವ್ಯಾಧಿಗಳನ್ನು ಪರಿಹರಿಸುತ್ತಾ, ಬಿಂಬನಾದ ಶ್ರೀಶನ ಆಜ್ಞಾಧಾರಕರಾಗಿ ತಾವೆಲ್ಲರೂ ಸೇರಿ, ಅಂತಹ ಭಗವದ್ಭಕ್ತರನ್ನು ಕಾದುಕೊಂಡಿರುವರು.

ಭೂಮಿಯ ಮೇಲೆ ಅಲ್ಲಲ್ಲಿ ಗೋಚರವಾಗುವ ಗೋಪಾದದ ಪರಿಮಿತಿ ಯುಳ್ಳ ಉದಕವು ಪುಣ್ಯತೀರ್ಥವು. ವೃಕ್ಷಗಳು, ಪರ್ವತಗಳು, ಭೂಮಿ ಇವೇ ಸುಕ್ಷೇತ್ರಗಳು. ಸಮಸ್ತಜೀವವರ್ಗ ಶ್ರೀಪರಮಾತ್ಮನ ಪ್ರತೀಕರೂಪವಾದ ಚಲಪ್ರತಿಮೆಗಳು. ಉತ್ತಮಜ್ಞಾನಾನುಸಂಧಾನದಿಂದ ಅವರು ಸ್ವೀಕರಿಸುವ ಅನ್ನಾದಿ ಆಹಾರ ವಸ್ತುಗಳು, ಆ ಭೋಜನದ್ರವ್ಯಾಂತರ್ಗತ ಶ್ರೀಪರಮಾತ್ಮ ನಿಗೆ ನೈವೇದ್ಯವು. ನಿತ್ಯದಲ್ಲಿ ಮಾರ್ಗ ನಡೆಯುವ ಕ್ರಿಯೆಯೇ ಪರಮಾತ್ಮ ನಿಗೆ ನರ್ತನರೂಪವಾದ ಸೇವಾ. ಈ ಪ್ರಕಾರ ತಿಳಿದು, ಉತ್ತಮಜ್ಞಾನಾನು ಸಂಧಾನದಿಂದ ತನ್ನ ದಿನಚರಿಯ ನಿತ್ಯಾನುಷ್ಠಾನದಲ್ಲಿ ತರುವವನೇ ಬ್ರಹ್ಮ ಜ್ಞಾನಿ (ಯೋಗಿ) ಎಂದೆನಿಸುವನು.

ಪೂರ್ವೋಕ್ತಜ್ಞಾನಾನುಸಂಧಾನವುಳ್ಳ ಯೋಗಿಗಳಿಗೆ ಭೂಮಂಡಲಗತ ಸರ್ವದೇಶವು ಪುಣ್ಯದೇಶವೆನಿಸುವುದು, ಸರ್ವಕಾಲವೂ ಪುಣ್ಯಕಾಲವೆನಿಸು

ವುದು. ಸಮಸ್ತಜೀವರು ದಾನಕ್ಕೆ ಪಾತ್ರರಾದವರು. ಈ ಜಗತ್ರಯದಲ್ಲಿ ಅವರಾಡುವ ಮಾತುಗಳೆಲ್ಲವೂ ವೇದೋಕ್ತಮಂತ್ರಗಳೆನಿಸುವುವು. ಅವರೆಸಗುವ ಸಕಲಕರ್ಮವಿಶೇಷಗಳೆಲ್ಲವೂ ಭಗವತ್ಪೂಜೆಯೆನಿಸುವುವು. ರುದ್ರದೇವ ರಿಂದ ವಂದ್ಯನಾದ ನಿರ್ದೋಷನಾದ ಆ ಭಗವಂತನ ಧ್ಯಾನದಲ್ಲಿ ಸದಾನಿರತ ರಾಗಿರುವ ಬ್ರಹ್ಮಜ್ಞಾನಿಗಳಿಗೆ ಪೂರ್ವೋಕ್ತಜ್ಞಾನಾನುಸಂಧಾನವಿರುವುದು.

ನೀರು ನಿಂತಿರುವ ದೊಣೆಗಳು, ಪುಷ್ಕರಣಿಗಳು, ಸಣ್ಣ ದೊಡ್ಡ ಕೆರೆಗಳು, ಇಳಿಯುವ ಭಾವಿಗಳು, ಸರೋವರಗಳೂ ಇತ್ಯಾದಿಗಳಲ್ಲಿ ವಿದ್ಯಮಾನರಾಗಿರುವ ತೀರ್ಥಾಭಿಮಾನಿದೇವತೆಗಳು, ಈ ಸ್ಥೂಲದೇಹದಲ್ಲಿರತಕ್ಕ ಮೂರುವರೆ ಕೋಟಿ ರೋಮಕೂಪಗಳಲ್ಲಿ ವ್ಯಾಪಿಸಿರುವರು. ಆಕಾಶಗಂಗೆ ಎಂದು ಪ್ರಖ್ಯಾತ ವಾಗಿರುವ ಗಂಗಾನದಿ ಇತ್ಯಾದಿ ಪುಣ್ಯನದಿಗಳು ನಮ್ಮ ಸ್ಥೂಲದೇಹಗತ ೭೨,೦೦೦ ನಾಡಿಗಳಲ್ಲಿ ಪ್ರವಹಿಸುತ್ತಿವೆ ಮತ್ತು ಆ ನದ್ಯಭಿಮಾನಿದೇವತೆಗಳು ಆಯಾಯಾ ನಾಡಿಗಳಲ್ಲಿದ್ದಾರೆ ಎಂದು ಅನುಸಂಧಾನಪೂರ್ವಕ ತಿಳಿಯಬೇಕು.

ನಮ್ಮ ಶರೀರದಲ್ಲಿರುವ ಮೂರುವರೆಕೋಟಿ ರೋಮಕೂಪಗಳಲ್ಲಿ ತೀರ್ಥಾಭಿಮಾನಿದೇವತೆಗಳೂ ಮತ್ತು ೭೨,೦೦೦ ನಾಡಿಗಳಲ್ಲಿ ಗಂಗಾದಿಪುಣ್ಯ ನದಿಗಳೂ ಮತ್ತು ನದ್ಯಭಿಮಾನಿದೇವತೆಗಳೂ ಇದ್ದಾರೆ. ಆ ದೇವತೆಗಳ ಅಂತರ್ಗತರಾಗಿ ಭಾರತೀರಮಣರಾದ ಮುಖ್ಯಪ್ರಾಣದೇವರು ನಿಯಾಮಕರಾಗಿ ದ್ದಾರೆ. ಅಂತಹ ವಾಯ್ವಂತರ್ಗತನಾಗಿ ಲಕ್ಷ್ಮೀಪತಿಯಾದ ಮಾಧವನಾಮಕ ಪರಮಾತ್ಮನು ಅಂತರ್ಯಾಮಿಯಾಗಿದ್ದಾನೆ. ನಿರಂತರದಲ್ಲಿ ಈ ಶರೀರ ದಲ್ಲಿ ಸಮಸ್ತದೇವತಾಗಣಸಹಿತನಾಗಿ ವಿಹಾರಮಾಡುತ್ತಾ ಕ್ರೀಡಿಸುತ್ತಿದ್ದಾನೆ ಎಂದು ತಿಳಿದಿರುವ ಜ್ಞಾನಿಗಳು ದೇವತೆಗಳು. ಅವರ ಶರೀರವು ಪುಣ್ಯಕ್ಷೇತ್ರ ಎನಿಸುವುದು. ಅಂತಹವರ ಚಲಪ್ರತಿಮೆಗಳ ಸೇವೆಯೇ ಹರಿಯಪೂಜೆ.

ಸ್ನಾನವನ್ನು ಜ್ಞಾನಾನುಸಂಧಾನದಿಂದ ಮಾಡುವ ಕ್ರಮವನ್ನು ಮುಂದಿನ ೨ನೆಯ ಪದ್ಯದಲ್ಲಿ ತಿಳಿಸುತ್ತಾರೆ. ನಾವು ಸ್ನಾನ ಮಾಡುತ್ತಿರುವ ನೀರು ಈ ದೇಹಗತ ದಹರಾಕಾಶದಲ್ಲಿರುವ ಹೃದಯಕಮಲಾಧಿಷ್ಠಿತ ಬಿಂಬನಿಗೆ ಅಭಿಷೇಕ ವೆಂದರಿಯಬೇಕು. ಈ ಅನುಸಂಧಾನಪೂರ್ವಕವಾಗಿ ಭೂಮಿಯಲ್ಲಿ ಯಾವ ಉದಕದಲ್ಲಿ ಮಿಂದರೂ, ಗಂಗಾದಿ ಸಮಸ್ತನದ್ಯಭಿಮಾನಿದೇವತೆಗಳು ಬಂದು ಆ

ನೀರಿನಲ್ಲಿ ನೆಲೆಗೊಳ್ಳುವರು. ಈ ರಹಸ್ಯತತ್ತ್ವವನ್ನರಿಯದ ಜನರು ಅಮರ ತರಂಗಿಣಿಯಾದ ಗಂಗಾನದಿಯಲ್ಲಿ ಮಿಂದರೂ ಫಲವೇನೂ ಇಲ್ಲವೆಂದು ತಿಳಿಸುತ್ತಾರೆ.

ನದ ನದಿಗಳು – ಎಂದರೆ ನದ್ಯಭಿಮಾನಿ ಸ್ತ್ರೀದೇವತೆಗಳು ಮತ್ತು ಪುರುಷದೇವತೆಗಳು–ಸಮುದ್ರಪರ್ಯಂತ ಹರಿಯುವುವು. ನಂತರ ಸಮುದ್ರವನ್ನು ಸೇರುವುವು. ನದಿಗಳ ನೀರು ಸಮುದ್ರೋದಕದಲ್ಲಿ ಮಿಳಿತವಾದರೂ ಪ್ರತ್ಯೇಕವಾಗಿಯೇ ಇರುವುವು. ಆ ನದಿಗಳ ನೀರು ಸಮುದ್ರೋದಕವೇ ಆಗಿರುವುದಿಲ್ಲ. ಒಂದೇ ಆಗಿರುವಂತೆ ಹೊರಗೆ ತೋರಿದರೂ ಪೃಥಕ್ ಪೃಥಕ್ಕಾಗಿಯೇ ಇರುವುವು. ಇದೊಂದು ವಿಶೇಷಧರ್ಮವು. ಅಂತೆಯೇ ವಿಧ್ಯುಕ್ತವಾದ ವಿಧಿನಿಷೇಧರೂಪವಾದ ಕರ್ಮಗಳನ್ನು ಆಚರಿಸುವ ಬ್ರಹ್ಮಜ್ಞಾನಿಗಳು ಸರ್ವತ್ರ, ಸರ್ವಕಾಲಗಳಲ್ಲಿ ಆಯಾಯಾ ಅಧಿಷ್ಠಾನಗತ, ಕರ್ಮಾಂತರ್ಗತ ಕಾಲಾಂತರ್ಗತ ಭಗದ್ರೂಪಗಳನ್ನು ನಿರಂತರದಲ್ಲಿಯೂ ಚಿಂತಿಸುತ್ತಿರುವವರು. ಯೋಗ್ಯನಿಷ್ಕಾಮಕರ್ಮಗಳಲ್ಲಿ ನಿರತರಾದಾಗ್ಯೂ ಭಗವದುಪಾಸನಾರೂಪವಾದ ಅಸಂಪ್ರಜ್ಞಾತಸಮಾಧಿಸ್ಥಿತಿಯಲ್ಲಿ ಆ ಕರ್ಮಗಳನ್ನು ತ್ಯಾಗಮಾಡಿ ಇರುತ್ತಾರೆ ಎಂದು ಮುಂದಿನ ೮ನೆಯ ಪದ್ಯದ ತಾತ್ಪರ್ಯಾರ್ಥವು.

ನಮ್ಮ ದೇಹದಲ್ಲಿ ಬ್ರಹ್ಮಾದಿತತ್ತ್ವಾಭಿಮಾನಿಗಳು ಇದ್ದು, ತತ್ತ್ವಕಾರ್ಯಗಳನ್ನು ಹರಿಯ ಪ್ರೇರಣಾನುಸಾರ ಮಾಡುತ್ತಿರುವರು. ಅಂತೆಯೇ ಕಲ್ಯಾದಿತತ್ತ್ವಾಭಿಮಾನಿದೈತ್ಯರು ಸಹ ವಿದ್ಯಮಾನರಾಗಿದ್ದು, ದುಷ್ಕಾರ್ಯಗಳನ್ನು ಮಾಡುತ್ತಿರುವರು. ಇಂತಹ ಕಲ್ಯಾದಿದೈತ್ಯವರ್ಗದಲ್ಲಿ ಬ್ರಹ್ಮ ರುದ್ರಾದಿ ದೇವತೆಗಳು ತಾವೇ ನಿಯಾಮಕರಾಗಿದ್ದು, ಶ್ರೀಹರಿಆಜ್ಞೆಯಂತೆ ಅವರವರ ಸ್ವರೂಪಯೋಗ್ಯತಾನುಸಾರ ತಮೋಗುಣ ನಿಮಿತ್ತ ಮಾಡಿ, ಪಾಪಕರ್ಮಗಳನ್ನು ಮಾಡಿಸಿದರೂ, ಆ ದೇವತೆಗಳಿಗೆ ಆ ಪಾಪಕರ್ಮಗಳಿಂದ ಲೇಪವಿಲ್ಲ. ತಾವು ಭಕ್ತಿ, ಜ್ಞಾನಪೂರ್ಣರಾಗಿದ್ದು, ಅ ದೈತ್ಯರಲ್ಲಿಯೂ ಸಹ ಸ್ವಸಂತೋಷದಿಂದಲೇ ಇರುತ್ತಾರೆ ಎಂದು ತಿಳಿಸುತ್ತಾರೆ ಮುಂದಿನ ೯ನೆಯ ಪದ್ಯದಿಂದ.

ದೇಹಗತರಾಗಿ ತತ್ತ್ವಕಾರ್ಯಗಳನ್ನು ಮಾಡುತ್ತಿರುವ ದೇವತೆಗಳಿಗೆ ಯಾವ ಪಾಪಕರ್ಮಗಳ ಲೇಪವಿಲ್ಲ ಎಂದು ತಿಳಿಸುತ್ತಾರೆ ಮುಂದಿನ ೧೦ನೆಯ ಪದ್ಯದಿಂದ.

ಪೂರ್ವೋಕ್ತ ತತ್ತ್ವಾಭಿಮಾನಿದೇವತೆಗಳು ತ್ರಿವಿಧರಾದ ಯಾವ ಜೀವರಲ್ಲಿದ್ದರೇನು, ಆಯಾಜೀವರ ಅನಾದಿಕರ್ಮಾನುಸಾರ, ಆವ ಕರ್ಮಗಳನ್ನು ಮಾಡಿಸಿದರೇನು, ನೀಚಾಧಿಷ್ಠಾನ ದೈತ್ಯರು, ಮಧ್ಯಮಾಧಿಷ್ಠಾನ ನಿತ್ಯಸಂಸಾರಿಗಳು, ಉತ್ತಮಾಧಿಷ್ಠಾನ ದೇವತೆಗಳಲ್ಲಿ ಆಯಾಯ ಅಧಿಷ್ಠಾನಗತ ಭಗವದ್ರೂಪಗಳ ಉಪಾಸನಾ ಮಾಡಿದರೇನು, ಸಮಸ್ತಜೀವರನ್ನೂ ಸಂರಕ್ಷಿಸುತ್ತಿರುವ ಆ ಪರಮಾತ್ಮನ ಕರುಣಾಕಟಾಕ್ಷವೀಕ್ಷಣಬಲದಿಂದ ನಿರ್ಭಯದಿಂದ ಚಲಿಸುವ ಆ ದೇವತೆಗಳನ್ನು ಪಾಪಕರ್ಮಗಳು ಎಂದಿಗೂ ಸ್ಪರ್ಶಿಸಲಾರವು. ಆ ಪಾಪಕರ್ಮಫಲದಿಂದ ನಿರ್ಲಿಪ್ತರಾಗಿರುತ್ತಾರೆಂದು ತಾತ್ಪರ್ಯ.

ನಿರ್ವಿಕಾರನಾದ, ಜಗದ್ವಿಲಕ್ಷಣನಾದ, ಶಶ್ವದೇಕಪ್ರಕಾರನಾದ ಅಚ್ಯುತನಾಮಕಹರಿಯ ದಾಸರಿಗೆ ದೋಷಸಮೂಹಗಳು ಎಂದೆಂದಿಗೂ ಸಂಬಂಧಿಸುವುದಿಲ್ಲ. ಅವರು ಶ್ರೀಹರಿಯ ಅಂತರಂಗಭಕ್ತರು. ಅಹಂಮಮತಾದಿಗಳಿಂದ ದೂರರಾಗಿ ಶ್ರೀಪರಮಾತ್ಮನ ಅನಂತಕಲ್ಯಾಣಗುಣಗಳೆಂಬ ಪ್ರವಾಹದಲ್ಲಿ ಸದಾ ಧ್ಯಾನಾಸಕ್ತರಾಗಿರುತ್ತಾರೆ. ಅವನ ಗುಣರೂಪ ಕ್ರಿಯಾತ್ಮಕವಾದ ಹರಿಕಥಾಮೃತವೆಂಬ ದಿವ್ಯಸುಧಾಪಾನಾಸಕ್ತರಾಗಿ, ಸಮಸ್ತಕರ್ಮಗಳನ್ನು ಬಿಂಬನಿಗೆ ಸಮರ್ಪಿಸುತ್ತಿರುವರು. ಅಹಂಕರ್ತಾಭಿಮಾನರಹಿತರಾಗಿರುವರು. ಈ ತತ್ತ್ವವನ್ನು ದಾಸರಾಯರು ಒಂದು ಸುಂದರವಾದ ಉಪಮಾನದಿಂದ ವಿವರಿಸುತ್ತಾರೆ. ಪತಿವ್ರತಾಸ್ತ್ರೀಯು ಅಗ್ನಿಸಾಕ್ಷಿಯಾಗಿ ಲಗ್ನವಾದ ತನ್ನ ಪತಿಯೊಡನೆ ಮನಬಂದಂತೆ ರಮಿಸಿ, ಸುಖಿಸುತ್ತಾ ಪುತ್ರನನ್ನು ಪಡೆಯುವಳು. ಆದರೂ ಜಿತೇಂದ್ರಿಯಳೆಂದು ಕರೆಸುವಳು. ಅಂತೆಯೇ, ಈ ಪ್ರಪಂಚದಲ್ಲಿಯೇ ಇದ್ದು, ಪ್ರಾಪಂಚಿಕ ಭೋಗಭಾಗ್ಯಗಳನ್ನು ಇಚ್ಛಾನುಸಾರ ಅನುಭವಿಸುತ್ತಿದ್ದರೂ, ಅಚ್ಯುತನ ನಿಜದಾಸರು ನಿಷ್ಕಾಮಭಾವನೆಯಿಂದ ಕರ್ಮಲೇಪನವಿಲ್ಲದೇ ಇರುವರು.

ಸರ್ವಾಭೀಷ್ಟಫಲಪ್ರದನಾದ ಶ್ರೀಪರಮಾತ್ಮನನ್ನು ಬಿಟ್ಟು ಅನ್ಯದೇವತೆಗಳನ್ನು ಪೂಜೆಮಾಡುವವರಿಗೆ ಗತಿಯಿಲ್ಲ ಎಂದು ತಿಳಿಸುತ್ತಾರೆ, ಮುಂದಿನ ೧೨ನೆಯ ಪದ್ಯದಿಂದ.

ದಡವನ್ನು ಮೀರಿ ಪೂರ್ಣಪ್ರವಾಹದಿಂದ ತುಂಬಿ ಹರಿಯುತ್ತಿರುವ ನದಿಯಲ್ಲಿ ತನ್ನ ಸಾಹಸವನ್ನು ಪ್ರದರ್ಶಿಸುವೆನೆಂದು ಮೂರ್ಖಮಾನವ

ನೊಬ್ಬನು ಪ್ರವಾಹಕ್ಕೆದುರಾಗಿ ಈಜಲು ಪ್ರಯತ್ನಿಸಿದರೆ, ಕೈನೋವಿನಿಂದ, ಬಳಲಿ ಪ್ರವಾಹದಲ್ಲಿ ಮುಳುಗುವನು. ಅಂತೆಯೇ ತನ್ನ ಯೋಗ್ಯತೆಗೆ ಮೀರಿ ದಂಥ ಅಭಿಲಾಷೆಗಳನ್ನು ಮನಸ್ಸಿನಲ್ಲಿ ಇಟ್ಟುಕೊಂಡು, ಆ ಮನೋಭಿಲಾಷೆಗಳ ಪ್ರಾಪ್ತಿಗಾಗಿ ಮೋಕ್ಷಪ್ರದನಾದ ಮುಕುಂದನನ್ನು ಬಿಟ್ಟು, ಅನ್ಯದೇವತೆ ಗಳನ್ನೂ, ಕ್ಷುದ್ರದೇವತೆಗಳನ್ನೂ ಆರಾಧಿಸುವ ಮಾನವರಿಗೆ ಗತಿ ಇಲ್ಲವೆಂದು ಪದ್ಯದ ತಾತ್ಪರ್ಯ.

ದೇಹಾಭಿಮಾನವನ್ನು ಹೊಂದಿರುವ ಮಾನವರು ಜಡಮತಿಗಳೆಂದು ತಿಳಿಸುತ್ತಾರೆ. ಜೀವನು ಚೇತನವಸ್ತು. ಚೇತನನಾದರೂ ಅವನಿಗೆ ಕ್ರಿಯಾ ಸ್ವಾತಂತ್ರ್ಯವಿಲ್ಲ. ಅವನ ಕರ್ತೃತ್ವಶಕ್ತಿ ಭಗವದಧೀನವಾಗಿದೆ. ಇದರಿಂದ ಚೇತನನಾದರೂ ಜಡದಂತಿದ್ದಾನೆ. ದೇಹವು ಜಡವಾದುದು. ಆದರೆ ಸಮಸ್ತ ಕಾರ್ಯಗಳೂ ಈ ದೇಹದ ದ್ವಾರವೇ ನಡೆಯುತ್ತಿರುವುದರಿಂದ, ದೇಹವೇ ಚೇತನವೆಂದು ಆಪಾತತಃ ತೋರುತ್ತಲಿದೆ- ಆದರೆ ಶ್ರೀಶನ ಆಜ್ಞಾಧಾರಕ ರಾಗಿ, ಅವನ ಪ್ರೇರಣಾನುಸಾರ ಸಕಲತತ್ವೇಶರಾದ ದೇವತೆಗಳು ಈ ದೇಹ ಗತರಾಗಿದ್ದು, ಜೀವನ ಹೆಸರಿನಲ್ಲಿ ಜೀವಕೃತಕರ್ಮಗಳನ್ನು ಮಾಡಿಸು ತ್ತಿರುವರು. ಈ ರಹಸ್ಯಾರ್ಥವನ್ನರಿಯದೆ ನಾನು, ನನ್ನದು ಎಂಬ ಅಹಂಕಾರ ಮಮಕಾರಗಳಿಂದ ಗ್ರಸ್ತರಾಗಿ, ಮಾನವರು ದಿನದಿನಕ್ಕೆ ಆಚರಿಸುತ್ತಿರುವ ಸ್ನಾನ, ಜಪ, ಧ್ಯಾನ, ದೇವತಾರ್ಚನೆ ಇತ್ಯಾದಿ ಸತ್ಕರ್ಮಗಳನ್ನು ದೇಹಗತ ರಾಗಿರುವ ದೈತ್ಯರು ಸೆಳೆದೊಯ್ಯುವರಲ್ಲದೆ, ಶ್ರೀನಿವಾಸನು ಎಂದೆಂದಿಗೂ ಸ್ವೀಕರಿಸನು ಎಂಬ ತತ್ತ್ವವನ್ನು ಮದ್ದಾನೆ–ಪಕ್ವಬೇಲದ ಹಣ್ಣಿನ ನ್ಯಾಯ ದಿಂದ ತಿಳಿಸುತ್ತಾರೆ ಮುಂದಿನ ೧೩ನೆಯ ಪದ್ಯದಿಂದ.

ಅಹಂಮಮಕಾರಾದಿಗಳಿಂದ ಗ್ರಸ್ತರಾದ ಮಾನವರು, ಸರ್ವಕ್ಕೂ ಅಹಂ ಕರ್ತೃತ್ವಜ್ಞಾನವನ್ನು ಹೊಂದಿರುವವರು, ಮಾಡುವ ತೀರ್ಥಕ್ಷೇತ್ರಯಾತ್ರಾ ಸಕಲ ಪುಣ್ಯಕರ್ಮಗಳೂ ವ್ಯರ್ಥವೆಂದು ಹೇಳುತ್ತಾರೆ ಮುಂದಿನ ೧೪ನೆಯ ಪದ್ಯದಿಂದ.

ಈ ಭೂತಲದಲ್ಲಿರುವ ಸಕಲಪುಣ್ಯಕ್ಷೇತ್ರಯಾತ್ರೆಗಳನ್ನು ಮಾಡಿದರೇನು, ಯೋಗ್ಯಾಯೋಗ್ಯಾಧಿಷ್ಠಾನಗಳನ್ನು ತಿಳಿದು, ಅನ್ನಾದಿ ದಾನಗಳನ್ನು ಮಾಡಿದ

ರೇನು, ಶುದ್ಧವಾದ ಜಲದಲ್ಲಿ ಸ್ನಾನಮಾಡಿ, ಮಡಿವಸ್ತ್ರವನ್ನುಟ್ಟು, ವೇದೋಕ್ತ ಮಂತ್ರಸ್ತೋತ್ರಗಳನ್ನು ಪಠಿಸಿದರೇನು ? ಇಷ್ಟು ಸತ್ಕರ್ಮಗಳನ್ನು ಮಾಡು ತ್ತಿದ್ದರೂ ಅಹಂಕರ್ತೃತ್ವವನ್ನೇ ಬಿಟ್ಟು, ಸರ್ವವ್ಯಾಪಾರಗಳಿಗೂ ಶ್ರೀಹರಿಯೇ ಕರ್ತ ಎಂಬ ಜ್ಞಾನಾನುಸಂಧಾನರಹಿತನಾಗಿ ತಾನೇ ಕರ್ತ ಎಂಬ ಮಾನವರಿಗೆ ಆ ಸತ್ಕರ್ಮಗಳ ಫಲವು ದೊರೆಯುವುದಿಲ್ಲ. ಅವೆಲ್ಲವೂ ಕೇವಲ ವ್ಯರ್ಥವೇ ಹೊರತು, ಸಾರ್ಥಕವಾಗುವುದಿಲ್ಲ ಎಂದು ತಿಳಿಸುತ್ತಾರೆ.

ಕಂಡಕಂಡ ನೀರಿನಲ್ಲಿ ಮುಳುಗಿ, ಸ್ನಾನಾದಿಕರ್ಮಗಳನ್ನು ಮಾಡಿ, ದೇಹವನ್ನು ದಂಡಿಸಿದರೆ ಬರುವ ಫಲವೇನು ? ಕರದಲ್ಲಿ ದಂಡ ಕಮಂಡಲು ಗಳನ್ನು ಧರಿಸಿ ಕಾಷಾಯವಸನ ವಿಭೂಷಿತನಾಗಿ ಯತಿ ಎಂದು ಹೇಳಿಕೊಂಡು ದೇಶಸಂಚಾರ ಮಾಡಿದರೆ ಫಲವೇನು ? ಪಕ್ಷಿಶ್ರೇಷ್ಠರಾದ ಗರುಡನನ್ನೇ ವಾಹನವಾಗಿಉಳ್ಳ ಶ್ರೀಹರಿಯ ಪದಪುಂಡರೀಕದಲ್ಲಿ ಅಹರ್ನಿಶಿ ಮನವನ್ನು ಇರಿಸಿ, ತದೇಕಧ್ಯಾನಾಸಕ್ತನಾಗಿ, ಶ್ರೀಹರಿನಾಮಾಮೃತವನ್ನು ಪಾನಮಾಡುವ ದುಂಬಿ ಎಂದೆನಿಸಿಕೊಂಡು, ಸುಖವನ್ನು ಹೊಂದದ ಮಾನವನು ಯಾವವಿಧ ವಾದ ಸತ್ಕರ್ಮಗಳನ್ನು ಆಚರಿಸಿದರೂ ಫಲವಿಲ್ಲವೆಂದು ತಿಳಿಸುತ್ತಾರೆ ೧೫ನೆಯ ಪದ್ಯದಿಂದ.

ಅಹಂಮಮತಾದಿಗಳನ್ನು ತೊರೆದು, ಶ್ರೀಹರಿಯೇ ನಿಯಾಮಕನೆಂದು ಅರಿಯುವುದೇ ಪರಮಸಾಧನವೆಂದು ತಿಳಿಸುತ್ತಾರೆ ೧೬ನೆಯ ಪದ್ಯದಿಂದ. ವೇದಾಧ್ಯಯನಸಂಪನ್ನನಾಗಿ, ಉಪನಿಷತ್ತು, ಇತಿಹಾಸ, ಪುರಾಣಾದಿಗಳನ್ನು ಅಧ್ಯಯನಪೂರ್ವಕ ಪ್ರವಚನಾದಿಗಳನ್ನು ಮಾಡುತ್ತಾ, ಶಾಸ್ತ್ರವಿಷಯಗಳನ್ನು ಶ್ರವಣಮಾಡುತ್ತಾ, ನಿಷಿದ್ಧಕರ್ಮಗಳನ್ನು ತೊರೆದು, ಸತ್ಕರ್ಮಗಳನ್ನು ಆಚರಿ ಸುತ್ತಾ, ಅನ್ನ ಆಹಾರಾದಿಗಳನ್ನು ತ್ಯಜಿಸಿ, ಹಟಯೋಗದಿಂದ ಶ್ವಾಸನಿರೋಧ ಮಾಡಿ ಮಹಾತ್ಮನೆಂದು ಕರೆಸಿಕೊಳ್ಳುತ್ತಾ, ತನ್ನ ಅಂತರಂಗವನ್ನು ನಿರಂತರವೂ ಕಾಡುತ್ತಿರುವ ಕಾಮಕ್ರೋಧಾದಿಗಳನ್ನು ಬಿಡದೆ, ನಾನು–ನನ್ನಿಂದ– ನನ್ನ ಎಂಬ ಭಾವನೆಯಿಂದ ಅಹಂಮಮಕಾರಾದಿಗಳಿಂದ ಗ್ರಸ್ತನಾದವನು ಮಾಡುವ ಸತ್ಕರ್ಮಗಳೆಲ್ಲವೂ ಭಗವತ್ಪ್ರೀತಿಗೆ ವಿಷಯವಾಗುವುದಿಲ್ಲ.

ಜಗದ್ವ್ಯಾಪ್ತನಾದ, ಸರ್ವಪ್ರೇರಕನೂ ನಿಯಾಮಕನೂ ಆದ ಶ್ರೀಹರಿಯ ಗುಣರೂಪಕ್ರಿಯಾದಿಗಳನ್ನು ಸದಾ ಮನಸ್ಸಿನಲ್ಲಿ ಚಿಂತಿಸುತ್ತಾ, ಭಕ್ತಿಪರವಶ

ನಾಗಿ, ಆಯಾಯಾ ಸ್ಥಾನಗಳಲ್ಲಿ ತದ್ರೂಪ, ತನ್ನಾಮಕ, ತದ್ವಾಚ್ಯ, ತದಾಕಾರನಾದ ಶ್ರೀಹರಿಯ ವಿಭೂತಿರೂಪಗಳನ್ನೇ ಸ್ಮರಿಸದೇಇರುವವನು ಯಾವ ಶಾಸ್ತ್ರ ಕೇಳಿದರೇನು, ಯಾವ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿದರೇನು, ಶಾಸ್ತ್ರಾಧ್ಯಯನ ಮಾಡಿದರೇನು, ಇತರರಿಗೆ ಉಪದೇಶದ್ವಾರಾ ಬೋಧನೆ ಮಾಡಿದರೇನು ಶ್ರೀಹರಿಯ ಗುಣಾವಳಿಗಳನ್ನು ಹಾಡಿದರೇನು, ಅವೆಲ್ಲವೂ ಕೇವಲವ್ಯರ್ಥವೆಂದು ತಿಳಿಸುತ್ತಾರೆ ಮುಂದಿನ ೧೭ನೆಯ ಪದ್ಯದಿಂದ.

ಪರಮಜ್ಞಾನಿಗಳಾದ ದಾಸರಾಯರು ಸ್ವಾಹಂಕಾರಖಂಡನಾಪೂರ್ವಕ ಗ್ರಂಥದ ನಿರ್ಮಾಣದ ಬಗ್ಗೆ ತಿಳಿಸುತ್ತಾರೆ ೧೮ನೆಯ ಪದ್ಯದಲ್ಲಿ.

ನನ್ನ ವಿದ್ಯಾಬಲದಿಂದಾಗಲೀ, ವಿದ್ಯಾಪ್ರೌಢಿಮೆಯಿಂದಾಗಲೀ, ರಚಿಸಿದ ಕಾವ್ಯಗ್ರಂಥವಿದಲ್ಲ. ಭಗವದ್ಭಕ್ತರಾದ ಬ್ರಹ್ಮಜ್ಞಾನಿಗಳಿಂದ ತತ್ತ್ವಮಾರ್ಗದ ಸುಪದ್ಧತಿಗಳನ್ನು ಅರಿತವನಲ್ಲ. ಆದರೆ ಶ್ರೀ ಮಧ್ವಮುನಿಹೃದಯಾಂತರ್ಗತನಾದ ವೇದವ್ಯಾಸರೂಪೀ ಶ್ರೀ ಪರಮಾತ್ಮನೇ ನನ್ನ ಹೃತ್ಕಮಲದಲ್ಲಿ ನಿಂತು, ನುಡಿದು ಪ್ರೇರಿಸಿದಂತೆ, ಶುಕವಾಣಿಯಂತೆ ಈ ಕಾವ್ಯಗತಪದ್ಯಗಳ ನಿರ್ಮಾಣವಾಗಿದೆ. ಇವುಗಳಲ್ಲಿರುವ ದೋಷರೂಪವಾದ ಅಪದ್ಧಗಳನ್ನು ನೋಡದೆ, ಗುಣಗ್ರಾಹಿಗಳಾದ ಜ್ಞಾನಿಗಳು ಆಸಕ್ತಿಯಿಂದ ಈ ಗ್ರಂಥಗತ ಪದ್ಯಗಳನ್ನು ಕೇಳುವವರಾಗಬೇಕೆಂದು ಅತ್ಯಂತ ನಮ್ರಭಾವದಿಂದ ದಾಸರಾಯರು ಪ್ರಾರ್ಥಿಸುತ್ತಾರೆ. ಅಪರೋಕ್ಷೀಕೃತಶ್ರೀಶರಾದ ದಾಸವರ್ಯರ ಸ್ವಾಹಂಕಾರಖಂಡನರೂಪವಾದ ನಮ್ರತೆಯನ್ನು ಈ ಪದ್ಯವು ನಿರೂಪಿಸುವುದು.

ರಸದಿಂದ ತುಂಬಿರುವ ಕಬ್ಬಿನಲ್ಲಿರುವ ಮಧುರರಸವು ಹಲ್ಲುಗಳಿಲ್ಲದ ಮನುಷ್ಯನಿಗೆ ಅನುಭವಕ್ಕೆ ಬರುವುದಿಲ್ಲ. ರಸಭರಿತವಾದ ಕಬ್ಬನ್ನು ಹಲ್ಲುಗಳಿಂದ ಚೆನ್ನಾಗಿ ಸಿಗಿದು, ಅಗಿದು ತಿನ್ನುವವನಿಗೆ ಮಾತ್ರ ಅದರ ರಸಾನುಭವವು ಉಂಟಾಗುವುದು. ಐಶ್ವರ್ಯ, ಯೌವ್ವನ, ಅಧಿಕಾರ, ಸ್ಥಾನಮಾನಗಳಿಂದ ಮದೋನ್ಮತ್ತರಾದ ಮಾನವರಿಗೆ ಶ್ರೀಹರಿಯ ಪರಮಮಂಗಳಪ್ರದವಾದ ಚರಿತಾಮೃತಸಾರವು ಎಂದಿಗಾದರೂ ರುಚಿಸುವುದೇ ? ಮದಾಂಧತೆಯಿಂದ ಶ್ರೀಹರಿಯ ವಿಸ್ಮರಣೆಯನ್ನು ಹೊಂದಿರುವವರಿಗೆ ಶ್ರೀಹರಿಚರಿತಾಸುಧೆಯು

ಆನಂದವನ್ನು ಕೊಡುವುದಿಲ್ಲ. ಅಪಾರಮಹಿಮಾಸಂಪನ್ನನಾದ ಶ್ರೀಹರಿಯ ಪಾದಕಂಜಗಳಲ್ಲಿ ಶುದ್ಧಭಕ್ತಿಭಾವದಿಂದ ಉಬ್ಬಿ, ಭಕ್ತ್ಯುದ್ರೇಕದಿಂದ ಉನ್ಮತ್ತರಾಗಿ, ಶ್ರೀ ಪರಮಾತ್ಮನ ಅನಂತಕಲ್ಯಾಣಗುಣಗಳೆಂಬ ಸಾಗರದಲ್ಲಿ ಆನಂದ ಪರವಶನಾಗಿ ಮುಳುಗಿರುವವನಿಗೆ ಹರಿಸುಚರಿತಾಮೃತವು ಲಭ್ಯವಾಗುವುದೆಂದು ತಿಳಿಸುತ್ತಾರೆ ೧೯ನೆಯ ಪದ್ಯದಿಂದ.

ಪಕ್ಷಿಧ್ವಜನಾದ ಶ್ರೀಹರಿಯಲ್ಲಿ ಮಹಾತ್ಮ್ಯಜ್ಞಾನಪೂರ್ವಕ ಸುದೃಢ ಸ್ನೇಹರೂಪವಾದ ಭಕ್ತಿಭಾವವನ್ನು ಅರಿಯದ ಸಾಮಾನ್ಯರಿಗೆ ಈ ಹರಿಕಥಾಮೃತಸಾರವು ಬಿಡಿಸಲಾರದ ಒಗಟಿನಂತೆ ತೋರುತ್ತದೆ. ವಿಷಯಾಸಕ್ತರಿಗೆ ಇದರಲ್ಲಿ ಹೇಳಿದ ಜ್ಞಾನಸಂಧಾನಕ್ರಮ ಕಷ್ಟವೆಂತಲೇ ತೋರುವುದು. ಪ್ರಾಕೃತಸತ್ತ್ವಾದಿಗುಣಗಳಿಂದ ದೂರನಾದ, ಅನಂತಕಲ್ಯಾಣಗುಣಪೂರ್ಣನಾದ ಆ ಪರಮಾತ್ಮನ ಮಂಗಳಗುಣಗಳನ್ನು ಅನವರತ ಸ್ತೋತ್ರ ಮಾಡುತ್ತ ಆನಂದೋದ್ರೇಕದಿಂದ ಭಾವಪರವಶರಾಗಿ ಹಿಗ್ಗುತ್ತಿರುವ ಭಾಗವತೋತ್ತಮರಿಗೆ ಅತಿಶಯವಾದ ಭಕ್ತಿ, ವಿಶೇಷವಾದ ಸಮೀಚೀನ ಜ್ಞಾನಾದಿಸಂಪತ್ತುಗಳನ್ನು ಕೊಟ್ಟು ಸುಖವನ್ನಿತ್ತು ರಕ್ಷಿಸುತ್ತಾನೆ ಎಂದು ಪದ್ಯದ ತಾತ್ಪರ್ಯಾರ್ಥ.

ಈ ಗ್ರಂಥದ ಮರ್ಮ ಹಾಗೂ ವೈಶಿಷ್ಟ್ಯವನ್ನು ತಿಳಿಸುತ್ತಾರೆ. ೨೧ನೆಯ ಪದ್ಯದಿಂದ. ಶ್ರೀಮದ್ಧರಿಕಥಾಮೃತಸಾರವೆಂಬ ಈ ಗ್ರಂಥವು ಮೋಕ್ಷಮಾರ್ಗವನ್ನು ತಿಳಿಸುವ ಪರಮರಹಸ್ಯವಾದ ತತ್ತ್ವಾರ್ಥಗಳಿಂದ ಕೂಡಿದೆ. ಗ್ರಂಥೋಕ್ತವಾದ ಪ್ರಮೇಯರತ್ನಗಳ ರಹಸ್ಯಾರ್ಥವನ್ನು ಜ್ಞಾನಿಗಳಾದ ವಿಪ್ರೋತ್ತಮರು ಶ್ರದ್ಧಾಸಕ್ತಿಗಳಿಂದ ಕೇಳಬೇಕು. ಈ ತತ್ತ್ವರಹಸ್ಯಾರ್ಥಗಳನ್ನು ಕಠಿಣಾತ್ಮರೂ ವಾಕ್‌ಸ್ವೈಷ್ಮ್ಯವುಳ್ಳವರೂ ಆದವರಿಗೆ, ಮೂರ್ಖರಿಗೆ, ಸರ್ವಶಾಸ್ತ್ರಕೋವಿದರೆಂಬ ದುರಭಿಮಾನವುಳ್ಳ ಡಾಂಭಿಕರಾದ ಪಂಡಿತರಿಗೆ, ಕನ್ನಡಸಾಹಿತ್ಯವೆಂದು ಕೇವಲ ದೂಷಣೆಮಾಡತಕ್ಕ ಸಂಕುಚಿತಮನೋಭಾವವುಳ್ಳವರಿಗೆ, ಗ್ರಂಥದ ಮಹಾತ್ಮೆಯನ್ನರಿಯದ ರಸಿಕರಾಗದವರಿಗೆ ಖಂಡಿತ ಹೇಳಕೂಡದು. ನಿರಂತರದಲ್ಲಿಯೂ ಶ್ರೀಶನ ಪದಾರವಿಂದಮಧುಪಾಯಿಗಳಾದ ಭಗವದ್ಭಕ್ತರೆಂಬ ಬಂಡುಣಿಗಳಿಗೆ ಸಂತೋಷಭರಿತರಾಗಿ ಹೇಳಿ, ಅವರನ್ನು ಶ್ರೀಹರಿಕಥಾಸುಧಾಪಾನದಿಂದ ತೃಪ್ತಿಪಡಿಸಬೇಕು.

ಈ ಕಾವ್ಯಾವಲೋಕನದ ಪ್ರಯೋಜನ ಮತ್ತು ಮಹಾತ್ಮ್ಯೆಯನ್ನು ವಿವರಿಸುತ್ತಾರೆ ಮುಂದಿನ ೨೨ನೆಯ ಪದ್ಯದಿಂದ.

ಈ ಗ್ರಂಥದಲ್ಲಿ ಉಕ್ತವಾಗಿರುವ ವಿಷಯಗಳು ಲೋಕವಾರ್ತೆಯಲ್ಲ. ಅಂದರೆ, ಕೇವಲ ಪ್ರಾಪಂಚಿಕವಾದ ಹಾಳುಹರಟೆ, ವಿನೋದ ಪ್ರಸಂಗಗಳಲ್ಲ. ವೈಕುಂಠಪತಿಯಾದ ಮುಕುಂದನ ಮುಕ್ತಿಪ್ರದವಾದ ಮಹಾಮಹಿಮೆಗಳನ್ನು ತಿಳಿಸುವ ದಿವ್ಯವಾರ್ತೆ. ದುಷ್ಟವಿಷಯಗಳಲ್ಲಿ ಆಸಕ್ತರಾದ, ಕುಟಿಲಮತಿಗಳಿಗೆ ಈ ಕಾವ್ಯವು ಸಮರ್ಪಕವಾಗಿ ತೋರುವುದಿಲ್ಲ. ಅವರ ಮನಸ್ಸಿಗೆ ತೃಪ್ತಿಯನ್ನು ಕೊಡುವುದಿಲ್ಲ. ಇದಕ್ಕೆ ಒಂದು ಮನೋಹರ ದೃಷ್ಟಾಂತವನ್ನು ಕೊಡುತ್ತಾರೆ. ಸುಗಂಧಯುಕ್ತವಾದ ಕಮಲದಲ್ಲಿರುವ ಮಕರಂದವನ್ನು ಭ್ರಮರವು (ಷಟ್ಪದ) ಸಂತೋಷದಿಂದ ಸ್ವೀಕರಿಸುವುದು. ಆದರೆ ಅದೇ ಜಲದಲ್ಲಿ ಸಂಚರಿಸುವ ಕಪ್ಪೆಯು (ಭೇಕ) ಅದರ ಪರಿಮಳ ಮತ್ತು ಮಕರಂದವನ್ನು ಆಸ್ವಾದಿಸಬಲ್ಲುದೇ ? ಶ್ರೀ ಹರಿಕಥಾಮೃತದ ಸುಧಾರಸವನ್ನು ಹರಿಭಕ್ತರಲ್ಲದೆ ಇತರರು ಸೇವಿಸಿ, ಸುಖಿಪಡುವರೇ ? ಎಂದೆಂದಿಗೂ ಇಲ್ಲವೆಂದು ಪದ್ಯಾರ್ಥ. ಅಪಾರಮಹಿಮಾಸಂಪನ್ನನಾದ ಆ ಪರಮಾತ್ಮನ ಮಹಿಮೆಗಳನ್ನು ತಿಳಿಸುತ್ತಾರೆ ಮುಂದಿನ ೨೩ನೆಯ ಪದ್ಯದಿಂದ.

ಚರಾಚರಾತ್ಮಕವಾದ ಈ ಬ್ರಹ್ಮಾಂಡವನ್ನು ಸೃಷ್ಟಿಸಿ, ಅದರ ಗುಣಗಳ ಅಭಿವ್ಯಕ್ತಿ, ವ್ಯಾಪಾರಗಳಿಗಾಗಿ ಜಗತ್ತಿನಲ್ಲೆಲ್ಲಾ ವ್ಯಾಪಿಸಿದ್ದರೂ, ಅದರಿಂದ ಪರಮಾತ್ಮನಿಗೆ ಲವಲೇಶಪ್ರಯೋಜನವೇನೂ ಇಲ್ಲ. ಇದರಿಂದ ಸ್ವಪ್ರಯೋಜನ ರಹಿತನು. ಆಪ್ತಕಾಮನು ಮತ್ತು ಸ್ವರಮಣನು. ಸಕಲರ ಇಷ್ಟಾರ್ಥ ಪ್ರದಾಯಕನು. ಸಮಸ್ತಮಂಗಳಗುಣಗಳಿಂದ ಪರಿಪೂರ್ಣನು. ರಮಾಬ್ರಹ್ಮಾದಿಗಳಿಂದ ಸಾಕಲ್ಯೇನ ತಿಳಿಯದ ಅಪ್ರಮೇಯನು. ನಶ್ವರವಾದ ದೇಹಕ್ಕೆ ಬರುವ ಮುಪ್ಪು, ಮರಣ ಇವುಗಳಿಂದ ರಹಿತನಾದವನು. ನಿರ್ವಿಕಾರನು. ಶಶ್ವದೇಕಪ್ರಕಾರನಾದ ಅಚ್ಯುತನು. ಕ್ಲೇಶಾದಿಗಳಿಂದ ದೂರನಾದ ಪೂರ್ಣಾನಂದಮಯನು. ಬ್ರಹ್ಮಣ್ಯದೇವನು. ವಿಶ್ವವ್ಯಾಪಕನು. ಸೂರ್ಯಾಂತರ್ಗತನಾಗಿ, ಅವನ ದ್ವಾರಾ ಸ್ವತೇಜದಿಂದ ಬೆಳಗುತ್ತಿರುವ "ಘೃಣೀ" ನಾಮಕನು. ಕೋಟಿಸೂರ್ಯಪ್ರಭಾನ್ವಿತನು. ಅನಂತಾನಂತಮಹಿಮಾಗುಣಸಂಪನ್ನನು.

ಹಾಲಿನಲ್ಲಿರುವ ತುಪ್ಪದಂತೆ, ಘೃತಪ್ರತೀಕರಾದ ಶ್ರೀರಮಾದೇವಿಯರಿಂದ ಪೂಜಿತಪಾದಪದ್ಮನು. ಸಮಸ್ತದೇವತೆಗಳಿಗೂ ಶ್ರೇಷ್ಠರಾದ ಬ್ರಹ್ಮ ದೇವರಿಗಿಂತ ಉತ್ತಮೋತ್ತಮನಾದ ಸುರರಾಜನೆಂದೆನಿಪ ದೇವತಾಪ್ರಭುವು.

ಮುಂದಿನ ೨೪ನೆಯ ಪದ್ಯದಿಂದ ಶ್ರೀ ಪರಮಾತ್ಮನ ದಶಾವತಾರ ಗಳನ್ನು ಸ್ತೋತ್ರ ಮಾಡುತ್ತಾರೆ.

ಉದಕದಲ್ಲಿ ಸಂಚರಿಸುವ ಮತ್ಸ್ಯರೂಪಿಯಾದ ಶ್ರೀಹರಿ ನಿನಗೆ ಮಂಗಳ. (ವನಚರ). ಮಂದರಗಿರಿಯನ್ನು ಬೆನ್ನಿಲಿಹೊತ್ತಂಥ (ಅದ್ರಿ) ಕೂರ್ಮರೂಪಿಯೇ ನಿನಗೆ ಜಯವು. ಭೂಮಿಯನ್ನು ಮೇಲಕ್ಕೆ ಎತ್ತಿ ಉದ್ಧರಿಸಿದ ವರಾಹಾತಾರನೇ ನಿನಗೆ ಮಂಗಳವು. ನರಸಿಂಹರೂಪೀ ಶ್ರೀ ಪರಮಾತ್ಮನೇ, ಭಕ್ತರಿಗೆ ಮಂಗಳಪ್ರದನಾಗು. ಭೂದಾನವನ್ನು ಬೇಡಿದ ವಟುವಾಮನನು ಭಕ್ತರಿಗೆ ಶುಭಪ್ರದನಾಗಲಿ. ಭೃಗುಕುಲೋತ್ಪನ್ನನಾದ ಪರಶುರಾಮಾವತಾರಿಯೇ ಭಕ್ತಜನಸಂದೋಹಕ್ಕೆ ಮಂಗಳವನ್ನು ನೀಡು. ಜಾನಕೀರಮಣನಾದ ಶ್ರೀರಾಮಚಂದ್ರಮೂರ್ತಿಯೇ ಶುಭವನ್ನುಂಟು ಮಾಡು. ಶ್ರೀ ರುಕ್ಮಿಣೀದೇವಿಯರ ಮನೋಭೀಷ್ಟದಾಯಕನಾದ ಶ್ರೀ ಕೃಷ್ಣಾವತಾರಿ ಹರಿಯೇ ಜಯಪ್ರದನಾಗು. ಜಿನನಾಮಕನಾಗಿ ಅಸುರರ ಮೋಹನಾರ್ಥ ಅವತರಿಸಿದ ಬುದ್ಧನೇ ಪ್ರಸನ್ನನಾಗು. ಕಲ್ಯಾದಿದೈತ್ಯ ರನ್ನು ವಿಧ್ವಂಸಗೊಳಿಸಿ, ಧರ್ಮಸಂಸ್ಥಾಪಕನಾದ ಕಲ್ಕಿಯೇ ಮಂಗಳ ವನ್ನುಂಟುಮಾಡು. ದಶಾವತಾರಿಯಾದ ಜಯಾಪತಿಸಂಕರ್ಷಣನೇ ಮಂಗಳ ವನ್ನು ನೀಡು.

ಕೊನೆಯ ೨೫ನೆಯ ಪದ್ಯದಿಂದ **ಸರ್ವಪ್ರತೀಕಸಂಧಿ** ಯನ್ನು ಉಪ ಸಂಹಾರ ಮಾಡುತ್ತಾರೆ.

ಶ್ರೀ ಪರಮಾತ್ಮನು ನಿರತಿಶಯವಾದ ಪರಿಪೂರ್ಣವಾದ ಜ್ಞಾನಾನಂದ ಮಯ ಶರೀರನು. ಬ್ರಹ್ಮಾದಿದೇವತೆಗಳಿಂದ ಪೂಜಿತಪಾದಪದ್ಮನು. ರುದ್ರಾದಿಸಮಸ್ತದೇವತಾವರ್ಗದಿಂದ ಸ್ತುತ್ಯನು. ಜ್ಞಾನ, ಭಕ್ತಿ, ವೈರಾಗ್ಯ ಗಳೆಂಬ ದೈವೀಸಂಪತ್ತನ್ನು ಅನುಗ್ರಹಿಸುವ ಮಂಗಳಪ್ರದನು. ಶ್ರೀಮನ್ಮಧ್ವ

ಮುನಿಮಾನಸಮಂದಿರನು. ನಾಶರಹಿತನಾದ ಶಶ್ವದೇಕಪ್ರಕಾರನಾದ ಅಚ್ಯುತನಾಮಕನು. ಅಂತಹ ಅಪಾರಗುಣಸಂಪನ್ನನಾದ ಜಗತ್‌ಸ್ವಾಮಿಯಾದ, ಅಂಕಿತನಾಮಕನಾದ **ಶ್ರೀ ಜಗನ್ನಾಥವಿಠ್ಠಲನು** ಅವನೇ ಗತಿಯೆಂದು ಅನನ್ಯಶರಣಭಾವದಿಂದ ಮೊರೆಹೊಕ್ಕ ಸ್ವಭಕ್ತಜನ ಸಂದೋಹವನ್ನು ಕೈಬಿಡದೆ ಸದಾ ಸಂರಕ್ಷಿಸುವನು. ಗೋಕುಲದಲ್ಲಿದ್ದಾಗ, ಮಹಾರಣ್ಯದಲ್ಲಿ ಬಂದೊದಗಿದ ಕಾಡುಕಿಚ್ಚನ್ನು ನುಂಗಿ, ಭಯವಿಹ್ವಲರಾಗಿದ್ದ ಗೋಪಾಲಕರನ್ನೂ ಮತ್ತು ಗೋವೃಂದವನ್ನೂ ರಕ್ಷಿಸಿದ ಮಹಾ ಕರುಣಾಸಮುದ್ರನು – ಎಂದು ಭಕ್ತ್ಯುದ್ರೇಕದಿಂದ ಶ್ರೀಹರಿಯ ಕಾರುಣ್ಯವನ್ನು ಸ್ತೋತ್ರ ಮಾಡುತ್ತಾ, ಪ್ರಸಕ್ತಸಂಧಿಯನ್ನು ಮುಗಿಸುತ್ತಾರೆ, ಜ್ಞಾನಿವರೇಣ್ಯರಾದ ಶ್ರೀ ಜಗನ್ನಾಥದಾಸವರ್ಯರು.

**||ಇಂತು ಸರ್ವಪ್ರತೀಕಸಂಧಿ ಎಂಬ ೧೦ನೆಯ ಸಂಧಿಯ ಸಾರವು ಸಮಾಪ್ತಿಯಾಯಿತು||**

**||ಶ್ರೀಕೃಷ್ಣಾರ್ಪಣಮಸ್ತು||**

॥ ಶ್ರೀ ಗರುಡವಾಹನ ಲಕ್ಷ್ಮೀನರಸಿಂಹಾಯ ನಮಃ ॥

॥ ಶ್ರೀ ಜಗನ್ನಾಥವಿಠ್ಠಲಪ್ರಸೀದ ॥

# ಸಂಧಿ (೧೦)

## 'ಸರ್ವಪ್ರತೀಕಸಂಧಿ'–ಪ್ರಾರಂಭ

ಹರಿಕಥಾಮೃತಸಾರ ಗುರುಗಳ ।
ಕರುಣದಿಂದಾಪನಿತು ಪೇಳುವೆ ।
ಪರಮಭಗವದ್ಭಕ್ತರಿದನಾದರದಿ ಕೇಳುವುದು ॥ ಪ ॥

## ಪದ್ಯ ೧

ಮೂಲ

ಆವ ಪರಬೊಮ್ಮನತಿವಿಮಲಾಂ ।
ಗಾವಬದ್ಧರು ಎಂದೆನಿಪ ರಾ ।
ಜೀವಭವ ಮೊದಲಾದಮರರನುದಿನದಿ ಹರಿಪದವ ॥
ಸೇವಿಪರಿಗನುಕೂಲರಲ್ಲದೆ ।
ತಾವು ಇವರನ ಕೆಡಿಸಬಲ್ಲರೆ ।
ಶ್ರೀವಿಲಾಸಾಸ್ಪದನ ದಾಸರಿಗುಂಟೆ ಅಪಜಯವು ॥ ॥ ೧ ॥

ಅವತರಣಿಕೆ

ಸರ್ವಪ್ರತೀಕಸಂಧಿಯನ್ನು ಪ್ರಾರಂಭಿಸುತ್ತಾ, ಜ್ಞಾನಿವರೇಣ್ಯರಾದ ದಾಸವರ್ಯರು ಶ್ರೀಶನ ಅಂತರಂಗಭಕ್ತರಿಗೆ ಎಂದೆಂದಿಗೂ ಅಪಜಯವಿಲ್ಲ

ಎಂದು ಹೇಳುತ್ತಾರೆ– **ಆವ ಪರಬೊಮ್ಮ** ಎಂಬ ಪ್ರಸಕ್ತಸಂಧಿಗತ ಪ್ರಪ್ರಥಮ ಈ ಪದ್ಯದಿಂದ.

ಪರಬ್ರಹ್ಮನಾದ ಶ್ರೀಮನ್ನಾರಾಯಣನ ಗುಣಪೂರ್ಣವಿಶಿಷ್ಟವಾದ ಅಂಗಾಂಗಗಳನ್ನು ಆಶ್ರಯಿಸಿಕೊಂಡಿರುವ ಬ್ರಹ್ಮಾದಿಸಮಸ್ತದೇವತಾವರ್ಗ, ಶ್ರೀಶನಂಘ್ರಿಗಳನ್ನು ನಂಬಿಕೊಂಡು, ಸದಾ ಅವನ ಪಾದಸೇವಾದಿಗಳಲ್ಲಿ ನಿರತರಾಗಿರುವ ಭಗವದ್ಭಕ್ತರಿಗೆ ಅನುಕೂಲಕ್ಕಾಗಿ ಸರ್ವಪ್ರಕಾರಗಳಲ್ಲಿಯೂ ಸಹಾಯಕರಾಗಿರುವರು. ಶ್ರೀಲಕ್ಷ್ಮೀಲೋಲನಾದ ಪಕ್ಷಿವಾಹನನ ನಿಜದಾಸರಿಗೆ ಎಂದೆಂದಿಗೂ ಅಪಜಯಗಳಿಲ್ಲ. ವಿಘ್ನಪರಂಪರೆಗಳು ಅವರನ್ನು ಭಾಧಿಸಲಾರವು. ॥ ೧ ॥

## ಪ್ರತಿಪದಾರ್ಥ

**ಆವ ಪರಬೊಮ್ಮನ**=ಅನಂತಕಲ್ಯಾಣಗುಣಗಣಪರಿಪೂರ್ಣನಾದ ಪರಬ್ರಹ್ಮನಾದ ಯಾವ ಶ್ರೀಮನ್ನಾರಾಯಣನ, **ಅತಿವಿಮಲ**=ಅತ್ಯಂತಪರಿಶುದ್ಧವಾದ, ಅಂದರೆ ನಿರ್ದೋಷವಾದ, **ಅಂಗಾವ**=ಜ್ಞಾನಾನಂದಮಯ ಶರೀರಗತ ಅಂಗಗಳನ್ನು, **ಬದ್ಧರು**=ಆಶ್ರಯಿಸಿಕೊಂಡಿರುವರು (ಲಿಂಗಭಂಗಾನಂತರ ಅಂಗಸಾಯುಜ್ಯ, ಸರ್ವಾಂಗಸಾಯುಜ್ಯ ಹೊಂದುವವರು) **ಎಂದೆನಿಪ**=ಎಂದೆನಿಸಿಕೊಂಡಿರುವ, **ರಾಜೀವಭವ**=ಪದ್ಮಸೃಷ್ಟಿಕಾಲದಲ್ಲಿ ಶ್ರೀಪದ್ಮನಾಭರೂಪೀ ಶ್ರೀಹರಿಯ ನಾಭಿಕಮಲದಲ್ಲಿ ಉತ್ಪನ್ನರಾದ ಚತುರ್ಮುಖಬ್ರಹ್ಮದೇವರು, **ಮೊದಲಾದ**=ಅವರೇ ಆದಿಯಾದ, **ಅಮರರು**=ಚತುರ್ವಿಂಶತಿ ತತ್ತ್ವಾಭಿಮಾನಿದೇವತೆಗಳು (ಶರೀರಗತ ಇತರ ದೇವತೆಗಳೂ ಗ್ರಾಹ್ಯ) **ಅನುದಿನದಿ**=ನಿರಂತರದಲ್ಲಿ, **ಹರಿಪದವ**=ಶ್ರೀಪರಮಾತ್ಮನ ಪಾದಪದ್ಮಗಳನ್ನು, **ಸೇವಿಪರಿಗೆ**=ಸೇವೆಮಾಡುವವರಿಗೆ (ಶ್ರೀಶನ ಪಾದಸೇವಾಸಕ್ತರಿಗೆ) **ಅನುಕೂಲರಲ್ಲದಲೆ**=ಸರ್ವವಿಧಗಳಲ್ಲಿಯೂ ಸಹಾಯಕರಾಗಿರುವವರೇ ಹೊರ್ತು, ಪ್ರತಿಕೂಲರಲ್ಲ, **ತಾವು**=ಅಂತಹ ತತ್ತ್ವೇಶರಾದ ಬ್ರಹ್ಮಾದಿದೇವತೆಗಳು, **ಇವರನ**=ಹರಿಪಾದಸೇವಾಸಕ್ತರಾದ ನಿಜಭಕ್ತರಿಗೆ, **ಕೆಡಿಸಬಲ್ಲರೆ**=ಕೆಡುಕನ್ನು ಉಂಟುಮಾಡುವರೆ ? ಎಂದೆಂದಿಗೂ ಇಲ್ಲವೆಂದರ್ಥ, **ಶ್ರೀವಿಲಾಸಾಸ್ಪದನ**=

ಶ್ರೀ ಲಕ್ಷ್ಮೀದೇವಿಯರನ್ನೇ ತನ್ನ ವಿಲಾಸರೂಪವಾದ ಕ್ರೀಡಾವಿಶೇಷಕ್ಕೆ ಪಾತ್ರರನ್ನಾಗಿ ಮಾಡಿಕೊಂಡಿರುವ ಶ್ರೀಪರಮಾತ್ಮನ (ಶ್ರೀಶನ ಕ್ರೀಡೆಯು ರಮಾದೇವಿಯರ ದ್ವಾರಾ) **ದಾಸರಿಗೆ**=ಶ್ರೀಹರಿಯನ್ನು ಈಶನೆಂದು ನಂಬಿ ಆರಾಧಿಸುತ್ತಿರುವ ಹರಿದಾಸರಿಗ, **ಅಪಜಯವು ಉಂಟೆ**=ಅಪಜಯವೆಂಬುದು ಎಂದಿಗುದರೂ ಇದೆಯೇ ? ಸರ್ವಥಾ ಇಲ್ಲವೆಂದು ಪ್ರಸಕ್ತಪದ್ಯದ ತಾತ್ಪರ್ಯ. ॥ ೧ ॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

### ಅವತಾರಿಕಾ

ಹಿಂದಿನ ಸಂಧಿಯಲ್ಲಿ ಅಧಿಕಾರಿಯಾದವ ತೀರ್ಥಕ್ಷೇತ್ರಾದಿಗಳಲ್ಲಿ ಸಂಚಾರ ಮಾಡೋಕಾಲಕ್ಕೆ ಶ್ರೀಪರಮಾತ್ಮನ ಅನುಸಂಧಾನಯುಕ್ತನಾಗಿ ಸಂಚಾರ ಮಾಡಬೇಕಂತ ಹೇಳಿದ ವಿಚಾರ ಈ ಸಂಧಿಯಲ್ಲಿ ಹೇಳುತ್ತಾರೆ.

### ಟೀಕಾ

ಶ್ರೀಪರಮಾತ್ಮನ ಭಕ್ತರಿಗೆ ಎಂದಿಗೂ ಅಪಜಯವಿಲ್ಲ ಎಂದು ಹೇಳುತ್ತಾರೆ. ಅತ್ಯಂತವಾಗಿ ನಿರ್ದೋಷನಾದ ಶುಭ್ರವರ್ಣವಿಶಿಷ್ಟನಾಗಿ ವೈಕುಂಠಸ್ಥಾನದಲ್ಲಿ ದಾವನು ಇರುವನೋ, ಅಂಥಾ ಗುಣಪೂರ್ಣನಾದ ನಾರಾಯಣಾಭಿನ್ನನಾದ ವಾಸುದೇವನ ಶರೀರವೇನು, ಉಪಾಂಗವಾದ ಅವಯುವಗಳೇನು ಇವುಗಳಲ್ಲಿ, ತಮ್ಮತಮ್ಮ ಯೋಗ್ಯತಾನುಸಾರ ಅವರವರ ಸ್ಥಾನಗಳಲ್ಲಿ ಲಿಂಗಭಂಗಾನಂತರ ಅಂಗಸಾಯುಜ್ಯ, ಸರ್ವಾಂಗಸಾಯುಜ್ಯ ಭೋಗಿಸತಕ್ಕವರೆಂದು ಕರಿಸತಕ್ಕ, ಪದ್ಮಸೃಷ್ಟಿಕಾಲದಲ್ಲಿ ಪರಮಾತ್ಮನಾದ ಪದ್ಮನಾಭದೇವರ ನಾಭೀಪದ್ಮನಾಳದಿಂದ ಉತ್ಪನ್ನರಾದ ಬ್ರಹ್ಮದೇವರೇ ಮೊದಲಾದ ಚತುರ್ವಿಂಶತಿತತ್ತ್ವಾಭಿಮಾನಿದೇವತೆಗಳು, ಪ್ರತಿದಿನದಲ್ಲೂ ಹೃದಯಗತಬಿಂಬನಾದ ಪರಮಾತ್ಮನ ದರ್ಶನಾಪೇಕ್ಷಿತರಾಗಿ ವಾಸನಾಪ್ರತೀಕವನ್ನು ಹೃದಯದಲ್ಲಿ ನಿಲ್ಲಿಸಿ, ತದಂತರ್ಗತ ಶ್ರೀಪರಮಾತ್ಮನ ಅನುಸಂಧಾನ ಮಾಡಿ ಆ ರೂಪದ ಪಾದದ್ವಯಗಳನ್ನು, ಮಾನಸನಿರ್ಮಿತ ಪೂಜಾದ್ರವ್ಯಗಳಲ್ಲಿ

ಅಂತರ್ಗತಪರಮಾತ್ಮನನ್ನು ಚಿಂತಿಸಿ, ಪ್ರತಿಮಾಂತರ್ಗತ ಪೂಜಾಸಾಧನಾಂತರ್ಗತ ಭಗವದ್ರೂಪಗಳ ಪರಸ್ಪರ ಐಕ್ಯ ಚಿಂತಿಸುತ್ತಾ, ಮಾನಸನಿರ್ಮಿತ ಪೂಜಾಸಾಧನಗಳಿಂದ ಪೂಜಾದಿಗಳ ಮಾಡತಾ, ಈ ಪ್ರಕಾರ, ಶ್ರೀದೇವರನ್ನು ಸೇವೆಮಾಡತಕ್ಕವರಿಗೆ, ತತ್ತ್ವಾಭಿಮಾನಿಗಳಾದ ತಾವು ಸರ್ವವಿಷಯದಿಂದಲೂ ಅನುಕೂಲರೇ ಹೊರತು ಪ್ರತಿಕೂಲರಲ್ಲ. ಭಗವದಾಜ್ಞದಿಂದ ಪ್ರತಿಕೂಲವಾದ ಅಜ್ಞಾನಾದಿಗಳು ಕೊಡದೇ, ದೇಹಗತತತ್ತ್ವಾಭಿಮಾನಿಅಸುರರೇನು, ಬಾಹ್ಯಗತಅಸುರರೇನು, ಇಂಥಾ ಭಕ್ತಿಯುಕ್ತರಾದ ಅಧಿಕಾರಿಗಳ ಕೆಡಿಸೋದಕ್ಕೆ ಬಲ್ಲರೆ ಎಂದರೆ, ಅರಿಯರು, ಕೆಡಿಸೋದಕ್ಕೆ ಸಮರ್ಥರಾಗಲಾರರು. ಲೀಲಾ ವಿನೋದದಿಂದ ಆಟಗಳ ಆಡೋದಕ್ಕೆ ಶ್ರೀಲಕ್ಷ್ಮೀದೇವಿಗೆ ಆಸ್ಪದನಾದ ಪರಮಾತ್ಮನ ಭೃತ್ಯರಾದ ಭಗವದ್ದಾಸರಿಗೆ ಅಪಜಯವೆಂಬುದು ಉಂಟೇ ಅಂದರೆ, ಶುದ್ಧವಾಗಿ ಇಲ್ಲ ಎಂದು ತಿಳಿಯಬಹುದು.

**ತಾತ್ಪರ್ಯ** :– ಶ್ರೀಪರಮಾತ್ಮನಲ್ಲಿ ಕೇವಲ ಏಕಾಂತಭಕ್ತಿ ಮಾಡುವ ಭಗವದ್ಭಕ್ತರಿಗೆ ದೇವತೆಗಳು ಯಾವತ್ತೂ ಅನುಕೂಲರಾಗಿಯೂ, ದೈತ್ಯರ ಬಾಧಾ ಇಲ್ಲಧಾಂಗೂನೂ ಇದ್ದು, ಸರ್ವತ್ರ ಜಯಹೊಂದಿ ಸುಖಿತರಾಗಿರುತ್ತಾರೆ ಎಂದು ತಾತ್ಪರ್ಯ. ‖ ೧ ‖

## (೨) ಭಾವಪ್ರಕಾಶಿಕೆ ವ್ಯಾಖ್ಯಾನ :–

ಪೂರ್ವಸಂಧಿಯಲ್ಲಿ ಜೀವನ ಲಕ್ಷಣವನ್ನು ಸ್ವರೂಪದೇಹ, ಲಿಂಗದೇಹ, ಅನಿರುದ್ಧಾದಿ ದೇಹಗಳಲ್ಲಿರುವ ಭಗವದ್ರೂಪಗಳನ್ನು ಹೇಳಿದರು. ಈ ಸಂಧಿಯಲ್ಲಿ ಯಾವ ಯಾವ ಸ್ಥಳದಲ್ಲಿ ಯಾವ ಯಾವ ರೀತಿಯಾಗಿ ಭಗವಂತನನ್ನು ಚಿಂತಿಸಬೇಕಾದ ವಿಷಯವನ್ನು ತಿಳಿಸುವುದಕ್ಕಾಗಿ **ಸರ್ವಪ್ರತೀಕ** ಎಂದರೆ, ಸರ್ವತ್ರಚಿಂತಿಸಬೇಕಾದ ಪರಮಾತ್ಮನ ಪ್ರತಿಮಾಸ್ಥಾನ ಎಂದರ್ಥ. ಅಂತಹ ಸಂಧಿಯನ್ನು ಉಪಕ್ರಮ ಮಾಡುತ್ತಾರೆ. ಅದರಲ್ಲಿ ಮೊದಲನೆಯ ಪದ್ಯದಿಂದ ಭಗವದಧೀನರಿಗೆ ಎಂದೆಂದಿಗೂ ಪರಾಭವವಿಲ್ಲವೆಂದು ಹೇಳುತ್ತಾರೆ,

ಶ್ರೀಪರಬ್ರಹ್ಮನ ಅತಿವಿಮಲವಾದ ಅಂಗಗಳನ್ನು ಆಶ್ರಯಿಸಿಕೊಂಡು ಇರುವುದರಿಂದ ಅಂಗಾವಬದ್ಧರೆಂದು ಬ್ರಹ್ಮಾದಿತತ್ವೇಶರಿಗೆ ಹೆಸರು. ಇಂತಹ

ಪರಮಾತ್ಮನ ನಾಭಿಕಮಲದಿಂದ ಜನಿಸಿದ ಬ್ರಹ್ಮದೇವರು ಮೊದಲಾದ ದೇವತೆಗಳು, ಪ್ರತಿದಿವಸ ಶ್ರೀಪರಮಾತ್ಮನ ಸೇವೆಯನ್ನೇ ಮಾಡಿಕೊಂಡಿರುವ ಭಕ್ತರಿಗೆ ವಿರೋಧವನ್ನು ಎಂದಿಗೂ ಮಾಡುವುದಿಲ್ಲ. ತತ್ವಾಭಿಮಾನಿಗಳು ಭಕ್ತಜನರ ಭಕ್ತಿಯನ್ನು ವೃದ್ಧಿಗೊಳಿಸಿ ಸುಲಭಸಾಧನವನ್ನೇ ಮಾಡಿಸುವರು. ರಮಾವಿಲಾಸಾಸ್ಪದನಾದ ಶ್ರೀಪರಮಾತ್ಮನ ದಾಸರಿಗೂ ಕೂಡ ಅಪಜಯ ಉಂಟೆ ? ಎಂದೆಂದಿಗೂ ಇಲ್ಲ. ಹಾಗಾದರೆ ಪಾಂಡವಾದಿಗಳು ಕಷ್ಟಪಟ್ಟಿದ್ದಕ್ಕಾಗಿ ಭಾರತಾದಿಗಳಲ್ಲಿ ಹೇಳಿರುವವರಲ್ಲವೆ ? ಅಂದರೆ, **"ತೇಷಾಂ ದುಃಖಾಧಿಕಂ ಕಂಜದನುಕಾವೇಶತೋ ಭವೇತ್ ||" ಎಂಬ ಭಾಗವತ ತಾತ್ಪರ್ಯಾನುಸಾರ** ಪ್ರಾರಬ್ಧಕರ್ಮಾನುಸಾರವಾಗಿ ಕೆಲವು ಭಕ್ತರಿಗೆ ಆಗಾಗ್ಯೆ ದುಃಖ ಬಂದರೂ, ಅದನ್ನು ಅವರೊಳಗಿರುವ ದೈತ್ಯರೇ ಅನುಭವಿಸುವರು. ಭಕ್ತರ ಜೀವಕ್ಕೆ ಆಗಾಮಿಸಂಚಿತಾದಿಗಳಿಂದ ಕಿಂಚಿದ್ದುಃಖ ಸಂಭವಿಸಿದರೂ, ಅದು ನಶ್ವರವಾದುದರಿಂದ ಮುಕ್ತಿಗೆ ಪ್ರತಿಬಂಧಕವಲ್ಲ. ಮುಖ್ಯ ಭಗವದ್ದಾಸರನ್ನು ಕೆಡಿಸುವುದಿಲ್ಲವೆಂದರೆ, ಮುಕ್ತಿಗೆ ಪ್ರತಿಬಂಧಕವಾದ ಪಾಪವನ್ನು ಮಾಡಿಸುವುದಿಲ್ಲ. ಇಂದ್ರಾದಿಗಳಿಗೆ ಅಹಲ್ಯಾಜಾರತ್ವಾದಿಗಳು ಸಂಭವಿಸಿದರೂ, ಹೇಗೆ ಮುಕ್ತಿಗೆ ಪ್ರತಿಬಂಧಕವಾಗುವುದಿಲ್ಲವೋ, ಹಾಗೆ ಭಗವದ್ದಾಸರಿಗೆ ಈ ಲೋಕದಲ್ಲಿ ಕೆಲವು ದುಃಖವು ಕರ್ಮಾನುಸಾರವಾಗಿ ಕಂಡುಬಂದರೂ, ಅದರಿಂದ ಮುಕ್ತಿಗೆ ಲೇಶವಾದರೂ ಪ್ರತಿಬಂಧಕವಿಲ್ಲವೆಂಬುದು ಈ ಪದ್ಯದ ತಾತ್ಪರ್ಯ. || ೧ ||

## (೩) ಭಾವದರ್ಪಣ ಟೀಕಾ–

ಶ್ರೀ ಗುರುಭ್ಯೋನಮಃ|| ಶ್ರೀಮಧ್ವಗುರುವರ್ಯಾಯ ನಮಃ|| ಶ್ರೀಃ ಹರಿಃ ಓಂ|| ಪ್ರವಿತತನಾದ ಶ್ರೀಧರನನ್ನು ಸರ್ವತ್ರ ಚಿಂತಿಸುವ ಜನಗಳಿಗೆ ಸಾದರದಿಂದ ತಿಳಿಸೋ ಉದ್ದಿಶ್ಯದಿಂದ ದಾಸರಾಯರು **ಸರ್ವಪ್ರತೀಕ ಸಂಧಿಯನ್ನು** ಉಪಕ್ರಮಿಸುತ್ತಾರೆ.

ಶ್ರೀಮಂದಿರಾರಾಧ್ಯನ ಅಂಗದಲ್ಲಿದ್ದ ತತ್ವೇಶರು ಭಗವದುಪಾಸನ ಮಾಡತಕ್ಕ ಜನರಿಗೆ ಸಾನುಕೂಲರಾಗುತ್ತಾರೆಂದು ಹೇಳುತ್ತಾರೆ––

**ಆವಬೊಮ್ಮೇತಿ**

ಆವಾಂಗಬದ್ಧೇತಿ—ಶ್ರೀಪರಮಾತ್ಮನ ಅಂಗದಲ್ಲಿ ಆಶ್ರಿತರಾದವರು ತತ್ವೇಶರು ಎಂಬರ್ಥ.

**ಯಥೋಕ್ತ ಸೂತ್ರಕಾರೈ--**

**"ಓಂ ಅಂಗಾವಬದ್ಧಾಸ್ತು ನಶಾಖಾಸು ಹಿ ಪ್ರತಿವೇದಂ ಓಂ॥"**

**(೪) ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ)--**

ಓಂ **ಸರ್ವಪ್ರತೀಕ ಸಂಧಿಃ** ಪ್ರಾರಭ್ಯತೇ॥ "ಯತ ಆತ್ಮಾ ಗುಹಾಶ್ರಯಃ। ತಸ್ಮಾನ್ನ ಕಸ್ಯಚಿತ್ ದ್ರೋಹಂ ಆಚರೇತ್॥" ತಾಡಿತೀಃ ಸನ್ನಿರುದ್ಧಾವಾವೃತ್ಯಾನಾ ಪರಿಹಾಪಿತಃ1 ವಿಷ್ಮಿತಃ ಮೂತ್ರಿತಾ ವಾಪಿಪರೈಃ ದ್ವಂದ್ವೇಷು ಯೋಜಿತಾಃ॥ ನ ವ್ಯಥಂತಿ ನ ಹೃಷ್ಯಂತಿ॥ ಭೂತ್ಯೈಃ ಆಕ್ರಮ್ಯಮಾಣೋಪಿ ಧೀರಃ ದೈವವಶಾನುಗಃ॥ "ತದ್ವಿದ್ವಾನ್ ನ ಚಲೇನ್ಮಾರ್ಗಾತ್"। "ಲೋಕಾರ್ಥಂ ಶಾಸ್ತ್ರಹಾ ಯಾತಿ ನಿರಯಮ್"—ಏತತ್ಸಂದೋಹಾನುಸಂದಾನಾರ್ಥಂ ಸರ್ವೇಪಿ ವಿಠ್ಠಲ ಪ್ರತೀಕತಾಂ ಆಪನ್ನಾಃ॥ ಅತಃ ಶಿಲಾತ್ಮ ಪ್ರತೀಕೋಪಾಸ್ತಾ ಅಂತಸ್ಥಮೂರ್ತೇಃ ಫಲಲಾಭವತ್ ಸರ್ವೇಲೋಕಾಃ ಹರಿಪ್ರತೀಕ ಬುದ್ಧ್ಯಾ ಯಥೋಚಿತಂ ಸಂಭಾವ್ಯಾಶ್ಚೇತ್ ತೇನ ಈಶ ಪ್ರೀತಿಮಂತಃ ಭವೇಯುಃ" ಇತ್ಯಾಲೋಡ್ಯ ಅಶೇಷ ಪ್ರತೀಕ ಸಂಧಿಂ ವಿರಚಯಂತಿ "ಆವ" ಇತಿ॥

ಆವ=ಯಾವ। ಬೊಮ್ಮ=ಬ್ರಹ್ಮ। ಮಂಗಲಸೂತ್ರಂ ಬಬಂಧ ಅನೇಕ ಪುರಾಣಶ್ರುತಿ ಸೂಕ್ತಾಭರಣಾ ಶ್ರೀರಮಣಾ ಕೀರ್ತಿಸಾರಸುಧಾ ರಾಮಾ ಇತಿ ವ್ಯಂಜಯನ್ ತತ್ಪದಂ ವ್ಯರಚಿ॥ "ಅಂಗಾವಬದ್ಧಾಸ್ತುಃ ಇತಿ ಸೂತ್ರಂ" "ಹರ್ಯಂಗಾಶ್ರಿತೋ ಪುಸ್ತಯೇ"–ಇತಿ ಟೀಕಾ॥ ರಾಜೀವ–ಪದ್ಮಂ ॥೧॥

**ಕನ್ನಡಾರ್ಥ :**

ದಾಸವರ್ಯರು **ಸರ್ವಪ್ರತೀಕ ಸಂಧಿಯನ್ನು** ಪ್ರಾರಂಭಿಸುತ್ತಾರೆ. "ನಾರಾಯಣನು ಸರ್ವರ ಹೃದಯ ಗುಹಾವಾಸಿಯು. ಇದರಿಂದ ಯಾರಿಗೂ

ದ್ರೋಹವನ್ನೆಸಗಬಾರದು." "ಪರರು ತನ್ನನ್ನು ಹೊಡೆದರೂ, ಪ್ರತಿಬಂಧಕ ಮಾಡಿದರೂ, ಜೀವನಾಧಾರವಾದ ವೃತ್ತಿಗಳನ್ನು ತಪ್ಪಿಸಿದರೂ, ಯಾವ ರೀತಿಯ ಸುಖ ದುಃಖಗಳನ್ನಾಗಲೀ, ಲಾಭಾಲಾಭಗಳನ್ನೂ, ಮಾನಾಪ ಮಾನಗಳನ್ನಾಗಲೀ ಮಾಡಿದರೂ, ವ್ಯಥೆಪಡುವುದಿಲ್ಲ. ಹರ್ಷೋದ್ರೇಕ ವನ್ನೂ ಹೊಂದುವುದಿಲ್ಲ." "ಈ ರೀತಿ ಎಲ್ಲರಲ್ಲಿಯೂ ಪರಮಾತ್ಮನ ಸನ್ನಿ ಧಾನವಿದೆ. ಸರ್ವರಿಗೂ ಪರಮಾತ್ಮನೇ ಬಿಂಬನು"--ಎಂದು ತಿಳಿಯಬೇಕು. ಶಿಲಾಮಯ ಪ್ರತಿಮಾದಿಗಳಲ್ಲಿ ಭಗವಂತನ ಉಪಾಸನೆ ಮಾಡಲು, ಫಲ ಪ್ರಾಪ್ತಿ ಹೇಗೆ ಆಗುವುದೋ ಹಾಗೆಯೇ ಸರ್ವರಲ್ಲಿಯೂ ಭಗವಂತನು ಬಿಂಬ ವಾಗಿರುತ್ತಾನೆ ಎಂದು ಭಾವಿಸುವುದರಿಂದ ಈಶಾನುಗ್ರಹವುಂಟಾಗುವುದು. ಈ ರೀತಿಯ ವಿಚಾರಧಾರೆಯಿಂದ **ಸರ್ವಪ್ರತೀಕ ಸಂಧಿ**ಯನ್ನು ದಾಸವರೇಣ್ಯರು ಪ್ರಾರಂಭಿಸುತ್ತಾರೆ--**"ಆವ"** ಎಂಬ ಪದ್ಯದಿಂದ. ॥೦॥

## (ಜ) ಶ್ರೀ ಗುರುಹೃದಯ ಪ್ರಕಾಶಿಕೆ :

ಪೂರ್ವೋಕ್ತ ಶ್ರೀಹರಿಸ್ಮರಣೋಪಾಸಕರಿಗೆ ನವಗ್ರಹಾದಿ ಸರ್ವದೇವತೆ ಗಳು ಅನುಕೂಲರಾಗಿ ಅನುಗ್ರಹಿಸುವರೆಂತಲೂ, ಮೈ ರೋಮಗಳಲ್ಲಿ ಮೂರು ಕೋಟಿ ತೀರ್ಥಾಭಿಮಾನಿದೇವತೆಗಳ ಸ್ಮರಣೆ ಮೊದಲಾದ ಪ್ರಮೇಯ ವಿಶೇಷಗಳನ್ನು ಸರ್ವಪ್ರತೀಕವೆಂಬ ಈ ಹತ್ತನೇ ಸಂಧಿಯಲ್ಲಿ ನಿರೂಪಿಸು ತ್ತಾರೆ. ಸರ್ವವ್ಯಾಪ್ತ ದೇವರ ಚರಿತ್ರೆ ಎಂಬ ಮುಕ್ತಿಸಾಧನ ಕಥೆಯನ್ನು ಗುರುಕಟಾಕ್ಷದಿಂದ ಯಥಾಶಕ್ತಿ ವರ್ಣಿಸುವುದನ್ನು ಅತ್ಯಂತ ಹರಿಭಕ್ತರು ಕೇಳುವುದು ॥ಸಂ।ಸೂ॥

ಬ್ರಹ್ಮಾದಿ ದೇವತಾನುಗ್ರಹ ಹರಿಭಕ್ತರಿಗಾಗುವುದೆಂದು ತಿಳಿಸುತ್ತಾರೆ, ಆವ ಪರಬ್ರಹ್ಮ ಎಂದು. ಯಾವ ಪರಬ್ರಹ್ಮನಾಮಕ ಶ್ರೀ ಹರಿಯು ಅಂಗಾವ ಬದ್ಧರು ಎಂದರೆ, 'ಮುಖಾದಿಂದ್ರಶ್ಚಾಗ್ನಿಶ್ಚ' ಎಂಬುದೇ ಮೊದಲಾದ ವೇದ ರೀತ್ಯಾ ದೇವರ ಮುಖ ಮೊದಲಾದ ಅವಯವದಿಂದ ಹುಟ್ಟಿ ಅವಯವ ವನ್ನೇ ಆಶ್ರಯಿಸಿರುವ ರಾಜೀವಭವ ಎಂಬ ಬ್ರಹ್ಮ, ಶಕ್ರನೆಂಬ ಇಂದ್ರ ಮೊದಲಾದ ದೇವತೆಗಳು ಆ ಶ್ರೀಹರಿಯ ಪಾದವನ್ನು ಸೇವಿಸುವವರಿಗೆ ಅನು

ಕೂಲರಾಗಿ ಅನುಗ್ರಹಿಸುವರಲ್ಲದೆ ಕೆಡಿಸುವುದಕ್ಕೆ ಮನಸ್ಸು ಮಾಡರು. ಆದ್ದರಿಂದ ಶ್ರೀದೇವಿಯ ವಿಲಾಸಕ್ಕೆ ಆಶ್ರಯನಾದ ದೇವರ ದಾಸರಾದ ಹರಿಭಕ್ತರಿಗೆ ಅಪಜಯವೆಂಬ ಹಾನಿ ಇಲ್ಲ. 'ಶಕ್ರಾದ್ಯಾಃ ಪರಿಪಂಥಿನಃ' ಎಂಬ ಕೃಷ್ಣಾಮೃತ ಮಹಾರ್ಣವಾರ್ಥ ಹರಿಭಕ್ತರಲ್ಲದ ಅಸುರರಿಗೆ ಇಂದ್ರಾದಿಗಳು ವಿರೋಧಿಗಳೆಂದು ತಿಳಿಯಬೇಕಂತ ಅಭಿಪ್ರಾಯ. ||೧||

## ಸರ್ವವ್ಯಾಖ್ಯಾನ ಸಾರಸಂಗ್ರಹ

ಬ್ರಹ್ಮಾಂಡದಲ್ಲಿರುವ ಸಮಸ್ತ ಚರಾಚರವಸ್ತುಗಳಲ್ಲಿ ಸರ್ವತ್ರ ಪರಮಾತ್ಮನು ಪರಿಪೂರ್ಣನಾಗಿ ವ್ಯಾಪ್ತನಾಗಿದ್ದಾನೆ. ಜಡವಸ್ತುಗಳಲ್ಲಿ ವ್ಯಾಪ್ತರೂಪಗಳಿಂದಲೂ, ಚೇತನರಲ್ಲಿ ಬಿಂಬರೂಪನಾಗಿಯೂ ಇದ್ದಾನೆ. ಸರ್ವಚೇತನರು ಶ್ರೀಶನ ಚಲಪ್ರತೀಕಗಳು. ಇಂತು ಪ್ರತಿಬಿಂಬರೂಪರಾದ ಸಕಲ ಚೇತನರಲ್ಲಿಯೂ ಶ್ರೀಪರಮಾತ್ಮನು ಇದ್ದಾನೆಂದು ಉತ್ತಮ ಜ್ಞಾನಾನುಸಂಧಾನದಿಂದ ತಿಳಿದು ವ್ಯಾಪ್ತ್ಯೋಪಾಸನ ಮಾಡಬೇಕೆಂಬ ವಿಷಯವನ್ನು **ಸರ್ವಪ್ರತೀಕ ಸಂಧಿ**ಯಲ್ಲಿ ತಿಳಿಸುತ್ತಾ, ಪ್ರಸಕ್ತ ಸಂಧಿಯನ್ನು ಉಪಕ್ರಮಿಸುತ್ತಾರೆ **ಆವ ಪರಬೊಮ್ಮ** ಎಂಬ ಪ್ರಥಮ ಪದ್ಯದಿಂದ.

೧. ಸರ್ವಪ್ರಕಾರದಲ್ಲಿಯೂ ಪರಿಪೂರ್ಣನಾದ ಶ್ರೀಹರಿಗೆ **ಪರಬ್ರಹ್ಮ**ನೆಂದು ಹೆಸರು. ಅನಂತಕಲ್ಯಾಣಗುಣಗಣಪರಿಪೂರ್ಣನೂ, ಅತಏವ ಸಮಸ್ತ ದೋಷವಿದೂರನೂ ಆದ ಆ ಪರಬ್ರಹ್ಮ ಸ್ವರೂಪಿಯು ಸರ್ವೋತ್ತಮನು. ಸರ್ವರಿಂದಲೂ ಪರಮ ಶ್ರೇಷ್ಠನಾದ ಪರಾತ್ಪರ ವಸ್ತುವು. ಅಂತಹ ಪುರುಷೋತ್ತಮನನ್ನು ದಾಸರಾಯರು **ಪರಬೊಮ್ಮ**ನೆಂದೂ ವಿವರಿಸುತ್ತಾರೆ.

೨. ಅಂತಹ ಪರಬೊಮ್ಮ ನಾಮಕನಾದ ಶ್ರೀಮನ್ನಾರಾಯಣನ ಅಂಗ ಉಪಾಂಗಗಳೆಲ್ಲವೂ ಜ್ಞಾನಾನಂದಮಯವು. ನಿರ್ದುಷ್ಟವಾದ ಅತ್ಯಂತ

ಪರಿಶುದ್ಧವಾದ ಅಪ್ರಾಕೃತ ಸ್ವರೂಪಭೂತವಾದದ್ದು. **ಅಂತಹ ವಿಮಲ ಅಂಗಗಳಲ್ಲಿ** ಬ್ರಹ್ಮಾದಿ ಸಮಸ್ತ ತತ್ವಾಭಿಮಾನಿದೇವತೆಗಳು ಆಶ್ರಯ ಹೊಂದಿರುವರು. ಅಂದರೆ, ಆ ತತ್ವೇಶರು ಲಿಂಗಭಂಗಾನಂತರ, ಕರ್ಮ ವಿಮೋಚನಾದ್ವಾರಾ, ಆ ಪುರುಷನಾಮಕ ಶ್ರೀವಾಸುದೇವನ ಶರೀರಗತ ಅಂಗೋಪಾಂಗಗಳಲ್ಲಿ ತಮ್ಮತಮ್ಮ ಯೋಗ್ಯತಾನುಸಾರ ಅಂಗಸಾಯುಜ್ಯ ಮತ್ತು ಸರ್ವಾಂಗಸಾಯುಜ್ಯವೆಂಬ ಮುಕ್ತಿಸ್ಥಾನವನ್ನು ಹೊಂದಿ ನಿತ್ಯಾನಂದ ವನ್ನು ಪಡೆಯುವರು.

೩. ಅಂತಹ ಪರಮಾಧಿಕಾರಿಗಳಾದ **ಪರಬೊಮ್ಮನ ಅತಿ ವಿಮಲ ಅಂಗಾವಬದ್ಧರಾದ** ಚತುರ್ಮುಖಬ್ರಹ್ಮಾದಿ ತತ್ವಾಭಿಮಾನಿದೇವತೆಗಳು **(ರಾಜೀವಭವ ಮೊದಲಾದ ಅಮರರು)** ಪ್ರತಿದಿನವೂ ಭಗವಂತನನ್ನೇ ನಂಬಿ, ದೃಢವಾದ ಭಕ್ತಿಭಾವದಿಂದ, ಅತ್ಯಾದರಯುತ ಶ್ರದ್ಧೆಯಿಂದ ಶ್ರೀಶನ ಚರಣಾರವಿಂದದಲ್ಲಿ ಮನಸ್ಸಿಟ್ಟು ಆರಾಧಿಸುತ್ತಿರುವ ಭಗವದ್ದಾಸರಿಗೆ ಸರ್ವ ವಿಧಗಳಲ್ಲಿಯೂ ಅನುಕೂಲರಾಗಿರುವರೇ ಹೊರ್ತು, ಪ್ರತಿಕೂಲರಲ್ಲ. ಅಲ್ಲದೆ ದೈತ್ಯರ ದ್ವಾರಾ ಅವರ ಸಾಧನಮಾರ್ಗಕ್ಕೆ ಒದಗುತ್ತಿರುವ ಪ್ರತಿಬಂಧಕರೂಪ ವಾದ ವಿಘ್ನಗಳನ್ನು ಪರಿಹರಿಸಿ, ಅವರಿಗೆ ಬೆಂಗಾವಲಾಗಿದ್ದು ಸಂರಕ್ಷಿಸುತ್ತಿರು ವರು.

೪. ಹರಿಪದ ಸೇವಾಸಕ್ತರಾದ ಭಗವದ್ಭಕ್ತರಿಗೆ ಅನುಕೂಲರಾಗಿ ಅವರ ಸಾಧನೆಗಳಿಗೆ ಸರ್ವರೀತಿಗಳಲ್ಲಿಯೂ ಸಹಕಾರಿಗಳಾಗಿರುತ್ತಾರೆ. ಸತ್ಸಾ ಧನೆಗೆ ಪ್ರತಿಕೂಲರಾದ ದೈತ್ಯರಿಂದ ಅಡಿಗಡಿಗೆ ಉಂಟಾಗುವ ಅಜ್ಞಾನ, ಸಂಶಯಜ್ಞಾನ, ರೋಗಾದ್ಯುಪದ್ರವಗಳನ್ನು ಪರಿಹರಿಸಿ, ಮಾಗದರ್ಶಕರಾಗಿರು ವರು. ಅಂತಹ ಅಂತರಂಗ ಭಕ್ತರಿಗೆ ಎಂದೆಂದಿಗೂ ಕೇಡನ್ನು ಬಯಸರು.

೫. ಶ್ರೀಹರಿಯು ಸಕಲಜಗದ್ವ್ಯಾಪಾರಗಳನ್ನು ಶ್ರೀಲಕ್ಷ್ಮೀದೇವಿಯರ ದ್ವಾರವೇ ಮಾಡುತ್ತಿರುವನು. ಆತನು ಆಪ್ತಕಾಮನಾದರೂ, ಸ್ವಪ್ರಯೋಜ ರಹಿತನಾದರೂ ಶ್ರೀರಮಾದೇವಿಯರಿಗೆ ಪರಮಾನುಗ್ರಹ ಮಾಡುವುದಕ್ಕಾಗಿ

ಮೂಲ ಪ್ರಕೃತಿಯನ್ನು ಉಪಾದಾನಕಾರಣ ಮಾಡಿಕೊಂಡು ಬ್ರಹ್ಮಾಂಡದ ಸೃಷ್ಟಿ, ಸ್ಥಿತಿ ಲಯಾದಿ ಕಾರ್ಯಗಳನ್ನು ಲೀಲಾಜಾಲವಾಗಿ ನಿರಾಯಾಸವಾಗಿ ನಿರ್ವಹಿಸುತ್ತಿರುವನು. ಈ ಕಾರಣದಿಂದಲೇ ಶ್ರೀಪರಮಾತ್ಮನನ್ನು **ಶ್ರೀವಿಲಾಸಾಸ್ಪದನೆಂದು** ಹೇಳಿರುವರು. ಅಂತಹ ಲಕ್ಷ್ಮೀಲೋಲನಾದ ರಮಾ ವಿಲಾಸಾಸ್ಪದನ ದಾಸರಿಗೆ ಎಂದಿಗಾದರೂ ಅಪಜಯವುಂಟೇ ! ಎಂದಿದ್ದಾರೆ. ಅಂದರೆ, ಯಾವ ಕಾಲಕ್ಕೂ ಅವರಿಗೆ ಕೇಡಾಗಲೀ, ವಿಘ್ನಪರಂಪರೆಗಳಿಂದ ಅಪಜಯವಾಗಲೀ ಶ್ರೀಶಾನುಗ್ರಹದಿಂದ ಇಲ್ಲವೇ ಇಲ್ಲವೆಂದು ಪ್ರಸಕ್ತ ಪದ್ಯದ ತಾತ್ಪರ್ಯ. ॥೧॥

## ಪದ್ಯ ೨

**ಮೂಲ :–**

**ಶ್ರೀದನಂಘ್ರಿಸರೋಜಯುಗಳೇ ।**
**ಕಾದಶಸ್ಥಾನಾತ್ಮದೊಳಗಿ ।**
**ಟ್ಟಾದರದಿ ಸಂತುತಿಸುವವರಿಗೆ ಈ ನವಗ್ರಹವು ॥**
**ಆದಿತೇಯರು ಸಂತತಾಧಿ ।**
**ವ್ಯಾಧಿಗಳ ಪರಿಹರಿಸುತವರನು ।**
**ಕಾದುಕೊಂಡಿಹರೆಲ್ಲರೊಂದಾಗೀಶನಾಜ್ಞೆಯಲಿ ॥**

**ಅವತರಣಿಕೆ :–**

ಶ್ರೀಲಕ್ಷ್ಮೀಧರನಾದ ಪರಮಾತ್ಮನ ಚರಣಸರೋಜಗಳನ್ನು ತಮ್ಮ ಮನಸ್ಸಿನಲ್ಲಿಟ್ಟು ಆತನ ಧ್ಯಾನದಲ್ಲಿಯೇ ಸದಾಸಕ್ತಮಾನಸರಾಗಿ ಆ ಅಪಾರ ಮಹಿಮಾಸಂಪನ್ನನ ಗುಣಾವಳಿಗಳನ್ನು ನಿರಂತರದಲ್ಲಿ ಸ್ತೋತ್ರ ಮಾಡು ತ್ತಿರುವ ಭಗವದ್ದಾಸರಿಗೆ ಸೂರ್ಯಚಂದ್ರಾದಿ ನವಗ್ರಹಗಳು, ಸಮಸ್ತ

ದೇವತಾಗಣ ಆಗಾಗ್ಗೆ ಒದಗಿ ಪೀಡಿಸುತ್ತಿರುವ ದೈಹಿಕ ರೋಗಾದ್ಯುಪದ್ರವ ಗಳನ್ನು ಮಾನಸಿಕ ಪೀಡೆಗಳನ್ನು ಪರಿಹಾರಮಾಡಿ, ಇಂದಿರೇಶನ ಆಜ್ಞಾಧಾರಕ ರಾಗಿ ಅವರೆಲ್ಲರೂ ಒಂದಾಗಿ ಸೇರಿ, ಅಂತಹ ನಿಜ ಭಕ್ತರನ್ನು ಸದಾ ಸಂರಕ್ಷಿಸು ತ್ತಿರುವರು–ಎಂದು ಹೇಳುತ್ತಾರೆ. **ಶ್ರೀದನಂಘ್ರಿ** – ಎಂಬ ಪ್ರಸಕ್ತ ಸಂಧಿಗತ ೨ನೆಯ ಈ ಪದ್ಯದಿಂದ. ।।೨।।

**ಪ್ರತಿಪದಾರ್ಥ :–**

**ಶ್ರೀದನ**=ಜ್ಞಾನ, ಭಕ್ತಿ, ವೈರಾಗ್ಯಗಳೆಂಬ ದೈವೀಸಂಪತ್ತನ್ನೂ, ನಿತ್ಯ ಜೀವನದಲ್ಲಿ ಮಂಗಳವನ್ನೂ (ಶ್ರೀ) ಮತ್ತು ಐಹಿಕ ಸಂಪತ್ತನ್ನೂ ಕೊಡುವ ಶ್ರೀ ಪರಮಾತ್ಮನ, **ಅಂಘ್ರಿಸರೋಜಯುಗಳ**=ಕಮಲದಂತಿರುವ ಪಾದ ದ್ವಂದ್ವಗಳನ್ನೂ, **ಏಕಾದಶಸ್ಥಾನ**=೧೧ನೆಯ ಇಂದ್ರಿಯವಾದ **ಆತ್ಮ ದೊಳಗೆ**=ಮನಸ್ಸಿನ ಅಂತರಂಗದಲ್ಲಿ, **ಇಟ್ಟು**=ಇರಿಸಿ (ಮನಸಾ ಚಿಂತಿಸುತ್ತಾ) **ಆದರದಿ**=ಭಕ್ತಿಭಾವದಿಂದ **ಸಂತುತಿಸುವವರಿಗೆ**=ಚೆನ್ನಾಗಿ ಸ್ತೋತ್ರ ಮಾಡತಕ್ಕ ಭಗವದ್ದಾಸರಿಗೆ, **ಈ ನವಗ್ರಹವು**=ಸೂರ್ಯಚಂದ್ರಾದಿ ನವ ಗ್ರಹ ದೇವತೆಗಳು, **ಅವಿಶೇಯರು**=ಸ್ಥೂಲಗತ ತತ್ವಾಭಿಮಾನಿ ದೇವತಾ ವರ್ಗ, **ಆಧಿ**=ಮನೋವ್ಯಾಧಿಗಳನ್ನು, **ವ್ಯಾಧಿ**=ದೇಹದ ರೋಗಾದಿ ಉಪ ದ್ರವಗಳನ್ನು, **ಪರಿಹರಿಸುತ**=ಪರಿಹಾರ ಮಾಡುತ್ತಾ, **ಈಶನಾಜ್ಞೆಯಲಿ** ಶ್ರೀಪರಮಾತ್ಮನ ಆಜ್ಞೆಯಂತೆ, **ಸಂತತ**=ಯಾವಾಗಲೂ, **ಎಲ್ಲ ಒಂದಾಗಿ** ಅವರೆಲ್ಲರೂ ಒಂದಾಗಿ ಏಕಮನಸ್ಸಿನಿಂದ, **ಕಾದುಕೊಂಡಿಹರು**=ಯಾವ ಬಾಧಕಗಳೂ ಬಾರದಂತೆ ಆ ಭಗವದ್ದಾಸರನ್ನು ಸಂರಕ್ಷಿಸುತ್ತಿರುವರು. ॥೨।

## ವ್ಯಾಖ್ಯಾನಗಳು

### (೧) ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ

ಇನ್ನೂ ಅಂಥ ಪೂರ್ವೋಕ್ತ ಭಕ್ತರನ್ನು ಭಗವದಾಜ್ಞಾದಿಂದ ದೇವತೆ ಗಳು ಸಂರಕ್ಷಿಸುತ್ತಾರೆ ಅಂತ ಹೇಳುತ್ತಾರೆ.

ಜ್ಞಾನ–ಭಕ್ತಿ–ವೈರಾಗ್ಯಗಳೆಂಬ ಐಶ್ವರ್ಯವೇನು, ತದ್ದ್ವಾರಾ ಜನನ ಮರಣಾದಿಗಳಿಂದ ರಹಿತರನ್ನಾಗಿ ಮಾಡಿ ಸ್ವರೂಪಾನಂದ ವ್ಯಕ್ತಿರೂಪವಾದ ಐಶ್ವರ್ಯವೇನು, ಇನ್ನೂ ನಶ್ವರವಾದ ಪ್ರಾಕೃತ ಧನಧಾನ್ಯಾದಿ ಐಶ್ವರ್ಯ ವೇನು, ಇವುಗಳನ್ನ ಕೊಡತಕ್ಕ ಶ್ರೀಪರಮಾತ್ಮನ ಪಾದದ್ವಯಗಳೆಂಬ ಕಮಲ ಗಳ, ಹನ್ನೊಂದನೇ ಇಂದ್ರಿಯವಾದ ಮನಸ್ಸು ಇದಕ್ಕೆ ಸ್ಥಾನಭೂತವಾದದ್ದು ಹೃದಯಗೋಳಕದೊಳಗೆ ಅಷ್ಟದಳಕಮಲದೊಳಗೆ ಆತ್ಮನಾಮಕ ಬಿಂಬರೂಪಿ ಪರಮಾತ್ಮ ಇದ್ದಾನೆ. ಇದನ್ನು ತಿಳಿದು ಇವನ ಅಪರೋಕ್ಷಾರ್ಥವಾಗಿ ವಾಸನಾ ರೂಪವಾದ ಅಷ್ಟದಳಕಮಲದಲ್ಲಿ, ತನಗೆ ಇಷ್ಟವಾದ ವಾಸನಾಮಯರೂಪ ವಾದ ಒಂದು ಪ್ರತಿಮಾವನ್ನು ಮನೋನುಸಂಧಾನದಿಂದ ಇಟ್ಟು, ಅಂತರ್ಗತ ತಿಳಿದು, ಅವನ ಜ್ಞಾನಾನಂದಾದಿಗಳನ್ನು ವಿಚಾರಮಾಡುತ್ತಾ, ಆ ಪ್ರತಿಮಾ ಪಾದದಲ್ಲಿ ಅಚಂಚಲವಾದ ಮನಸ್ಸು ಇಟ್ಟು, ಅತ್ಯಂತ ಆದರೋಪಚಾರದಿಂದ ಛಂದಾಗಿ ಸ್ತೋತ್ರ ಮಾಡತಕ್ಕವರಿಗೆ, ಈ ಸ್ಥೂಲದೇಹಗತ ತತ್ತ್ವೇಶರಾದ ದೇವತೆಗಳು, ಸೂರ್ಯ ಚಂದ್ರಾದಿ ನವಗ್ರಹದೇವತೆಗಳು, ನಿರಂತರ ಶ್ರೀ ಪರಮಾತ್ಮನ ಸ್ಮೃತಿಯುಕ್ತರಾದ ಬಿಂಬಕ್ರಿಯಾ ತಿಳಿಯತಕ್ಕ ಅಧಿಕಾರಿಗಳಿಗೆ, ಮನೋವ್ಯಸನರೂಪವಾದ ರೋಗ, ಅಹಂ ಎಂಬ ರೋಗ, ಜ್ವರಾದಿ ರೋಗ ಗಳು ಮತ್ತು ಮಮ ಎಂಬ ರೋಗ (ಇವುಗಳ) ಕ್ರಮೇಣ ಪರಿಹಾರಮಾಡುತ್ತಾ (ಅಧಿಕಾರಿಗಳನ್ನು), ಪರಮಾತ್ಮನ ಆಜ್ಞಾನದಿಂದ ಕೊಡದೇ, ಸರ್ವತತ್ತ್ವ ದೇವತೆಗಳೂ ಏಕಪ್ರಕಾರ ಆಯಾ ಇಂದ್ರಿಯಗಳಿಂದ ಭಗವತ್ಪ್ರೀತಿಕರವಾದ ವ್ಯಾಪಾರ ಮಾಡಿಸೋ ವಿಷಯದಲ್ಲಿ ಒಂದೇ ಮನಸ್ಸುಳ್ಳವರಾಗಿ, ಅವರವರ ತತ್ತ್ವಗಳಲ್ಲಿ ಅವರವರು ಕಾದುಕೊಂಡಿರುತ್ತಾರೆ. (ಇನ್ನೂ ಬಹಿಃ'ಹೊರಗಡೆ, ದಾವ ವಿಧವಾದ ಬಾಧಕಗಳೂ ಬಾರದಂತೆ ಕಾದುಕೊಂಡಿರುತ್ತಾರೆ.) ॥೨॥

## ೨. ಭಾವಪ್ರಕಾಶಿಕೆ

ಪರಮಾತ್ಮನ ಭಕ್ತರಿಗೆ ಸೂರ್ಯಾಂಗಾರಕ ಶನಿ ಮೊದಲಾದ ನವಗ್ರಹ ದೇವತೆಗಳೂ ಕೂಡ ಸಹಾಯಕರಾಗಿರುವರೆಂದು ಹೇಳುತ್ತಾರೆ.

ಜ್ಞಾನೈಶ್ವರ್ಯಗಳನ್ನು ಭಕ್ತರಿಗೆ ಕೊಡುವ ಪರಮಾತ್ಮನ ಪಾದಕಮಲವನ್ನು ಮನಸ್ಸಿನಲ್ಲಿಟ್ಟು, ಸರ್ವದಾ ಭಜಿಸುತ್ತಿರುವ ಭಕ್ತರಿಗೆ ನವಗ್ರಹದೇವತೆಗಳ ಸಂಚಾರದಿಂದ –

**"ದ್ವಾದಶಾಷ್ಟಮ ಜನ್ಮಸ್ಥಾಃ ಶನ್ಯರ್ಕಾಂಗಾರಕೋ ಗುರುಃ ।**
**ಕುರ್ವಂತಿ ಪ್ರಾಣಸಂದೇಹಂ ಸ್ಥಾನಭ್ರಷ್ಟಂ ಧನಕ್ಷಯಮ್ ॥"**

ಅಂದರೆ ಶನಿ, ಸೂರ್ಯ, ಅಂಗಾರಕ, ಗುರು, ಈ ಗ್ರಹಗಳು ಯಾವ ಜನ್ಮರಾಶಿಯಿಂದ ೧೨ ಮತ್ತು ೮ನೆಯ ಸ್ಥಾನಗಳಿಗೆ ಬರುವರೋ, ಅವನಿಗೆ ಪ್ರಾಣಸಂಶಯವನ್ನುಂಟುಮಾಡುವರು. ಮತ್ತು ಸ್ಥಾನಭ್ರಷ್ಟನನ್ನಾಗಿ ಮಾಡುವರು. ಧನಕ್ಷಯವನ್ನುಂಟುಮಾಡುವರು – ಎಂಬ **ಜ್ಯೋತಿಷ ಶಾಸ್ತ್ರದ ಪ್ರಮಾಣದಂತೆ** ಆಗುವ ದುಃಖಗಳು, ಆಧಿವ್ಯಾಧಿಗಳನ್ನು ಪರಿಹರಿಸಿ, ಭಗವದಾಜ್ಞಾ ಪ್ರಕಾರ ಅವರನ್ನು ರಕ್ಷಿಸುವರು. ॥೨॥

### ೩ ಭಾವದರ್ಪಣ ಟೀಕಾ

ಈಗ ಹನ್ನೊಂದನೆಯ ಸ್ಥಾನವೆನಿಸಿಕೊಂಡ ಮನಸ್ಸಿನಲ್ಲಿ ಶ್ರೀಶನನ್ನು ಇಟ್ಟು ಉಪಾಸನಾ ಮಾಡುಪವರಿಗೆ ಆಧಿ ಎಂದರೆ–ಮನಸ್ಸಿನ ಚಿಂತಾದಿಗಳು, ವ್ಯಾಧಿ ಎಂದರೆ–ದೇಹಜನ್ಯರೋಗಾದಿಗಳು ಸಹ ಪರಿಹಾರ ಮಾಡುತ್ತಾ ನವ ಗ್ರಹಗಳು ಕಾದುಕೊಂಡಿರುತ್ತಾರೆಂದು ಹೇಳುತ್ತಾರೆ. **ಶ್ರೀದೇತಿ ॥೨॥**

### ೪ ಶ್ರೀವ್ಯಾಸದಾಸಸಿದ್ಧಾಂತ ಕೌಮುದಿ (ಸಂಸ್ಕೃತಮೂಲ)

**"ಶ್ರೀದ"** – ಇತಿ ॥ ಶ್ರೀದಃ ಶ್ರೀಶಃ॥ "ಜಂ ಯೋ ಅರ್ವಾವತೀಂ-ದವಃ ವಿಶ್ವಾ ದ್ವೇಷಾಂಸಿ ಜಹಿ ಚಾವ ಚಾಕೃಧಿ ॥ ವಿಶ್ವೇ ಸನ್ವಂತ್ವಾವಸು ಶಿಷ್ಟೇಷು ಚಿತ್ತೇ ಮದಿರಾಸೋ ಅಂಶವಃ ಜಂ ॥" ಶ್ರೀಃ ವಿಷಂ । ತದ್ವಂತಃ ದ್ವೇಷಜನಾಃ । ತಾನ್ ದ್ಯತಿ ಖಂಡಯತಿ ಇತಿ ಶ್ರೀದಮೂರ್ತಿ । ಅವು ಉಕ್ತೇಃ ॥ ಏಕಾದಶಿ ಮನಸಾ ಸಹ ॥ ಆದಿದೇತೆಯರು=ದೇವಾಃ ॥೨॥

**ಕನ್ನಡಾರ್ಥ :**

ಹರಿಯ ನಿತ್ಯೋಪಾಸಕರಾದ ಭಗವದ್ದಾಸರನ್ನು ನವಗ್ರಹ ದೇವತೆಗಳು ಯಾವ ಬಾಧೆಯನ್ನೂ ಕೊಡದೇ ಸಂರಕ್ಷಿಸುತ್ತಾರೆ ಎಂದು ಹೇಳುತ್ತಾರೆ **ಶ್ರೀದೇತಿ** ಎಂಬ ಈ ಪದ್ಯದಿಂದ. "ಶ್ರೀದಃ" ಎಂಬುದು **ವಿಷ್ಣುಸಹಸ್ರನಾಮಾಂತರ್ಗತವು.** "ಶ್ರೀಃ" ಎಂದರೆ ವಿಷವು. ಇದರಿಂದ ಯುಕ್ತರಾದವರು ದ್ವೇಷಿಗಳು ಎಂದರ್ಥ. ಅಂತಹ ದ್ವೇಷಿಗಳನ್ನು ಖಂಡಿಸುವವನು "ಶ್ರೀದ" ನಾಮಕನು. ಇದು **ಬೃಹತೀ ಮಂತ್ರಾರ್ಥದ ಸಾರವು.** ಕರ್ಮೇಂದ್ರಿಯಗಳು ೫. ಜ್ಞಾನೇಂದ್ರಿಯಗಳು ೫. ಇದರಲ್ಲಿ ಮನಸ್ಸನ್ನು ಸೇರಿಸಿದರೆ ೧೧ನೆಯ ಸ್ಥಾನವಾಗುವುದು. ಆದಿತೇಯರು ಅಂದರೆ ಅದಿತಿದೇವಿಯ ಪುತ್ರರಾದ ದೇವತೆಗಳೆಂದರ್ಥ. ॥೨॥

## (೫) ಶ್ರೀಗುರುಹೃದಯಪ್ರಕಾಶಿಕೆ :

ನವಗ್ರಹದೇವತೆಗಳು ಹರಿಭಕ್ತರನ್ನು ದೇಹಬಾಧೆ ಕೊಡದೆ ರಕ್ಷಿಸುವರೆಂದು ತಿಳಿಸುತ್ತಾರೆ, ಶ್ರೀದನೆಂದು. ಸಂಪತ್ತನ್ನು ಕೊಡುವ ಶ್ರೀಹರಿಯ ಪಾದಕಮಲದ್ವಯವನ್ನು ಮನಸ್ಸು ಮೊದಲಾದ ಹನ್ನೊಂದು ಕರಣಗಳೆಂಬ ಸ್ಥಾನಗಳಲ್ಲಿಟ್ಟು, ಆದರದಿಂದ ಸಂಸ್ತುತಿಸಿ ಸಂತೋಷಪಡಿಸುವರಿಗೆ ಅಂದರೆ, 'ಮೂಲರೂಪನಾರಾಯಣ ಮನದೊಳಿಹನು' ಎಂದು ಆರನೆ ಸಂಧಿಯಲ್ಲಿ ಹೇಳಿರುವ ಪ್ರಕಾರ, ಹನ್ನೊಂದು ಇಂದ್ರಿಯಗಳಲ್ಲಿ ದೇವರ ರೂಪ-ಕ್ರಿಯೆಗಳನ್ನು ಸ್ಮರಿಸುವ ಭಕ್ತರಿಗೆ ಈ ನವಗ್ರಹದೇವತೆಗಳು ಆಧಿ ಎಂಬ ಮನೋವ್ಯಸನವನ್ನೂ ವ್ಯಾಧಿ ಎಂಬ ರೋಗವನ್ನೂ ಸಹ ಪರಿಹರಿಸಿ ದೇವರ ಆಜ್ಞೆಯಿಂದ ರಕ್ಷಿಸುವರು. 'ಏವಮಾರಾಧನಂ ವಿಷ್ಣೋಸ್ಸರ್ವೇಷಾಮಾತ್ಮನಸ್ಯ ಹಿ' ಎಂಬುದೇ ಮೊದಲಾದ ಭಾವಾರ್ಥ ವಿವರಿಸಲ್ಪಟ್ಟಿತು. ॥ ೨ ॥

# ಸರ್ವ ವ್ಯಾಖ್ಯಾನ ಸಾರ ಸಂಗ್ರಹ

೧. **ಶ್ರೀ**–ಎಂದರೆ ಸಂಪತ್ತು ಎಂದರ್ಥ. ಶ್ರೀಶನ ಪರಮಾನುಗ್ರಹ ಪ್ರಾಪ್ತಿಗೆ ಸಾಧನಪರಿಕರಣಗಳಾದ ಜ್ಞಾನ, ಭಕ್ತಿ ಮತ್ತು ವೈರಾಗ್ಯಗಳೆಂಬ

ದೈವೀಸಂಪತ್ತುಗಳಿಗೆ **ಶ್ರೀ** ಎಂದು ಹೆಸರು. ಇಂತಹ ಸಂಪತ್ತುಗಳನ್ನು **ದ**-ಅಂದರೆ ತನ್ನ ಭಕ್ತಜನರಿಗೆ ಕೊಡುವವನಾದ್ದರಿಂದ ಶ್ರೀಪರಮಾತ್ಮನಿಗೆ ಶ್ರೀದನೆಂದು ಹೆಸರು.

ಅಲ್ಲದೆ **ಶ್ರೀದಃ** ಎಂಬ ಶಬ್ದವು **ವಿಷ್ಣುಸಹಸ್ರನಾಮಾಂತರ್ಗತ ವಾದುದು.** ಶ್ರೀಃ-ಎಂದರೆ "ವಿಷ"-ಎಂದು ಇನ್ನೊಂದು ಅರ್ಥ. ಅದ ರಿಂದ ಯುಕ್ತರಾದವರು ಭಗವದ್ವೇಷಿಗಳಾದ ತಮೋಯೋಗ್ಯರು. ಅವರನ್ನು ಖಂಡಿಸುವುದರಿಂದ ಅಥವಾ ದಮನ ಮಾಡುವುದರಿಂದ (ದ) ಶ್ರೀಪರ ಮಾತ್ಮನು **ಶ್ರೀದ** ನಾಮಕನು, ಈ ಅರ್ಥವು **ಬೃಹತೀಮಂತ್ರದಲ್ಲಿ** ಉಕ್ತ ವಾಗಿದೆ.

**"ಶ್ರೀ ವಿಷಂ । ತದ್ವದಂತಃ ದ್ವೇಷಿಜನಾಃ ।**
**ತಾನ್ ದ್ಯತಿ ಖಂಡಯತಿ ಇತಿ ಶ್ರೀದಃ ॥"**

೨. ಅಂತಹ ಶ್ರೀದನಾಮಕನಾದ ಶ್ರೀಹರಿಯ ಪಾದಪದ್ಮಗಳನ್ನು ಅನವರತವೂ ತಮ್ಮ ಮನೋಮಂದಿರದಲ್ಲಿಟ್ಟು ಆರಾಧಿಸುತ್ತಾರೆ ಭಗವ ದ್ದಾಸರು. ಜ್ಞಾನೇಂದ್ರಿಯಗಳು ೫ ಮತ್ತು ಕರ್ಮೇಂದ್ರಿಯಗಳು ೫. ಈ ದಶೇಂದ್ರಿಯಗಳನ್ನು ನಿಯಂತ್ರಿಸತಕ್ಕ ಏಕಾದಶೇಂದ್ರಿಯವೇ **ಮನಸ್ಸು.** ಇದರಿಂದ ಮನಸ್ಸನ್ನೇ **ಏಕಾದಶಸ್ಥಾನ**-ಎಂದಿದ್ದಾರೆ ದಾಸವರ್ಯರು. ಅಂತಹ ಏಕಾದಶಸ್ಥಾನೀಯವಾದ ಮನಸ್ಸಿನ ಅಂತರಂಗದಲ್ಲಿ (**ಆತ್ಮದೊಳಗೆ**) ಅತ್ಯಂತ ಆದರಾಸಕ್ತಿಗಳಿಂದ ಶ್ರೀದನ ಚರಣಕಂಜಗಳನ್ನು ಧ್ಯಾನಿಸುತ್ತಾ ಸ್ತೋತ್ರಮಾಡುತ್ತಿರುವರು. ಹೃದಯಗೋಳಕದೊಳಗೆ ಅಷ್ಟದಳಕಮಲವಿದೆ. ಇದರಲ್ಲಿ **ಆತ್ಮ**ನಾಮಕ ಬಿಂಬರೂಪೀ ಶ್ರೀಪರಮಾತ್ಮನಿದ್ದಾನೆ. ಭಗವ ಧ್ಯಾನೋಪಾಸಕರು ತಮಗೆ ಪ್ರಿಯವಾದ ವಾಸನಾಮಯರೂಪವಾದ ಪ್ರತಿಮಾವನ್ನು ತಮ್ಮ ಮನೋಮಂದಿರದಲ್ಲಿ ನಿಲಿಸಿ, ಆತನ ಪ್ರತಿಮಾ ಪಾದ ಪದ್ಮಗಳಲ್ಲಿ ಅಚಂಚಲವಾದ ಮನಸ್ಸಿಟ್ಟು ಸ್ತೋತ್ರ ಮಾಡುವರು.

೩. ಅಂತಹ ಶ್ರೀಶನ ಚರಣಾರವಿಂದಗಳಲ್ಲಿ ಆಸಕ್ತಮಾನಸರಾದ ಭಗವದ್ಭಕ್ತರಿಗೆ ಸೂರ್ಯ ಚಂದ್ರಾದಿ ನವಗ್ರಹಗಳು ಯಾವ ಪೀಡೆಯನ್ನೂ ಉಂಟುಮಾಡದೆ ಅವರಿಗೆ ಅನುಕೂಲರಾಗಿರುವರು.

**ದ್ವಾದಶಾಷ್ಟಮ ಜನ್ಮಸ್ಥಾಃ ಶನ್ಯರ್ಕಾಂಗಾರಕೋ ಗುರುಃ ।**
**ಕುರ್ವಂತಿ ಪ್ರಾಣ ಸಂದೇಹಂ ಸ್ಥಾನಭ್ರಷ್ಟಂ ಧನಕ್ಷಯಮ್ ॥"**

**ಜ್ಯೋತಿಷಶಾಸ್ತ್ರ ಪ್ರಮಾಣ :**

ಶನಿ, ಸೂರ್ಯ, ಅಂಗಾರಕ, ಗುರು ಈ ನಾಲ್ಕು ಗ್ರಹಗಳು ಯಾವನ ಜನ್ಮರಾಶಿಯಿಂದ ೧೨ ಮತ್ತು ೮ನೆಯ ಸ್ಥಾನಗಳಲ್ಲಿದ್ದಾಗ, ಅವನಿಗೆ ಪ್ರಾಣ ಭಯವನ್ನಾಗಲೀ, ಸ್ಥಾನಭ್ರಷ್ಟತೆಯನ್ನಾಗಲೀ, ಧನವ್ಯಯವನ್ನಾಗಲೀ ಉಂಟು ಮಾಡುವರೆಂದು ಗ್ರಹಚಾರ ಫಲರೀತ್ಯಾ **ಜ್ಯೋತಿಷಶಾಸ್ತ್ರ**ದಲ್ಲಿ ಉಕ್ತವಾಗಿದೆ. ಆದರೆ ಶ್ರೀಶನ ನಿಜದಾಸರಿಗೆ ನವಗ್ರಹಗಳು ಸಮಸ್ತ ವಿಘ್ನ ಗಳನ್ನೂ ಪರಿಹರಿಸಿ, ಸಾಧನಮಾರ್ಗದಲ್ಲಿ ಸಹಕಾರಿಗಳಾಗಿರುವರು.

೪. ಅಂತೆಯೇ ಬ್ರಹ್ಮಾದಿ ತತ್ವಾಭಿಮಾನಿದೇವತೆಗಳು (**ಆದಿತೇಯರು**) ಭಗವದ್ಭಕ್ತರ ಸರ್ವ ಇಂದ್ರಿಯಗಳನ್ನೂ ಸನ್ಮಾರ್ಗದಲ್ಲಿಯೇ ಪ್ರವರ್ತಿಸುತ್ತಾ ಅನುಕೂಲರಾಗಿರುವರು. ಕಶ್ಯಪಮಹಾಮುನಿಗಳಿಂದ ಅದಿತಿದೇವಿಯಲ್ಲಿ ಉತ್ಪನ್ನರಾದ ದೇವತೆಗಳಿಗೆ **ಆದಿತೇಯ**ರೆಂದು ಹೆಸರು.

೫. ಸತ್ಸಾಧನೆಗೆ ಒದಗುವ ಪ್ರತಿಬಂಧಕಗಳು ಎರಡು ಪ್ರಕಾರ :–

1. ಮನಸ್ಸಿಗೆ ಸಂಬಂಧಿಸಿದ ಪೀಡೆಗಳು. ಚಿಂತೆ, ವ್ಯಾಕುಲತೆ, ಮನೋಚಾಂಚಲ್ಯ ಇತ್ಯಾದಿಗಳಿಗೆ **ಆಧಿ** ಎಂದು ಹೆಸರು.

2. ದೇಹಕ್ಕೆ ಸಂಬಂಧಿಸಿದ ರೋಗಾದಿ ಉಪದ್ರವಗಳಿಗೆ **ವ್ಯಾಧಿ** ಎಂದು ಹೆಸರು.

ಇಂತಹ ಆಧಿ ಮತ್ತು ವ್ಯಾಧಿ ಎಂಬ ಎರಡು ರೂಪವಾದ ಉಪದ್ರವ ಗಳನ್ನು ನವಗ್ರಹಗಳು ಮತ್ತು ತತ್ವೇಶರು ಪರಿಹಾರ ಮಾಡಿ, ಶ್ರೀಪರಮಾತ್ಮನ ಆಜ್ಞೆಯಂತೆ (**ಈಶನಾಜ್ಞೆಯಲಿ**), ಭಗವದ್ದಾಸರನ್ನು ಸದಾ ಕಾದುಕೊಂಡು ಸಂರಕ್ಷಿಸುತ್ತಿರುವರು. ನವಗ್ರಹಗಳು ಹೊರಗಿನಿಂದ ಮತ್ತು ತತ್ವಾಭಿಮಾನಿ ದೇವತೆಗಳು ಒಳಗಿನಿಂದ ಸಂರಕ್ಷಿಸುವರು ಎಂದು ತಿಳಿಯಬೇಕು. ॥ ೨ ॥

## ಪದ್ಯ ೩

**ಮೂಲ :**

**ಮೇದಿನಿಯ ಮೇಲುಳ್ಳ ಗೋಷ್ಪಾ ।**
**ದೋದಕಗಳೆಲ್ಲಮಲತೀರ್ಥವು ।**
**ಪಾದಪಾದ್ರಿ ಧರಾತಳವೇ ಸುಕ್ಷೇತ್ರ ಜೀವಗಣ ॥**
**ಶ್ರೀದನ ಪ್ರತಿಮೆಗಳು ಅವರುಂ ।**
**ಬೋದನವೆ ನೈವೇದ್ಯ ನಿತ್ಯದಿ ।**
**ಹಾದಿ ನಡೆವುದೆ ನರ್ತನಗಳೆಂದರಿತವನೆ ಯೋಗಿ ॥೩॥**

**ಅವತರಣಿಕೆ :**

ಭೂಮಿಯ ಮೇಲೆ ನಮ್ಮ ಕಣ್ಣಿಗೆ ಪ್ರತ್ಯಕ್ಷರೂಪದಲ್ಲಿ ಗೋಚರಿಸುವ ಸಮಸ್ತ ವಸ್ತುಗಳು ಪರಮಾತ್ಮನ ಅಧಿಷ್ಠಾನವೆಂದು ತಿಳಿದು, ಉಪಾಸನೆ ಮಾಡುವವರೇ ಮಹಾ ಯೋಗಿಗಳೆಂದು ತಿಳಿಸುತ್ತಾರೆ ಪ್ರಸಕ್ತ ಸಂಧಿಗತ ೩ನೆಯ ಈ ಪದ್ಯದಿಂದ.

ಭೂಮಿಯ ಮೇಲಿರುವ ಗೋವಿನ ಹೆಜ್ಜೆಯಷ್ಟು ಜಾಗದಲ್ಲಿ ನಿಂತನೀರು. ಸಮುದ್ರ, ನದಿ, ಕೆರೆ, ಬಾವಿ, ತಟಾಕಾದಿಗಳಲ್ಲಿರುವ ನೀರು ಎಲ್ಲವೂ ಪವಿತ್ರ ತೀರ್ಥಗಳು. ವೃಕ್ಷ, ಪರ್ವತ, ಭೂಮಿ ಇತ್ಯಾದಿಗಳೆಲ್ಲವೂ ಪುಣ್ಯಕ್ಷೇತ್ರ ಗಳು. ಜೀವಗಣಗಳೆಲ್ಲವೂ ಶ್ರೀದನಾದ ಆ ಪರಮಾತ್ಮನ ಪ್ರತಿಬಿಂಬರೂಪ ವಾದ ಪ್ರತೀಕಗಳು. ಅವರು ತಿನ್ನುವ ಆಹಾರಗಳೇ ಪರಮಾತ್ಮನಿಗೆ ನೈವೇದ್ಯವು. ಪ್ರತಿದಿನವೂ ಹಾದಿ ನಡೆಯುವ ಸಂಚಾರಕ್ರಿಯೆಯೆ ನರ್ತನ ಸೇವಾ. ಈ ರೀತಿಯಲ್ಲಿ ತಿಳಿದು, ಅದರಂತೆ ಅನುಷ್ಠಾನಕ್ಕೆ ತರುವವನೇ ಮಹಾಯೋಗಿ (ಜ್ಞಾನಿ) ಎಂದೆನಿಸುವವನು. ॥೩॥

**ಪ್ರತಿಪದಾರ್ಥ :**

**ಮೇದಿನಿಯ**=ಈ ಭೂಮಿಯ, **ಮೇಲುಳ್ಳ**=ಮೇಲ್ಭಾಗದಲ್ಲಿ ಇರುವ, **ಗೋಷ್ಪಾದ**=ಒಂದು ಹಸುವಿನ ಹೆಜ್ಜೆಯಷ್ಟು ಅಗಲವಾದ, **ಉದಕಗಳೆಲ್ಲ**=ಸ್ಥಳದಲ್ಲಿ ನಿಂತಿರುವ ನೀರು (ಅಂತೆಯೆ ಸಮುದ್ರ, ನದಿ, ಕೆರೆ, ಭಾವಿ, ಸರೋವರ ಇತ್ಯಾದಿ ಜಲಾಗಾರದಲ್ಲಿರುವ ನೀರು) **ಅಮಲ ತೀರ್ಥವು**=ಪರಿಶುದ್ಧವಾದ ಪವಿತ್ರ ತೀರ್ಥಗಳು, **ಪಾದಪ**=ವೃಕ್ಷಗಳು, **ಅದ್ರಿ**=ಪರ್ವತಗಳು, **ಧರಾತಲವೇ**=ಭೂಮಿ ಇತ್ಯಾದಿಗಳೆಲ್ಲವೂ, **ಸುಕ್ಷೇತ್ರ**=ಪುಣ್ಯಕ್ಷೇತ್ರಗಳು, **ಜೀವಗಣ**=ಸಮಸ್ತ ಜೀವರಾಶಿಗಳೂ, **ಶ್ರೀದನ**=ಸಕಲ ಸಂಪತ್ಪ್ರದನಾದ ಶ್ರೀಪರಮಾತ್ಮನ, **ಪ್ರತಿಮೆಗಳು**=ಪ್ರತಿಬಿಂಬಭೂತರಾದ ಪ್ರತೀಕಗಳು, **ಅವರುಂಬ**=ಅವರು ಭೋಜನ ಮಾಡುವ, **ಓದನವೆ**=ಅನ್ನಾದಿ ಆಹಾರಗಳು· **ನೈವೇದ್ಯ**=ಶ್ರೀಪರಮಾತ್ಮನಿಗೆ ಅರ್ಪಿಸುವ ನಿವೇದನವು, **ನಿತ್ಯದಿ**=ಪ್ರತಿನಿತ್ಯವೂ, **ಹಾದಿ ನಡೆವುದೆ**=ಮಾರ್ಗ ನಡೆಯುವ ಸಂಚಾರಕ್ರಿಯೆಯೇ, **ನರ್ತನಗಳು**=ಶ್ರೀಪರಮಾತ್ಮನ ಎದುರಿಗೆ ನಡೆಯಿಸುವ ನರ್ತನಸೇವಾ, **ಎಂದರಿತವನೇ**=ಈ ಪ್ರಕಾರ ಜ್ಞಾನಾನುಸಂಧಾನದಿಂದ ತಿಳಿದವನೇ, **ಯೋಗಿ**=ಅವನೇ ಬ್ರಹ್ಮಜ್ಞಾನಿ ಎಂದೆನಿಸುವನು, ॥ ೩ ॥

## ವ್ಯಾಖ್ಯಾನಗಳು

### ೧ ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ

ಪೂರ್ವೋಕ್ತ ಭಗವದ್ಭಕ್ತನಾದವನು ಯೋಗಿ ಎಂತಲೂ, ಅವನು ಬ್ರಹಜ್ಞಾನಿ ಎಂತಲೂ ಹೇಳಿ ಅವನ ಲಕ್ಷಣ ಹೇಳುತ್ತಾರೆ.

ಭೂಮಿಯ ಮೇಲೆ ಇರತಕ್ಕದ್ದು ಎಂದರೆ ಭೂಮಿಯು, ಭೂಪ್ರಾಚುರ್ಯದಿಂದ ಪಂಚಭೂತದಿಂದ ನಿರ್ಮಿತ ಶರೀರವು. ಇಂಥ ಸ್ಥೂಲ ಶರೀರದ ಮ್ಯಾಲೆ

ಇರತಕ್ಕ ರೋಮಗಳು, ಗೋಪಾದದ ಅಗಲ ಪರಿಮಿತಿಯಿಂದ ಇರತಕ್ಕ ಉದಕ, ಅತ್ಯಲ್ಪ ಉದಕ ಎಂದು ತಾತ್ಪರ್ಯ. ರೋಮಕೂಪಗಳಲ್ಲಿ ಅತ್ಯಲ್ಪವಾಗಿ ತೀರ್ಥೋದಕಗಳು ತದಭಿಮಾನಿಗಳು ಇದ್ದಾರೆ. ಇವುಗಳು ಕೇವಲ ನಿರ್ದುಷ್ಟವಾದ ತೀರ್ಥಗಳೆಂದು ತಿಳಿಯಬೇಕು. ಈ ತೀರ್ಥಗಳಲ್ಲಿ ತೀರ್ಥಾಭಿಮಾನಿಗಳ ಸಹಿತನಾಗಿ ಪರಮಾತ್ಮ ಇದ್ದಾನಾದಕಡಿಯಿಂದ–ಈ ಪರಮಾತ್ಮನ ರೋಮಕೂಪಗಳಲ್ಲಿ ಈ ತೀರ್ಥಗಳು ತೀರ್ಥಾಭಿಮಾನಿ ದೇವತೆಗಳಿಗೆ ಅದೇ ಸ್ಥಾನವಾಗಿದೆ. ಇವರು ಅಲ್ಲಿಂದ ಉತ್ಪತ್ತಿಯಾದವರು. ಆದ್ದರಿಂದಲೇ ದೇಹದಲ್ಲಿ ಅದೇ ಸ್ಥಾನದಲ್ಲೇ ಅವರಿಗೆ ಆವಾಸವು. ಇದೇ ರೀತ್ಯಾ ನಾಡಿಗಳಲ್ಲಿ ಮಹಾನದಿಗಳು; ವೃಕ್ಷಗಳು, ಪರಮಾತ್ಮನ ರೋಮಗಳಿಂದ ವೃಕ್ಷಗಳು ತದಭಿಮಾನಿಗಳು ಸೃಷ್ಟಿ. ಆದ್ದರಿಂದ ರೋಮಗಳಲ್ಲಿ ವೃಕ್ಷಾಭಿಮಾನಿ ದೇವತೆಗಳಿದ್ದಾರೆ. ರೋಮಗಳು ವೃಕ್ಷಸಾಮ್ಯ. ಪರ್ವತಗಳು ಶ್ರೀಪರಮಾತ್ಮನ ಅಸ್ಥಿಗಳಿಂದ ಹಿಮಾಚಲಾದಿ ಪರ್ವತಗಳು ಸೃಷ್ಟಿ. ಆದ್ದರಿಂದ ದೇಹದಲ್ಲಿ ಅಸ್ಥಿಗಳಲ್ಲಿ ಪರ್ವತತತ್ತ್ವಾಭಿಮಾನಿಗಳು ಇದ್ದಾರೆ. ಅಸ್ಥಿಗಳು ಪರ್ವತಕ್ಕೆ ಸಾಮ್ಯ. ಭೂಮಿ, ಪೃಥ್ವಿಪ್ರಾಚುರ್ಯದಿಂದ ನಿರ್ಮಿತವಾದ ಈ ಸ್ಥೂಲದೇಹವೇ ಪ್ರಸಿದ್ಧವಾದ ಕ್ಷೇತ್ರ. ಈ ಪ್ರಕಾರದಿಂದ ದೇಹ ಸುಕ್ಷೇತ್ರ ಎಂದು ಹೇಳಲಾಯಿತು. ದೇಹಗತನಾದ ಜೀವ ಇಂದ್ರಿಯಾದಿಗಳು ನಾಡಿಗಳು, ಇವುಗಳಲ್ಲಿ ಇರುವ ದೇವತೆಗಳು, ಇವರುಗಳ ಸಮೂಹವೇ ಜ್ಞಾನ ಭಕ್ತ್ಯಾದಿ ಐಶ್ವರ್ಯ ಕೊಡತಕ್ಕ ಪರಮಾತ್ಮನ, ಕ್ಷೇತ್ರಗತ ಅಧಿಷ್ಠಾನಭೂತವಾದ ಜಡಪ್ರತಿಮಾಕ್ಕೆ ಸದೃಶವಾದ ಚಲಪ್ರತಿಮಾಗಳು, ತದಂತರ್ಗತ ಶ್ರೀಪರಮಾತ್ಮನೇ ಅಧಿಷ್ಠಾನಗತ ಭಗವನ್ಮೂರ್ತಿ. ಇಂಥಾ ಅಧಿಕಾರಿಗಳು ಭೋಜನ ಮಾಡತಕ್ಕ ಷಡ್ರಸೋಪೇತವಾದ ಅನ್ನಾದಿಗಳು ಕ್ಷೇತ್ರಗತ ಭಗವನ್ಮೂರ್ತಿಗೆ ನಿವೇದನ ಎಂದರೆ ಭೋಜನದ್ರವ್ಯಾಂತರ್ಗತ ತನ್ನ ಸ್ವಾಖ್ಯ ಭೋಜನ ದ್ರವ್ಯಗಳ ದೇಹಾಂತರ್ಗತರಾದ ಜೀವಗಣದಲ್ಲಿ ಇದ್ದು ಸ್ವೀಕಾರ ಮಾಡತಾನೆ. ಈ ಅನುಸಂಧಾನದಿಂದ ಭೋಜನ ಮಾಡದದೆ ಇದುವೆ ನೈವೇದ್ಯ. ಪ್ರತಿದಿನದಲ್ಲೂ ಪಾದವಿನ್ಯಾಸದಿಂದ ಮಾರ್ಗ ನಡಿಯೋದು ಶ್ರೀಪರಮಾತ್ಮನ ಎದುರಿಗೆ ನರ್ತನ ಮಾಡೋದು ಅಂದರೆ, ಜ್ಞಾನ ಎಂಬೋ ಮಾರ್ಗದಲ್ಲಿ ನಾನಾವಿಧ ಅನುಸಂಧಾನ ಯುಕ್ತವಾದ ಮನಃಪೂರ್ತಿಗಳು, ಪರಮಾತ್ಮನ ಸರ್ವತ್ರ ನೋಡುತ, ಇತಸ್ಥತಃ

ಗಮನಾಗಮನಾದಿಗಳು ಮಾಡೋಣವೇ ನರ್ತನ ಎಂತಲೂ, ಮಾತುಗಳು ಯಾವತ್ತೂ ಸ್ತೋತ್ರವೆಂತಲೂ, ದೀನನಾಗಿರುವುದೇ ನಮಸ್ಕಾರವೆಂತಲೂ ಗುರುಗಳ ಮುಖದಿಂದ ತಿಳಿದು ಅದರ ಅನುಷ್ಠಾನ ಮಾಡತಕ್ಕವನು ದಾವನೋ ಅವನೇ ಬ್ರಹ್ಮಜ್ಞಾನಿ ಎಂತ ಹೇಳಿಸಿಕೊಳ್ಳಲ್ಪಡುತ್ತಾನೆ. ಇದು ಅಂತರಂಗದ ಅನುಷ್ಠಾನ ಕ್ರಮ. ಬಾಹ್ಯ ಅನುಸಂಧಾನ ಹ್ಯಾಂಗೆಂದರೆ, ಈ ಬ್ರಹ್ಮಾಂಡವೇ ಒಂದು ದೊಡ್ಡದಾದ ಕ್ಷೇತ್ರವೆಂತಲೂ, ಗೋಪ್ಪಾದೋದಕದಂತೆ ಇರುವ ಅನೇಕ ಸರೋವರಗಳು ಕೆರೆಗಳು ಭಾವಿಗಳು ಹಾಂಗೆ ಮಹಾನದಿಗಳು ಚಿಕ್ಕನದಿಗಳು ತೀರ್ಥಗಳು ಎಂತಲೂ, ಈ ಕ್ಷೇತ್ರಗತ ಯಾವತ್ತೂ ಜೀವರು ಚಲಪ್ರತಿಮಾದಿಗಳು, ತದಂತರ್ಗತ ಶ್ರೀಪರಮಾತ್ಮನೇ ಭಗವನ್ಮೂರ್ತಿ ಎಂತಲೂ, ಯಾವತ್ತೂ ಜೀವರುಗಳು ಭೋಜನ ಮಾಡುವುದು ಪೂರ್ವೋಕ್ತ ಅನುಸಂಧಾನದಿಂದ ನೈವೇದ್ಯ ಎಂತಲೂ, ದಾವ ದಿಕ್ಕಿನಲ್ಲಿ ಗಮನಾಗಮನಗಳು ಮಾಡಿದ ಕಾಲಕ್ಕೂ ಆಯಾ ದಿಕ್ಕುಗಳಲ್ಲಿ ದಾವ ಚರಪ್ರತಿಮ ಅದೆ, ತದಂತರ್ಗತ ಪರಮಾತ್ಮಗೆ ನರ್ತನ ಎಂತಲೂ, ಇನ್ನೂ ಅವುಗಳಿಗೆ ಮಾಡುವ ಉಪಚಾರ ಯಾವತ್ತೂ ಪೂಜಾ ಎಂತಲೂ, ಶುದ್ಧ ಜಡಗಳು ಜಡಜೀವರೂ ಇವರಲ್ಲಿ ಗೋಳಕಚಿಂತನದಿಂದ ಪರಮಾತ್ಮನ ಸನ್ನಿಧಾನ ವಿಶೇಷ ತಿಳಿದು ಇರುವ ಅಧಿಕಾರಿಗೆ ಮಾತ್ರ ಗೋಪ್ಪಾದೋದಕ, ವೃಕ್ಷಗಳು, ಪರ್ವತಗಳು, ಧರಾತಳ ಜೀವರು ಇವು ಯಾವತ್ತೂ ಪ್ರತಿಮಾಗಳು ಎಂತ ಕರಿಸೋದಾಯಿತೇ ಹೊರ್ತು ತದನ್ಯರಿಗೆ ಆಗೋದಿಲ್ಲ. ಭಗವದ್ಭಕ್ತನಾದವ ಅಂತಃಬಹಿಃ ಶ್ರೀಪರಮಾತ್ಮನ ವ್ಯಾಪ್ತಿ ಕಾಣತ ಇರುತ್ತಾನಾದಕಡಿಯಿಂಂದ ಅಂಥಾಪುರುಷಗೆ ಸರ್ವವೂ ಸಾರ್ಥಿಕ್ಯವಾಗುತದೆ ಎಂತ ತಾತ್ಪರ್ಯ ॥೩॥

ಭಾವಪ್ರಕಾಶಿಕೆ :

ಸಕಲವೂ ಪರಮಾತ್ಮನ ಅಧಿಷ್ಠಾನವೆಂದು ತಿಳಿದು ಉಪಾಸನೆ ಮಾಡುವವರಿಗೆ ಅವುಗಳೆಲ್ಲವೂ ತೀರ್ಥಗಳಾಗಿಯೂ, ಕ್ಷೇತ್ರಗಳಾಗಿಯೂ, ಪ್ರತಿಮೆಗಳಾಗಿಯೂ ಪರಿಣಮಿಸುವುವು. ಹೀಗೆ ಉಪಾಸನೆ ಮಾಡುವುದಕ್ಕೆ ವ್ಯಾಪ್ತೋಪಾಸನೆ ಎಂದು ಹೆಸರು. ಅಧಿಕಾರಿಗಳನ್ನನುಸರಿಸಿ ಇಂತಹ ವ್ಯಾಪ್ತೋಪಾಸನೆ ಕ್ರಮಗಳನ್ನು ಹೇಳುತ್ತಾರೆ.

ಸಾಮಾನ್ಯವಾಗಿ ಭೂಮಿಯಲ್ಲಿ ಹಸುವಿನ ಹೆಜ್ಜೆಯಲ್ಲಿ ನಿಂತ ನೀರು ಬಹಳ ಅಲ್ಪವಾಗಿರುವುದಷ್ಟೆ ? ಅಷ್ಟೊ ಮೊದಲು ಕೆರೆ ಭಾವಿ ಮುಂತಾದ ಸಕಲಉದಕಾಶ್ರಯವು ನಿಷ್ಕಲ್ಮಷವಾದ ತೀರ್ಥಗಳೆಂದೂ, ವೃಕ್ಷಗಳು ಪರ್ವತಗಳು, ಭೂಮಿ ಮೊದಲಾದ ಸಕಲವೂ ಉತ್ತಮಕ್ಷೇತ್ರವೆಂತಲೂ, ಜೀವಗಣಗಳೆಲ್ಲವೂ ಪರಮಾತ್ಮನ ಪ್ರತಿಮೆಗಳೆಂತಲೂ, ಅವರು ಭೋಜನ ಮಾಡುವ ಅನ್ನಾದಿಗಳೇ ನೈವೇದ್ಯವೆಂತಲೂ, ನಿತ್ಯದಲ್ಲಿ ಹಾದಿ ನಡೆಯುವುದೇ ನರ್ತನವೆಂತಲೂ, ಯಾವ ಮಹನೀಯರು ತಿಳಿಯುವರೋ ಅವರು ಸಾಮಾನ್ಯರಲ್ಲ. ಅವರನ್ನು ಮಹಾಯೋಗಿಗಳೆಂದು ಹೇಳಬೇಕು. ॥೩॥

## ೩. ಭಾವದರ್ಪಣಟೀಕಾ :

ಸ್ವಹೃದಯಸ್ಥ ಬಿಂಬನೇ ತತ್ತದಧಿಷ್ಠಾನದಲ್ಲಿದ್ದು, ತತ್ತನ್ನಾಮದಿಂದ ಕರಿಸುತ್ತ ವ್ಯಾಪಾರಮಾಡುತ್ತಾನೆಂದು ಅನುಸಂಧಾನಪೂರ್ವಕ ಚಿಂತಿಸುವ ಜನಗಳೇ ಯೋಗಿಗಳೆಂದು ಕರಿಸುತ್ತಾರೆಂದು ಹೆಳುತ್ತಾರೆ, **ಮೇದಿನೀತಿ** ||

ಮೇದಿನೀ–ಭೂಮಿ, ಗೋಷ್ಪಾದೋದಕ–ಆಕಳು ಹೆಜ್ಜೆಯಿಟ್ಟಸ್ಥಳದಲ್ಲಿ ನಿಂತ ನೀರು, ಪಾದಪ–ವೃಕ್ಷ, ಅದ್ರಿ–ಪರ್ವತ, ಅಟನ–ಸಂಚಾರ, ನರ್ತನ–ಕುಣಿಯೋಣ ಎಂದರ್ಥ. ॥೨॥

## ೪ ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತಮೂಲ)

ಪ್ರತೀಕಾನಿ ಆಹ–"ಮೇದಿನೀ"–ಇತಿ॥ ಮೇದಿನೀ–ಪೃಥ್ವೀ॥ "ಅಮಲ" ಇತಿ॥ ಕ್ಷುದ್ರಕ್ಷಾರಮುಖೋದಸ್ಯ ನತ್ವಮ್ಮೃತವಾಸಂ (ಸತ್ವಂ) ತತ್ತುಂಗಾ ಗಂಗಾಸರಿತ್ಪ್ರವರಾಚ್ಛನೀರಾಭೇದಃ॥ ಕಿಂತು ಧರಿತ್ರೀ ಸುವರ್ಗ ಪವಿತ್ರೀ ಕುರ್ವಾತ್ ಪವಿತ್ರೇಚ್ಛಾವಿದ್ಧ್ಯಾತುರ್ನಾದೇಯವಾದಿ ಸಮೀಪಗಸ್ಯ ಅತಿನೈಧಾಘ (ಘಕ) ತಾಪನಿಷ್ಟಪ್ತಸ್ಯ ಸ್ನಾನಭೂರೇವ ಅಮಲಾಂಬುದೇವತಾಶ್ರಿತಾ ನಾಜ್ಞಾ ಸ್ನಾತಂ ಗಾಂಗಮಪಿ ತತ್ಪುರಃ॥ ಇತ್ಯಸ್ಯ–"ತೇ ಪುನಂತ್ಯುರುಕಾಲೇನ"॥ "ಯತ್ತೀರ್ಥ ಬುದ್ಧಿಃ" "ಸುಜ್ಞೇನ ತೀರ್ಥಮಾನಿನಃ" – ಇತ್ಯಪಿ

ಯದ್ಬುದ್ಧಿಃ॥ "ಸ್ನಾನಮಸ್ತ್ವಭಿಷೇಚನಮ್"॥ "ತಾನಿ ಕರ್ಮಾಣಿ" "ತೀರ್ಯತೇ ಯೇನ ತತ್ ತೀರ್ಥಮ್" "ಸರ್ವಶೋಧಕತ್ವಾತ್ ತು ತೀರ್ಥಾಖ್ಯಃ ವಿಷ್ಣುಃ" – ಇತಿ **ದೀಪಿಕೋದಾಹೃತ ವಿಷ್ಣುತೀರ್ಥೀಯ** ಪ್ರಭೃತಿ ಅನುಸಂಧಾತಾ ಅವಲೋಕಿತಜ್ಞಾನಿನಾ ಭಾವ್ಯಮ್ ಇತಿ ಪ್ರಕೃತಿ ಪದಾರ್ಥಃ ॥ "ಅಪರ" ಇತಿ ॥ ಅಪರೋಕ್ಷಿಣಃ ಕ್ಷುತ್ತೃಹಾಣಾಂ ಅಪ್ರಾಪ್ತಾಃ ಕರ್ಮಭಿಃ ॥ ವಿಸ್ಮೃತ ಸಮರ್ಪಣಾಂ ಅಪಿ ಸುಧೀಯೋಂಬು– ಧಯಃ ಗುಣೈಃ ನಾಪಜ್ಞಾ ಹಾರ್ಥಃ ॥ ತೈಃ ಅದತ್ತಮಪಿ ತದ್ಬಿಂಬಃ ಸ್ವಸದೃಕ್ಷ ಪ್ರತಿಬಿಂಬ ಭೋಗ್ಯವಿಷಯಾನ್ ರಸಮಾನಿಗಃ ರಸಾಖ್ಯಃ ಕೃಪಯಾ ಪ್ರಾಕೃತಾ ನಪಿ ಭುನಕ್ತ್ಯೇವ ನ ಉದಾಸ್ತೇ ಆಜ್ಞೈಃ ಏತನ್ನಿಂದಕೈಃ ದತ್ತಮಪಿ ನ ಕಟಾಕ್ಷೇ ಕರೋತಿ ॥ (ಕಟಾಕ್ಷ ವಿಷಯೀ ಕರೋತಿ)॥ "ಅಶ್ನಾನ್ಯನಂತಃ ಖಲು ತತ್ವಕೋವಿದೈಃ" "ಯಥಾ ಬ್ರಹ್ಮಮುಖಾತ್ ತೃಪ್ತಃ ನ ಭಜತಿ ಕುಮು ನಿಷಿಣಾಂ ಸ ಇಚ್ಛ್ಯಾಮ್" ಇತ್ಯಾದಿ ಪ್ರಮಿತೋಽರ್ಥಃ॥ "ಧರ್ಮೋ ಭವತು ಧರ್ಮೋಽಪಿ" "ಪಾಪಂ ಭವತಿ" "ಯದಾಗಚ್ಛತಿ"॥ ಇತ್ಯಾದ್ಯನುಸಂಧತಃ ಇತಿ ಸಮುವನುಶಾಸ್ತಿ ॥೩॥

**ಕನ್ನಡಾರ್ಥ :**

ಸಕಲಾಧಿಷ್ಠಾನಗತಭಗವತ್ತೀರ್ಥಗಳ ಚಿಂತನಾಕ್ರಮವನ್ನು ತಿಳಿಸುತ್ತಾರೆ **ಮೇದಿನಿ** ಎಂಬ ಪ್ರಸಕ್ತ ಪದ್ಯದಿಂದ.

ಮೇದಿನಿ ಎಂದರೆ ಭೂಮಿ ಎಂದರ್ಥ. ಭೂಮಿಯ ಮೇಲಿರುವ ಗೋಷ್ಪಾದಜಲವೂ ಸಹ ಅಮಲತೀರ್ಥವೆಂದು ಹೇಳುತ್ತಾರೆ. ತರಂಗಗಳಿಂದ ಕಂಗೊಳಿಸುವ ಗಂಗಾಜಲವು ಸುಮಧುರ. ಉಪ್ಪುನೀರು ಕ್ಷಾರವಾಗಿರುವುದು ಸಮುದ್ರೋದಕವು. ಅವೆರಡು ಉದಕಗಳಿಗೂ ವ್ಯತ್ಯಾಸ ಇದೆ. ಆದರೆ ಸ್ನಾನಕ್ಕೆ ಯೋಗ್ಯವಾದ ಅವುಗಳಲ್ಲಿ ಅಧಿಷ್ಠಾನಗತವಾದ ಭಗವದ್ರೂಪಗಳ ಚಿಂತನೆ ಪವಿತ್ರ ಎಂದು ತಿಳಿಸುತ್ತಾರೆ. ಭಗವನ್ನಾಮ ಸ್ಮರಣೆಯಿಂದ ಭಗವತ್ಸನ್ನಿಧಾನವಿಶೇಷದಿಂದ ಆ ತೀರ್ಥಗಳು ಪವಿತ್ರತೀರ್ಥ ಗಳೆನಿಸುವವು. ಜಲದಲ್ಲಿ ಸನ್ನಿಹಿತರಾಗಿರುವ ನದ್ಯಭಿಮಾನಿದೇವತೆಗಳೂ

ಮತ್ತು ತೀರ್ಥಾಭಿಮಾನಿದೇವತೆಗಳು ಸ್ನಾನಮಾಡುವವರನ್ನು ಪವಿತ್ರ ಗೊಳಿಸುವರು. ಈ ಉತ್ತಮಜ್ಞಾನಾನುಸಂಧಾನವಿಲ್ಲದವರು ಪಾವನ ಗಂಗಾನದಿಯಲ್ಲಿ ಸ್ನಾನಮಾಡಿದರೂ ನಿಷ್ಫಲವು. ತೀರ್ಥಗಳಲ್ಲಿ ಸನ್ನಿಹಿತವಾಗಿ ಇರುವ ಭಗವತ್ಸನ್ನಿಧಾನವಿಶೇಷವು ತೀರ್ಥವೆನಿಸಿಕೊಳ್ಳುವುದು. "ಯಾವುದ ರಿಂದ ಪಾಪರಾಶಿಗಳನ್ನು ದಾಟುವನೋ ಅದೇ ತೀರ್ಥವು" ಸರ್ವಪಾಪ ಪರಿಹಾರಕನಾದ್ದರಿಂದ ವಿಷ್ಣುವು **ತೀರ್ಥಶಬ್ದವಾಚ್ಯನು**, ಅಂತಹ ವಿಷ್ಣು ವಿನ ಸನ್ನಿಧಾನವಿರುವುದರಿಂದ ಅಂತಹ ಜಲಗಳು **ಪುಣ್ಯತೀರ್ಥ**ಗಳೆನಿಸುವುವು. **ದೀಪಿಕಾ** ಮುಂತಾದುವುಗಳಲ್ಲಿ ಉದ್ಧೃತವಾಗಿರುವ **ವಿಷ್ಣುತೀರ್ಥೀಯದಲ್ಲಿ (ಸಾರೋದ್ಧಾರಗ್ರಂಥ)** ಉಕ್ತವಾಗಿರುವ ಸಂಗತಿಗಳನ್ನು ಅನುಸಂಧಾನ ಮಾಡಿಕೊಂಡು ತೀರ್ಥಸ್ನಾನಾದಿಗಳನ್ನು ಮಾಡಬೇಕು.

ಅಂತಹ ಬ್ರಹ್ಮಜ್ಞಾನಿಗಳು ತಿಂಬುವ ಓದನವೇ ಶ್ರೀಪರಮಾತ್ಮನಿಗೆ ನೈವೇದ್ಯವೆನಿಸುವುದು. ಅವರ ಬಿಂಬರೂಪಿಯಾದ ಶ್ರೀಹರಿಯು ತನ್ನ ಪ್ರತಿಬಿಂಬಭೂತರಾದ ಜ್ಞಾನಿಗಳು ಭೋಗಿಸುವ ವಿಷಯಾದಿಗಳಲ್ಲಿ ತಿನ್ನುವ ಆಹಾರದಲ್ಲಿ ರಸಪದವಾಚ್ಯನಾಗಿದ್ದು, ತದಭಿಮಾನಿಗಳಲ್ಲಿ ರಸರೂಪನಾಮಕ ನಾಗಿ ಇದ್ದು, ಸ್ವಾಖ್ಯರೂಪವಾದ ಶುಭಸಾರವನ್ನು ಮಾತ್ರ ಸ್ವೀಕರಿಸಿ, ಅನುಗ್ರಹಿಸುತ್ತಿರುವನು ಎಂದರ್ಥ. ತತ್ತ್ವಜ್ಞಾನಿಗಳ ಮುಖದಿಂದ ಶ್ರೀಪರಮಾತ್ಮನು ಭುಂಜಿಸಿ ಪ್ರೀತನಾಗುತ್ತಾನೆ. ಆದರೆ ಆ ಶ್ರೀಹರಿಯು ಕುಮತಿಗಳು, ಅಜ್ಞಾನಿಗಳು ಮಾಡುವ ಪೂಜಾದಿಗಳನ್ನು ಎಂದೆಂದೂ ಸ್ವೀಕರಿಸು ವುದಿಲ್ಲ, ಪರಮಾತ್ಮನಿಗೆ ಪ್ರಿಯರಾದ ಭಗವದ್ಭಕ್ತರು ಮಾಡುವುದೆಲ್ಲವೂ ಧರ್ಮವೆನಿಸುವುದು. ಭಗವದ್ಭಕ್ತಿಯಿಲ್ಲದೆ ಮಾಡಿದ ಕರ್ಮಗಳೆಲ್ಲವೂ ನಿಷ್ಫಲವಾಗುವುದಲ್ಲದೆ, ಪಾಪಕ್ಕೆ ಕಾರಣವಾಗುವುವು – ಎಂದು ಮುಖ್ಯಾಭಿ ಪ್ರಾಯವು ॥೩॥

## ೫. ಶ್ರೀ ಗುರುಹೃದಯ ಪ್ರಕಾಶಿಕೆ :

ಸರ್ವಜಡಚೇತನಗಳು ದೇವರಧಿಷ್ಠಾನದೆಂದು ಭಾವಿಸುವ ದೇವಾಧಿಕಾರಿ ಗಳಿಗೆಸರ್ವಕ್ರಿಯವು ದೇವರಾರಾಧನೆಯಾಗಿರುವದೆಂದು ತಿಳಿಸುತ್ತಾರೆ, ಮೇದಿನಿ

ಎಂದು, ಎರಡು ಪದ್ಯದಿಂದ. ಭೂಮಿಯಲ್ಲಿರುವ ಗೋವಿನಹೆಜ್ಜೆಯಲ್ಲಿ ನಿಂತ ನೀರು ಮುಂತಾಗಿ ಸರ್ವ ಉದಕದಲ್ಲೂ ಅಮಲತೀರ್ಥವೆಂಬ ಸರ್ವ ತೀರ್ಥಾಭಿಮಾನಿಗಳನ್ನು ತದಂತರ್ಗತದೇವರನ್ನೂ ಸಹ ತಿಳಿದು, ಪಾದಪಾದ್ರಿಧರಾತಳವೇ ಅಂದರೆ, ಪಾದಪ–ಗಿಡ, ಅದ್ರಿ–ಪರ್ವತ, ಧರಾತಳ–ಭೂಮಿ ಇವುಗಳಲ್ಲಿ ಕ್ಷೇತ್ರಾಭಿಮಾನಿಗಳು ತನ್ನಿಯಾಮಕಹರಿಯಿರುವ ಸ್ಥಳವೆಂದರಿತು, ಸರ್ವಜೀವಸಮೂಹವು ಶ್ರೀಲಕ್ಷ್ಮೀಪತಿಯ ಪ್ರತಿಮೆಗಳು ಅವರು ಭುಂಜಿಸುವುದೆಲ್ಲಾ ದೇವರ ನೈವೇದ್ಯ, ನಿತ್ಯದಲ್ಲಿಯೂ ನಡೆದಾಡುವುದೇ ದೇವರ ಉದ್ದೇಶ್ಯ ನಾಟ್ಯವೆಂದೂ ಸಹ ತಿಳಿದವನು ಮಹಾಧ್ಯಾನನಿಷ್ಠ ಯೋಗಿ ಎನಿಸುವನು. ॥ ೩ ॥

## ಸರ್ವವ್ಯಾಖ್ಯಾನಸಾರಸಂಗ್ರಹ

ಈ ಜಗತ್ತಿನಲ್ಲಿರುವ ಸಮಸ್ತಜೀವ ಹಾಗೂ ಜಡವಸ್ತುಗಳಲ್ಲಿ ಪರಿಪೂರ್ಣವಾಗಿ ವ್ಯಾಪ್ತನಾಗಿರುವ ಶ್ರೀಪರಮಾತ್ಮನ ಭಗವದ್ರೂಪಗಳ ಚಿಂತನಾಕ್ರಮವನ್ನು **ಮೇದಿನಿ** ಎಂಬ ಪ್ರಸಕ್ತ ೩ನೆಯ ಪದ್ಯದಿಂದ ತಿಳಿಸುತ್ತಾರೆ.

ಶ್ರೀಪರಮಾತ್ಮನು ಸರ್ವತ್ರ ವ್ಯಾಪ್ತನು. ಸಮಸ್ತಜೀವರಾಶಿಗಳಲ್ಲಿ ಬಿಂಬರೂಪನಾಗಿ, ವ್ಯಾಪ್ತರೂಪಗಳಿಂದ ವಿದ್ಯಮಾನನಾಗಿರುವ ಶ್ರೀಹರಿಯ ಮಹಿಮೆ ಅಪಾರವಾದುದು. ಹೀಗೆ ಸರ್ವತ್ರ ಅಧಿಷ್ಠಾನಗಳಲ್ಲಿ ವ್ಯಾಪ್ತವಾಗಿ ಇರುವ ಭಗವದುಪಾಸನೆಗೆ **ವ್ಯಾಪ್ತ್ಯೋಪಾಸನೆ** ಎಂದು ಹೆಸರು. ಅಂತಹ ಉಪಾಸಕರಿಗೆ **ವ್ಯಾಪ್ತ್ಯೋಪಾಸಕರು** ಎಂದು ಹೆಸರು.

೧. ಈ ಭೂಮಂಡಲದ ಮೇಲಿರುವ ಸಮಸ್ತಕ್ಷೇತ್ರಗಳೂ ಪುಣ್ಯಕ್ಷೇತ್ರಗಳು. ಸರ್ವತೀರ್ಥಗಳೂ ಪುಣ್ಯತೀರ್ಥಗಳು. ಒಂದು ಆಕಳಿನ ಹೆಜ್ಜೆಯಷ್ಟು ಅಗಲದ ಪ್ರದೇಶಕ್ಕೆ **ಗೋಷ್ಪಾದ** ಎಂದು ಹೆಸರು. ಅಂತಹ ಗೋಷ್ಪಾದದಲ್ಲಿ ನಿಂತ ಅಲ್ಪಪ್ರಮಾಣದ ನೀರೂ ಸಹ. ಅಂತಹ ವ್ಯಾಪ್ತ್ಯೋಪಾಸಕರಿಗೆ **ಅಮಲತೀರ್ಥವೆನಿಸುವುದು.** ಗೋಷ್ಪಾದೋದಕವೂ ಸಹ ಪವಿತ್ರತೀರ್ಥವೆಂದು ಅವರ ಅನುಸಂಧಾನವು.

೨. ತಮ್ಮ ಬೇರಿನಿಂದ ನೀರನ್ನು ಕುಡಿಯುವುದರಿಂದ ವೃಕ್ಷಗಳಿಗೆ **ಪಾದಪ**ಗಳೆಂದು ಹೆಸರು. ಭೂಮಂಡಲದಲ್ಲಿರುವ ಗಿಡ, ಮರ, ಬಳ್ಳಿ, ಮುಂತಾದ ಸ್ಥಾವರ ಜೀವವರ್ಗಗಳೆಲ್ಲಾ ಆ ಪರಮಾತ್ಮನ ನಿವಾಸಸ್ಥಾನಗಳಾದ ಅಧಿಷ್ಠಾನಗಳು.

೩. ಭೂಮಿಯು ಸಮತೋಲನಸ್ಥಿತಿಯಲ್ಲಿರುವಂತೆ, ಧಾರಣಮಾಡಿರುವ ಸಕಲ ಪರ್ವತಗಳೆಲ್ಲವೂ ಆ ಸರ್ವತ್ರವ್ಯಾಪ್ತನ ಅಧಿಷ್ಠಾನಗಳು,

೪. ಸರ್ವಜಂಗಮಸ್ಥಾವರ ಜೀವವರ್ಗಗಳಿಗೂ ಮತ್ತು ಜಡವಸ್ತುಗಳಿಗೂ ಆಧಾರಭೂತವಾಗಿರುವ ಈ ಭೂಮಿಯು (**ಧರಾತಳವೇ**) ಶ್ರೀಪರಮಾತ್ಮನು ವ್ಯಾಪ್ತನಾಗಿರುವ ಸುಕ್ಷೇತ್ರವೆಂದೆನಿಸುವುದು.

೫. ಇಂತು ಸರ್ವಪದಾರ್ಥಗಳಲ್ಲಿ ತದ್ರೂಪ, ತದಾಕಾರ, ತನ್ನಾಮಕ, ತದ್ವಾಚ್ಯನಾಗಿ ವ್ಯಾಪ್ತನಾಗಿರುವ ಆ ಜಗತ್ಸೃಷ್ಟಿಕರ್ತನು ತದ್ಭಿನ್ನನಾಗಿದ್ದಾನೆ. ವ್ಯಾಪ್ತ್ಯೋಪಾಸಕರಿಗೆ ಮರ, ಗಿಡ, ಬಳ್ಳಿ, ಬೆಟ್ಟ, ಗುಡ್ಡಗಳಿಂದ ಆವೃತವಾಗಿರುವ ಧರಾತಳ ಇತ್ಯಾದಿಗಳೆಲ್ಲವೂ ಪುಣ್ಯಕ್ಷೇತ್ರಗಳೆಂದೆನಿಸುವುವು.

ಸಮುದ್ರಗತ ಕ್ಷಾರೋದಕ, ಹರಿಯುತ್ತಿರುವ ನದಿಯ ನೀರು, ತಟಾಕ, ಭಾವಿ ಇತ್ಯಾದಿ ಆಗರಗಳಲ್ಲಿರುವ ನೀರು ಇವು ಕೇವಲ ಜಡೋದಕಗಳು. ಅಂತಹ ನೀರಿನಲ್ಲಿ ಜಲಾಭಿಮಾನಿದೇವತೆಗಳೂ ಹಾಗೂ ನದ್ಯಭಿಮಾನಿ ದೇವತೆಗಳೂ ಇದ್ದಾರೆಂದು ತಿಳಿಯಬೇಕು. ಆ ದೇವತಾಂತರ್ಗತ ಶ್ರೀಭಾರತೀರಮಣಮುಖ್ಯಪ್ರಾಣಾಂತರ್ಗತನಾಗಿ ಶ್ರೀಪರಮಾತ್ಮನು ತದಾಕಾರನಾಗಿ ಇದ್ದು. ಆಯಾಯ ಪುಣ್ಯತೀರ್ಥಗಳ ಹೆಸರಿನಿಂದಲೇ ವಾಚ್ಯನಾಗಿದ್ದಾನೆ. ಈ ಪ್ರಕಾರ ಉತ್ತಮ ಜ್ಞಾನಾನುಸಂಧಾನದಿಂದ ಅರಿತು, ಭಗವತ್ಸನ್ನಿಧಾನ ವಿಶಿಷ್ಟವಾದ ಆ ಪುಣ್ಯೋದಕಗಳಲ್ಲಿ ಮಜ್ಜನ ಮಾಡಿದರೆ, ಭಗವದನುಗ್ರಹ ಉಂಟಾಗಿ, ತನ್ಮೂಲಕ ಪುಣ್ಯತೀರ್ಥಗಳಲ್ಲಿ ಸ್ನಾನ, ಪುಣ್ಯಕ್ಷೇತ್ರಗಳ ದರ್ಶನದಿಂದ ಆಗುವ ಸತ್ಫಲಗಳು ಪ್ರಾಪ್ತಿಯಾಗುವುವು. ಭಗವತ್ಸನ್ನಿಧಾನವಿಶಿಷ್ಟವಾದ ಆ ತೀರ್ಥಗಳು ಪುಣ್ಯತೀರ್ಥಗಳೆನಿಸುವುವು. ಕ್ಷೇತ್ರಗಳು ಪವಿತ್ರಸ್ಥಾನಗಳೆನಿಸುವುವು. ಪಾವನಕೆ ಪಾವನನೆಂದೆನಿಸುವ ಸರ್ವತ್ರವ್ಯಾಪ್ತನಾದ ಆ

ಶ್ರೀಹರಿಯ ಸ್ಮರಣೆಯಿಲ್ಲದೆ, ಕೇವಲ ಕಾಗೆಗುಬ್ಬಿಗಳಂತೆ, ಪುಣ್ಯತೀರ್ಥಗಳಲ್ಲಿ ಸ್ನಾನಮಾಡುವುದು ಜಡಕರ್ಮವಾಗುವುದು. ಅದರಿಂದ ತನುವಿನ ಮಾಲಿನ್ಯ ಪರಿಹಾರವಾಯಿತೇ ಹೊರತು, ಶುದ್ಧಿಯಾಗುವುದಿಲ್ಲ. ಈ ಜ್ಞಾನಾನುಸಂಧಾನವೇ ಪ್ರಸಕ್ತಪದ್ಯದ ಮುಖ್ಯತಾತ್ಪರ್ಯ.

೭. ಸಮಸ್ತಜೀವರಾಶಿಗಳಲ್ಲಿ ಶ್ರೀಹರಿಯು ಬಿಂಬರೂಪನಾಗಿದ್ದಾನೆ. ಜೀವರೆಲ್ಲರೂ ಆ ಶ್ರೀಶನ ಪ್ರತಿಬಿಂಬಭೂತರು. ಅವರು **ಶ್ರೀದನ ಪ್ರತೀಕ ಗಳೆನಿಸುವರು.** ಸಮಸ್ತಜೀವರೂ ಶ್ರೀಪರಮಾತ್ಮನ **ಚಲಪ್ರತೀಕ**ರೆಂದು ಜ್ಞಾನಿಗಳಾದ ವ್ಯಾಪ್ತ್ಯೋಪಾಸಕರ ಅನುಸಂಧಾನವು.

೮. ಚಲಪ್ರತೀಕಗಳಾದ ಸಮಸ್ತಜೀವರು ಭೋಜನ ಮಾಡುವ ಅನ್ನವೇ ಶ್ರೀಹರಿಗೆ ನೈವೇದ್ಯವು. ಅಂದರೆ, ಜೀವಾಂತರ್ಗತ ಬಿಂಬರೂಪೀ ಶ್ರೀಪರಮಾತ್ಮನಿಗೂ, ಭೋಜನ ಪದಾರ್ಥಗತ ಭಗವದ್ರೂಪಗಳಿಗೂ ಐಕ್ಯ ಚಿಂತನಾಪೂರ್ವಕ ಆಹಾರವನ್ನು ಸ್ವೀಕರಿಸುವುದೇ ಆ ಶ್ರೀಹರಿಗೆ ನೈವೇದ್ಯ ರೂಪವಾದ ಸಮರ್ಪಣಾಕ್ರಿಯೆಯೆಂದೆನಿಸುವುದು.

೯. ಅಂತಹ ವ್ಯಾಪ್ತ್ಯೋಪಾಸಕರು **ನಿತ್ಯ ನಡೆಯುವ ಹಾದಿಯೇ** ಶ್ರೀಹರಿಗೆ ನರ್ತನರೂಪದಲ್ಲಿ ಸಲ್ಲಿಸುವ ಸೇವೆಯು. ಗಮನಾಗಮನರೂಪ ವಾದ ಸಂಚಾರಕ್ರಿಯೆಯೇ ಶ್ರೀಹರಿಗೆ ನರ್ತನಸೇವೆ ಎನಿಸುವುದು.

ಈ ಪ್ರಕಾರ ಜ್ಞಾನಾನುಸಂಧಾನದಿಂದ ಅರಿತು, ಶಾಸ್ತ್ರಯೋನಿತ್ವಾತ್ ತಿಳಿದು, ಗುರುವನುಗ್ರಹವನ್ನು ಪಡೆದು ತನ್ನ ನಿತ್ಯಾನುಷ್ಠಾನದಲ್ಲಿ ತರುವವನೇ ಬ್ರಹ್ಮಜ್ಞಾನಿಯು. ಅವನೇ **ಮಹಾಯೋಗಿ** ಎಂದೆನಿಸುವನು. ||೩||

## ಪದ್ಯ೪

**ಮೂಲ :**

**ಸರ್ವದೇಶವು ಪುಣ್ಯದೇಶವು ।**
**ಸರ್ವಕಾಲವು ಪುಣ್ಯಕಾಲವು ।**
**ಸರ್ವಜೀವರು ದಾನಪಾತ್ರರು ಮೂರು ಲೋಕದೊಳು ॥**
**ಸರ್ವ ಮಾತುಗಳೆಲ್ಲ ಮಂತ್ರವು ।**
**ಸರ್ವ ಕೆಲಸಗಳೆಲ್ಲ ಪೂಜೆಯು ।**
**ಶರ್ವವಂದ್ಯನ ವಿಮಲಮೂರ್ತಿಧ್ಯಾನವುಳ್ಳವಗೆ ॥** ॥೪॥

**ಅವತರಣಿಕೆ :**

ಸರ್ವತ್ರವ್ಯಾಪ್ತನಾಗಿರುವ ಶ್ರೀಪರಮಾತ್ಮನನ್ನು ಸಕಲ ಸ್ಥಳಗಳಲ್ಲಿ, ಕಾಲಪ್ರಭೇದಗಳಲ್ಲಿ, ಸರ್ವಜೀವರಾಶಿಗಳಲ್ಲಿ, ಉಚ್ಚಾರಣಾರೂಪವಾಗಿ ಮಾತನಾಡತಕ್ಕ ಸಮಸ್ತ ವರ್ಣ, ಪದ, ವಾಕ್ಯಗಳಲ್ಲಿ ಸದಾ ಚಿಂತಿಸುತ್ತಿರುವ ವ್ಯಾಪ್ತೋಪಾಸನಾಕ್ರಮವನ್ನು ಉತ್ತಮಜ್ಞಾನಾನುಸಂಧಾನದಿಂದ ಬಲ್ಲವರಿಗೆ, ರುದ್ರಾದಿಸಕಲದೇವತಾವರ್ಗದಿಂದ ವಂದ್ಯನಾದ ನಿರ್ದೋಷನಾದ, ಅನಂತ ಕಲ್ಯಾಣಗುಣಗಣಪರಿಪೂರ್ಣನಾದ ಆ ಜಗತ್ಸ್ವಾಮಿಯನ್ನು ಧ್ಯಾನ ಪೂರ್ವಕಉಪಾಸನಾ ಮಾಡುತ್ತಿರುವವರಿಗೆ ಅವರ ಅಧಿಷ್ಠಾನದಲ್ಲಿ ಬಿಂಬ ಕ್ರಿಯಾದ್ವಾರಾ ನಡೆಯುತ್ತಿರುವ ದೈಹಿಕ, ಮಾನಸಿಕ, ಬೌದ್ಧಿಕ ಇತ್ಯಾದಿ ಸಮಸ್ತಕಾರ್ಯಗಳೂ ಆ ಹೃತ್ಕಮಲನಿವಾಸಿಯಾದ ಬಿಂಬರೂಪೀ ಶ್ರೀಹರಿಯ ಪೂಜೆಗಳೆನಿಸುವುವು. ॥೪॥

**ಪ್ರತಿಪದಾರ್ಥ :**

**ಶರ್ವವಂದ್ಯನ**=ರುದ್ರದೇವರಿಂದ ವಂದಿತನಾದ, **ವಿಮಲ**=ದೋಷ ದೂರವಾದ ಅನಂತಕಲ್ಯಾಣಗುಣಗಣನಿಧಿಯಾದ **ಮೂರ್ತಿ**=ಶ್ರೀ ಭಾರತೀ

ರಮಣಮುಖ್ಯಪ್ರಾಣಾಂತರ್ಗತ ಶ್ರೀಲಕ್ಷ್ಮೀಪತಿಯಾದ ಪರಮಾತ್ಮನ, **ಧ್ಯಾನವುಳ್ಳವಗೆ**=ಮನಸಾ ಚಿಂತಿಸುತ್ತಿರುವ ಭಕ್ತರಿಗೆ, **ಸರ್ವದೇಶವು**= ಭೂಮಂಡಲದಲ್ಲಿರುವ ಸಮಸ್ತ ಪ್ರದೇಶಗಳೂ, **ಪುಣ್ಯದೇಶವು**=ಪುಣ್ಯ ಕ್ಷೇತ್ರಗಳೆಂದೆನಿಸುವುವು. **ಸರ್ವಕಾಲವು**=ಪ್ರಬಲವಾದ ಕಾಲಪ್ರಭೇದಗಳೂ. ದಿನ, ವಾರ, ಪಕ್ಷ, ಮಾಸ, ಸಂವತ್ಸರ. ಇತ್ಯಾದಿ **ಮೂರುಲೋಕದೊಳು**= ಸ್ವರ್ಗ, ಭೂಮಿ, ಪಾತಾಳದಲ್ಲಿರುವ ಆಯುರ್ಮಾನರೂಪವಾದ ಕಾಲವು, **ಪುಣ್ಯಕಾಲವು**=ಅತ್ಯಂತ ಶುಭಮುಹೂರ್ತಗಳಾಗುವುವು. ಸ್ವರ್ಗ, ಭೂಮಿ, **ಸರ್ವಜೀವರು**=ಸಮಸ್ತಜೀವರಾಶಿಗಳು. **ದಾನಪಾತ್ರರು**=ಅವರವರ ಯೋಗ್ಯತಾನುಸಾರ ದಾನಕ್ಕೆ ಪಾತ್ರರೆಂದೆನಿಸುವರು. **ಸರ್ವಮಾತುಗಳೆಲ್ಲ**= ಅವರು ಮಾತನಾಡುವ ವಾಗ್ರೂಪವಾದ ಸರ್ವ ವರ್ಣ, ಪದ, ವಾಕ್ಯ ಸಂಯೋಜನೆ, ಉಚ್ಚಾರಣಾರೂಪವಾದ ಸಕಲಧ್ವನಿ ಇತ್ಯಾದಿಗಳೆಲ್ಲವೂ. **ಮಂತ್ರವು**=ಬೀಜಯುಕ್ತ ಮಂತ್ರಗಳು ಮತ್ತು ಸ್ತೋತ್ರರೂಪವಾದ ಗುಣ ಗಾನವೆಂದೆನಿಸುವುವು. **ಸರ್ವಕೆಲಸಗಳೆಲ್ಲ**=ಸಮಸ್ತ ಜೀವರ ಅಧಿಷ್ಠಾನ ದಲ್ಲಿ ಬಿಂಬಕ್ರಿಯಾ ದ್ವಾರಾ ನಡೆಯುತ್ತಿರುವ ದೈಹಿಕ, ಮಾನಸಿಕ, ವಾಚನಿಕ, ಬೌದ್ಧಿಕ, ದೈಹಿಕ, ಕಾಲಿಕವಾದ ಸಮಸ್ತವ್ಯಾಪಾರಗಳೂ **ಪೂಜೆಯು**= ಆಯಾ ಚೇತನದ ಹೃತ್ಕಮಲಮಧ್ಯನಿವಾಸಿಯಾದ ಬಿಂಬರೂಪೀ ಶ್ರೀಹರಿಯ ಪೂಜೆಗಳೆಂದೆನಿಸುವುವು.

**ಮುಖ್ಯಾಂಶ :**

ಸರ್ವ ಅಧಿಷ್ಠಾನಗಳಲ್ಲಿ ತತ್ತದಾಕಾರ, ತದ್ರೂಪ, ತದ್ವಾಚ್ಯ, ತನ್ನಾ ಮಕ ತದ್ಭಿನ್ನನಾಗಿರುವ ಶ್ರೀಪರಮಾತ್ಮನ ಭಗವದ್ರೂಪಗಳನ್ನು ಸದಾ ಸರ್ವತ್ರ ಚಿಂತಿಸುತ್ತಿರುವ ವ್ಯಾಪ್ತ್ಯೋಪಾಸಕರಿಗೆ ಇಂತಹ ಉತ್ತಮ ಅನು ಸಂಧಾನ ಪೂರ್ವಕವಾದ ಜ್ಞಾನವಿರುವುದೆಂದು ಮುಖ್ಯ ತಾತ್ಪರ್ಯವು. **ಕಂಡಕಂಡಲ್ಲಿ ವಿಶ್ವರೂಪ ಕಾಂಬೋರೋ**–ಎಂಬ ಅಪರೋಕ್ಷೀಕೃತಶ್ರೀಶ ರಾದ ಭಗವದ್ಭಕ್ತರ ಮುಖ್ಯ ಲಕ್ಷಣವಿದು. ॥೪॥

# ವ್ಯಾಖ್ಯಾನಗಳು

## ೧ ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ

ಇನ್ನೂ ಭಗವದ್ಭಕ್ತನ ಅನುಸಂಧಾನಮಹಿಮಾ ಹೇಳತಾರೆ.

ಪೂರ್ವೋಕ್ತ ಪ್ರಕಾರ ಅನುಸಂಧಾನ ಮಾಡುವ ಅಧಿಕಾರಿಗೆ ಯಾವತ್ತೂ ಸ್ಥಳಗಳು ಪುಣ್ಯಕರಗಳಾದ ಕ್ಷೇತ್ರಗಳಾಗಿನ್ನೂ, ಮುನ್ನೂರಾಅರವತ್ತು ಸುದಿಗಳೂನು ಒಳ್ಳೇ ದಿವಸಗಳಾಗಿನ್ನೂ, ಈ ಚತುರ್ದಶಲೋಕಗಳಲ್ಲಿರುವ ಸಮಸ್ತರಾದತ್ರಿವಿಧ ಪ್ರಾಣಿಗಳು, ಸರ್ವಜೀವರ ಅಧಿಷ್ಠಾನದಲ್ಲಿ ಶ್ರೀ ಪರಮಾತ್ಮನನ್ನು ತಿಳಿದು ಅನ್ನದಾನವೇ ಮೊದಲಾದ ಆದರೋಪಚಾರಗಳು ಮಾಡತಾನಾದಕಡಿಯಿಂದ, ಸರ್ವಜೀವರೂನೂ ದಾನಪಾತ್ರರಾಗಿನ್ನೂ, ವಾಚಾ ಉಚ್ಚಾರ ಮಾಡುವ ಮಾತುಗಳು ಯಾವತ್ತೂನೂ ವೇದೋಕ್ತಮಂತ್ರವಾದ ಸ್ತೋತ್ರಗಳಾಗಿನ್ನೂ, ಸಮಸ್ತಜೀವರು ಮಾಡುವ ವ್ಯಾಪಾರಗಳು ಎಲ್ಲಾನೂ ತಥಾ ತಾನು ಮಾಡುವ ಯಾವತ್ತೂ ಕೆಲಸಗಳೂ ಪೂಜಾತ್ವೇನ ಸಮರ್ಪಣ ಮಾಡತನಾದಕಡಿಯಿಂದ, ಆಯಾಯಾ ಅಧಿಷ್ಠಾನಗತ ಪರಮಾತ್ಮಗೆ ಇಂಥಾದ್ದೆ ಸೇವಾ ಎಂತ ತಿಳಿದು ತಾನು ಮಾಡುವುದು ಯಾವತ್ತೂನೂ, ಜೀವರು ಮಾಡುವ ಯಾವತ್ತೂ ಕರ್ಮಗಳನ್ನೂ ಪೂಜಾ ಆಗೋದಾಗತದೆ. ದಾರಿಗೆ ಎಂದರೆ, ರುದ್ರದೇವರಿಂದ ವಂದಿತನಾದ, ನಿರ್ದೋಷನಾದ ಶ್ರೀಭಾರತಿ ರಮಣಮುಖ್ಯಪ್ರಾಣಾಂತರ್ಗತನಾದ ರಮಾಸಮೇತ ಶ್ರೀಪರಮಾತ್ಮನ ಸರ್ವತ್ರ ಧ್ಯಾನ ಏಕಪ್ರಕಾರವಾಗಿ ಉಳ್ಳವಗೆ ಸಾರ್ಥಿಕ್ಯವಾಗತದೆ ಹೊರ್ತು, ತದನ್ಯರಿಗೆ ಅಲ್ಲ. ಇಂಥಾ ಅಧಿಕಾರಿಯಾದವನು ಬಾಹ್ಯಅಧಿಷ್ಠಾನವನ್ನು ಮರೆತು, ಅಂತರ್ಲಕ್ಷಿತನಾಗಿ ದೇಹಗತತತ್ತ್ವಗಳನ್ನು ಹಾಂಗೆ ಬಾಹ್ಯ ಅಧಿಷ್ಠಾನಾಂತರ್ಗತಪರಮಾತ್ಮನ ನೋಡತಾ, ಸರ್ವವೂ ಶ್ರೀಕೃಷ್ಣಾರ್ಪಣ ಬುದ್ಧಿಯಿಂದ ಇರೋಣದರಿಂದ ಅವನು ಬ್ರಹ್ಮಜ್ಞಾನಿ ಎಂತ ತಾತ್ಪರ್ಯ ॥೪॥

## ೨. ಭಾವಪ್ರಕಾಶಿಕಾ

ಮೇಲಿನ ಪದ್ಯದಲ್ಲಿ ಹೇಳಿದುದನ್ನೇ ವಿವರಿಸುತ್ತಾರೆ :

ಮೇಲೆ ಹೇಳಿದಂತೆ ಸರ್ವತ್ರ ಇರುವ ಭಗವದ್ರೂಪವನ್ನು ಚಿಂತಿಸುತ್ತಿರುವ ವ್ಯಾಪ್ತ್ಯೋಪಾಸಕರಿಗೆ ಗಂಗಾನದಿಗಳೇ ಪುಣ್ಯತೀರ್ಥಗಳೆಂತಲೂ, ಅಯೋಧ್ಯಾದಿಗಳೇ ಪುಣ್ಯಕ್ಷೇತ್ರಗಳೆಂತಲೂ, ಬ್ರಾಹ್ಮಣಾದಿಗಳೇ ದಾನಪಾತ್ರರೆಂತಲೂ, ಅಷ್ಟಾಕ್ಷರ ದ್ವಾದಶಾಕ್ಷರಗಳೇ ಜಪಿಸಲು ಯೋಗ್ಯವಾದ ಮಂತ್ರಗಳೆಂತಲೂ, ಪ್ರತಿಮಾದಿಗಳೇ ಪೂಜಾರ್ಹವೆಂತಲೂ ಅಲ್ಲ. ತಮ್ಮೊಳಗಿರುವ ಬಿಂಬಮೂರ್ತಿಯನ್ನು ಸರ್ವತ್ರ ಚಿಂತಿಸುವ ಉಪಾಸಕರಿಗೆ--

**"ಪ್ರಣಮೇದ್ದಂಡವದ್ಭೂವಾ ಅಶ್ವ ಚಂಡಾಲ ಗೋ ಖರವ್"**

ಎಂಬ **ಭಾಗವತಏಕಾದಶಸ್ಕಂಧವ್ಯಾಖ್ಯಾನುಸಾರವಾಗಿ** ಶ್ವಾನ, ಚಂಡಾಲ, ಗೋವು, ಕತ್ತೆ ಮೊದಲಾದ ಎಲ್ಲದರಲ್ಲಿ ಇರುವ ಭಗವದ್ರೂಪಗಳಿಗೆ ಪರಸ್ಪರ ಭೇದವಿಲ್ಲವೆಂದು ಉಪಾಸನೆ ಮಾಡಬೇಕೆಂದು ಸಿದ್ಧವಾಗುವುದು. ಆದರೆ ಈ ಅಧಿಕಾರವು ಸರ್ವಸಾಮಾನ್ಯವಲ್ಲ.

**"ಪ್ರತಿಮಾಸ್ವ ಪ್ರಬುದ್ಧಾನಾಂ ಸರ್ವತ್ರವಿದಿತಾತ್ಮನಾಂ"**

ಎಂಬ **ಆಚಾರ್ಯರ ವ್ಯಾಖ್ಯಾನುಸಾರ** ಅಪ್ರಬುದ್ಧರು, ಅಂದರೆ, ಸರ್ವತ್ರ ಇರುವ ಭಗವದ್ರೂಪವನ್ನು ಸಮತ್ವೇನ ತಿಳಿಯುವ ಯೋಗ್ಯತೆ ಇಲ್ಲವರೆಂದರ್ಥ. ಇಂಥಹವರು ಪ್ರತಿಮೆಯಲ್ಲಿಯೇ ಪೂಜೆಮಾಡಬೇಕು. ಆ ಜ್ಞಾನ ಉಳ್ಳವರು ಯಾರೋ ಅವರು ಸರ್ವತ್ರ ಉಪಾಸನೆ ಮಾಡಬಹುದು.

**ಭಾಗವತ ಏಕಾದಶಸ್ಕಂಧದಲ್ಲಿ---**

**"ಯಾವತ್ಸರ್ವೇಷುಭೂತೇಷು ಮದ್ಭಾವೋನೋಪಜಾಯತೆ ||**
**ತಾವದೇವಮುಪಾಸೀತ"**

ಎಂಬ ಶ್ರೀಕೃಷ್ಣ ವಾಕ್ಯದಿಂದ ಯಾವರೆವಿಗೂ ಸರ್ವತ್ರ ಇರುವ ನನ್ನ ರೂಪದಲ್ಲಿ ಅಭೇದಜ್ಞಾನ ಹುಟ್ಟುವುದಿಲ್ಲವೋ ಆವರೆವಿಗೂ ಪ್ರತಿಮಾದಿಗಳಲ್ಲಿ ಪೂಜೆಮಾಡಬೇಕೆಂದು ಹೇಳಿರುವರು. ಆದರೆ ಈ ಉಪಾಸನೆ ಏನೂ ಕಷ್ಟವಲ್ಲ ಹೇಗೆಂದರೆ---

ಪರಮಾತ್ಮನು ಸರ್ವತ್ರ ಇದ್ದೇ ಇರುವನು. ಭಗವದ್ರೂಪಗಳಿಗೆ ಪರಸ್ಪರ ಭೇದವಿಲ್ಲ. ಜೀವಜಡರಿಂದ ಮಾತ್ರ ಪರಮಾತ್ಮ ಭಿನ್ನನೆಂಬ ಇಷ್ಟು ಜ್ಞಾನ ಮಾತ್ರ ಸ್ವಲ್ಪಮಟ್ಟಿಗೆ ಶಾಸ್ತ್ರ ಓದಿದವರು ತಿಳಿದೇ ಇರುವರು. ಇಷ್ಟು ಮಾತ್ರದಿಂದಲೇ ಸರ್ವತ್ರವ್ಯಾಪ್ತ್ಯೋಪಾಸನೆ ಮಾಡುತ್ತೇವೆಂದು, ಯಾತ್ರೆಗಳನ್ನು, ಪೂಜಾದಿಗಳನ್ನು, ಜಪಗಳನ್ನು ಬಿಟ್ಟುಬಿಡಬೇಕೆಂಬ ಅರ್ಥವಲ್ಲ. ತಿಳಿಯುವುದೆಂದರೇನು ? ಬರೇ ತಿಳಿಯುವುದೇ ಅಲ್ಲ, ಅನುಷ್ಠಾನಕ್ಕೆ ತರಬೇಕು. ಹುಲಿಯನ್ನು ಕಂಡರೂ, ಹಾವನ್ನು ಕಂಡರೂ ನಮ್ಮಲ್ಲಿರುವ ಭಗವದ್ರೂಪಕ್ಕೂ ಪ್ರತಿಮಾದಿಗಳಲ್ಲಿರುವ ಭಗವದ್ರೂಪಕ್ಕೂ, ಹುಲಿ ಇತ್ಯಾದಿಗಳಲ್ಲಿರುವ ಭಗವದ್ರೂಪಗಳಿಗೂ ಪರಸ್ಪರ ಭೇದವಿಲ್ಲವೆಂದು ನಿಶ್ಚಯಜ್ಞಾನವಾದರೆ, ಪ್ರತಿಮಾದಿಗಳಲ್ಲಿ ನಮಗೆ ಎಷ್ಟು ವಿಶ್ವಾಸವಿರುತ್ತದೆಯೋ, ತಿರುಪತಿ ಮುಂತಾದ ಕ್ಷೇತ್ರಗಳಲ್ಲಿ, ಶ್ರೀನಿವಾಸ ಮೊದಲಾದ ಪ್ರತಿಮೆಗಳಲ್ಲಿ ಹೇಗೆ ನಿರ್ಭೀತಿಯಿಂದ ಇರುವೆವೋ, ನಮ್ಮ ದೇಹದಿಂದ ನಮಗೆ ಹೇಗೆ ಭಯವಿಲ್ಲವೋ ಮತ್ತು ಪ್ರೀತಿ ಹೆಚ್ಚಾಗಿರುವುದೋ ಹಾಗೆಯೇ ಹುಲಿಯಲ್ಲಿಯೂ, ನಮ್ಮಲ್ಲಿಯೂ ಇರುವವನು ಒಬ್ಬನೇ ಆದಮೇಲೆ ಆ ಹುಲಿಯೂ ನಮ್ಮನ್ನೇನು ಮಾಡುವುದು? ನಾವೇಕೆ ಅವುಗಳನ್ನು ಕಂಡು ಹೆದರಬೇಕು ? ಇಂತಹ ಜ್ಞಾನವು ಸಂಪೂರ್ಣವಾಗಿ ಅದನ್ನು ಅನುಷ್ಠಾನಕ್ಕೆ ತಂದು, ಯಾವ ಪ್ರಾಣಿಗಳನ್ನು ಕಂಡರೂ ಅಸಹ್ಯಗೊಳ್ಳದಂತೆಯೂ, ಭಯಪಡದಂತೆಯೂ ಮನಸ್ಸು ಸ್ಥಿರವಾದರೆ, ಆಗ ವ್ಯಾಪ್ತ್ಯೋಪಾಸನೆಯ ಅಧಿಕಾರ ಬಂದಿದೆ ಎಂದು ತಾತ್ಪರ್ಯ. ಇಂತಹ ಜ್ಞಾನವು ಯಾರಿಗೆ ಇರುವುದೋ ಅವರಿಗೆ ಎಲ್ಲಾ ದೇಶವೂ ಪುಣ್ಯದೇಶವೇ, ಎಲ್ಲಾ ಕಾಲವೂ ಪರ್ವಕಾಲವೇ, ಸಕಲ ಪ್ರಾಣಿಗಳೂ ಪಾತ್ರರೇ, ಎಲ್ಲ ಮಾತುಗಳು ಮಂತ್ರವೇ, ಮಾಡುವ ಕೆಲಸಗಳೆಲ್ಲವೂ ಭಗವತ್ಪೂಜೆಯೇ ಆಗುವುದೆಂದು ಈ ಪದ್ಯದ ತಾತ್ಪರ್ಯ. ॥೪॥

**(೩) ಭಾವದರ್ಪಣ ಟೀಕಾ :–**

ಈ ಪದ್ಯೋಕ್ತಸರ್ವಶಬ್ದ ಮುಕ್ತಿಯೋಗ್ಯ ಜೀವಪರ ಮಾಡಬೇಕೆಂದು ವಕ್ತೃಗಳ ಆಶಯ ಇರೋಣದರಿಂದ, ಸರ್ವತ್ರ ಬಿಂಬಚಿಂತನಪೂರ್ವಕ ಮಾಡ

ತಕ್ಕ ಕರ್ಮಗಳು ಸರ್ವವೂ ಮುಕ್ತಿಗೆ ಉಪಯೋಗವಾಗುತ್ತದೆಂದು ಭಾವ ತೋರಿಸುತ್ತಾರೆ— **ಸರ್ವದೇಶೇತಿ** ||೪||

## (೪) ಶ್ರೀವ್ಯಾಸದಾಸಸಿದ್ಧಾಂತಕೌಮುದೀ (ಸಂಸ್ಕೃತಮೂಲ)

"**ಸರ್ವದೇಶ**"– ಇತಿ॥ "**ಯತ್ರೈಕಾಗ್ರತಾ**"– ಇತ್ಯಸ್ಯ "**ತಮೇವ**" ಇತಿ **ಭಾಷ್ಯಮ್**॥ "ಮನಃ ಪ್ರಸಾದನಾರ್ಥಂ"– ಇತಿ ವ್ಯಾವರ್ತ್ಯಚೋದ್ಯ ಟೀಕಾ– "ಪರ್ವತಾಗ್ರೇ ನದೀ ತೀರೇ"– "ಬ್ರಾಹ್ಮೀಮೂಹೂರ್ತೇ ಚೋತ್ಥಾಯ"– ಇತಿ। "ಅತ್ಯುತ್ತಮಾನಾಂ ಕೇಷಾಂಚಿತ್ ನ ವಿಶೇಷೋಸ್ತಿ ಕಾಲತಃ"– ಇತ್ಯುಕ್ತೇಃ॥ "ಸರ್ವಂ ಸಮಾಪ್ನೋಷಿ ತತೋಸಿಸರ್ವಃ"॥ ಜ್ಞಾನ ದಾನಾತ್ ದೇಶಃ। ಪುಣ್ಯಕೃತ್ವಾತ್ ಪುಣ್ಯನಾಮಾ॥ ಇಷ್ಟದತ್ವಾತ್ ಕಾಲ-ನಾಮಾ॥ ಪರಜ್ಞಾನಾತ್ತು॥ ಏವಂ ಯತ್ರ ಕುತ್ರಾಪಿ ಶ್ರೀಪ್ರಣಯನೀ ಚಕೋರೇಂದುಂ ಅನುಚಿಂತಯತಾಂ ಮಹಾತ್ಮನಾಂ ಸರ್ವದೇಶಾಃ ಕಾಲಾಶ್ಚ ಪುಣ್ಯಪ್ರದಾಃ ಏವ॥ ಸ ವೈ ಪುಣ್ಯತಮಃ ದೇಶಃ ಸತ್ಪಾತ್ರಂ ಯತ್ರ ಲಭ್ಯತೇ॥ "ಸರ್ವಜೀವ" – ಇತಿ॥ ನನು ಶ್ರೀದಪ್ರತೀಕತ್ವಾ ವಿಶೇಷೇಪಿ ಪರಮನ್ಯೈಚ್ಯಂ ಶ್ರೀವಲ್ಲಭಾರೀಣಾಂ ಮಾಯಿನಾಂ ಘೋಷಯಂತಿ ಶ್ರುತಯಃ ಸ್ಮೃತಯಃ ಅನಂತಾಃ ಮಾಯಿನಾಂ ದೂಷಕಾಃ ಖಲು॥ "ತತೋಧಿಕಮಿವ ವ್ಯಕ್ತಂ ಯಾಂತಿ ತೇಷಾಂ ಅನಿಂದಕಾಃ"॥ "ತತೋಭೂಯ ಇವತೇ ತಮೋ ಯ ಉ ವಿದ್ಯಾಯಾಂ ರತಾಃ॥ ಅನ್ಯದೇವಾಹುರ್ವಿದ್ಯಯಾ ಅನ್ಯರಾಹುರವಿದ್ಯಯಾ"॥ "ಕಶಾವೇದ್ರಾದಿಕಂ ತಸ್ಯ ತಸ್ಯಾರನ್ಯೋತ್ತರಂ ವದೇತ್"॥ "ಅನಂತ ದೋಷ ದುಷ್ಟಂ ಚ ಹೇಯಂ ಮಾಯಾಮತಂ ಚ ಶುಭೈಃ"॥ "ಆನಂದಾನಾಮ ತೇ ಲೋಕಾಃ ಅಂಧೇನ ತಮಸಾವೃತಾಃ॥ ತಾಸ್ತೇ ಪ್ರೇತ್ಯಾಭಿಗಚ್ಛಂತಿ ಯೇ ಕೇ ಚಾತ್ಮಹನೋ ಜನಾಃ"॥ "ಅಲಂಕೃತಃ ದುರ್ಘಟೈರೇವ ಭೂಷಣೈಃ"॥ ಅಲಂಕೃತಸ್ಯ ವಸನಾಭ್ಯಾಂ ಭಾವ್ಯಮ್"॥ "ಅಂಧಂತಮಃ ನಿತ್ಯದುಃಖಂ ತಸ್ಯ ಸ್ಯಾತ್ ವಸನದ್ವಯಮ್"॥ "ಈಶ ಶಕ್ತೇಃ ಅಚಿಂತ್ಯತ್ವಾತ್ ಮಹೋನ್ಮತ್ತೈಃ ಪ್ರವರ್ತಿತಮ್"॥ "ಕಥಂ ನ ಜಾಯತೇ ಲಜ್ಜಾ"॥ ಮೂಕೋಹಮಿತಿವತ್॥ ಅತ ಉನ್ಮತ್ತವಾಕ್ಯತ್ವಾತ್ ಮಾಯಾವಾದಃ ಹ್ಯುಪೇಕ್ಷಿತಃ ॥ "ಯದಂಗಂ ಮಾಯಿ ಸಂಸ್ಪೃಷ್ಟಂ ತದಂಗಂ ದಾಹಯೇತ್" ತೇ ಮುಹ್ಯಂತಿ ಶುಚಾರ್ಪಿತಾಃ॥

"ಮಾಯಾವಾದಾಖ್ಯಗರ್ಧಭವ್"॥ ಅತಃ ವೈಷ್ಣವಾನಾಂ ಪರಮವೈಷ್ಣ-ವೋತ್ತಂಸಕೃತ ಗಾಲೀದಾನಾಭಿಜ್ಞಾನಾಂ "ಯೋ ನಿಂದ್ಯಾಂಸ್ತು ನ ನಿಂದಯೇತ್"॥ ಅವೈಷ್ಣವಾಯ ದಾತವ್ಯಃ ನೋದಬಿಂದುಃ ನ ತಂಡುಲಮ್"॥ ಕಾಲಡಿಗ್ರಾಮ ಜಾತಸ್ಯ ಸಂಕರಸ್ಯ ದುರಾತ್ಮನಃ॥ ಚುಬುಕೇ ಪಾದಮಾಧಾಯ ವಿಣ್ಮೂತ್ರೇ ವಿಸೃಜಾಮ್ಯಹಮ್॥ "ಮಾಯಾವಾದಿ ತಾಯಿಗಂಡಾ ಟೀಕಾಯಿತೇನೋ ಮಾತೃಗಾಮಿ— ಎಂಬೋ ಈ ಕಷ್ಟದಾ ಬೈಯ್ಗಳು। "ಅಂಧತಮಸ್ಸು ಮತ್ತಿನ್ಯಾರಿಗೆ"॥ **ಪುರಂದರ ವಿಠಲನ** ದ್ವೇಷಿ ಮಾಯಾವಾದಿ ಗಳಿಗೊಂದು ಕೆರವು"॥ "ಕೊಡೋದಿಲ್ಲ ಶೈವರಿಗೆ ದಾನವನ್ನು"॥ "ಹಿಡೋದಿಲ್ಲ ಅವರದೊಂದು"—ಇತ್ಯಾದ್ಯನುಸಂಧಾನತ್ರಣಾಂ ದಾಸರಾಜಾನಾಂ ಪ್ರಕರಣಾತ್ ಅಸಂಕುಚಿತಾರ್ಥ ಸರ್ವ ಪ್ರವಿಷ್ಟಮಾಯಿಭ್ಯಃ ಅನ್ನಮುಖದಾನಾವೇದಕ್ಕೈ ತತ್ಪದರಚನಾ ಇತಿ ಚೇತ್? ಅತ್ರ ಬ್ರೂಮಃ—"ಇದಂ ಅಪರೋಕ್ಷಿಪರಮ್"॥ ತಥಾ ಚ ನಾತ್ರ ಸರ್ವತ್ವಾವಚ್ಛೇದೇನ ದಾನಪಾತ್ರತಾ ವಿಧೀಯತೇ॥ ಯೇನ ಪೂರ್ವಾಸ್ತ್ರಾಣಿ ಕುರ್ಯುಃ ವ್ಯಥಾವ್ಮ್॥ ಕಿಂತು ಯೇ ಪರೋಕ್ಷಿಭಿಃ— 'ಶ್ರೀವಿಷ್ಣು ತದ್ಭಕ್ತ ಪ್ರೀತಿಸ್ಯಾತ್'ಇತ್ಯಭಿಸಂಧಿಪೂರ್ವಕಂ ದಾನಗೃಹೀತೃತ್ವೇನ ಸ್ವೀಕೃತಾಃ ತೇ ಸರ್ವೇ ಬಾಹ್ಯರುದ್ರಾಕ್ಷ ಭಸ್ಮಾದಿಭಿಃ ಅದ್ವೈತೀತ ತಯಾ ಭಾಸಮಾನಾಃ ಅಪಿ ಅಂತಃ ಭಕ್ತಾಃ ಹರೌ ಖಲು ॥ ಅತ ಏವ ಪೂರ್ವದಾಸ ವರ್ಯೋದ್ಧೃತಾಃ ಷಷ್ಟಿಪರೇಽಪಿ ದೃಶ್ಯಂತೇ॥ ಯಥಾ— "ಬಿಲ್ವ ಮಂಗಲಃ ಸಾಧುಃ"॥ ಅತಃ ಜ್ಞಾನಿದಾನ ಗೃಹೀತಾರಃ ಸರ್ವೇ ದಾನಪಾತ್ರಂ ಇತ್ಯರ್ಥಃ॥ ಯದ್ವಾ ಪರಪ್ರಾಣಪ್ರಯಾಣೇ ಧೃತಪ್ರಾಣಃ ಮೋಹಮುಪಾಸ್ತಿಂ ಚಂ। ಕರೋತಿ ಇತಿ ದೇಯಮನ್ನಂ ಮಾಯಿಗೋಮಾಯವಃ ಇತಿ ಹರಿಹಾರ್ದಂ ಜ್ಞಾತ್ವಾ ದೀಯೇತ್ ಕ್ವಚಿತ್॥ ತತ್ರ ಸ್ವತ್ವತ್ಯಾಗ ಏವ ದಾನಂ ವಿಧ್ಯಾತ್ಮನಾ ಯದಿ ವಾ ತನ್ಮತಂ ಪರಿಷದಿ ನ್ಯಕ್ಕೃತ್ಯ ಉಕ್ತ ಪ್ರಣಾಡಿತಯಾ ಗಾಲೀ ದಾನಂ" **ವಿಜಯರಾಜಾಶ್ಚ** "ನಿಂದಕರರ ನಿತ್ಯಾ ನಿಂದಾ ಮಾಳ್ಪುದೇ ಹಬ್ಬ"— ಇತಿ ಪ್ರೋಚುಃ॥ ಗುರುವಸ್ತುಃ— "ಯೋ ನಿಂದ್ಯಾಂಸ್ತು ನ ನಿಂದಯೇತ್"॥ ಇತಿ॥ **ವಿಜಯಧ್ವಜಶ್ರೀಮಚ್ಚರಣಾಸ್ತು** "ದಾನಂ ಭಕ್ತಾಧಮಮಧ್ಯಮೇಷು ಸುಖ ದುಃಖ ಮಿಶ್ರಫಲ ವಿತರಣಮ್॥ ಯದ್ವಾ ವಿಷಾದೇಃ ದಾನಂ" ಅತಏವ ಕಿಂ ವದಂತ ಪೀಡಿತಾಃ" ಪೂರ್ವಂ ದಾಸಮೌಲಿ ರತ್ನಭೂತಾಃ ನಿರುದತೇ ಉದನ್ಯ

ಯಾಂತರ್ಲೀನ ಜಿಹ್ವಾನಾಂ ನವಾನಾಂ ಮುಖೇದ್ವತ್ವಾ ನೀತೋ ದಧತಾ ಮೇಕಾಂ ಏಕಸ್ಯಾ ಸುರತಾಮವ ಧಾಯಾ (ರ್ಯ) ರ್ಪಯಾಂ ಚಕ್ರುಃ ಮುಖೇ ತಪ್ತವಾಲುಕಾಂ ಮಮಾರ ಚ ಅಯಮ್"॥ ಇತಿ॥ ಸರ್ವೇತಿ॥ ಯದ್ಯಪ್ಯೇನಮೇವ ಅತ್ರಾಪಿ ವಿಚಾರ್ಯಂ ಬಹು॥ ಪರಂ ತು ವಿಸ್ತೃತ್ಯಾ ಅನಾದೇಯಂ ಸ್ಯಾತ್ ಇತ್ಯಾಲೋಚ್ಯ ವಿದುಷಾಂ ದಿಙ್ಮಾತ್ರ ಪ್ರದರ್ಶನೇನೈವಾಲಂ ಇತಿ ನಾತ್ರಾಧಿಕಂ ಪ್ರಯತ್ಯತೇ॥ ಅಧಿಕ ವಿಚಾರಸ್ತು **ರಸರಂಜನ್ಯಾಂ ಧ್ಯಾನಪ್ರಕ್ರಿಯಾಂದ್ರಷ್ಟವ್ಯಃ** ॥೪॥

**ಕನ್ನಡಾರ್ಥ :**

ಪರ್ವತಾಗ್ರ, ನದೀತೀರ, ಮುಂತಾದ ಸ್ಥಳಗಳೂ (ದೇಶ) ಮತ್ತು ಬ್ರಾಹ್ಮೀಮುಹೂರ್ತ ಇತ್ಯಾದಿ ಕಾಲವಿಶೇಷಗಳೂ ಧ್ಯಾನೋಪಾಸಕನಿಗೆ ಅಗತ್ಯ ಹಾಗೂ ಮುಖ್ಯವೆಂದು ಶಾಸ್ತ್ರಸಮ್ಮತವೂ ಇವೆ. "ಸರ್ವ ದೇಶವು ಪುಣ್ಯದೇಶವು ಮತ್ತು ಸರ್ವಕಾಲವು ಪುಣ್ಯಕಾಲವು"—ಎಂದು ದಾಸವರ್ಯರು ನಿರೂಪಿಸಿರುವರು.

**ಬ್ರಹ್ಮಸೂತ್ರ—ನಾಲ್ಕನೆಯಅಧ್ಯಾಯ—ಪ್ರಥಮಪಾದದ ೧೧ನೆಯ ಸೂತ್ರ :—**

**"ಓಂ ಯತ್ರೈಕಾಗ್ರತಾ ತತ್ರಾ ವಿಶೇಷಾತ್ ಓಂ ||"**

ಇದರಂತೆ, ಯಾವ ದೇಶ ಕಾಲಗಳಲ್ಲಿ ಮನಸ್ಸು ಏಕಾಗ್ರತೆಯನ್ನು ಪಡೆಯುವುದೋ ಆಯಾ ದೇಶ ಕಾಲಗಳಲ್ಲಿ ಆಸನಾರೂಢನಾಗಿ ಧ್ಯಾನ ಮಾಡಬೇಕು. ದೇಶಕಾಲಗಳಿಂದ ಧ್ಯಾನಜ್ಞಾನಗಳಲ್ಲಿ ಒಂದು ಅತಿಶಯವು ಬಾರದು. ಚಿತ್ತೈಕಾಗ್ರತೆಯುಂಟಾಗುವ ದೇಶಕಾಲಗಳಲ್ಲೆಲ್ಲವೂ ಮನಸ್ಸು ಪ್ರಸನ್ನವಾಗಿ ಏಕಾಂತತೆಯನ್ನು ಪಡೆಯುವುದು ಹೊರತಾಗಿ ಧ್ಯಾನಜ್ಞಾನಗಳಲ್ಲಿ ಆಧಿಕ್ಯವು ಉಂಟಾಗಲಾರದು. ನದೀತೀರ-ಪರ್ವತಾಗ್ರ-ಬ್ರಾಹ್ಮೀಕಾಲ ಮುಂತಾದ ದೇಶಕಾಲಗಳೇ ಬೇಕೆಂಬ ನಿಯಮವನ್ನು ಸೂತ್ರಭಾಷ್ಯದಲ್ಲಿ ನಿರಾಕರಿಸಿರುವರು. ಆದುದರಿಂದ ಪರಮಾತ್ಮನಲ್ಲಿ ಚಿತ್ತವು ಪ್ರಸನ್ನತೆಯನ್ನು

ಪಡೆಯುವ ದೇಶಕಾಲಗಳೆಲ್ಲವೂ ಪುಣ್ಯ-ಎಂಬ ಅಭಿಪ್ರಾಯವನ್ನು ಹೃದಯದಲ್ಲಿಟ್ಟುಕೊಂಡು—"ಸರ್ವ ದೇಶವು ಪುಣ್ಯ ದೇಶವು"—ಎಂದು ನಿರೂಪಿಸಿರುತ್ತಾರೆ. ಉತ್ತಮಾಧಿಕಾರಿಗಳಿಗೆ ಎಲ್ಲ ದೇಶ ಕಾಲಗಳಲ್ಲಿ ಧ್ಯಾನಗಳಲ್ಲಿ ಸಮಾನ ಫಲಪ್ರಾಪ್ತಿಯು. ಸರ್ವತ್ರ ವ್ಯಾಪಕನಾಗಿ, ಸರ್ವ ವಸ್ತುಗಳಲ್ಲಿ ಅಂತರ್ಯಾಮಿಯಾಗಿರುವುದರಿಂದ, ಶ್ರೀಪರಮಾತ್ಮನಿಗೆ **ಸರ್ವ** ಎಂದು ಹೆಸರು. ಜ್ಞಾನಪ್ರದನಾದ್ದರಿಂದ (ದಿಶ–ಕೊಡುವವನು) **ದೇಶವೆಂದು** ಶ್ರೀಹರಿಗೆ ನಾಮ. ಪುಣ್ಯಫಲಗಳನ್ನು ಕೊಡುವವನಾದ್ದರಿಂದ, **ಪುಣ್ಯ**ನೆಂದು ಹೆಸರು. ಇಷ್ಟಪ್ರದನಾಗಿರುವುದರಿಂದ, **ಕಾಲ** ಎಂದು ನಾಮಧೇಯನು. ಇಂತು ಸರ್ವಕಾಲ ಮತ್ತು ದೇಶಗಳಲ್ಲಿ ವ್ಯಾಪಿಸಿರುವ ಶ್ರೀಪರಮಾತ್ಮನನ್ನು ಸದಾ ಉಪಾಸಿಸುವವರಿಗೆ--ಸರ್ವದೇಶವು ಮತ್ತು ಸರ್ವಕಾಲವು ಪುಣ್ಯಕಾಲಗಳೆನಿಸುವುವು.

**"ಸರ್ವಜೀವರು ದಾನಪಾತ್ರರು."** ಈ ಶಬ್ದಪ್ರಯೋಗವು ಅರ್ಥಪೂರ್ಣವಾಗಿದೆ. ಸರ್ವಜೀವರು ಶ್ರೀಹರಿಯ ಪ್ರತಿಬಿಂಬಭೂತರು. ಮಾಯಾವಾದಿಗಳು ಸ್ವರೂಪದಲ್ಲಿ ಅಯೋಗ್ಯರು, ತಮೋಯೋಗ್ಯರು. ನಿತ್ಯದುಃಖವಾದ ಅಂಧಂತಮಸ್ಸೇ ಅವರ ನಿಜಗತಿಯು. ನಿತ್ಯದುಃಖಭಾಜನರು. ವಿಷ್ಣುದ್ವೇಷಿಗಳೂ, ವೈಷ್ಣವ ದ್ವೇಷಿಗಳೂ. ಜೀವೇಶರು ಒಂದೇ ಎಂದು ಐಕ್ಯೋಪಾಸನೆ ಮಾಡುವ ಅಂತಹ ಮಿಥ್ಯಾವಾದಿಗಳು ದಾನಪಾತ್ರರಲ್ಲ. ಅವರಿಗೆ ಶ್ರೀಹರಿಯು ದಾನ–ಎಂದರೆ ಕೊಡುವುದು–ನಿತ್ಯ ದುಃಖಾನುಭವ ರೂಪವಾದ ಅಂಧಂತಮಸ್ಸು. ಅಂತಹ ದಾನಕ್ಕೆ ಆ ತಮೋಯೋಗ್ಯರು ಪಾತ್ರರು. "ಸರ್ವಜೀವರು ದಾನಪಾತ್ರರು" ಎಂದರೆ, ಸಮಸ್ತ ಬ್ರಹ್ಮಜ್ಞಾನಿಗಳು ದಾನಕ್ಕೆ ಪಾತ್ರರೆಂದು ದಾಸರಾಯರ ಅಭಿಪ್ರಾಯ. ಸಜ್ಜನರೂ, ಮುಕ್ತಿಯೋಗ್ಯರು, ಶ್ರೀಹರಿಯ ಭಕ್ತರು ಮಾತ್ರ ದಾನಕ್ಕೆ ಪಾತ್ರರೇ ಹೊರತು, ಭಗವದ್ದ್ವೇಷಿಗಳಾದ ಮಿಥ್ಯಾವಾದಿಗಳಲ್ಲ.

**ನಿಂದಕರನ್ನು ನಿಂದಿಸುವುದೇ ಹಬ್ಬ–ಎಂದು ಶ್ರೀವಿಜಯದಾಸವರ್ಯರ ಸುಳಾದಿಯ ವಚನ.** ಅದರಂತೆ– "ಶ್ರೀಹರಿಯು ಗುಣಶೂನ್ಯನು. ನಿರಾಕಾರನು. ನಿರ್ಗುಣನು"– ಎಂಬುದಾಗಿ ನಾನಾಪ್ರಕಾರ

ವೇದಪ್ರತಿಪಾದ್ಯನಾದ ಶ್ರೀಹರಿಯನ್ನು ವೇದವಚನಗಳನ್ನೇ ತಮ್ಮ ವಾದಕ್ಕೆ ಆಧಾರವೆಂದು ಹೊರಟಿರುವ ಮಾಯೂವಾದಿಗಳು ನಿಜವಾದ ಅರ್ಥದಲ್ಲಿ **ಶ್ರೀಪರಮಾತ್ಮನ ನಿಂದಕರು.** ಅಂತಹವರು ಖಂಡಿತ ದಾನಪಾತ್ರರಲ್ಲ. ॥೪॥

**(ಆ) ಶ್ರೀಗುರುಹೃದಯ ಪ್ರಕಾಶಿಕೆ :**

ಶರ್ವವಂದ್ಯನ ಅಂದರೆ, ರುದ್ರಾದಿ ಸರ್ವದೇವವಂದ್ಯನಾದ ದೇವರ ಪೂರ್ವೋಕ್ತ ಮೂರ್ತಿಧ್ಯಾನವುಳ್ಳ ಮಹಾತ್ಮನಿಗೆ ಸರ್ವದೇಶವೂ ಪುಣ್ಯಕ್ಷೇತ್ರ, ಸರ್ವಕಾಲವೂ ಪರ್ವಕಾಲದಂತೆ ಪುಣ್ಯಕಾಲವು, ಸರ್ವಜೀವರೂ ದಾನ ಪಾತ್ರರು. ಅಂದರೆ. ಅವರಿಗೆ ಯೋಗ್ಯವಾದದ್ದನ್ನು ಕೊಡುವುದೆಲ್ಲಾ ಶ್ರೀಕೃಷ್ಣಾರ್ಪಣವೆಂತ ಭಾವಿಸುವುದಕ್ಕೆ ಅರ್ಹರೆಂದು ಅರ್ಥ. ಮೂರು ಲೋಕದಲ್ಲಿ ಆಡುವ ಮಾತುಗಳೆಲ್ಲ ದೇವರ ಗುಣವರ್ಣನಾರೂಪವಾದ್ದರಿಂದ ಮಂತ್ರದಂತೆ ಪುಣ್ಯಕರವು. ಸರ್ವಕ್ರಿಯೆಯೂ ದೇವರ ಪ್ರೇರಣಾನುಸಾರ ವಾದ್ದರಿಂದ ಶ್ರೀಹರಿಪೂಜೆಯಂತೆ ಧರ್ಮವು ಆಗುವುದೆಂದರ್ಥ. ಸರ್ವತ್ರಬಿಂಬ ಚಿಂತನ ಪೂರ್ವಕ ಮಾಡತಕ್ಕ ಕರ್ಮಗಳು ಸರ್ವವೂ ಮುಕ್ತಿಗೆ ಉಪಯೋಗ ವಾಗುತ್ತದೆಂದು ಭಾವ. ॥೪॥

## ಸರ್ವವ್ಯಾಖ್ಯಾನಸಾರಸಂಗ್ರಹ

ಸರ್ವತ್ರವ್ಯಾಪ್ತನಾದ ಶರ್ವವಂದ್ಯನ ವಿಮಲಮೂರ್ತಿ ಧ್ಯಾನಾಸಕ್ತ ರಾದ ವ್ಯಾಪ್ತ್ಯೋಪಾಸಕರಿಗೆ ಸರ್ವದೇಶವು ಪುಣ್ಯದೇಶವು, ಸರ್ವಕಾಲವು ಪುಣ್ಯಕಾಲವೆಂದೆನಿಸುವುದು ಎಂದು ವಿವರಿಸುತ್ತಾರೆ–**ಸರ್ವದೇಶವು**–ಎಂಬ ಪ್ರಸಕ್ತ ೪ ನೆಯ ಪದ್ಯದಿಂದ.

೧. ಸರ್ವಸ್ಥಳಗಳಲ್ಲಿ ಶ್ರೀ ಪರಮಾತ್ಮನು ತುಂಬಿ ಹರಡಿಕೊಂಡಿರು ವನು. ಈ ಜಗತ್ತಿನಲ್ಲಿ ವಿದ್ಯಮಾನವಾಗಿರುವ ಸಮಸ್ತಜಡವಸ್ತುಗಳಲ್ಲಿ ಶ್ರೀಹರಿಯು ಅಣು, ರೇಣು, ತೃಣ, ಕಾಷ್ಠಾದಿಗಳಲ್ಲಿ ಪರಿಪೂರ್ಣನಾಗಿ

ದ್ದಾನೆ. ಆಪ್ತಕಾಮನಾದ ಆ ಭಗವಂತನ ವ್ಯಾಪ್ತ್ಯೋಪಾಸನೆ ಮಾಡುವ ಬ್ರಹ್ಮಜ್ಞಾನಿಗಳಿಗೆ ಸರ್ವಸ್ಥಳವೂ ಪುಣ್ಯಸ್ಥಳವೆಂದೆನಿಸುವುವು. **ಕಂಡ ಕಂಡಲ್ಲಿ ವಿಶ್ವರೂಪಕಾಂಬ** ಅಂತಹ ಜ್ಞಾನಿಗಳು ಎಲ್ಲಿದ್ದರೆ, ಆ ಕ್ಷೇತ್ರವೇ ಪುಣ್ಯಕ್ಷೇತ್ರವು. ಜಗದ್ವ್ಯಾಪ್ತನಾದ ಆ ಜಗದೀಶ್ವರನನ್ನು ತಾವು ಹೋದ ಹೋದ ದೇಶಗಳಲ್ಲೆಲ್ಲಾ ಕಂಡು, ಉಪಾಸಿಸುವ ಮಂಗಳಾತ್ಮರವರು. ತಿರುಪತಿ ಮುಂತಾದ ಸ್ವಯಂವ್ಯಕ್ತಕ್ಷೇತ್ರಗಳು ಪುಣ್ಯತಮಕ್ಷೇತ್ರಗಳು. ಅಂತಹ ದಿವ್ಯದೇಶಗಳಲ್ಲಿ ಭಗವತ್ಸನ್ನಿಧಾನರೂಪವಾದ ಮಹದೈಶ್ವರ್ಯ ಯುಕ್ತವಾದ ಭಗವಂತನ ವಿಭೂತಿಯು ವಿಶೇಷವಾಗಿರುವುದು. ಅಂತಹ ಕ್ಷೇತ್ರಾಟನೆಗಳಿಂದ ಸತ್ಪುಣ್ಯಫಲಪ್ರಾಪ್ತಿ. ಆದರೆ ಉತ್ತಮಜ್ಞಾನಾನು ಸಂಧಾನವುಳ್ಳ ಬ್ರಹ್ಮಜ್ಞಾನಿಗಳು ಸರ್ವತ್ರ ಶ್ರೀಹರಿಯ ವ್ಯಾಪ್ತರೂಪಗಳನ್ನು ಮನಸಾ ಚಿಂತಿಸುತ್ತಿರುವರು. ಅಂತಹವರ ದೃಷ್ಟಿಯಲ್ಲಿ **ಸರ್ವದೇಶವು ಪುಣ್ಯದೇಶವೇ.**

೨. ಕಾಲವು ಜಡ. ಆದರೆ ಪ್ರವಾಹತೋನಿತ್ಯವಾಗಿರುವುದು. ಅಂತಹ ಕಾಲಪ್ರವಾಹದಲ್ಲಿ, ಕಾಲನಿಯಾಮಕನಾಗಿ, ಕಾಲನಾಮಕನಾಗಿ, ಕಾಲಪ್ರವರ್ತಕನಾಗಿ ಶ್ರೀಹರಿಯು ಇರುವುದರಿಂದಲೆ ಕಾಲಚಕ್ರವು ನಿರಂತರ ವಾಗಿ ತಿರುಗುತ್ತಿರುವುದು. ಪ್ರಳಯ, ಯುಗ, ಕಲ್ಪ, ಸಂವತ್ಸರಾದಿ ಸಕಲ ಕಾಲಬೇಧಗಳಲ್ಲಿ ಕಾಲಾಂತರ್ಗತನಾಗಿರುವ ಆ ಶ್ರೀಪರಮಾತ್ಮನ ಚಿಂತನೆ ಯಲ್ಲಿ ಸದಾ ಮಗ್ನರಾಗಿರುವ ಉಪಾಸಕರಿಗೆ **ಸರ್ವಕಾಲವು ಪುಣ್ಯಕಾಲ** ವೆನಿಸುವುದು. **ಸಕಲಗ್ರಹಬಲ ನೀನೆ ಸರಸಿಜಾಕ್ಷ**—ಎಂಬ ಉತ್ತಮ ಜ್ಞಾನಾನುಸಂಧಾನವುಳ್ಳ ಅಂತಹ ಭಗವದ್ಭಕ್ತರಿಗೆ ಭೂತ, ವರ್ತಮಾನ, ಭವಿಷ್ಯತ್ಕಾಲಗಳೆಲ್ಲವೂ ಶುಭಕಾಲಗಳೇ. ಅವರ ಜ್ಞಾನದೃಷ್ಟಿಯಲ್ಲಿ ಅಶುಭ ಕಾಲವೆಂಬುದೇ ಇಲ್ಲ. ಜಡವಾದ ಕಾಲಕ್ಕೆ ಮಹತ್ವ ಕೊಡದೇ, ಆ ಕಾಲ ಪ್ರವರ್ತಕನಾದ ಶ್ರೀಪರಮಾತ್ಮನಲ್ಲಿಯೇ ಏಕಾಗ್ರಚಿತ್ತಉಳ್ಳ ಆ ಮಹಾತ್ಮ ರಿಗೆ ಸರ್ವಕಾಲವು ಶುಭಕಾಲವೆಂದೆನಿಸುವುವು.

೩. ಜೀವರಾಶಿಯಲ್ಲಿ ಸಾತ್ತ್ವಿಕ, ರಾಜಸ, ತಾಮಸರೆಂದು ತ್ರಿವಿಧ ಜೀವರು ವಿದ್ಯಮಾನರಾಗಿದ್ದಾರೆ. ಅವರವರ ಸ್ವರೂಪಯೋಗ್ಯತೆಗನುಗುಣ

ವಾಗಿ, ಶ್ರೀಪರಮಾತ್ಮನು ಫಲರೂಪವಾದ ಗತಿಯನ್ನು ಕೊಡುತ್ತಾನೆ. **ಅಪಾತ್ರರಲ್ಲಿ ದಾನ ಮತ್ತು ಅಯೋಗ್ಯರಿಗೆ ಉಪದೇಶ ಕೂಡದು** – ಎಂದು ಶಾಸ್ತ್ರನಿಯಮ. ಚಂಡಾಲನಾದರೂ ಹಸಿವು ನೀರಡಿಕೆಯಿಂದ ಆರ್ತ ನಾಗಿ ಬಂದಾಗ, ಅವನಿಗೆ ಅನ್ನೋದಕಗಳನ್ನೀಯಬೇಕೆಂದು ಧರ್ಮಶಾಸ್ತ್ರವು ನಿರ್ದೇಶಿಸುತ್ತದೆ. ಇಲ್ಲಿ **ಸರ್ವ**ಶಬ್ದವು ಅರ್ಥಪೂರ್ಣವಾಗಿದೆ. ಸಜ್ಜನರೂ ಮುಕ್ತಿಯೋಗ್ಯರೂ, ಶ್ರೀಹರಿಯ ಅಂತರಂಗಭಕ್ತರೂ ಆದ ಸಮಸ್ತಬ್ರಹ್ಮ ಜ್ಞಾನಿಗಳೂ ದಾನಕ್ಕೆ ಪಾತ್ರರು ಎಂದೇ ದಾಸರಾಯರ ಅಭಿಪ್ರಾಯವು. ದುರ್ಜನರೂ, ಭಗವದ್ದ್ವೇಷಿಗಳೂ, ಮಿಥ್ಯಾವಾದಿಗಳೂ ದಾನಕ್ಕೆ ಸರ್ವಥಾ ಪಾತ್ರರಲ್ಲ. **ಸರ್ವೇಜನಾಸ್ಸುಖಿನೋ ಭವಂತು** – ಎಂಬ ಪ್ರಾರ್ಥನಾ ರೂಪವಾದ ವಚನದಲ್ಲಿ **ಸರ್ವೇಜನಾಃ** – ಎಂಬ ಶಬ್ದಾರ್ಥವು **ಸಕಲ ಸಜ್ಜನರೆಂದರ್ಥ.** ದುರ್ಜನರು ಈ ಗಣನೆಗೆ ಸೇರಿಲ್ಲ. "ದುಷ್ಟರು ಸುಖಿ ವಾಗಿರಲಿ" ಎಂದು ಯಾರೂ ಪ್ರಾರ್ಥಿಸುವುದಿಲ್ಲ. ಅಂತೆಯೇ **ಸರ್ವಜೀವರು ದಾನಪಾತ್ರರು** ಎಂಬ ಶಬ್ದಕ್ಕೆ ಅರ್ಥಸಮನ್ವಯಮಾಡಬೇಕು.

೪. ಅಂತಹ ವ್ಯಾಪ್ತ್ಯೋಪಾಸಕರಾದ ಬ್ರಹ್ಮಜ್ಞಾನಿಗಳು ಆಡುವ ಮಾತುಗಳೆಲ್ಲಾ **ವೇದೋಕ್ತಮಂತ್ರಗಳು.** ಶ್ರೀಪರಮಾತ್ಮನು ಸರ್ವಶಬ್ದ ವಾಚ್ಯನು ಸರ್ವವರ್ಣವಾಚ್ಯನು. ಸಮಸ್ತಧ್ವನಿಯೂ ಅವನನ್ನೇ ಪ್ರತಿಪಾದಿಸು ವುದು. ಪ್ರತಿ ವರ್ಣ, ಪದ, ವಾಕ್ಯಗಳಲ್ಲಿ ಅಂತರ್ಯಾಮಿಯಾಗಿದ್ದು, ಅವು ಗಳಿಂದ ವಾಚ್ಯನಾಗಿ, ಅವುಗಳಿಗೆ ಅಭಿವ್ಯಂಜಕಶಕ್ತಿಪ್ರದಾನವಾಗಿರುವುದ ರಿಂದಲೇ ಉಚ್ಚಾರಣಾರೂಪವಾದ ಕ್ರಿಯೆಯ ದ್ವಾರಾ, ಶಬ್ದದ ಅಭಿವ್ಯಕ್ತಿ ಉಂಟಾಗಿ, ಅವುಗಳ ಅರ್ಥಾನುಪತ್ತಿ ನಮಗಾಗುವುದು. ಇದಕ್ಕೆ ಸರ್ವ ವರ್ಣ, ಶಬ್ದ, ವಾಚ್ಯನಾದ ಆ ಅಕ್ಷರೇಡ್ಯನ ವರ್ಣಾಭಿವ್ಯಂಜಕಶಕ್ತಿಪ್ರದತ್ವವೇ ಮುಖ್ಯಕಾರಣವು. ಈ ಮುಖ್ಯ ಜ್ಞಾನಾನುಸಂಧಾನವನ್ನರಿತ ಬ್ರಹ್ಮಜ್ಞಾನಿ ಗಳು ಆಡುವ ಮಾತುಗಳೆಲ್ಲವೂ **ವೇದಮಂತ್ರಗಳೇ** ಹೊರತು, ಲೋಕವಾರ್ತೆ ಯಲ್ಲ. ಅದು ಪರಲೋಕೈಕನಾಥನ ವಾರ್ತಾರೂಪವಾದ ವಚನಸಂದೋಹಗಳು

೫. ಅಂತಹ ಬ್ರಹ್ಮಜ್ಞಾನಿಗಳ ಸಮಸ್ತಕ್ರಿಯೆಗಳೂ **ಭಗವತ್ಪೂಜೆ ಗಳೇ** ವಿನಹ, ಅರ್ಥಪೂರ್ಣವಲ್ಲದ ಯಾಂತ್ರಿಕಕ್ರಿಯೆಗಳಲ್ಲ. ಅವರ ಅಧಿ

ಷ್ಠಾನದಲ್ಲಿ ನಡೆಯುತ್ತಿರುವ, ದಾನ-ಸ್ವೀಕಾರ, ಗಮನಾಗಮನ, ಸಕಲೇಂದ್ರಿಯಗಳ ವ್ಯಾಪಾರ, ದೈಹಿಕ, ವಾಚನಿಕ, ಮಾನಸಿಕಕ್ರಿಯಾವಿಶೇಷಗಳು, ದೈಶಿಕ, ಕಾಲಿಕ, ಭೌದ್ಧಿಕ ಸಮಸ್ತಕ್ರಿಯೆಗಳೂ ಶ್ರೀಪರಮಾತ್ಮನ ನಾನಾ ಪ್ರಕಾರವಾದ ಪೂಜಾವಿಧಾನಗಳೆನಿಸುವುವು. ಬಿಂಬಕ್ರಿಯಾದ್ವಾರಾ ನಡೆಯುತ್ತಿರುವ ಸರ್ವಕರ್ಮಗಳೂ ಭಗವದಧೀನ ಮತ್ತು ಭಗವದರ್ಪಿತವೆಂದು ಅವರ ಅನುಸಂಧಾನವು. ಈ ಕಾರಣದಿಂದ ಅವರಲ್ಲಿ ನಡೆಯುವ ಸಮಸ್ತಕ್ರಿಯಾಕಲಾಪಗಳೆಲ್ಲವೂ **ಭಗವತ್ಪೂಜೆ ಎಂದೆನಿಸುವುವು.**

೬. **ಶರ್ವ**--ಎಂದರೆ ಮಂಗಳಪ್ರದರಾದ ಶ್ರೀಮಹರುದ್ರದೇವರು ಅವರಿಂದ ವಂದ್ಯನಾಗಿರುವುದರಿಂದ, ಶ್ರೀಹರಿಯು **ಶರ್ವವಂದ್ಯನು.** ಅಂತಹ ಶರ್ವವಂದ್ಯನು ನಿರ್ದೋಷನು. ಅನಂತ ಕಲ್ಯಾಣಗುಣಗಣಧಾಮನು. ಆದ್ದರಿಂದಲೇ **ವಿಮಲಮೂರ್ತಿಯು.** ಅಂತಹ ಶರ್ವವಂದ್ಯನಾದ ವಿಮಲಮೂರ್ತಿಯ ಧ್ಯಾನವನ್ನು ಸದಾ ಮನಸ್ಸಿನಲ್ಲಿ ಉಳ್ಳವರಿಗೆ, ಸರ್ವದೇಶವೂ ಪುಣ್ಯದೇಶವು. ಸರ್ವಕಾಲವೂ ಪುಣ್ಯಕಾಲವು. ಸರ್ವಜೀವರೂ ದಾನಪಾತ್ರರು. ಸರ್ವ ಮಾತುಗಳೆಲ್ಲ ಮಂತ್ರವು. ಸರ್ವಕೆಲಸಗಳೆಲ್ಲ ಹರಿಪೂಜೆಯು. ಭಗವದ್ಧ್ಯಾನಕ್ಕೆ ಏಕಾಗ್ರಮನಸ್ಸು ಅತ್ಯಗತ್ಯ. ಶ್ರೀಮಹರುದ್ರದೇವರು ಅಂತಹ ಮನೋಭಿಮಾನಿಗಳು. ಚಂಚಲವಾದ ಮನಸ್ಸನ್ನು ಶ್ರೀಹರಿಯ ಚರಣಕಮಲಗಳಲ್ಲಿ ತೈಲಧಾರೆಯಂತೆ ಕೊಡುವ ಮಹನೀಯರು. ಇದರಿಂದ **ಶರ್ವವಂದ್ಯ** ಎಂಬ ಪದಪ್ರಯೋಗವು ಅತ್ಯಂತಸಮಂಜಸವಾಗಿದೆ. ||೪||

# ಪದ್ಯ ೫

**ಮೂಲ :**

**ದೇವಖಾತ ತಟಾಕ ವಾಪಿ ಸ |**
**ರೋವರಗಳಭಿಮಾನಿ ಸುರರು ಕ |**
**ಳೇವರದೊಳಿಹ ರೋಮಕೂಪಗಳೊಳಗೆ ತುಂಬಿಹರು |**
**ಆ ವಿಯದ್ಗಂಗಾದಿ ನದಿಗಳು |**
**ಭಾವಿಸುವುದೆಪ್ಪತ್ತೆರಡೆನಿಪ |**
**ಸಾವಿರ ಸುನಾಡಿಗಳೊಳಗೆ ಪ್ರವಹಿಸುತಲಿಹವೆಂದು ॥ ||೫||**

**ಅವತರಣಿಕೆ :**

ದೇವತೆಗಳಿಂದ ಪರ್ವತ ಪ್ರದೇಶಗಳಲ್ಲಿ ನಿರ್ಮಿತವಾಗಿರುವ ದೊಣೆಗಳು, ನೀರು ತುಂಬಿರುವ ಕೆರೆಗಳು, ಭಾವಿ, ಸರೋವರಗಳಲ್ಲಿರುವ ಉದಕಾಭಿಮಾನಿದೇವತೆಗಳು, ಸಾಧನಶರೀರವೆಂದೆನಿಸುವ ಈ ಸ್ಥೂಲದೇಹಗತ ರೋಮಕೂಪಗಳಲ್ಲಿ ವ್ಯಾಪ್ತರಾಗಿ ಹಬ್ಬಿ ಹರಡಿರುವರು. ನಮ್ಮ ದೇಹದಲ್ಲಿ ವಿದ್ಯಮಾನವಾಗಿ, ಓತಪ್ರೋತವಾಗಿ ಶರೀರದಾದ್ಯಂತ ಹರಡಿರುವ ೭೨,೦೦೦ ಸಂಖ್ಯಾಕವಾದ ಸುನಾಡಿಗಳಲ್ಲಿ ಆಕಾಶಗಂಗೆ ಎಂದು ಸುಪ್ರಸಿದ್ಧವಾಗಿರುವ ಗಂಗಾಧಿನದ್ಯಭಿಮಾನಿ ದೇವತೆಗಳು ಇರುವರು. ಜಗತ್ಪಾವನಳಾದ ಭಾಗೀರಥ್ಯಾದಿ ಸಮಸ್ತನದಿಗಳೂ ಈ ನಾಡಿಗಳಲ್ಲಿ ನಿರಂತರವೂ ಪ್ರವಹಿಸುತ್ತಲಿವೆ— ಎಂದು ತಿಳಿಸುತ್ತಾರೆ, **ದೇವಖಾತ** ಎಂಬ ಪ್ರಸಕ್ತ ಸಂಧಿಗತ ೫ನೆಯ ಈ ಪದ್ಯದಿಂದ. ||೫||

**ಪ್ರತಿಪದಾರ್ಥ :**

**ದೇವಖಾತ**＝ಪರ್ವತಾದಿಗಳಲ್ಲಿ ದೇವತೆಗಳಿಂದ ನಿರ್ಮಿತವಾದ ದೊಣೆ (ನೀರು ನಿಂತಿರುವ ಶಿಲಾವೃತ ಜಲಾಶಯಗಳು); **ತಟಾಕ**＝ದೊಡ್ಡ ಮತ್ತು

ಸಣ್ಣ ಕೆರೆಗಳು, **ವಾಪಿ**=ಇಳಿಯುವ ಭಾವಿಗಳು ಹಾಗೂ ಸೇದುವ ಭಾವಿಗಳು, **ಸರೋವರಗಳ**=ಪುಷ್ಕರಣಿಗಳ, **ಅಭಿಮಾನಿಸುರರು**=ಪೂರ್ವೋಕ್ತ ಜಲಾಶಯಗಳಲ್ಲಿರುವ ತೀರ್ಥಾಭಿಮಾನಿದೇವತೆಗಳು (ಮೂರುವರೆಕೋಟಿ ತೀರ್ಥಗಳು). **ಕಳೇವರದೊಳಿಹ**=ನಮ್ಮ ಸ್ಥೂಲದೇಹದಲ್ಲಿ ಇರತಕ್ಕ **ರೋಮಕೂಪಗಳೊಳಗೆ**=ಸೂಕ್ಷ್ಮವಾಗಿರುವ ಮೂರುವರೆಕೋಟಿ ರೋಮಗತ ರಂಧ್ರಗಳಲ್ಲಿ (ರೋಮಕೂಪ), **ತುಂಬಿಹರು**=ವ್ಯಾಪಿಸಿಕೊಂಡು ಆವಾಸವಾಗಿದ್ದಾರೆ. **ಆ ವಿಯದ್ಗಂಗಾದಿ**=ತ್ರಿವಿಕ್ರಮಾವತಾರ ಪಸಂಗದಲ್ಲಿ ದೇವರ ನಖಾಗ್ರದಿಂದ ಬ್ರಹ್ಮಾಂಡಖರ್ಪರ ಸೀಳಿದಾಗ, ಅಂಡದ ಹೊರಗಿನಿಂದ ಬಂದ ಆಕಾಶನದಿಯಾದ ಗಂಗೆ ಮತ್ತು ಇತ್ಯಾದಿ ಪುಣ್ಯನದಿಗಳು (ವಿಯದ್ಗಂಗಾ=ಆಕಾಶಗಂಗೆ) **ಎಪ್ಪತ್ತೆರಡೆನಿಪಸಾವಿರ**=೭೨,೦೦೦ ಸಂಖ್ಯಾಕವಾದ **ಸುನಾಡಿಗಳೊಳಗೆ**=ತೇಜೋಮಯವಾದ ಹಾಗೂ ಅತೀಂದ್ರಿಯವಾದ ನಾಡಿಗಳಲ್ಲಿ, **ಪ್ರವಹಿಸುತಲಿಹವು ಎಂದು**=ಪ್ರವಾಹರೂಪದಿಂದ ಹರಿಯುತ್ತಿವೆ ಎಂಬುದಾಗಿ. **ಭಾವಿಸುವುದು**=ಜ್ಞಾನಾನುಸಂಧಾನಪೂರ್ವಕ ತಿಳಿಯಬೇಕು. ॥೫॥

# ವ್ಯಾಖ್ಯಾನಗಳು

## ೧ ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :

ಈ ದೇಹ ಮಹಾಕ್ಷೇತ್ರವಾಗೋದಕ್ಕೆ ಕಾರಣವೂ, ಅಧಿಕಾರಿಯಾದವನ ತೀರ್ಥಕ್ಷೇತ್ರಗಳ ಸಂಚಾಕ್ರಮವೂ ಹೇಳುತ್ತಾರೆ.

ದೇವತೆಗಳಿಂದ ನಿರ್ಮಿತವಾದ ಪರ್ವತಾದಿಗಳಲ್ಲಿರುವ ದೊಣೆಗಳೂ ತಥಾ ಪುಷ್ಕರಣಿಗಳೂ, ದೊಡ್ಡದಾದ ಅಥವಾ ಸಣ್ಣದಾದ ಕೆರೆಗಳೂ, ಇಳಿಯೋ ಭಾವಿಗಳೂ ಹಾಂಗೆ ಸೇದೋ ಭಾವಿಗಳು, ಕುಂಟೆಗಳು ಇತ್ಯಾದಿಗಳಲ್ಲಿ ವಿದ್ಯಮಾನಗಳಾದ ಮೂರುವರೆಕೋಟಿ ತೀರ್ಥಗಳಿಗೆ ಅಭಿಮಾನಿಗಳಾದ ದೇವತೆಗಳು, ಈ ಸ್ಥೂಲದೇಹದಲ್ಲಿ ಇರತಕ್ಕ ಸಣ್ಣಸಣ್ಣದಾದ ಮೂರುವರೆ

ಕೋಟಿ ರೋಮಗತ ಕೂಪಗಳಲ್ಲಿ, ತುಂಬಿಕೊಂಡು ಆವಾಸರಾಗಿ ಇರೋವ ರಾಗಿದ್ದಾರೆ. ಆ ಎಂದರೆ, ತ್ರಿವಿಕ್ರಮದೇವರ ನಖದಿಂದ ಬ್ರಹ್ಮಾಂಡ ಸೀಳಿ ಅಂಡದ ಹೊರಗಿಂದ ಬಂದ ಆಕಾಶನದಿಯಾದ ಭಾಗೀರಥಿ ಎಂತ ನಾಮವುಳ್ಳ ಗಂಗಾನದಿಯೇನು, ಇನ್ನು ಪುರಾಣಪ್ರಸಿದ್ಧಗಳಾದ ಅನೇಕ ಪ್ರವಾಹರೂಪ ದಿಂದ ಇರುವ ನದಿಗಳು, ನದ್ಯಭಿಮಾನಿದೇವತೆಗಳು ಎಪ್ಪತ್ತೆರಡುಸಾವಿರ ನಾಡಿಗಳೊಡನೆ ಇತಸ್ತತಃ ಪ್ರವಾಹರೂಪವಾಗಿ ಸಂಚಾರಮಾಡತಾ ಅವೆ. ನದ್ಯಭಿಮಾನಿದೇವತೆಗಳೂ ಇದ್ದಾರೆ ಎಂತ ಅನುಸಂಧಾನದಿಂದ ತಿಳಿಯೋವ ನಾಗಬೇಕೆಂತ ಅರ್ಥ.

**ತಾತ್ಪರ್ಯ**—ಪ್ರತಿಪ್ರತಿ ರೋಮಕೂಪವೂ, ಪ್ರತಿಪ್ರತಿ ನಾಡಿಯೂ ತೀರ್ಥಗಳೂ ನದಿಗಳೂ ಆಗಿ ಅಲ್ಲಲ್ಲಿ ತದಭಿಮಾನಿದೇವತೆಗಳು, ತದಂತರ್ಗತ ಭಗವದ್ರೂಪಗಳು ಇರೋಣದರಿಂದ ದೇಹ ಮಹಾಕ್ಷೇತ್ರ ಎಂತ ಕರೆಸೋ ದಾಯಿತು,

**ವಿಶೇಷಾರ್ಥ**—ಅಧಿಕಾರಿಗಳಾದವರು ತೀರ್ಥ-ಕ್ಷೇತ್ರ ಸಂಚಾರ ಮಾಡುವ ಕಾಲದಲ್ಲಿ ತಮ್ಮ ದೇಹಸ್ಥತೀರ್ಥಾಭಿಮಾನಿ ನದ್ಯಭಿಮಾನಭಗವ ದ್ರೂಪಗಳನ್ನು ಅಲ್ಲಲ್ಲಿ ಅನುಸಂಧಾನರೂಪದಿಂದ ಆವಾಹನರೂಪದಿಂದ ಚಿಂತಿಸಿ, ಸ್ನಾನಾದಿಗಳ ಮಾಡಬೇಕು. ಈ ಪ್ರಕಾರ ಮಾಡುವವರಿಗೆ ತೀರ್ಥ ಕ್ಷೇತ್ರಸಂಚಾರಫಲ ಬರೋದಾಗತದೆ. ಇಲ್ಲದಿದ್ದರೆ ಜಲಸ್ಥನಕ್ರಾದಿ ಜಂತು ಗಳು ಸದಾ ಸ್ನಾನಮಾಡಿದಂತೆ ಫಲ ಎಂತ ತಾತ್ಪರ್ಯ, ॥ ೫ ॥

**೨ ಭಾವಪ್ರಕಾಶಿಕೆ :**

ಈ ಶರೀರದಲ್ಲಿಯೇ ತೀರ್ಥಕ್ಷೇತ್ರಾಭಿಮಾನಿಗಳಾದ ದೇವತೆಗಳಿರುವ ರೆಂದು ಹೇಳುತ್ತಾರೆ.

ದೊಣೆ, ಕೆರೆ, ಭಾವಿ, ಕುಂಟೆ, ಮೊದಲಾದವುಗಳಿಗೆ ಅಭಿಮಾನಿ ದೇವತೆಗಳು ನಮ್ಮ ದೇಹದೊಳಗಿನ ರೋಮಕೂಪಗಳಲ್ಲಿ ವ್ಯಾಪಿಸಿಕೊಂಡಿರು

ಕೊಂಡಿರುವರು. ಸಾಧಾರಣ ನದೀ ಮೊದಲು ಆಕಾಶಗಂಗೆಯವರೆವಿಗೂ ಇರುವ ನದಿಗಳೆಲ್ಲವು ನಮ್ಮ ಶರೀರದ ೭೨,೦೦೦ ನಾಡಿಗಳಲ್ಲಿರುವುವು ಎಂದು ಭಾವಿಸಬೇಕು. ಪರಮಾತ್ಮನ ರೋಮಕೂಪಗಳಲ್ಲಿ ಭಾವಿ, ಕೆರೆ ಮೊದಲಾದ ತೀರ್ಥಾಭಿಮಾನಿದೇವತೆಗಳೂ, ಪರಮಾತ್ಮನ ವಿರಾಡ್ರೂಪದೇಹದಲ್ಲಿ ನಾಡಿಗಳಲ್ಲಿ ನದಿಗಳು ಪ್ರವಹಿಸುತ್ತಿರುವುವು. ಆ ಪರಮಾತ್ಮನು ನಮ್ಮ ಶರೀರದಲ್ಲಿರುವುದರಿಂದ, ನಮ್ಮ ದೇಹಗಳಲ್ಲಿಯೂ ಇರುವುವು ಎಂದು ತಾತ್ಪರ್ಯ. ॥೫॥

**೩ ಭಾವದರ್ಪಣ ಟೀಕಾ :**

ದೇವಖಾತಾದಿಗಳಭಿಮಾನಿ ದೇವತೆಗಳು ಸ್ವದೇಹಸ್ಥ ರೋಮಕೂಪ ಗಳಲ್ಲಿಯೂ, ನಾಡಿಗಳಲ್ಲಿಯೂ ಇದ್ದಾರೆಂದು ಹೇಳುತ್ತಾರೆ--**ದೇವಖಾತೇತಿ**॥ ಗುಡ್ಡದ ಮೇಲಿನ ದೊಣೆ ಎಂಬರ್ಥ. ತಟಾಕ-ಕೆರೆ. ವಾಪಿ-ಇಳಿಯೋ ಭಾವಿ. ॥೫॥

**೪ ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತಮೂಲ) :**

"ದೇವ"-ಇತಿ॥ "ಅಂಶದ್ವಯೇನ ದೇವಾಶ್ಚ ಗಂಗಾದ್ಯಾಃ ಸರಿತಃ ತಥಾ॥ ರೋಮಕೂಪಂ ಗತಾಸ್ತ್ವಾದ್ಯಾಃ ದ್ವಾಸಪ್ತತಿಸುನಾಡಿಗಾಃ ॥"- ಇತಿ **ನಾಡೀಕಲ್ಪಲತಾಯಾಮ್** ॥೫॥

**ಕನ್ನಡಾರ್ಥ :**

ಸಕಲತೀರ್ಥಾಭಿಮಾನಿ ದೇವತೆಗಳು ಈ ಶರೀರದ ರೋಮಕೂಪ ಗಳಲ್ಲಿಯೂ, ೭೨,೦೦೦ ನಾಡಿಗಳಲ್ಲಿಯೂ ಇರುತ್ತಾರೆಂದು ಈ ಪದ್ಯದಿಂದ ಹೇಳುತ್ತಾರೆ. "ಗಂಗಾದಿನದೀ, ದೇವತೆಗಳೂ, ತೀರ್ಥಾಭಿಮಾನಿ ದೇವತೆಗಳೂ ಎರಡು ಅಂಶಗಳಿಂದ ರೋಮಕೂಪಗಗಲ್ಲಿಯೂ ೭೨,೦೦೦ ನಾಡಿಗಳಲ್ಲಿಯೂ ಇರುತ್ತಾರೆ." ಎಂದು **ನಾಡೀಕಲ್ಪಲತಾ** ಎಂಬ ಗ್ರಂಥ ದಲ್ಲಿ ಉಕ್ತವಾಗಿದೆ. ॥೫॥

**೫. ಶ್ರೀಗುರುಹೃದಯಪ್ರಕಾಶಿಕೆ :**

ವಾಪಿ–ಭಾವಿ, ಕೂಪ–ದೇವಖಾತಗಳೆಂಬ ಭಾವಿ, ಕುಂಟೆ (ಡೊಣೆ), ಸರೋವರಗಳೇ ಮೊದಲಾದ್ದರ ಅಭಿಮಾನಿಗಳು ಶರೀರರೋಮಗಳಲ್ಲಿರುವ ರೆಂತಲೂ, ಎಪ್ಪತ್ತೆರಡುಸಹಸ್ರನಾಡಿಗಳಲ್ಲಿ ಗಂಗಾದಿನದಿಗಳ ಭಾವನೆ ಸಹ ಕೆಲವರು ಮಾಡುತ್ತಾರೆಂದು ತಿಳಿಸುತ್ತಾರೆ. ದೇವಖಾತವೆಂಬ ಡೊಣೆ, ತಟಾಕವೆಂಬ ಕೆರೆ, ವಾಪಿ ಎಂಬ ಕುಂಟೆ, ಸರೋವರಗಳೆಂಬ ಕೊಳ ಮುಂತಾದ್ದಕ್ಕೆ ತೀರ್ಥಾಭಿಮಾನಿದೇವತೆಗಳು ಮನುಷ್ಯನ ಶರೀರದಲ್ಲಿ ಮೂರುವರೆಕೋಟಿ ರೋಮಗಳಲ್ಲಿ ತುಂಬಿರುವರು. ದೇಹದೊಳಗಿರುವ ಎಪ್ಪತ್ತೆರಡುಸಾವಿರ ನಾಡಿಗಳಲ್ಲಿ ಆ ವಿಯದ್ಗಂಗೆ ಎಂದರೆ ಭಾಗೀರಥ್ಯಾದಿ ಸಮಸ್ತ ನದಿಗಳ ಅಭಿಮಾನಿಗಳೂ ಇರುವರೆಂದು ಚಿಂತಿಸಬೇಕೆಂದರ್ಥ.

**ಪ್ರಮಾಣ–ತಿಸ್ರಃಕೋಟ್ಯರ್ಧಕೋಟಿಶ್ಚ ದೇಹರೋಮಸು ಮಾನುಷೇ। ದ್ವಿಸಪ್ತತಿಸಹಸ್ರಾಶ್ಚ ನಾಡ್ಯಸ್ಸಂತಿ॥** ಇತ್ಯಾದಿ **ಆಧ್ಯಾತ್ಮ ಮಾಲಾರ್ಥ** ವಿವರಿಸಲ್ಪಟ್ಟಿತು. ॥೫॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಪರ್ವತಪ್ರದೇಶಗಳಲ್ಲಿಯೂ, ಬೆಟ್ಟಗಳಲ್ಲಿಯೂ, ನೀರು ನಿಂತಿರುವ ದೊಣೆಗಳಿಂದ ಜಲಾಶಯಗಳಿಗೆ **ದೇವಖಾತ**ಗಳೆಂದು ಹೆಸರು. ಬಂಡೆಗಳ ಮೇಲೆ ಬೀಳುವ ಮಳೆಯ ನೀರು ಶಿಲೆಗಳ ಮಧ್ಯೆ ಸಂಗ್ರಹವಾಗಿ, ಇಂತಹ ದೊಣೆಗಳು ಉಂಟಾಗಿರುವುವು. ಆಯಾಯ ಪುಣ್ಯಕ್ಷೇತ್ರಗಳಿಗೆ ಸಂಬಂಧಿಸಿದಂತೆ, ಇರುವ ಸ್ಥಳಪುರಾಣಗಳಲ್ಲಿ, ಅಂತಹ ಜಲಾಶಯಗಳು ದೇವತೆಗಳಿಂದ ನಿರ್ಮಿತವಾಗಿವೆ ಎಂದು ವಿವರಗಳು ತಿಳಿದುಬರುತ್ತವೆ. ಈ ಕಾರಣದಿಂದ ಇಂತಹ ದೊಣೆಗಳಿಗೆ **ದೇವಖಾತ** ಎಂದು ಅಭಿಧಾನ.

೨. ಪ್ರಾಚೀನ ರಾಜರುಗಳಿಂದಲೂ, ಮತ್ತು ಪರಮೋದಾರಿಗಳಾದ ಶ್ರೀಮಂತರಿಂದಲೂ ಕಟ್ಟಲ್ಪಟ್ಟ ಸಣ್ಣ ಹಾಗೂ ದೊಡ್ಡ ಕೆರೆಗಳಿಗೆ **ತಟಾಕ** ಎಂದು ಹೆಸರು.

೩. ಮೆಟ್ಟಿಲುಗಳಿರುವ ಇಳಿಯುವ ಭಾವಿಗಳು ಮತ್ತು ಸೇದುವ ಭಾವಿಗಳಿಗೆ **ವಾಪಿ** ಎಂದು ಹೆಸರು.

೪. ಅನೇಕ ದೇವಾಲಯಗಳ ಆವರಣಪ್ರದೇಶದಲ್ಲಿ ನಿರ್ಮಿತವಾಗಿರುವ ಕಲ್ಯಾಣಿ ಅಥವಾ ಪುಷ್ಕರಣಿಗಳಿರುವುವು. ಅಂತಹ **ಸರೋವರಗಳಲ್ಲಿ** ಇಳಿದು ಸ್ನಾನ ಮಾಡಲು ಅನುಕೂಲವಾಗುವಂತೆ, ಸೋಪಾನಗಳನ್ನು ನಿರ್ಮಿಸಿರುವರು.

೫. ಇಂತಹ ದೇವಖಾತ, ತಟಾಕ, ವಾಪಿ ಮತ್ತು ಸರೋವರ ಇತ್ಯಾದಿಜಲಾಶಯಗಳಲ್ಲಿ ಎಸಗುವ ಸ್ನಾನ, ಆಹ್ನೀಕಾದಿ ಸತ್ಕರ್ಮಗಳು, ಪಿತೃಕಾರ್ಯಗಳು ಇತ್ಯಾದಿಕರ್ಮಗಳು ಪುಣ್ಯಕ್ಷೇತ್ರಗಳಲ್ಲಿ ವಿಧ್ಯುಕ್ತವಾಗಿ ಮಾಡುವ ಪುಣ್ಯಕರ್ಮಗಳೆಂದೆನಿಸುವುವು. ಇಂತಹ ಜಲಾಶಯಗಳಲ್ಲಿ ಇರುವ ಪುಣ್ಯತೀರ್ಥ ಹಾಗೂ ಆ ತೀರ್ಥಾಭಿಮಾನಿದೇವತೆಗಳು ಸ್ಥೂಲ ದೇಹದಲ್ಲಿ ವಿದ್ಯಮಾನರಾಗಿದ್ದಾರೆಂದು ತಿಳಿಸುತ್ತಾರೆ.

೬. ಈ ಸ್ಥೂಲದೇಹವು (**ಕಳೇವರದೊಳಿಹ**) ಸಾಧನಶರೀರವೆಂದು ಜ್ಞಾನಿಗಳ ಮತ. ಈ ಶರೀರದಲ್ಲಿ ಮೂರುವರೆಕೋಟಿ ರೋಮಕೂಪಗಳಿವೆ. ಇಂತಹ ಶರೀರಗತ ಸರ್ವತ್ರ ಹರಡಿರುವ ರೋಮಕೂಪಗಳಲ್ಲಿ ಸಕಲತೀರ್ಥಗಳು ಮತ್ತು ತೀರ್ಥಾಭಿಮಾನಿದೇವತೆಗಳು ಹಬ್ಬಿ ಹರಡಿಕೊಂಡಿರುವರು.

**ಪ್ರಮಾಣ :**

**"ತಿಸ್ರಃ ಕೋಟ್ಯೈರ್ಥಕೋಟಿಶ್ಚ ದೇಹರೋಮಸು ಮಾನುಷೇ ।**
**ದ್ವಿಸಪ್ತತಿಸಹಸ್ರಾಶ್ಚ ನಾಡ್ಯಸ್ಸಂತಿ"॥**

**ಅಧ್ಯಾತ್ಮಮಾಲಾರ್ಥ ವಚನ**

ಅಂದರೆ, ನಮ್ಮ ದೇಹದಲ್ಲಿರುವ ರೋಮಕೂಪಗಳಲ್ಲಿ ಮೂರುವರೆಕೋಟಿ ತೀರ್ಥಗಳೂ ಮತ್ತು ಆ ತೀರ್ಥಾಭಿಮಾನಿದೇವತೆಗಳೂ ಆವಾಸ

ವಾಗಿದ್ದಾರೆ. (ತಿಸ್ರಃಕೋಟಿ=ಮೂರುಕೋಟಿ. ಅರ್ಧಕೋಟಿಶ್ಚ=ಅರ್ಧ ಕೋಟಿ ಅಂದರೆ ಮೂರುವರೆಕೋಟಿ ಎಂಬರ್ಥ.)

ಅಲ್ಲದೆ, ದ್ವಿಸಪ್ತತಿ=೭೦+೨=೭೨. ಸಹಸ್ರಾಶ್ಚ=೭೨,೦೦೦ ಸಂಖ್ಯಾಕವಾದ ನಾಡಿಗಳಲ್ಲಿ ಆಕಾಶಗಂಗೆ ಎಂದು ಪ್ರಸಿದ್ಧವಾದ **(ವಿಯದ್ಗಂಗಾದಿ)** ಗಂಗಾದಿ ಪವಿತ್ರ ನದಿಗಳೂ ಮತ್ತು ಆಯಾಯ ನದ್ಯಭಿಮಾನಿದೇವತೆಗಳೂ ನಮ್ಮ ಸ್ಥೂಲಶರೀರದಲ್ಲಿ ಓತಪ್ರೋತವಾಗಿ ಹಬ್ಬಿಹರಡಿರುವ ೭೨,೦೦೦ ನಾಡಿಗಳಲ್ಲಿ ವಿದ್ಯಮಾನರಾಗಿದ್ದಾರೆ.

೭. ನಮ್ಮ ಶರೀರಗತರೋಮಕೂಪಗಳಲ್ಲಿ ಮೂರುವರೆಕೋಟಿ ಸಂಖ್ಯಾಕವಾದ ತೀರ್ಥಗಳೂ ಮತ್ತು ತೀರ್ಥಾಭಿಮಾನಿದೇವತೆಗಳೂ ೭೨,೦೦೦ ನಾಡಿಗಳಲ್ಲಿ ಲೋಕಪಾವನೆಯಾದ ಗಂಗಾದಿಸಮಸ್ತಪುಣ್ಯನದಿಗಳೂ ಹರಿಯುತ್ತಿವೆ ಮತ್ತು ಆ ನಾಡಿಗಳು ಆಯಾಯ ನದ್ಯಭಿಮಾನಿದೇವತೆಗಳಿಗೆ ಆವಾಸಸ್ಥಾನಗಳಾಗಿವೆ. ಇಂತಹ ರೋಮಕೂಪಗಳಲ್ಲಿ ಬಿಂಬರೂಪಿಯಾದ ಶ್ರೀಪರಮಾತ್ಮನು ಮೂರುವರೆಕೋಟಿರೂಪಗಳಿಂದ ಆ ತೀರ್ಥಾಭಿಮಾನಿದೇವತೆಗಳಲ್ಲಿ ಅಂತರ್ಯಾಮಿಯಾಗಿದ್ದಾನೆಂದೂ, ೭೨,೦೦೦ ನಾಡೀಗತ ನದ್ಯಭಿಮಾನಿದೇವತೆಗಳಲ್ಲಿ ನಿಯಾಮಕನಾಗಿದ್ದಾನೆಂತಲೂ ಬ್ರಹ್ಮಜ್ಞಾನಿಗಳು ಉತ್ತಮಜ್ಞಾನಾನುಸಂಧಾನದಿಂದ ಭಾವಿಸುತ್ತಾರೆ ಎಂದು ತಿಳಿಸುತ್ತಾರೆ.

೮. ಜ್ಞಾನಿಗಳು ಇದ್ದಲ್ಲಿಯೇ ತಮ್ಮ ಶರೀರಗತ ಸಮಸ್ತತೀರ್ಥಾಭಿಮಾನಿ ಮತ್ತು ನದ್ಯಭಿಮಾನಿದೇವತೆಗಳನ್ನೂ ಹಾಗೂ ಅವರಂತರ್ಗತಭಗವದ್ರೂಪಗಳನ್ನೂ ಅನವರತ ಚಿಂತಿಸುತ್ತಾ, ಆ ಪುಣ್ಯಕ್ಷೇತ್ರಗತತೀರ್ಥಗಳಲ್ಲಿ ಸ್ನಾನಮಾಡಿದ ಫಲವನ್ನು ಹೊಂದುವರು. ಇಂತಹ ಪವಿತ್ರತೀರ್ಥ, ನದಿಗಳಿಂದ ವಿದ್ಯಮಾನವಾದ ಈ ಶರೀರವೂ ಯಾವಾಗಲೂ ಪವಿತ್ರವೇ ಸರಿ. ಮೈಲಿಗೆ ಎಂಬುದೇ ಇಲ್ಲ. ॥೫॥

# ಪದ್ಯ ೬

**ಮೂಲ :**

**ಮೂರುಕೋಟಿಯು ವ್ಯಾಲಿ ಶೋಭಿಪ**
**ಈರಧಿಕ ಎಪ್ಪತ್ತು ಸಾವಿರ**
**ಮಾರುತಾಂತರ್ಯಾಮಿ ಮಾಧವ ಪ್ರತಿದಿವಸದಲ್ಲಿ ॥**
**ತಾ ರಮಿಸುತಿಹನೆಂದು ತಿಳಿದಿಹ ।**
**ಸೂರಿಗಳೆ ದೇವತೆಗಳವರ ಶ ।**
**ರೀರಗಳೆ ಸುಕ್ಷೇತ್ರ ಅವರರ್ಚನೆಯೆ ಹರಿಪೂಜೆ ॥** ॥೬॥

**ಅವತರಣಿಕೆ :**

ಸಾಧನಶರೀರವೆಂದೆಂದಿನಿಸಿರುವ ಈ ಸ್ಥೂಲದೇಹದಲ್ಲಿ ಮೂರವರೆ ಕೋಟಿ ರೋಮಕೂಪಗಳಿವೆ. ಎಪ್ಪತ್ತೆರಡುಸಾವಿರಸಂಖ್ಯಾಕವಾದ ನಾಡಿಗಳು ದೇಹಾದ್ಯಂತ ಹಬ್ಬಿ ಹರಡಿವೆ. ಇಂತಹ ಮೂರುವರೆಕೋಟಿ ರೋಮಕೂಪಗಳಲ್ಲಿ ಪುಣ್ಯತೀರ್ಥಗಳು ಮತ್ತು ತೀರ್ಥಾಭಿಮಾನಿದೇವತೆಗಳಿದ್ದಾರೆ. ನಾಡಿಗಳಲ್ಲಿ ಗಂಗಾದಿಪುಣ್ಯನದಿಗಳು ಪ್ರವಹಿಸುತ್ತಲಿರುವುವು. ತೀರ್ಥಾಭಿಮಾನಿದೇವತೆಗಳಲ್ಲಿ ಹಾಗೂ ನದ್ಯಭಿಮಾನಿದೇವತೆಗಳಲ್ಲಿ ಶ್ರೀಭಾರತೀರಮಣಮುಖ್ಯಪ್ರಾಣರ ಅಂತರ್ಯಾಮಿಯಾಗಿ, ಶ್ರೀಲಕ್ಷ್ಮೀರಮಣನಾದ ಪರಮಾತ್ಮನು ವಿಹರಿಸುತ್ತಾ ದೇಹದ ದ್ವಾರಾ, ಸಮಸ್ತಕ್ರಿಯಾವಿಶೇಷಗಳನ್ನು ತಾನೇ ಮಾಡಿ ಮಾಡಿಸುತ್ತಿರುವನು. ಈ ತತ್ತ್ವರಹಸ್ಯವನ್ನು ತಿಳಿದವರೇ ಬ್ರಹ್ಮಜ್ಞಾನಿಗಳು. ಅಂತಹವರ ಶರೀರವೇ ಪುಣ್ಯಕ್ಷೇತ್ರಗಳು. ಅವರನ್ನು ಪೂಜಿಸುವುದೇ ಶ್ರೀಹರಿಯ ಪೂಜೆ ಎಂಬ ಉತ್ತಮ ಜ್ಞಾನಾನುಸಂಧಾನವನ್ನು ತಿಳಿಸುತ್ತಾರೆ. **ಮೂರುಕೋಟಿಯುವ್ಯಾಲಿ**– ಎಂಬ ಪ್ರಸಕ್ತಸಂಧಿಗತ ೬ನೆಯ ಈ ಪದ್ಯದಿಂದ ॥೬॥

**ಪ್ರತಿಪದಾರ್ಥ :**

**ಮೂರುಕೋಟಿಯು ಮ್ಯಾಲೆ**=ಮೂರುಕೋಟಿಯನ್ನು ಮೀರಿದ, ಅಂದರೆ ಮೂರುವರೆಕೋಟಿ ಸಂಖ್ಯಾಕವಾದ ಈ ಶರೀರಗತರೋಮಕೂಪಗಳಿಲ್ಲಿ, **ಈರಧಿಕಎಪ್ಪತ್ತುಸಾವಿರ**=ಈರಧಿಕ ಎಂದರೆ ಎರಡು ಅಧಿಕವಾಗಿರುವ ಎಪ್ಪತ್ತುಸಾವಿರ, ಅಂದರೆ ೭೨,೦೦೦ ಸಂಖ್ಯಾಕವಾದ ಈ ಶರೀರಗತನಾಡಿಗಳಲ್ಲಿ **ಶೋಭಿಪ**=ಶೋಭಾಯಮಾನವಾಗಿರುವ ತೀರ್ಥಾಭಿಮಾನಿ ಹಾಗೂ ನದ್ಯಭಿಮಾನಿದೇವತೆಗಳಲ್ಲಿ **ಮಾರುತಾಂತರ್ಯಾಮಿ** =ಶ್ರೀಮುಖ್ಯಪ್ರಾಣದೇವರ ಅಂತರ್ಗತನಾಗಿ, **ಮಾಧವ**=ಲಕ್ಷ್ಮೀಪತಿಯಾದ ಮಾಧವನಾಮಕ ಶ್ರೀಪರಮಾತ್ಮನು **ಪ್ರತಿದಿವಸದಲ್ಲಿ**=ಪ್ರತಿನಿತ್ಯವೂ (ನಿರಂತರದಲ್ಲಿ), **ತಾರಮಿಸುತಿಹನೆಂದು**=ತಾನೇ ಬಿಂಬಕ್ರಿಯಾದ್ವಾರಾ ಕ್ರೀಡೆಯಾಡುತ್ತಿದ್ದಾನೆಂದು **ತಿಳಿದಿಹ**=ರೋಮಕೂಪಗತತೀರ್ಥಗಳು ಮತ್ತು ತೀರ್ಥಾಭಿಮಾನಿದೇವತೆಗಳಲ್ಲಿ ಮತ್ತು ನಾಡ್ಯಂತರ್ಗತಪುಣ್ಯನದಿಗಳು ಮತ್ತು ನದ್ಯಭಿಮಾನಿದೇವತೆಗಳಲ್ಲಿ ಅಂತರ್ಯಾಮಿಯಾಗಿ ಕ್ರೀಡಿಸುತ್ತಿರುವನೆಂದು ಜ್ಞಾನಾನುಸಂಧಾನದಿಂದ ಅರಿತು, ಅನುಷ್ಠಾನ ಮಾಡುತ್ತಿರುವ ಭಗವದ್ಭಕ್ತರೇ, **ಸೂರಿಗಳೆ**=ಬ್ರಹ್ಮಜ್ಞಾನಿಗಳೇ, **ದೇವತೆಗಳು**=ದೇವತೆಗಳೇ ಸರಿ, **ಅವರ ಶರೀರಗಳೆ**=ಅಂತಹವರ ದೇಹಗಳೇ, **ಸುಕ್ಷೇತ್ರ**=ಮಹತ್ತರವಾದ ಪುಣ್ಯಕ್ಷೇತ್ರಗಳೆಂದೆನಿಸುವುವು, **ಅವರ ಅರ್ಚನೆಯೆ**=ಅಂತಹವರ ಸೇವಾರೂಪವಾದ ಪೂಜೆಯೇ, **ಹರಿಪೂಜೆ**=ಅವರ ಅಂತರ್ಯಾಮಿಯಾದ ಹರಿಗೆ ಪೂಜೆ ಎಂದು ಅನುಸಂಧಾನವು. ॥೬॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಈ ಪ್ರಕಾರ ಅನುಸಂಧಾನ ಮಾಡತಕ್ಕವರು ಬ್ರಹ್ಮಜ್ಞಾನಿಗಳು ಅಂತ ಹೇಳತಾರೆ.

ಮೂರೂವರೆಕೋಟಿ ರೋಮಗಳ ಮೂಲಸ್ಥಾನಗತರೂಪಗಳು, ಎಪ್ಪತ್ತೆರಡುಸಾವಿರ ನಾಡಿಗಳು ಈ ಪ್ರಕಾರ ಇರತಕ್ಕ ರೋಮಕೂಪಗಳಲ್ಲಿ, ನಾಡಿಗಳಲ್ಲಿ ಶ್ರೀಪ್ರಧಾನವಾಯುದೇವರು ಒಂದೊಂದರಲ್ಲಿ ಒಂದೊಂದು ರೂಪದ ಮ್ಯಾರೆ ಎಪ್ಪತ್ತೆರಡುಸಾವಿರ ನಾಡಿಗಳಲ್ಲಿ, ಮೂರೂವರೆಕೋಟಿ ರೋಮಕೂಪಗಳಲ್ಲಿ ಪ್ರಕಾಶಮಾನರಾಗಿ ಇದ್ದಾರೆ. ಈ ವಾಯುದೇವರ ಅಂತರ್ಗತನಾದ ಲಕ್ಷ್ಮೀಪತಿಯಾದ ಮಾಧವನಾಮಕ ಪರಮಾತ್ಮ ಪ್ರತಿದಿನ ದಲ್ಲೂ ತಾನು ರಮಾಸಮೇತನಾಗಿ ಪರಿವಾರರಾದ ಸರ್ವದೇವತಾ ಸಮೇತ ನಾಗಿ, ಅಲ್ಲಲ್ಲಿ ಇರತಕ್ಕ ತೀರ್ಥಗಳಲ್ಲಿ, ನದಿಗಳಲ್ಲಿ ವಿಹಾರಮಾಡತಾ ಜಲಾಕಾರ ದಿಂದಲೂ ಮತ್ತು ಮತ್ಸ್ಯಾದಿರೂಪದಿಂದಲೂ ಇರತಾನೆ, ಎಂತ ತಿಳಿದು ಅನುಷ್ಠಾನ ಮಾಡತಾ ಇರತಕ್ಕ ಭಗವದ್ಭಕ್ತರಾದ ಜ್ಞಾನಿಗಳೇ ದೇವತೆಗಳು. ಇವರು ಸಾಧನಾರ್ಥವಾಗಿ ಮಾನುಷತ್ವೇನ ಅವತಾರ ಮಾಡಿದವರು, ಮನುಷ್ಯರಲ್ಲ. ಇಂಥಾ ಅನುಸಂಧಾನವುಳ್ಳವರ ಶರೀರ ಮಹಾಕ್ಷೇತ್ರ ಎಂತ ಕರಿಸತದೆ, ಇಂಥಾ ಭಗವದ್ಭಕ್ತರು ಇರತಕ್ಕ ಸ್ಥಾನಗಳಿಗೆ ನಡೆದು ಹೋಗೋಣವೇ ತೀರ್ಥಕ್ಷೇತ್ರಯಾತ್ರೆ. ಅವರಲ್ಲೇ ಪರಮಾತ್ಮನ್ನ ತಿಳಿದು ಪೂಜಾದಿಗಳನ್ನು ಮಾಡೋಣವೇ ಕ್ಷೇತ್ರಗತದೇವತೆಗಳ ಭಗವನ್ಮೂರ್ತಿಗಳ ಪೂಜಾ. ಅವರಿಗೆ ಭೋಜನಾದಿಗಳು ಮಾಡಿಸೋಣವೇ ಯಾತ್ರಾನಂತರ ಬ್ರಾಹ್ಮಣ ಭೋಜನ. ಅವರ ಪಾದೋದಕ ಶಿರಸಾಧಾರಣವೇ ಸಮಸ್ತ ತೀರ್ಥಸ್ನಾನ. ಸಮಸ್ತತೀರ್ಥಾಭಿಮಾನಿಗಳೂ ಅವರ ಪಾದಾಶ್ರಿತರಾಗಿ ಇರುತ್ತಾರೆ. ಸರ್ವತೀರ್ಥಗಳು ಕ್ಷೇತ್ರಗಳು ಅವರ ಶರೀರದಲ್ಲೇ ಇರೋಣದ ರಿಂದ, ಸರ್ವತೀರ್ಥಕ್ಷೇತ್ರಯಾತ್ರೆ, ಅಲ್ಲಲ್ಲಿ ಸ್ನಾನಾದಿಗಳು ಮಾಡಿದ ಫಲ ಬರೋದಾಗತದೆ.

**ತಾತ್ಪರ್ಯ**-- ಪ್ರತಿ ರೋಮಕೂಪವೂ, ಪ್ರತಿನಾಡಿಯೂ ಕ್ಷೇತ್ರ ಗಳಾಗಿ, ತದ್ಗತ ನದಿಗಳೂ ತೀರ್ಥಗಳೂ ಕ್ಷೇತ್ರಗತ ತೀರ್ಥಗಳಾಗಿ, ತದ್ಗತ ಮಾಧವನಾಮಕ ಪರಮಾತ್ಮ ಕ್ಷೇತ್ರಮೂರ್ತಿ ಆಗಿದ್ದಾನೆ. ಇತ್ಯಾದಿ ತೀರ್ಥ ಗಳಿಂದ ಯುಕ್ತವಾಗಿದ್ದ ದೇಹ ಕ್ಷೇತ್ರ ಎಂತ ಕರಿಸೋದಾಯಿತು. ಅನು ಸಂಧಾತೃಗಳು ಪ್ರತಿದಿನದಲ್ಲೂ ಈ ಕ್ಷೇತ್ರಗಳಲ್ಲಿ ಮನಸ್ಸು ಗಮನಾಗಮನಾದಿ

ಗಳಿಂದ ಸಂಚಾರ ಮಾಡಿಸಿ ಆಯಾ ತೀರ್ಥನದಿಗಳಲ್ಲಿ ಸ್ನಾನಾದಿಮಾಡಿ, ಕ್ಷೇತ್ರ ಮೂರ್ತಿದರ್ಶನ ಮಾಡಿ, ಮನೋಮೂರ್ತಿಗಳ ಮನಸ್ಥಾನ ಸೇರಿಸಿ, ತಾನು ಭೋಜನ ಮಾಡಿದ್ದು ಯಾವತ್ತೂ, ಭೋಜನರಸವಿಭಾಗಸಂಧಿಯಲ್ಲಿ ಉಕ್ತ ಕ್ರಮಕ್ಕೆ ದೇವತೆಗಳಿಗೆ ನಿವೇದನರೂಪದಿಂದ ಬ್ರಾಹ್ಮಣಭೋಜನ ಮಾಡಿಸ ಬೇಕು. ಸರ್ವವೂ ಮನಸ್ಸಿನಿಂದ ನಿರ್ಮಿತಮಾಡಿ ಅಂತರ್ಗತನ ತಿಳಿದು ಅನುಸಂಧಾನ ಮಾಡಿದ್ದರಿಂದ, ಸರ್ವಯಾತ್ರಾ ಪ್ರತಿದಿನದಲ್ಲೂ ಮಾಡಿದವ ನಾಗಿ ಮಹಾ ಪುಣ್ಯಕ್ಕೆ ಪಾತ್ರನಾಗಿ ಭಗವದನುಗ್ರಹಕ್ಕೆ ಯೋಗ್ಯನಾಗತಾನೆ ಎಂತ ತಾತ್ಪರ್ಯ.

**ವಿಶೇಷಾರ್ಥ :**

**ಪ್ರಮಾಣ–ಯದೀಚ್ಛಸಿ ಮಹಾರಾಜ ಸರ್ವತೀರ್ಥಾವಗಾಹನಂ ।**
**ವಿಪ್ರಪಾದವಿನಿರ್ಮುಕ್ತಂ ತೋಯಂ ಶಿರಸಿ ಧಾರಯ ಇತಿ ॥**
॥ ೬ ॥

**೨ ಭಾವಪ್ರಕಾಶಿಕೆ :**

ಮೇಲಿನ ಪದ್ಯದಲ್ಲಿ ಹೇಳಿದ ಪ್ರಕಾರ ರೋಮಕೂಪನಾಡಿಗಳಲ್ಲಿರುವ ನದೀ ಮೊದಲಾದ ಅಭಿಮಾನಿದೇವತೆಗಳಲ್ಲಿ ಮುಖ್ಯಪ್ರಾಣಾಂತರ್ಗತ ಪರಮಾತ್ಮನ ರೂಪಗಳನ್ನು ಚಿಂತಿಸುವವರನ್ನು ಭೂಲೋಕದಲ್ಲಿ ದೇವತೆಗಳಂತೆ ಭಾವಿಸಬೇಕೆಂದು ಹೇಳುತ್ತಾರೆ.

ಡೊಣೆ ಮೊದಲಾದವುಗಳಭಿಮಾನಿದೇವತೆಗಳು ೩ ಕೋಟಿಯಮೇಲೆ ಇರುವರು. ೭೨ ಸಾವಿರ ನಾಡಿಗಳಲ್ಲಿ ಅಷ್ಟು ನದಿಗಳ ಅಭಿಮಾನಿಗಳು ಇರುವರು. ಇವು ಇಷ್ಟರಲ್ಲಿ ಭಾರತೀರಮಣಮುಖ್ಯಪ್ರಾಣಾಂತರ್ಗತನಾಗಿ ಮೂರುಕೋಟಿಯೂ, ೭೨ ಸಹಸ್ರರೂಪಗಳಿಂದ ರೋಮಕೂಪಗಳು, ನಾಡಿ ಗಳು ಇವುಗಳಲ್ಲಿ ಸಂತೋಷದಿಂದ ಪರಮಾತ್ಮನು ಕ್ರೀಡಿಸುತ್ತಿರುವನೆಂದು ತಿಳಿದವರನ್ನು ಭೂಲೋಕದಲ್ಲಿ ದೇವತೆಗಳೆಂದೇ ಭಾವಿಸಬೇಕು. ಇಂತಹಾ

ಮಹಾತ್ಮರ ದೇಹಗಳೇ ಉತ್ತಮಕ್ಷೇತ್ರ. ಇವರ ಪೂಜೆಯನ್ನು ಮಾಡಿದರೆ ಹರಿಯು ತನ್ನನ್ನು ಪೂಜಿಸಿದಂತೆ ಸುಪ್ರೀತನಾಗುವನು. ॥ ೬ ॥

**೩ ಭಾವದರ್ಪಣಟೀಕಾ :**

ದೇಹಸ್ಥ ತೀರ್ಥಗಳಲ್ಲಿ ನಾಡಿಗಳಲ್ಲಿದ್ದ ವಾಯ್ವಂತರ್ಯಾಮಿ ಶ್ರೀಹರಿಯ ರೂಪ ಚಿಂತಿಸುವ ಜನರೇ ದೇವತೆಗಳೆಂದು ಹೇಳುತ್ತಾರೆ–**ಮೂರುಕೋಟೀತಿ**॥
॥೬॥

**೪ ಶ್ರೀವ್ಯಾಸ ದಾಸ ಸಿದ್ಧಾಂತ ಕೌಮುದೀ (ಸಂಸ್ಕೃತಮೂಲ) :**

"ಮೂರು" ಇತಿ ॥ ಶಂಖಾದಿ ಮುಖ ಸಂಚ್ಛನ್ನ ಮರುತ್ಕೋಟಿತ್ರಯಂ ತಥಾ ॥ ಚತುರ್ಭುಜಂ ಶ್ರೀಕಪಿಲ ತನೂಜಂ ವೈ ಗುಹಾಗತಮ್" ॥ ಮಧ್ವ ಮಂತ್ರಾರ್ಥಮಂಜರ್ಯಾಂ ಏತನ್ನಾರಾಯಣೋದಿತಮ್ ॥ ಅವರ ಇತಿ ॥ "ಧಿಕ್ಕರೋತಿ ತು ಧೀಃ ಪೂಜಾಂ ಆತ್ಮನಃ ಶ್ರೀ ಸುದರ್ಪಿತಃ ॥ ರಿಕ್ತಾಂ ಪ್ರಾಜ್ಞಸ್ಯ ತಾಂ ತ್ಯಕ್ತ್ವಾ ಭಜತೇಽನ್ಯಾಂ ದಯಾಪರಃ ॥ ಸುದಾಮ ಚರಿತೇ ಚ–"ಕಿಂಚಿತ್ ಕರೋತ್ಯುರ್ವಪಿ ಯತ್ ಸ್ವದತ್ತಂ ಸುಹೃತ್ಕೃತಂ ಫಲ್ಗ್ವಪಿ ಭೂರಿಕಾರೀ" ॥ ಇತಿ ॥ ॥ ೬ ॥

**ಕನ್ನಡಾರ್ಥ :**

**ಶ್ರೀಮಧ್ವಮಂತ್ರಾರ್ಥಮಂಜರೀ**–ಎಂಬ ಗ್ರಂಥದಲ್ಲಿ ಶ್ರೀನಾರಾಯಣ ಪಂಡಿತಾಚಾರ್ಯರು "ಶಂಖ" ಮುಂತಾದ ಮೂರುಕೋಟಿ ಮರುತ್ತರುಗಳನ್ನು ನಿರೂಪಿಸಿರುತ್ತಾರೆ. ಹೀಗೆ ೩೦೦,೭೨೦೦೦ ಮರುತಾಂತರ್ಗತ ಹರಿಯನ್ನು ದೇಹದಲ್ಲಿ ತಿಳಿದು ಭಜಿಸುವವರಲ್ಲಿ ಪೂಜೆಯೇ ಹರಿಪೂಜೆಯೆನಿಸುವುದು. "ಕುಮತಿಯು ತನ್ನ ದ್ರವ್ಯದರ್ಪದಿಂದ ಮಾಡುವ ಪೂಜೆಯನು ತಿರಸ್ಕರಿಸುತ್ತಾನೆ. ಕುಜನರ ಪೂಜೆಯನ್ನು ಧಿಕ್ಕರಿಸಿ, ಪ್ರಾಜ್ಞರು ಮಾಡುವ ಪೂಜೆಯು ಅತ್ಯಲ್ಪವಾಗಿದ್ದರೂ ದಯಾಪರನಾದ ಶ್ರೀಹರಿಯು ಭಕ್ತಿಭರಿತವಾದ ಅಲ್ಪ ಪೂಜೆಯನ್ನೇ ಸ್ವೀಕರಿಸುತ್ತಾನೆ" ಭಗವದ್ಭಕ್ತರು ಭಕ್ತಿಪುರಸ್ಸರ

ವಾಗಿ ಭಗವಂತನಲ್ಲಿ ಅರ್ಪಿಸಿ ಪೂಜಿಸಿದವರ ಪೂಜೆಯನ್ನು ಅತ್ಯಲ್ಪವಾಗಿದ್ದರೂ ಅನಂತಮಡಿಮಾಡಿ ಸ್ವೀಕರಿಸುತ್ತಾನೆ. ಹೀಗಿರುವ ಶ್ರದ್ಧಾಭಕ್ತಿಗಳಿಲ್ಲದ ಮಹಾ ಪೂಜೆಯನ್ನೂ ಸಹ ಅತ್ಯಲ್ಪವೆಂದು ಉದಾಸೀನಮಾಡುತ್ತಾನೆ"–ಎಂದು **ಸುದಾಮಚರಿತ್ರದಲ್ಲಿ** ಹೇಳಿರುತ್ತಾರೆ. ॥ ೬ ॥

## ೫ ಗುರುಹೃದಯಪ್ರಕಾಶಿಕೆ

ಇದೇ ಅರ್ಥ ವಿವರಿಸುತ್ತಾರೆ, ಮೂರುಕೋಟಿ ಎಂದು. ಮೇಲೆ ಹೇಳಿದ್ದ ಮೂರುಕೋಟಿಯ ಮೇಲೆ, ಎಪ್ಪತ್ತೆರಡು ಸಹಸ್ರನಾಡಿಗಳಲ್ಲಿಯೂ ಸಹ ಪ್ರಾಣಾಂತರ್ಯಾಮಿ ರಮಾಪತಿಯು ತೀರ್ಥಾಭಿಮಾನಿಗಳಲ್ಲಿದ್ದು ಕ್ರೀಡೆ ಯಾಡುವನೆಂದು ತಿಳಿದ, ಜ್ಞಾನಿಗಳ ಶರೀರವೇ ಸುಕ್ಷೇತ್ರಗಳು, ಅವರೇ ದೇವಾಂಶರು, ಅವರರ್ಚನೆಯೇ ಹರಿಪೂಜೆ ಎಂದರೆ, ಅವರು ಸಕಲಕ್ರಿಯೆ ಗಳನ್ನೂ ದೇವರ ಪೂಜೆಯಾಗಿ ಭಾವಿಸುವುದರಿಂದ ಅವರು ಮಾಡಿದ್ದೇ ಮುಖ್ಯ ದೇವರಾರಾಧನೆ ಎಂದರ್ಥ. ॥ ೬ ॥

# ಸರ್ವವ್ಯಾಖ್ಯಾನಸಾರಸಂಗ್ರಹ

೧. ಭಗವದನುಗ್ರಹಪ್ರಾಪ್ತಿಗಾಗಿ ಮಾಡಬೇಕಾದ ಸಮಸ್ತಸಾಧನೆಗಳೂ ಈ ಸ್ಥೂಲಶರೀರದ ದ್ವಾರವೇ ನಡೆಯುವುವು. ಈ ಕಾರಣದಿಂದ ನಮ್ಮ ಸ್ಥೂಲಶರೀರವನ್ನು **ಸಾಧನದೇಹ**ವೆಂದು ಕರೆಯುವರು.

೨. ಸಾಧನಶರೀರವೆಂದೆನಿಪ ಈ ಸ್ಥೂಲದೇಹದಲ್ಲಿ ಮೂರುಕೋಟಿಯ ಮೇಲೆ ರೋಮಕೂಪಗಳಿವೆ. ಇಂತಹ ರೋಮಕೂಪಗಳಲ್ಲಿ ಪುಣ್ಯತೀರ್ಥ ಗಳಿವೆ. ಆ ತೀರ್ಥಗಳಲ್ಲಿ ತೀರ್ಥಾಭಿಮಾನಿದೇವತೆಗಳು ವಿದ್ಯಮಾನರಾಗಿದ್ದಾರೆ.

೩. ಈ ಸ್ಥೂಲಶರೀರದಲ್ಲಿ ಎಪ್ಪತ್ತೆರಡುಸಾವಿರ ನಾಡಿಗಳು ದೇಹಾದ್ಯಂತ ಹಬ್ಬಿ ಹರಡಿವೆ. ಈ ೭೨,೦೦೦ ನಾಡಿಗಳಲ್ಲಿ ಗಂಗಾದಿಸಮಸ್ತ ಪವಿತ್ರನದಿಗಳು ಹರಿಯುತ್ತಿವೆ. ಅಲ್ಲಿ ಆಯಾಯಾ ನದ್ಯಭಿಮಾನಿದೇವತೆಗಳು ಆವಾಸವಾಗಿದ್ದಾರೆ.

೪. ಇಂತಹ ಮೂರುವರೆಕೋಟಿ ರೋಮಕೂಪಗತ ತೀರ್ಥಾಭಿಮಾನಿ ದೇವತೆಗಳಲ್ಲಿ, ಹಾಗೂ ೭೨,೦೦೦ ನಾಡ್ಯಂತರ್ಗತ ನದ್ಯಭಿಮಾನಿದೇವತೆಗಳಲ್ಲಿ ಶ್ರೀಮುಖ್ಯಪ್ರಾಣದೇವರು ನಿಯಾಮಕರಾಗಿದ್ದಾರೆ. ಅಂತಹ ಮಾರುತಾಂತರ್ಯಾಮಿಯಾಗಿ ಲಕ್ಷ್ಮೀರಮಣನಾದ **ಮಾಧವನಾಮಕ** ಶ್ರೀಪರಮಾತ್ಮನು ಇದ್ದು, ಪ್ರತಿನಿತ್ಯದಲ್ಲೂ, ತೀರ್ಥಾಭಿಮಾನಿದೇವತೆಗಳ ದ್ವಾರಾ, ನಾಡ್ಯಂತರ್ಗತ ನದ್ಯಭಿಮಾನಿದೇವತೆಗಳ ದ್ವಾರಾ, ತಾನು ವಿಹರಿಸುತ್ತಾ, ಶರೀರಗತಸಮಸ್ತ ವ್ಯಾಪಾರವಿಶೇಷಗಳನ್ನು ಮಾಡಿ ಮಾಡಿಸುತ್ತಿರುವನು.

೫. ಈ ರೀತಿಯಲ್ಲಿ ರೋಮಕೂಪಗತ ಮತ್ತು ೭೨,೦೦೦ ನಾಡ್ಯಂತರ್ಗತ ಭಗವದ್ರೂಪಗಳು ಈ ಶರೀರದಲ್ಲಿ ಇದ್ದು, ರಮಿಸುತಿಹನೆಂದು ಉತ್ತಮ ಜ್ಞಾನಾನುಸಂಧಾನದಿಂದ ತಿಳಿದಿರುವ ಸಾಧಕರೇ ಬ್ರಹ್ಮಜ್ಞಾನಿಗಳು (ಸೂರಿಗಳು). ಅಂತಹ ಭಾಗವತೋತ್ತಮರು ದೇವತೆಗಳೇ ವಿನಹ ಸಾಮಾನ್ಯ ಮಾನವರಲ್ಲ. ಅವರ ದೇಹವೇ ಪುಣ್ಯಕ್ಷೇತ್ರಗಳು. ಅವರಲ್ಲಿ ಅಂತರ್ಗತನಾದ ಬಿಂಬನ ಪೂಜೆಯೇ ಶ್ರೀಹರಿಯ ಪೂಜೆಯು. ಅವರ ಸೇವೆಯೇ ಮಹೀಮಂಡಲದಲ್ಲಿರುವ ಸಮಸ್ತತೀರ್ಥಕ್ಷೇತ್ರಗಳ ಯಾತ್ರಾಫಲವೆಂದು ಪ್ರಸಕ್ತಪದ್ಯದ ತಾತ್ಪರ್ಯಾರ್ಥವು. ॥೬॥

## ಪದ್ಯ ೭

**ಮೂಲ :**

**ಶ್ರೀವರನಿಗಭಿಷೇಕವೆಂದರಿ ।**
**ದೀ ವಸುಂಧರೆಯೊಳಗೆ ಬಲ್ಲವ ।**
**ರಾವ ಜಲದಲಿ ಮಿಂದರೆಯು ಗಂಗಾದಿತೀರ್ಥಗಳು ॥**
**ತಾ ಒಲಿದು ಬಂದಲ್ಲೆ ನೆಲೆಗೊಂ ।**
**ಡೀವವಖಿಳಾರ್ಥಗಳನರಿಯದ ।**
**ಜೀವರಮೃತರಂಗಿಣಿಯನೈದಿದರು ಫಲವೇನು ॥** ॥೭॥

**ಅವತರಣಿಕೆ :**

ಸ್ನಾನಮಾಡುವ ಕಾಲದಲ್ಲಿ, ದೇವಮಂದಿರವೆಂದೆನಿಪ ಈ ದೇಹದಲ್ಲಿ ಆವಾಸವಾಗಿರುವ ಬಿಂಬರೂಪಿಯಾದ ಶ್ರೀಹರಿಗೆ ಸ್ನಾನವು ಅಭಿಷೇಕವೆಂಬ ಜ್ಞಾನಾನುಸಂಧಾನದಿಂದ ಜಲಾಭಿಮಾನಿವರುಣಾಂತರ್ಗತ ಭಗವದ್ರೂಪಕ್ಕೂ, ದೇಹಾಂತರ್ಗತಬಿಂಬಾಖ್ಯಭಗವದ್ರೂಪಕ್ಕೂ ಐಕ್ಯಚಿಂತನೆಯಿಂದ ಸ್ನಾನ ಮಾಡಿದರೆ, ಪರಮಪವಿತ್ರವಾದ ಗಂಗಾದಿತೀರ್ಥಗಳಲ್ಲಿ ಸ್ನಾನಮಾಡಿದ ಫಲವು ಬರುವುದೆಂದು **ಶ್ರೀವರನಿಗಭಿಷೇಕವೆಂದು**– ಎಂಬ ಪ್ರಸಕ್ತ ೭ನೆಯ ಪದ್ಯದಿಂದ ತಿಳಿಸುತ್ತಾರೆ. ॥ ೭ ॥

**ಪ್ರತಿಪದಾರ್ಥ :**

**ಶ್ರೀವರನಿಗೆ**=ಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣನಿಗೆ, **ಅಭಿಷೇಕವೆಂದು**=ನಾವು ಸ್ನಾನ ಮಾಡುವ ಜಲವು ದೇಹಾಂತರ್ಗತದೇಹಾಕಾರನಾದ ಪರಮಾತ್ಮನಿಗೆ ಅಭಿಷೇಕ ಎಂಬ ಜ್ಞಾನಾನುಸಂಧಾನದಿಂದ, **ಅರಿತು**= ತಿಳಿದು, **ಈ ವಸುಂಧರೆಯೊಳಗೆ**=ಈ ಭೂಮಿಯಲ್ಲಿರುವ, **ಆವ ಜಲದಲಿ**=ಯಾವ ನೀರಿನಲ್ಲಾದರೂ, **ಬಲ್ಲವರು**=ಪೂರ್ವೋಕ್ತಜ್ಞಾನದಿಂದ ತಿಳಿದು ಮಾಡುವವರು, **ಮಿಂದರೆಯು**=ಮಜ್ಜನ ಮಾಡಿದರೂ ಸರಿಯೇ, **ಗಂಗಾದಿತೀರ್ಥಗಳು**=ಪವಿತ್ರವಾದ ಗಂಗಾ ಇತ್ಯಾದಿ ಜಡೋದಕಗಳಿಗೆ ಅಭಿಮಾನಿಗಳಾದ ನದ್ಯಭಿಮಾನಿದೇವತೆಗಳು ಮತ್ತು ಪುಣ್ಯಕ್ಷೇತ್ರಗತ ತೀರ್ಥಾಭಿಮಾನಿದೇವತೆಗಳು, **ತಾ ವೊಲಿದು**=ಅವರು ಅನುಗ್ರಹಿಸಿ, **ಬಂದು**=ಸ್ನಾನ ಮಾಡತಕ್ಕ ಆ ಜಲದಲ್ಲಿಯೇ ಆಗಮಿಸಿ, **ಅಲ್ಲೆ ನೆಲೆಗೊಂಡು**=ಆ ಉದಕದಲ್ಲಿ ವಿದ್ಯಮಾನರಾಗಿದ್ದು, **ಅಖಿಳಾರ್ಥಗಳನು**= ಅಂತಹ ಸಾಧಕರಿಗೆ ಅಪೇಕ್ಷಿತವಾದ ಜ್ಞಾನ, ಭಕ್ತಿ, ವೈರಾಗ್ಯಾದಿ ಸಮಸ್ತ ಇಷ್ಟಾರ್ಥಗಳನ್ನೂ, **ಈವರು**=ಕೊಡುವರು, **ಅರಿಯದ**=ಪೂರ್ವೋಕ್ತ ಜ್ಞಾನಾನುಸಂಧಾನವನ್ನು ತಿಳಿಯದ, **ಜೀವರು**=ಜನರು, **ಅಮರತರಂಗಿಣಿಯ**=ದೇವನದೀ ಎಂದು ಪ್ರಖ್ಯಾತವಾದ ಗಂಗಾನದಿಯಲ್ಲಿ, **ಐದಿದರು**=ಹೋಗಿ ಸ್ನಾನಾದಿ ಕರ್ಮಗಳನ್ನು ಆಚರಿಸಿದರೂ, **ಫಲವೇನು**= ಫಲವೇನೂ ಬರುವುದಿಲ್ಲ. ॥ ೭ ॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :-

ಜ್ಞಾನಪೂರ್ವಕವಾಗಿ ಅನುಸಂಧಾನದಿಂದ ಸ್ನಾನಮಾಡಬೇಕೆಂತಲೂ, ಅನ್ಯಥಾ ಆದರೆ, ಫಲ ಇಲ್ಲ ಎಂತಲೂ ಹೇಳತಾರೆ.

ಬಲ್ಲವರು–ಜ್ಞಾನಾನುಸಂಧಾನ ಬಲ್ಲವರು ದಾವ ಉದಕದಲ್ಲಾದರೂ ಸರಿಯೇ ಸ್ನಾನಮಾಡಿದರೂ, ಮಹಾಫಲವನ್ನೇ ಹೊಂದತಾರೆ. ಹ್ಯಾಂಗೆ ಅನುಸಂಧಾನ ಮಾಡಬೇಕೆಂದರೆ, ಜೀವಾಂತರ್ಗತಬಿಂಬನ್ನ ಜೀವನಾಡಿಗಳಲ್ಲಿ ವಿದ್ಯಮಾನವಾದ ನದಿಗಳಲ್ಲಿ, ರೋಮಕೂಪಗತತೀರ್ಥಗಳಲ್ಲಿ ಐಕ್ಯಚಿಂತನಾ ಮಾಡಿ, ಅನಾದಿಲಿಂಗ, ಅವ್ಯಕ್ತ, ಅನಿರುದ್ಧ ಈ ಶರೀರಗಳಿಗೆ, ವಾಸನಾನು ಸಂಧಾನದಿಂದು ತಂದು, ಅಲ್ಲಲ್ಲಿ ಇರತಕ್ಕ ಭಗವದ್ರೂಪಗಳ ಐಕ್ಯಚಿಂತಿಸಿ, ಅಲ್ಲಿಂದ ಸ್ಥೂಲದೇಹಗತಬಿಂಬನ್ನ ಐಕ್ಯಚಿಂತಿಸಿ, ಅಲ್ಲಿಂದ ಸ್ಥೂಲದೇಹಕ್ಕೆ ತಂದು, ಸ್ಥೂಲಬಿಂಬನ್ನ ಐಕ್ಯಚಿಂತಿಸಿ, ಅಲ್ಲಿಂದ ಸ್ಥೂಲದೇಹಗತ ನಾಡೀಗತ ನದಿಗಳಲ್ಲಿ, ರೋಮಕೂಪಗತ ತೀರ್ಥಗಳಲ್ಲಿ ಐಕ್ಯಚಿಂತಿಸಿ, ಸ್ಥೂಲದೇಹ ಗತನಾಡಿಯಲ್ಲಿ ನದ್ಯಭಿಮಾನಿಗಳ, ರೋಮಕೂಪಗತತೀರ್ಥಾಭಿಮಾನಿ ಗಳ, ಹಾಂಗೆ ಭಗವದ್ರೂಪಗಳ ದಾವಜಲದಲ್ಲಿ ಸ್ನಾನಮಾಡಲಿಕ್ಕೆ ಉದ್ದೇಶ ಮಾಡತಾನೋ ಆ ಜಲದಲ್ಲಿ ತಾನು ಸ್ನಾನಮಾಡೋ ಪ್ರದೇಶದಲ್ಲಿ ಮಾತ್ರ ಜಲದಲ್ಲಿ ನಿಂತು, ಆವಾಹನಿ ಮಾಡಿ, ಅಲ್ಲಿ ಜಲಾಧಿಷ್ಠಾನವೇ ಕ್ಷೇತ್ರ, ಜಲಗತಶ್ರೀಪರಮಾತ್ಮನೇ ಕ್ಷೇತ್ರಮೂರ್ತಿ, ಜಲರೂಪರಾದ ತೀರ್ಥಾಭಿ ಮಾನಿಗಳೇ ಕ್ಷೇತ್ರಗತತೀರ್ಥ ಎಂತ ಅನುಸಂಧಾನಮಾಡಿ, ಅಲ್ಲಿರತಕ್ಕ ಶ್ರೀಪರಮಾತ್ಮಗೆ ಷೋಡಶೋಪಚಾರಪೂಜಾ ನಿವೇದನಾದಿಗಳ ಮಾಡಿ, ಸ್ನಾನಮಾಡಬೇಕು. ಈ ಅನುಸಂಧಾನದಿಂದ ಅನೇಕ ತೀರ್ಥಗಳು, ಅನೇಕ ಕ್ಷೇತ್ರಗಳು ಒಂದೇ ಪ್ರದೇಶದಲ್ಲಿ ಇದ್ದಂತಾಯಿತು. ಈ ಪ್ರಕಾರ ಬಲ್ಲವರು

ತಾವು ಮಾಡತಕ್ಕ ಸ್ನಾನ ಶ್ರೀಲಕ್ಷ್ಮೀಪತಿಯಾದ ದೇಹಾಂತರ್ಗತ ದೇಹಾಕಾರನಾದ ಶ್ರೀಪರಮಾತ್ಮಗೆ ಅಭಿಷೇಕ ಎಂತ ತಿಳಿಯಬೇಕು. ಎಂದರೆ ದೇಹಾಂತರ್ಗತ ದೇಹಾಕಾರನಾದ ಪರಮಾತ್ಮ ಜಲಾಂತರ್ಗತಜಲರೂಪದಿಂದ ಇದ್ದು, ತನ್ನ ಸ್ವಾಖ್ಯಉದಕದಿಂದ ತಾನು ಸ್ನಾನಮಾಡತಾನೆ. ಬಿಂಬಕ್ರಿಯಾದ್ವಾರಾ, ಪ್ರತಿಬಿಂಬ ಮೂಲಕದಿಂದ ಸ್ನಾನಮಾಡಿಸತಾನೆ. ಜಡೋದಕ ಜಡದೇಹಕ್ಕೆ ಸಂಬಂಧ. ಈಶ್ವರಾಖ್ಯ ಉದಕ ಈಶ್ವರಗೆ ಸಂಬಂಧ, ಎಂತ ಈ ಪ್ರಕಾರ ಶ್ರೀಪರಮಾತ್ಮಗೆ ಅಭಿಷೇಕವಾಗತದೆ ಎಂತ ಅನುಸಂಧಾನದಿಂದ ಸ್ನಾನ ಮಾಡೋದಕ್ಕೆ ತಿಳಿದವರು, ಈ ಭರತಖಂಡ ಭೂಮಿಯೊಳಗೆ ಇರುವ, ದಾವ ಜಲದಲ್ಲಿ ಸ್ನಾನಮಾಡಿದರೂ ಎಂದರೆ (ಪುರಾಣಪ್ರಸಿದ್ಧ, ಅಪ್ರಸಿದ್ಧ ಸಾಮಾನ್ಯ ಏತಾದೃಶವಾದ ದಾವ ಉದಕದಲ್ಲಾದರೂ ಸರಿಯೇ ಪೂರ್ವೋಕ್ತ ಅನುಸಂಧಾನಪೂರ್ವಕ ಸ್ನಾನಮಾಡಿದರೂ), ಭಾಗೀರಥ್ಯಾದಿನದ್ಯಭಿಮಾನಿದೇವತೆಗಳೇನು, ಸ್ವಾಮಿಪುಷ್ಕರಣ್ಯಾದಿತೀರ್ಥಾಭಿಮಾನಿದೇವತೆಗಳೇನು, ಭಕ್ತಿಪೂರ್ವಕಅನುಸಂಧಾನ ಮಾಡತಕ್ಕ ಅಧಿಕಾರಿಗೆ ಒಲಿದು, ಭಗವದಾಜ್ಞಾನದಿಂದ ತಾವುಗಳು ಬಂದು, ಆ ಉದಕದಲ್ಲಿ ಉದಕರೂಪದಿಂದ ಪ್ರವೇಶಮಾಡಿ ಇದ್ದು, ಸಮಸ್ತವಾದ ಪ್ರಯೋಜನಗಳೊಳಗೆ ಮುಖ್ಯ ಪ್ರಯೋಜನಗಳಾದ ಜ್ಞಾನ, ಭಕ್ತಿ, ವೈರಾಗ್ಯವೇನು, ಇಹದಲ್ಲಿ ಮಹಾಅನಿಷ್ಟ ನಿವೃತ್ತಿಪೂರ್ವಕ ಇಷ್ಟಪ್ರಾಪ್ತಿಯಾದ ಐಶ್ವರ್ಯಾದಿಗಳೇನು, ಭಗವದಾಜ್ಞಾನದಿಂದ ಕೊಡೋವರಾಗತಾರೆ (ಉಪಸಂಹಾರ ಪೂರ್ವವತ್). ಈ ಅನುಸಂಧಾನ ತಿಳಿಯದೇ ಇರುವಂಥಾ ಜನರೇನು, ಜೀವರುಗಳೇನು, ದೇವನದಿಯಾದ ಭಾಗೀರಥೀನದಿಯನ್ನು ಪ್ರಾಪ್ತರಾಗಿ ಸ್ನಾನಾದಿಗಳನ್ನು ಮಾಡಿದರೂ ಶುದ್ಧವಾಗಿ ಫಲವಿಲ್ಲ.

**ತಾತ್ಪರ್ಯ :**

ಅಧಿಕಾರಿಯ ಅನುಸಂಧಾನ ಎಷ್ಟೋ ಅಷ್ಟು ಮಾತ್ರ ಫಲವಿರುತ್ತದೆ. ಕೋಟಿವರಹ ಬಾಳತಕ್ಕ ಜೀವರತ್ನ ಕೊಟ್ಟು, ಉದರಶೂಲಿ ಪರಿಹಾರಕ್ಕೆ ಅಜವಾನದ (ಓಮು) ಲಾಭಹೊಂದಿದಂತೆ, ಅಲ್ಪಫಲವಾದ್ದರಿಂದ, ಫಲವಿಲ್ಲ ಎಂತ ಅರ್ಥ. ಗಂಗಾದಿತೀರ್ಥಗಳಲ್ಲಿ ಸರ್ವದಾ ಸನ್ನಿಧಾನ ಇರುತ್ತದೆ.

ಇದ್ದದ್ದರನ್ನ ಅನುಸಂಧಾನದಿಂದ ತಿಳಿದು ಸ್ನಾನಮಾಡಬೇಕು. ಇದು ಎರಡೂ ಇಲ್ಲದೆ ಸ್ನಾನಮಾಡಿದರೆ, ಅಧಿಕಾರಿಯ ಸ್ನಾನ ಜಲಚರಾದಿಗಳ ಸ್ನಾನವತ್ ಆಗಿ, ದೇಹಾಯಾಸವೂ, ದ್ರವ್ಯಖರ್ಚೂ ಆಗುತ್ತದೆ. ಅವರರಾದ ದೇವತೆಗಳು ಸ್ನಾನಮಾಡೋ ಕಾಲಕ್ಕೆ, ಅವರಿಗೆ ಉತ್ತಮರಾದ ದೇವತೆಗಳು ಜಲರೂಪದಿಂದ ಇದ್ದು, ಫಲಕೊಡತಾರೆ. ಸರ್ವಮಾನುಷರಿಗೆ, ಪುಷ್ಕರ ಫಲಕೊಡೋವನಾಗತಾನೆ. ಈ ಅನುಸಂಧಾನದಿಂದ ಸರ್ವದೇಹಗತದೇವತೆಗಳಿಗೆ, ಸರ್ವಭಗವದ್ರೂಪಗಳಿಗೆ ಸ್ನಾನಮಾಡಿಸಿ, ಅವರ ಶೇಷಉದಕ, ತಾನು ಸ್ನಾನಮಾಡಿದವನಾಗುತಾನೆ ಎಂತ ತಾತ್ಪರ್ಯ. ॥೭॥

## ೨. ಭಾವಪ್ರಕಾಶಿಕೆ :

ಮುಖ್ಯವಾಗಿ ಅನುಸಂಧಾನದಿಂದ ಸ್ನಾನಮಾಡುವ ಜ್ಞಾನಿಗಳು ಎಲ್ಲಿ ಸ್ನಾನಮಾಡಿದರೂ ಸಕಲತೀರ್ಥಗಳ ಸ್ನಾನಫಲವು ಪ್ರಾಪ್ತವಾಗುವುದು. ಅನುಸಂಧಾನವಿಲ್ಲದ ಅಜ್ಞಾನಿಗಳು ಕಾಶಿಗೆ ಹೋದರೂ ನಿಷ್ಫಲವೆಂದು ಹೇಳುತ್ತಾರೆ.

ನಮ್ಮ ದೇಹವು ಪರಮಾತ್ಮನಿಗೆ ಪ್ರತಿಮಾಸ್ಥಾನೀಯವೆಂದು ತಿಳಿದು, ನಾವು ಸ್ನಾನಮಾಡುವ ಕಾಲದಲ್ಲಿ ಯಾವ ನೀರಿನಲ್ಲಿ ಸ್ನಾನಮಾಡುತ್ತಿದ್ದರೂ, **ಗಂಗೇ ಚ ಯಮುನೇ ಚೈವ ಗೋದಾವರಿ ಸರಸ್ವತಿ। ನರ್ಮದೇ ಸಿಂಧು ಕಾವೇರಿ ಜಲೇಸ್ಮಿನ್ ಸನ್ನಿಧಿಂ ಕುರು**—ಎಂಬ ಮಂತ್ರದಿಂದಲೂ, ಪ್ರಯಾಗ ಎಂಬಿವೇ ಮೊದಲಾದ ಸ್ನಾನವಿಧಿಪ್ರಕಾರ ಸ್ಮರಣಾದಿಗಳನ್ನು ಮಾಡಿ, ಪುರುಷಸೂಕ್ತ ಪಠಣಮಾಡುತ್ತಾ, ತಮ್ಮ ದೇಹದಲ್ಲಿ ಪರಮಾತ್ಮನನ್ನು ಚಿಂತಿಸಿ, ಅಭಿಷೇಕ ಮಾಡುತ್ತೇನೆಂದು ಭಾವಿಸಿ, ಸ್ನಾನಮಾಡಿದರೆ, ಇವನು ಸ್ಮರಿಸಿದ ಗಂಗಾ ಮೊದಲಾದ ಸಕಲತೀರ್ಥಾಭಿಮಾನಿಗಳು ಅಲ್ಲಿಗೆ ಬಂದು, ಆಯಾ ನದಿಗಳಲ್ಲಿ ಸ್ನಾನಮಾಡಿದ ಫಲವನ್ನು ಕೊಟ್ಟು, ಕೃತಾರ್ಥರನ್ನಾಗಿ ಮಾಡುವರು. ಅಷ್ಟು ಜ್ಞಾನವಿಲ್ಲದೇ ಬರೇ ಯಾತ್ರೆಯನ್ನು ಮಾಡುತ್ತೇನೆಂದು ಕಾಶಿಗೆ ಹೋಗಿ ಗಂಗೆಯಲ್ಲಿ ಸ್ನಾನಮಾಡಿದರೂ ಗಂಗಾಸ್ನಾನ ಮಾಡಿದ ಸಂಪೂರ್ಣ ಫಲವು ಬಾರದು. ॥೭॥

**೩. ಭಾವದರ್ಪಣ ಟೀಕಾ:–**

ದೇಹಾಕಾರ ವಿಶ್ವಗೆ ಅಭಿಷೇಕವೆಂದು ತಿಳಿದು. ಎಲ್ಲೇ ಸ್ನಾನಮಾಡಿದರೂ ತದಭಿಮಾನಿಗಳು ಅನುಗ್ರಹಮಾಡಿ ಫಲಕೊಡುತ್ತಾರೆಂದು ತಿಳಿಯದೇ ಸ್ನಾನಮಾಡಿದಲ್ಲಿ ನಿಷ್ಫಲವೆಂತ ಹೇಳುತ್ತಾರೆ,–– **ಶ್ರೀವರೇತಿ** ॥೭॥

**೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ**

ಸ್ವದೇಹದಲ್ಲಿ ಪುರುಷರೂಪಿಯಾದ ಬಿಂಬನಿದ್ದಾನೆ. ಅಂತಹ ಬಿಂಬರೂಪೀ ಹರಿಗೆ ಸ್ನಾನವೆಂದು ತಿಳಿದು, ಅನುಸಂಧಾನಕ್ರಮದಿಂದ ಪುರುಷಸೂಕ್ತ ಪಠಣಪೂರ್ವಕ ಯಾವದೇ ಜಲದಲ್ಲಿ ಸ್ನಾನಮಾಡಿದರೂ, ಅಲ್ಲಿಗೆ ಗಂಗಾದಿ ಸಮಸ್ತತೀರ್ಥಾಭಿಮಾನಿಗಳು ಸ್ವತಃ ಒಲಿದು ಸನ್ನಿಹಿತರಾಗುವರು. ಈ ದೇಹಸ್ಥರಾಗಿದ್ದು, ಅವರಿಗೆ ಸಕಲೇಷ್ಟಾರ್ಥಗಳನ್ನು ಕೊಡುತ್ತಾರೆ. ಈ ಅನುಸಂಧಾನವಿಲ್ಲದ ಜೀವರು ಯಾವ ನದಿಯಲ್ಲಿ ಸ್ನಾನಮಾಡಿದರೂ ಫಲವೇನೂ ಇಲ್ಲ ಎಂಬುದೇ ಪದ್ಯಗತಭಾವ. ॥೭॥

**೫. ಶ್ರೀಗುರುಹೃದಯಪ್ರಕಾಶಿಕೆ :**

ಈ ಅರ್ಥವೇ ಸ್ವಲ್ಪ ವಿವರಿಸುತ್ತಾರೆ–– **ಶ್ರೀವರನು** ಎಂದು. ಈ ವಸುಂಧರೆ ಎಂಬ ಭೂಮಿಯಲ್ಲಿ ಬಲ್ಲವರು ಎಂದರೆ, ಪೂರ್ವೋಕ್ತ ರೀತಿ ತಿಳಿದ ಜ್ಞಾನಿಗಳು, ಯಾವ ಜಲದಲ್ಲಿ ಶ್ರೀವರನಿಗೆ ಅಭಿಷೇಕವೆಂದು ಅರಿದು, ಮಿಂದರೆಯು, ಅಂದರೆ, ತಾವು ಮಾಡುವ ಸ್ನಾನ, ಸ್ವದೇಹಸ್ಥ ದೇವರಿಗೆ ಅಭಿಷೇಕವೆಂದು ತಿಳಿದು, ಯಾವ ನೀರಿನಲ್ಲಿ ಮುಳುಗಿದಾಗ್ಯೂ, ಗಂಗಾದಿ ತೀರ್ಥಗಳು ತಾವಾಗಿಯೇ ಒಲಿದು ಬಂದು, ಅಲ್ಲಿದ್ದು, ಸಕಲಪುರುಷಾರ್ಥಗಳನ್ನು ಅವರಿಗೆ ಕೊಡುವರು. ಅರಿಯದ ಜೀವರು, ಎಂದರೆ, ಪೂರ್ವೋಕ್ತಚಿಂತನೆಯಿಲ್ಲದ ಅಜ್ಞಾನಿಗಳು ಅಮರತರಂಗಿಣೀ ಎಂದರೆ, ದೇವಗಂಗೆಗೆ ಹೋದಾಗ್ಯೂ ಫಲವೇನು? ಅಂದರೆ, ಐಹಿಕಾದಿ ಸುಖಗಳಲ್ಲದೆ, ಜ್ಞಾನದ್ವಾರಾ ಮೋಕ್ಷವು ದೊರೆಕದು ಎಂದರ್ಥ.

**ಸಿಂಚಯೇತ್ಪುರುಷಸೂಕ್ತೇನ ಸ್ವದೇಹಸ್ಥಂ ಹರಿಂ ಸ್ಮರನ್**––ಎಂಬ **ಸದಾಚಾರ ಸ್ಮೃತ್ಯರ್ಥವು** ವಿವರಿಸಲ್ಪಟ್ಟಿತು. ॥೭॥

## ಸರ್ವವ್ಯಾಖ್ಯಾನಸಾರಸಂಗ್ರಹ

ಸ್ನಾನಮಾಡುವ ಸಮಯದಲ್ಲಿ ಜ್ಞಾನಾನುಸಂಧಾನ ಯಾವರೀತಿ ಇರಬೇಕೆಂದು ಉಪದೇಶಿಸುತ್ತಾರೆ— **ಶ್ರೀವರನಿಗೆ** ಎಂಬ ಪ್ರಸಕ್ತಪದ್ಯದಿಂದ.

೧. ಲಕ್ಷ್ಮೀಪತಿಯಾದ ಶ್ರೀಹರಿಗೆ **ಶ್ರೀವರನೆಂದು** ಹೆಸರು. ನಿತ್ಯಮುಕ್ತಳೂ ನಿರ್ವಿಕಾರಳೂ ಮತ್ತು ಅಕ್ಷರನಾಮಕಗಳೂ ಆದ ಶ್ರೀಲಕ್ಷ್ಮೀದೇವಿಯರಿಗೆ **ಶ್ರೀ** ಎಂತ ನಾಮ. ಮಂಗಳಸ್ವರೂಪಿಣಿಯೂ, ಶುಭದಾಯಕಳೂ, ಸತ್ವಗುಣಾಭಿಮಾನಿಯು ಆದ **ಶ್ರೀನಾಮಕಳಾದ** ಲಕ್ಷ್ಮಿಗಿಂತ ಅನಂತಾನಂತ ಕೋಟಿಗುಣಗಳಿಂದ ಶ್ರೇಷ್ಠನಾದ ಶ್ರೀಹರಿಯು **ಶ್ರೀವರನು.**

೨. ನಮ್ಮ ದೇಹವು ಅಂತಹ ಶ್ರೀವರನಿಗೆ ಆವಾಸಸ್ಥಾನವು. ದೇಹಸ್ಥ ಹೃನ್ಮಂದಿರದಲ್ಲಿ ಬಿಂಬರೂಪಿಯಾದ ಆ ಶ್ರೀವರನು ವಿರಾಜಮಾನನಾಗಿದ್ದಾನೆ. ದೇಹದ ವ್ಯಾಪಾರಗಳೆಲ್ಲವೂ ಶ್ರೀವರರೂಪಿಯಾದ ಹೃತ್ಪದ್ಮಸ್ಥ ಆ ಬಿಂಬನಿಂದಲೇ ನಡೆಯುವುವು. ಇದರಿಂದ ನಮ್ಮೀ ಸ್ಥೂಲದೇಹವು ಸಾಧನ ಶರೀರವೆಂದೆನಿಸಿದೆ. ಸ್ನಾನಾದಿಕರ್ಮಗಳನ್ನು ಆಚರಿಸುವಾಗ ದೇಹವನ್ನು ನೀರಿನಿಂದ ತೊಳೆದು ಶುದ್ಧಿಮಾಡಿಕೊಳ್ಳುತ್ತೇವೆ. ಸ್ವಗೃಹವನ್ನು ನಿರ್ಮಲಗೊಳಿಸುವಂತೆ ಈ ದೇಹಕ್ಕೆ ಸ್ನಾನ. ಹಾಗೆ ಸ್ನಾನಮಾಡುವಾಗ, ಕೇವಲ ಯಾಂತ್ರಿಕವಾಗಿ ಮೈಮೇಲೆ ನೀರನ್ನು ಸುರಿದುಕೊಳ್ಳುವುದು ನಿಷ್ಫಲ. ನಮ್ಮ ಸ್ಥೂಲದೇಹದಲ್ಲಿ ೭೨,೦೦೦ ನಾಡಿಗಳು ದೇಹಾದ್ಯಂತ ಹಬ್ಬಿ ಹರಡಿವೆ. ಆ ನಾಡಿಗಳಲ್ಲಿ ಗಂಗಾದಿ ಸಕಲ ನದಿಗಳೂ ಇವೆ. ಅಲ್ಲಿ ನದ್ಯಭಿಮಾನಿದೇವತೆಗಳು ವಿದ್ಯಮಾನರಾಗಿದ್ದಾರೆ. ಅಂತೆಯೇ ಶರೀರಗತರೋಮಕೂಪಗಳಲ್ಲಿ ಪುಣ್ಯ ಕ್ಷೇತ್ರಗಳೂ ಹಾಗೂ ಕ್ಷೇತ್ರಾಭಿಮಾನಿದೇವತೆಗಳೂ ಇದ್ದಾರೆ. ಇಂತಹ ಸಾಧನ ಸಂಪದ್ಯುಕ್ತವಾದ ಈ ಶರೀರದಲ್ಲಿ ಆಪಾದಮೌಳಿಪರ್ಯಂತ ಪುರುಷನಾಮಕ ಶ್ರೀವರನಾದ ಪರಮಾತ್ಮನು ವ್ಯಾಪ್ತನಾಗಿದ್ದಾನೆ. ನಮ್ಮ ತಲೆಯಲ್ಲಿರುವ ಸಹಸ್ರ ದಳಾತ್ಮಕವಾದ ಕಮಲದಲ್ಲಿ ಪುರುಷನಾಮಕನಾದ ವಾಸುದೇವನಾಮಕ ಶ್ರೀಪರಮಾತ್ಮನು ತುರ್ಯ ಎಂಬ ಅಭಿಧಾನದಿಂದ ಇದ್ದಾನೆ. ತಲೆಯಮೇಲೆ ಸ್ನಾನಮಾಡುವಾಗ, ಶ್ರೀವರನಿಗೆ ಈ ಸ್ನಾನರೂಪವಾದ ಕರ್ಮವು **ಅಭಿಷೇಕ**

ವೆಂದರಿತು, ಮಜ್ಜನಮಾಡಬೇಕು. ಪುರುಷಸೂಕ್ತವನ್ನು ಪಠಿಸುತ್ತಾ, ಜ್ಞಾನಿಗಳು ಸ್ನಾನಮಾಡುವರು.

**ಪ್ರಮಾಣ :**

**"ಸಿಂಚಯೇತ್ಪುರುಷಸೂಕ್ತೇನ ಸ್ವದೇಹಸ್ಥಂ ಹರಿಂ ಸ್ಮರನ್"** ಎಂದು ಸ್ಮೃತ್ಯರ್ಥ.

೩. ಈ ಭೂಮಂಡಲದಲ್ಲಿ **(ವಸುಂಧರೆಯೊಳಗೆ)** ಅನೇಕ ಪುಣ್ಯಕ್ಷೇತ್ರಗಳೂ ಮತ್ತು ಗಂಗಾದಿ ಪವಿತ್ರತೀರ್ಥಗಳಿವೆ. ಅಂತಹ ಪುಣ್ಯಕ್ಷೇತ್ರಗಳಿಗೆ ಹೋದಾಗ, ಪವಿತ್ರತೀರ್ಥಗಳಲ್ಲಿ ಸ್ನಾನಮಾಡುವಾಗ, ಆಯಾಯಾ ಕ್ಷೇತ್ರಗತ ಮೂರ್ತಿಗಳನ್ನು ಮನಸಾಸ್ಮರಿಸುತ್ತ ಶ್ರೀವರನಿಗೆ ಅಭಿಷೇಕವಿದೆಂಬ ಜ್ಞಾನಾನುಸಂಧಾನದಿಂದ ಸ್ನಾನಮಾಡಬೇಕೆಂದು ಪದ್ಯದ ಭಾವಾರ್ಥವು. ಅಂತಹ ಜ್ಞಾನಾನುಸಂಧಾನದಿಂದ ಮಾನವರು ಯಾವ ಜಲದಲ್ಲಿ ಮಿಂದರೂ, ಗಂಗಾದಿ ಸಕಲನದ್ಯಭಿಮಾನಿದೇವತೆಗಳೂ ಮತ್ತು ಕ್ಷೇತ್ರಾಭಿಮಾನಿದೇವತೆಗಳೂ, ಆ ಜಲದಲ್ಲಿಯೇ ಸನ್ನಿಹಿತರಾಗಿದ್ದು, ಆ ಮಾನವರಿಗೆ ಒಲಿದು, ಪರಮಾನುಗ್ರಹ ಮಾಡುವರು. ಅಂತಹ ನದ್ಯಭಿಮಾನಿಗಳೂ ಮತ್ತು ಕ್ಷೇತ್ರಾಭಿಮಾನಿಗಳೂ ಆದ ದೇವತೆಗಳಲ್ಲಿ ಶ್ರೀವರನು ಅಂತರ್ಗತನಾಗಿದ್ದುಕೊಂಡು, ಆ ಜೀವರ ಸಮಸ್ತ ಇಷ್ಟಾರ್ಥಗಳನ್ನು ಈಡೇರಿಸುತ್ತಿರುವನು. ಸ್ನಾನಮಾಡುವ ಜಲದಲ್ಲಿ ಜಲಾಭಿಮಾನಿಯಾದ ವರುಣದಲ್ಲಿ ಅಂತರ್ಗತನಾಗಿರುವ ಭಗವದ್ರೂಪಕ್ಕೂ, ಈ ಶರೀರಾದ್ಯಂತ ವ್ಯಾಪಿಸಿರುವ ಪುರುಷನಾಮಕ ಭಗವದ್ರೂಪಕ್ಕೂ, ದೇಹಸ್ಥನಾಡ್ಯಂತರ್ಗತ, ರೋಮಕೂಪಾಂತರ್ಗತ ಭಗವದ್ರೂಪಗಳಿಗೂ ಹೃತ್ಕಂಜಸ್ಥಿತನಾದ ಮೂಲೇಶನಾಮಕ ಬಿಂಬರೂಪೀ ಶ್ರೀವರನಾದ ಶ್ರೀಹರಿಗೂ ಐಕ್ಯಚಿಂತನೆಗೈದು, ಸ್ನಾನಮಾಡಿದರೆ ಮಹತ್ಫಲವು.

೪. ವಾಮನಾವತಾರಿಯಾದ ಶ್ರೀಹರಿಯು ತ್ರಿವಿಕ್ರಮನಾಗಿ ಬೆಳೆದಾಗ, ಅವನ ವಾಮಪಾದಾಂಗುಷ್ಠ ಬ್ರಹ್ಮಾಂಡವನ್ನು ಸೋಕಿದಾಗ, ಖರ್ಪರವು ಒಡೆದು, ಆ ಛಿದ್ರದಿಂದ ಪರಮಪವಿತ್ರಳಾದ ಗಂಗಾವತರಣವಾಯಿತು. ಶ್ರೀಹರಿಯ ಪಾದೋದ್ಭವೆಯಾದ ಆ ಗಂಗಾನದಿಗೆ **ದೇವನದಿ** ಎಂದು ಹೆಸರು.

(ಅಮರತರಂಗಿಣಿ). ಪೂರ್ವೋಕ್ತ ಜ್ಞಾನಾನುಸಂಧಾನವಿಲ್ಲದೆ, ಯಾರೇ ಆಗಲಿ ಅಮರತರಂಗಿಣಿಯಲ್ಲಿ ಸ್ನಾನಮಾಡಿದರೆ ಫಲವೇನೂ ಬಾರದು. ಅದು ಕೇವಲ ಯಾಂತ್ರಿಕಮಜ್ಜನವೇ ಹೊರತು, ಫಲದಾಯಕವಲ್ಲ ಎಂಬ ರಹಸ್ಯವೇ ಪ್ರಸಕ್ತ ಪದ್ಯಾಭಿಪ್ರಾಯವು. ॥೭॥

## ಪದ್ಯ ೮

**ಮೂಲ :**

**ನದನದಿಗಳಿಳೆಯೊಳಗೆ ಪರಿವವು ।**
**ಉದಧಿ ಪರಿಯಂತರದಿ ತರುವಾ ।**
**ಯದಲಿ ರಮಿಸುವವಲ್ಲಿ ತನ್ಮಯವಾಗಿ ತೋರದಲೆ ॥**
**ವಿಧಿನಿಷೇಧಗಳಾಚರಿಸುವರು ।**
**ಬುಧರು ಭಗವದ್ರೂಪ ಸರ್ವ ।**
**ತ್ರದಲಿ ಚಿಂತನೆ ಬರಲು ತ್ಯಜಿಸುವರಖಿಳಕರ್ಮಗಳ** ॥ ೮ ॥

**ಅವತರಣಿಕೆ :**

ಸರ್ವತ್ರದಲ್ಲಿ ಭಗವದ್ರೂಪಗಳನ್ನು ಚಿಂತಿಸುವ ವ್ಯಾಪ್ತ್ಯೋಪಾಸಕರ ವಿಷಯವನ್ನು ನದಿಗಳು ಸಮುದ್ರವನ್ನು ಸೇರಿ ಏಕದೇಶದಲ್ಲಿರುವ ದೃಷ್ಟಾಂತದಿಂದ ನಿರೂಪಿಸುತ್ತಾರೆ **ನದನದಿಗಳು** ಎಂಬ ಪ್ರಸಕ್ತ ೮ನೆಯ ಪದ್ಯದಿಂದ.॥೮॥

**ಪ್ರತಿಪದಾರ್ಥ :**

**ಇಳೆಯೊಳಗೆ**=ಭೂಮಂಡಲದಲ್ಲಿ, **ನದನದಿಗಳು**=ಪೂರ್ವದಿಂದ ಪಶ್ಚಿಮಕ್ಕೆ ಹರಿಯುವ ಗಂಡುನದಿಗಳು(**ನದ**) ಮತ್ತು ಪಶ್ಚಿಮದಿಂದ **ಪೂರ್ವಕ್ಕೆ** ಹರಿದು ಸಮುದ್ರವನ್ನು ಸೇರುವ, ಸ್ತ್ರೀವಾಚಕ ನದಿಗಳು(**ನದಿ**)**ಉದಧಿ ಪರಿಯಂತರದಿ**=ಸಮುದ್ರವನ್ನು ಸೇರುವವರೆಗೂ, **ಪರಿವವು**=ಬೇರೆ ಬೇರೆಯಾಗಿ ಹರಿಯುವವು. **ತರುವಾಯದಲಿ**=ಸಮುದ್ರವನ್ನು ಸೇರಿದನಂತರ,

**ಅಲ್ಲಿ**=ಆ ಸಮುದ್ರರೂಪವಾದ ಏಕಪ್ರದೇಶದಲ್ಲಿ, **ತನ್ಮಯವಾಗಿ**=ಒಟ್ಟಿಗೇ ಸೇರಿ, **ತೋರದಲೆ**=ನೋಡತಕ್ಕವರಿಗೆ ಇದು ನದೀ ಉದಕ, ಇದು ಸಮುದ್ರದ ಉದಕ ಎಂದು ಗೋಚರವಾಗದೆ, **ರಮಿಸುವುವು**=ಸಮುದ್ರದಲ್ಲಿ ಸಮುದ್ರದೊಡನೆ ಕ್ರೀಡಿಸುತ್ತಾ ತಾವು ಮಾತ್ರ ಪ್ರತ್ಯೇಕವಾಗಿಯೇ ಇರುವುವು. ಅದರಂತೆಯೇ, **ಬುಧರು**=ಬ್ರಹ್ಮಜ್ಞಾನಿಗಳು, **ವಿಧಿ**=ಶಾಸ್ತ್ರೋಕ್ತವಾಗಿ ಆಚರಿಸಲೇಬೇಕಾದ ಕರ್ಮಗಳನ್ನು ಮಾಡುವುದು, **ನಿಷೇಧಗಳೆ**=ಬಿಡಬೇಕಾದ ಕರ್ಮಗಳನ್ನು ಮಾಡದಿರುವುದು, **ಆಚರಿಸುವರು**=ಸರ್ವತ್ರ ಭಗವಚ್ಚಿಂತನಾಜ್ಞಾನಪ್ರಾಪ್ತಿಗಿಂತ ಪೂರ್ವದಲ್ಲಿ ಹೇಗಿದ್ದರೊ, ಅದರಂತೆ ಕರ್ಮಾಚರಣೆ ಮಾಡುವರು. **ಸರ್ವತ್ರದಲಿ**=ಸಮಸ್ತವಸ್ತುಗಳಲ್ಲಿ, ಎಲ್ಲಾ ಕಾಲ, ದೇಶ ಮತ್ತು ಅವಸ್ಥಾವಿಶೇಷಗಳಲ್ಲಿ, **ಭಗವದ್ರೂಪ**=ಸಮಸ್ತವಸ್ತುಗತ, ಕಾಲಾಂತರ್ಗತ, ದೇಶಾಂತರ್ಗತ, ಅವಸ್ಥಾಂತರ್ಗತ ಪರಮಾತ್ಮನ ರೂಪ ವಿಶೇಷಗಳ, **ಚಿಂತನೆ**=ಉಪಾಸನಾ ವಿಧಾನವು (ವ್ಯಾಪ್ತ್ಯೋಪಾಸನಾ ಕ್ರಮ), **ಬರಲು**=ಪ್ರಾಪ್ತವಾದ ನಂತರ, **ಅಖಿಳಕರ್ಮಗಳ**=ಸಕಲವಾದ ಕಾಮ್ಯಕರ್ಮಗಳನ್ನು, **ತ್ಯಜಿಸುವರು**=ಬಿಡುವರು, ಅಂದರೆ ಕಾಮ್ಯಕರ್ಮಗಳ ತ್ಯಾಗದಿಂದ ಅವರಿಗೆ ತತ್ಸಂಬಂಧವಾದ ಕರ್ಮಲೇಪವಿಲ್ಲ. ಕರ್ಮಲೇಪರಹಿತರಾಗುವರು॥೮॥

# ವ್ಯಾಖ್ಯಾನಗಳು

## ೧. ಸಂಕರ್ಷಣಒಡೆಯರ ವ್ಯಾಖ್ಯಾನ

ಜ್ಞಾನಿಗಳಾದವರು ವಿಧಿನಿಷೇಧ ಕರ್ಮಗಳ ತ್ಯಾಗಮಾಡತ್ತಾರೆ ಎಂತ ಹೇಳತಾರೆ.

ನದ–ಗಂಡುನದಿ, ನದಿಗಳು–ಹೆಣ್ಣುನದಿಗಳು, (ಸ್ತ್ರೀದೇವತೆಗಳು, ಪುರುಷದೇವತೆಗಳು ಅಭಿಮಾನವಿವಕ್ಷಾದಿಂದ ನದ-ನದಿಗಳೆಂದು ತಾತ್ಪರ್ಯ. ಇಂಥಾ ನದಿಗಳು), ಭೂಮಿ ಆಧಾರದಿಂದ ಭೂಮಿಯ ಒಳಗೆ ಇರತಕ್ಕ, ಸಮುದ್ರಪರ್ಯಂತ, ಪ್ರವಾಹಿಸೋವಾಗತವೆ. ಅನಂತರದಲ್ಲಿ, ಸಮುದ್ರ ಸೇರಿ, ಆ ಸಮುದ್ರದಲ್ಲಿ ಆಯಾ ಒಂದು ಪ್ರದೇಶದಲ್ಲಿ, ಆ ಸಮುದ್ರದ

ಉೀದಕವೇ ನದಿ ಉದಕಕ್ಕಿಂತಲೂ ಅತಿಶಯದಿಂದ ಪ್ರಚುರವಾಗಿ, ಇರೋಣದರಿಂದ, ದೂರದಿಂದ ನೋಡತಕ್ಕವರಿಗೆ, ಇದು ನದೀಉದಕ ಇದು ಸಮುದ್ರೋದಕ ಎಂದು ತೋರದೇನೇ, ಆ ಸಮುದ್ರದಲ್ಲಿ ಸಮುದ್ರದ ಸಂಗಡ ಕ್ರೀಡಿಸುತ್ತಾ, ತಾವು ಪ್ರತ್ಯೇಕವಾಗಿಯೇ ಇರೋವಾಗತವೆ. ಇದರಂತೆ, ಬ್ರಹ್ಮಜ್ಞಾನಿಗಳಾದವರು, ಸರ್ವತ್ರ ಭಗವಚ್ಚಿಂತನಾಜ್ಞಾನ ಪ್ರಾಪ್ತವಾಗಕ್ಕಿಂತ ಪೂರ್ವದಲ್ಲಿ, ಶಾಸ್ತ್ರತಃ ನಿಷಿದ್ಧವಾದ ಸಕಾಮಕರ್ಮ ದಾವದದೆ ಅದರನ್ನ, ವಿದ್ಯುಕ್ತವಾದ ಯೋಗ್ಯಕರ್ಮ ಎಂದು ಆಚರಿಸುವರು. ಆಕಾರದಲ್ಲಿ ಇವರ ಮನೋಮೂರ್ತಿಗಳು ನದೀಪ್ರವಾಹದಂತೆ ಪ್ರವಹಿಸುತ್ತಾ ಇರುತ್ತವೆ. ಇಂಥಾ ಪ್ರವಹಿಸುತ್ತಾಇರತಕ್ಕ ಮನಸ್ಸಿಗೆ, ಈ ನದಿಗಳ ದೃಷ್ಟಾಂತದಂತೆ ಆಚರಿಸುವರು. ಗುರುಗಳ ದ್ವಾರಾ ಸಮುದ್ರಸಾಮ್ಯವಾದ ಭಗವದುಪಾಸನಾ ಲಭ್ಯವಾದರೆ ಈ ಮನಃಪ್ರವಾಹ ಭಗವದಾಖ್ಯ ಸಮುದ್ರದಲ್ಲಿ ಪ್ರವೇಶವಾಗಿ, ಸರ್ವತ್ರ ಬಿಂಬಕ್ರಿಯಾದ್ವಾರಾ ಪ್ರತಿಬಿಂಬಕ್ರಿಯಾನೇ ಹೊರ್ತು ಬ್ಯಾರೆ ಇಲ್ಲ ಎಂತಲೂ, ತಾನು ಅಸ್ವತಂತ್ರ ಎಂತಲೂ, ಈ ರೀತ್ಯಾ ಜ್ಞಾನಾನುಸಂಧಾನದಿಂದ ಭಗವದ್ರೂಪಗಳು ಸರ್ವತ್ರ ಚಿಂತನೆಗೆ ಬಂದರೆ, ಪೂರ್ವದ ಸಮಸ್ತಸಕಾಮ ಕರ್ಮಗಳ ತ್ಯಾಗಮಾಡಿ, ನಿಷ್ಕಾಮಕರ್ಮಗಳಲ್ಲಿ ನಿರತರಾಗಿ, ನದಿಗಳು ಸಮುದ್ರಸೇರಿದ ನಂತರ ಪ್ರವಾಹದಿಂದ ರಹಿತವಾಗಿ ಸಮುದ್ರದ ಸಂಗಡ ದಾವ ರೀತ್ಯಾ ರಮಿಸತವೋ, ತದ್ವತ್–ಸಮುದ್ರಸಾಮ್ಯ ಪರಮಾತ್ಮನಲ್ಲಿ ಸಕಾಮರೂಪವಾದ ಮನಃಪ್ರವಾಹಗಳು ಸೇರಿ, ನಿಷ್ಕಾಮಗಳಾಗಿ ಶ್ರೀಪರ-ಮಾತ್ಮನ ಗುಣಗಳ ಒಳಗೆ, ತಮಗೆ ಯೋಗ್ಯವಾದ ಏಕದೇಶ ಗುಣಗಳಲ್ಲಿ ರಮಿಸುತ್ತಾ, ಯೋಗ್ಯಗಳಾದ ನಿಷ್ಕಾಮ ಕರ್ಮಗಳಲ್ಲಿ ರತರಾಗಿನ್ನು ಅಸಂಪ್ರಜ್ಞಾತ ಸಮಾಧಿಯಲ್ಲಿ ಅದೂಸೂ ತ್ಯಾಗಮಾಡಿ ಇರೋವರಾಗತಾರೆ ಎಂತರ್ಥ.

ಪ್ರಮಾಣ :

**ಯಸ್ತ್ವಾತ್ಮರತಿರೇವಸ್ಯಾದಾತ್ಮತೃಪ್ತಶ್ಚ ಮಾನವಃ ।**
**ಆತ್ಮನ್ಯೇವ ಚ ಸಂತುಷ್ಟಸ್ತಸ್ಯ ಕಾರ್ಯಂ ನ ವಿದ್ಯತೇ ।**

**ಯಸ್ತ್ವೇವ ಸಾತ್ಮರತೋ ಮುಕ್ತಃ ಕಾರ್ಯಂ ತಸ್ಯೈವ ನಾಸ್ತಿ ಹಿ" ||**

**–ಇತಿ ಗೀತಾತಾತ್ಪರ್ಯ ನಿರ್ಣಯೇ|| ೮ ||**

**೨. ಭಾವಪ್ರಕಾಶಿಕೆ :**

ವ್ಯಾಪ್ತ್ಯೋಪಾಸಕರು ಫಲಾಪೇಕ್ಷೆಯಿಂದ ವಿಧಿನಿಷೇಧರೂಪವಾದ ಕರ್ಮಗಳನ್ನು ಆಚರಿಸುವುದಿಲ್ಲವೆಂದು ಹೇಳುತ್ತಾರೆ :–

ಮಹಾನದಗಳು, ನದಿಗಳು ಎಲ್ಲವೂ ಸಮುದ್ರದಲ್ಲಿ ಹೋಗಿ ಸೇರುವವರೆಗೂ ಬೇರೆಬೇರೆಯಾಗಿ ಪ್ರವಹಿಸುತ್ತಿರುವುವು. ಸೇರಿದಕೂಡಲೇ ಹೇಗೆ ಅದರಲ್ಲಿ ಬೆರೆತು ನದಿಯಾಗಿ ಕಾಣದೆ, ಸಮುದ್ರದೊಂದಿಗೆ ಅಡಗಿಹೋಗುವುದೋ ಹಾಗೆ ಜ್ಞಾನಿಗಳು ಸರ್ವತ್ರವ್ಯಾಪ್ತನಾದ ಭಗವದ್ರೂಪಚಿಂತನೆಯು ಅನುಷ್ಠಾನಕ್ಕೆ ಬರುವವರೆಗೂ ,ವಿಧಿನಿಷೇಧರೂಪವಾದ ಕರ್ಮಾಚರಣೆಯನ್ನು ಮಾಡುತ್ತಿರುವರು. ಅದು ಅನುಷ್ಠಾನಕ್ಕೆ ಬಂದ ಕೂಡಲೇ ವಿಧಿನಿಷೇಧರೂಪ ಕರ್ಮಾಚರಣೆಯನ್ನು ಬಿಟ್ಟುಬಿಡುವರು. ಇಲ್ಲಿ ಸರ್ವಥಾಕರ್ಮಗಳನ್ನೇ, ಬಿಟ್ಟುಬಿಡುವರೆಂದು ಅರ್ಥವಲ್ಲ. ವಿಧಿಬದ್ಧರಲ್ಲದ ದೇವತೆಗಳೂ ಕೂಡ ಶ್ರುತ್ಯುಕ್ತಕರ್ಮಾನುಷ್ಠಾನವನ್ನು ಮಾಡುತ್ತಿರುವುದಾಗಿ, **ಭಾಗವತ ತೃತೀಯಸ್ಕಂಧದಲ್ಲಿ– ದೇವಾನಾಂ ಗುಣಲಿಂಗಾನಾಮಾನುಸ್ರಾವಿಕಕರ್ಮಣಾಮ್**–ಎಂಬ ಮೂಲದಲ್ಲಿ ಗುಣವೇ ಸ್ವರೂಪವಾಗುಳ್ಳ ದೇವತೆಗಳು ಅನುಸ್ರಾವಿಕಕರ್ಮಿಗಳೆಂದು ಹೇಳಿರುವ ಅನುಸ್ರಾವಿಕ ಶಬ್ದಕ್ಕೆ **ಭಾಗವತ ತಾತ್ಪರ್ಯದಲ್ಲಿ– ಅನುಸ್ರಾವಿಕ ಕರ್ಮಾಸೌ ಶ್ರುತ್ಯುಕ್ತಂ ಯೋ ನ ಲಂಘಯೇತ್**– ವೇದೋಕ್ತಕರ್ಮಗಳನ್ನು ಮೀರದೆ ಅನುಷ್ಠಾನ ಮಾಡುವವನೇ ಅನುಸ್ರಾವಿಕಕರ್ಮಿ ಎಂದು ಹೇಳಿರುವರು. ಮತ್ತು **ನ ಸುರಾಂ ಪಿಬೇತ"** – ಎಂದರೆ ಸುರಾಪಾನ ಮಾಡಬಾರದು. ಎಂಬೀ ವಾಕ್ಯವು ನಿಷೇಧವಾಕ್ಯವು. **ಅಹರಹಃ ಸಂಧ್ಯಾಮುಪಾಸೀತ** –ಪ್ರತಿದಿವಸ ಸಂಧ್ಯಾವಂದನೆ ಮಾಡಬೇಕು ಎಂಬೀ ವಾಕ್ಯವು ವಿಧಿವಾಕ್ಯವು. ವಿಧಿವಾಕ್ಯವನ್ನೂ, ನಿಷೇಧವಾಕ್ಯವನ್ನೂ ಅನುಸರಿಸದಿದ್ದರೆ ಪ್ರತ್ಯವಾಯ ಬರುವುದು. ಆದ್ದರಿಂದ **ಗೀತಾತಾತ್ಪರ್ಯಾದಿ** ವಾಕ್ಯಗಳಿಂದ ಈ ವಿಷಯದಲ್ಲಿ ಮುಖ್ಯವಾಗಿ ತಿಳಿಯಬೇಕಾದ ಅಂಶವೇನೆಂದರೆ, ಅಸಂಪ್ರಜ್ಞಾತ

ಸಮಾಧಿಯಲ್ಲಿದ್ದು ಭಗವದ್ಧ್ಯಾನಾದಿಗಳನ್ನು ಮಾಡುತ್ತಿರುವಾಗ, ಅವಶ್ಯಕ ಪಾಪ ಕರ್ಮಗಳನ್ನು ಬಿಟ್ಟರೆ ಬಾಧಕವಿಲ್ಲ. ಭಗವಂತನನ್ನು ಭಜಿಸುತ್ತಾ, ಪದಗಳನ್ನು ಪಾಡುತ್ತಾ, ಪ್ರೇಮರಿತು ನರ್ತನಾದಿಗಳನ್ನು ಮಾಡುತ್ತಿರುವಾಗ ಸಂಧ್ಯಾಧಿಗಳನ್ನು ಬಿಟ್ಟರೂ ಬಾಧಕವಿಲ್ಲ. ಏಕೆಂದರೆ, ಇವುಗಳೂ ಒಂದು ವಿಧಿಗೆ ಸೇರಿದ ಕರ್ಮಗಳೇ. ಆ ಕಾಲ ಹೊರತು ಇತರ ಕಾಲದಲ್ಲಿ ನಿತ್ಯ ಕರ್ಮಾನುಷ್ಠಾನವನ್ನು ಮಾಡೇಮಾಡಬೇಕು. ಅವಧೂತಾಶ್ರಮಿಗಳೂ ಕೂಡ ಕರ್ಮಗಳನ್ನು ಮಾಡುತ್ತಿರುವುದಾಗಿ **ಶ್ರೀಮದಾಚಾರ್ಯರ** ವಾಕ್ಯವಿರುವುದು. ಆದ್ದರಿಂದ ಕರ್ಮತ್ಯಾಗದ ಅರ್ಥವೇನೆಂದರೆ– **ಸ್ವರ್ಗಕಾಮೋಯಜೇತ**– ಸ್ವರ್ಗಾಪೇಕ್ಷೆಯುಳ್ಳವರು ಯಾಗಮಾಡಬೇಕು, ಎಂಬಿವೇ ಮೊದಲಾದ ಫಲವನ್ನು ತೋರಿಸುವ ವಿಧಿಗಳನ್ನು ಬಿಟ್ಟುಬಿಡುವರು. ಅಂದರೆ, ಭಗವತ್ಪ್ರೀತಿಗೋಸ್ಕರ ನಿತ್ಯಕರ್ಮಗಳನ್ನು ಅನುಷ್ಠಾನ ಮಾಡಿ, ಪರಮಾತ್ಮನಿಗೆ ಸಮರ್ಪಿಸುವರು. ಅವರ ಫಲವನ್ನು ಬೇಡರು. ಕರ್ಮತ್ಯಾಗವೆಂದರೆ ಕರ್ಮಫಲತ್ಯಾಗವೆಂದು ಗೀತೆಯಲ್ಲಿ ಸ್ಪಷ್ಟಮಾಡಿರುವರು. ಆದ್ದರಿಂದ ಇಲ್ಲಿ ಅಖಿಳಕರ್ಮಗಳನ್ನು ತ್ಯಜಿಸುವರೆಂದರೆ, ಸಮಸ್ತಕಾಮ್ಯಕರ್ಮಗಳನ್ನು (ಫಲಾಪೇಕ್ಷೆಯಿಂದ ಮಾಡುವ ಎಲ್ಲಾ ಕರ್ಮಗಳನ್ನು) ಬಿಟ್ಟು ನಿಷ್ಕಾಮುಕರಾಗಿ ಕರ್ಮಾಚರಣೆಯನ್ನು ಮಾಡುವರೆಂದು ತಾತ್ಪರ್ಯವು. ||೮||

## ೩. ಭಾವದರ್ಪಣ

ಭಗವದುಪಾಸನಾ ಇಂದ ಪ್ರೇಮರಿತ ಪುರುಷರ್ಗೆ ವಿಧಿನಿಷೇಧಗಳಿಲ್ಲವೆಂದು ಹೇಳುತ್ತಾರೆ–**ನದೇತಿ** || || ೮ ||

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ (ಸಂಸ್ಕೃತ ಮೂಲ)

"ನದ"-ಇತಿ || ಶೋಣ ಭದ್ರ ಮುಖಾಃ ಪುಂ ನದಾಃ || ಪರಿಮಮ್ರ-ಹರೋಮ್ರ–ಹರಿಯುವುವು. ತ್ಯಜಿಸುವರು–ಪ್ರವೃತ್ತಕರ್ಮ ಸಂಘಮ್ || "ತಸ್ಮಾತ್ ನ ಕರ್ಮ ಕುರ್ವೀತ"–ಇತ್ಯುಕ್ತೇಃ || "ಪ್ರವೃತ್ತಂ ಮತ್ಪರಃ ತ್ಯಜೇತ್"–ಇತಿ ಚ ||, ಕರ್ಮಭಿಃ ಶುದ್ಧಸತ್ವಾನಾಂ ಕರ್ಮ ತ್ಯಾಗೋಪಿ ನಾನ್ಯಥಾಃ"–ಇತಿ ಚ **ಐತರೇಯೇ**|| ಯದ್ವಾ ಕ್ರಿಯಾದ್ವೈತಮ್ || ೮ ||

**ಕನ್ನಡಾರ್ಥ :**

ಶೋಣ, ಭದ್ರ ಇತ್ಯಾದಿ ನದಿಗಳಿಗೆ ಪುರುಷನದಗಳೆಂದು ಹೆಸರು. ಸರ್ವಕರ್ಮಗಳನ್ನು ಬಿಡದೆ ಪ್ರವೃತ್ತಕರ್ಮಗಳನ್ನು ಮಾತ್ರ ಬಿಡಬೇಕು. ಪ್ರವೃತ್ತಕರ್ಮಗಳೆಂದರೆ, ಕಾಮ್ಯಕರ್ಮಗಳೆಂದರ್ಥ, ಸಕಾಮಕರ್ಮಗಳು ಬಂಧಕಗಳು. "ನನ್ನನ್ನೇ ಪರಮಾತ್ಮನೆಂದು ಆಶ್ರಯಿಸಿದವನು ಸಕಾಮಕರ್ಮಗಳನ್ನು ಪರಿತ್ಯಜಿಸಬೇಕು"–ಎಂದು **ಶ್ರೀಕೃಷ್ಣನ** ವಾಕ್ಯ. ವಿಹಿತಕರ್ಮಾನುಷ್ಠಾನದಿಂದ ಅಂತಃಕರಣಶುದ್ಧವಾಗುವುದು. ಅಂತಹವರು ಸಕಾಮಕರ್ಮಗಳನ್ನು ತ್ಯಾಗಮಾಡಬೇಕು. ಈ ವಿಷಯವು **ಐತರೇಯದಲ್ಲಿ** ಉಕ್ತವಾಗಿದೆ. ಕ್ರಿಯಾದ್ವೈತವು ಇಲ್ಲಿ ಸೂಚಿತವಾಗಿದೆ ಎಂದು ತಿಳಿಯಬೇಕು. ॥ ೮ ॥

## ೩. ಶ್ರೀಗುರುಹೃದಯಪ್ರಕಾಶಿಕೆ

ಬಾಹ್ಯಪ್ರಜ್ಞೆಯಿಲ್ಲದೆ ದೇವರನ್ನು ಧ್ಯಾನಿಸುವ ಅಸಂಪ್ರಜ್ಞಾತಜ್ಞಾನಿಗಳಿಗೆ ವಿಧಿನಿಷೇಧ ಲೇಪವಿಲ್ಲೆಂದು ಸದೃಷ್ಟಾಂತ ತಿಳಿಸುತ್ತಾರೆ–ನದನದಿಗಳೆಂದು.

ಆದಿಯಲ್ಲಿ ಪಶ್ಚಿಮಾಭಿಮುಖಿಗಳಾಗಿ ಹರಿಯುವ ನದವೆಂಬ ಗಂಡು ನದಿಗಳೂ, ಪೂರ್ವಾಭಿಮುಖಿಗಳಾಗಿ ಹರಿಯುವ ಹೆಣ್ಣುನದಿಗಳೂ ಸಹಾ ಭೂಮಿಯಲ್ಲಿ ಸಮುದ್ರಪರ್ಯಂತ ಪ್ರವಾಹ ಹೋಗಿ, ಅನಂತರ ಸಮುದ್ರದಲ್ಲೆ ತನ್ಮಯವಾಗಿ, ಅಂದರೆ ಬೇರೆ ಬೇರೆ ನಾಮ ರೂಪ ತೋರದಂತೆ ಕ್ರೀಡಿಸುತ್ತಿರುವ ಹಾಗೆ, ಬುಧರೆಂಬ ಜ್ಞಾನಿಗಳು ನಿಷೇಧವೆಂಬ ಶಾಸ್ತ್ರವಿರುದ್ಧ ಕೆಲಸಗಳನ್ನು ಬಿಟ್ಟು, ವಿಧಿ ಎಂಬ ಸಂಧ್ಯಾದಿಕರ್ಮಗಳನ್ನು ಮಾಡುತ್ತಿರುವರು. ಸರ್ವತ್ರದಲ್ಲೂ ದೇವರ ರೂಪಗಳ ಚಿಂತನೆ ಹೃದ್ಗತವಾಗಿ, ಬಾಹ್ಯಜ್ಞಾನ ತಪ್ಪಲು, ಸರ್ವಕರ್ಮಗಳನ್ನು ಬಿಟ್ಟು ಧ್ಯಾನೈಕನಿಷ್ಠರಾಗುವರು.

**ಯಸ್ತ್ವಾತ್ಮರತಿರೇವಸ್ಯಾದಾತ್ಮತೃಪ್ತಶ್ಚ ಮಾನವಃ ।**
**ಆತ್ಮನ್ಯೇವಚ ಸಂತುಷ್ಟಸ್ತಸ್ಯ ಕಾರ್ಯಂ ನ ವಿದ್ಯತೇ ॥**
**–ಎಂಬ ಗೀತಾರ್ಥ.**

**ಯಸ್ತ್ವೇವಾತ್ಮರತೋಮುಕ್ತಃ ಕಾರ್ಯಂ ತಸ್ಯೈವನಾಸ್ತಿ ಹಿ ॥**
**ಎಂಬ ಗೀತಾತಾತ್ಪರ್ಯಾರ್ಥ** ಸಹ ವಿವರಿಸಲ್ಪಟ್ಟಿತು. ॥ ೮ ॥

# ಸರ್ವವ್ಯಾಖ್ಯಾನಸಾರಸಂಗ್ರಹ

ಜ್ಞಾನಾನುಸಂಧಾನಪೂರ್ವಕವಾಗಿ, ದೇಹಾದ್ಯಂತವ್ಯಾಪ್ತನಾಗಿರುವ ಪುರುಷರೂಪೀ ಶ್ರೀಪರಮಾತ್ಮನಿಗೆ ಅಭಿಷೇಕವೆಂದರಿತು, ಸ್ನಾನಾಚರಣೆಯ ಕ್ರಮವನ್ನು ಹಿಂದಿನ ಪದ್ಯದಲ್ಲಿ ತಿಳಿಸಿ, ಸದಾ ಭಗವಚ್ಚಿಂತನೆಯಲ್ಲಿ ಆಸಕ್ತ ಮನಸ್ಸುಳ್ಳ ಜ್ಞಾನಿಗಳಿಗೆ ವಿಧಿನಿಷೇಧಕರ್ಮಗಳ ಲೇಪವಿಲ್ಲವೆಂದು ತಿಳಿಸುತ್ತಾರೆ, **ನದನದಿಗಳು** ಎಂಬ ಪ್ರಸಕ್ತಪದ್ಯದಿಂದ.

೧. ಪೂರ್ವದಿಂದ ಪಶ್ಚಿಮಾಭಿಮುಖವಾಗಿ ಹರಿದು ಸಮುದ್ರವನ್ನು ಸೇರುವ ಪುರುಷವಾಚಕ ಗಂಡುನದಿಗಳಿಗೆ **ನದ**ಗಳೆಂದು ಹೆಸರು. ಶೋಣ, ಭದ್ರಾ ಇತ್ಯಾದಿಗಳು **ನದ**ಗಳೆಂದು ಕರೆಸುವುವು.

೨. ಪಶ್ಚಿಮದಿಂದ ಪೂರ್ವಾಭಿಮುಖವಾಗಿ ಹರಿದು ಸಮುದ್ರವನ್ನು ಸೇರುವ ತುಂಗಾ, ಕಾವೇರಿ, ಗೋದಾವರೀ ಇತ್ಯಾದಿ ನದಿಗಳು ಸ್ತ್ರೀವಾಚಕಗಳು. ಇವು ಹೆಣ್ಣುನದಿಗಳೆಂದು ಪ್ರಖ್ಯಾತವಾಗಿವೆ.

೩. ಅಂತಹ ನದನದಿಗಳು ಭೂಮಿಯಲ್ಲಿ **(ಇಳೆಯೊಳಗೆ)** ಪ್ರವಾಹ ರೂಪದಲ್ಲಿ ಹರಿಯುವುವು. ಇಳೆಯೊಳಗೆ ಹರಿಯುತ್ತಿರುವ ಇಂತಹ ನದನದಿಗಳ ಪ್ರವಾಹವು ಸಮುದ್ರವನ್ನು ಸೇರುವವರೆಗೂ, ಪ್ರತ್ಯೇಕವಾಗಿಯೇ ತಮ್ಮ ತಮ್ಮ ಹೆಸರುಗಳಿಂದ ಪ್ರಸಿದ್ಧವಾಗಿವೆ. ಇಂತಹ ನದನದಿಗಳನ್ನು ಇದು ಗಂಗಾ, ಇದು ಯಮುನಾ, ಇದು ಕೃಷ್ಣಾ ಇತ್ಯಾದಿ ನಾಮಗಳಿಂದ ಕರೆಯುತ್ತೇವೆ.

೪. ಅಂತಹ ನದನದಿಗಳು ಸಮುದ್ರವನ್ನು ಸೇರಿದನಂತರ,ಸಮುದ್ರೋದಕದೊಡನೆ ಬೆರೆಯುವುವು. ಆಗ ನೋಡುವವರಿಗೆ ಸಮುದ್ರೋದಕವೇ ಅಗಾಧಪ್ರಮಾಣದಲ್ಲಿ ಗೋಚರವಾಗುವುದು. ಆ ನದನದಿಗಳು ತಮ್ಮ ರೂಪ ಮತ್ತು ನಾಮವನ್ನು ಕಳೆದುಕೊಂಡು, ಸಮುದ್ರೋದಕದೊಂದಿಗೆ ಕ್ರೀಡಿಸುತ್ತಾ **(ರಮಿಸುವುವು)** ತನ್ಮಯವಾಗಿ ತೋರುವುವು. ಆದರೆ ಆ

ನದನದಿಗಳು ಸಮುದ್ರದ ನೀರಿನಲ್ಲಿ ಬೆರೆತರೂ, ಪ್ರತ್ಯೇಕವಾಗಿಯೇ ಇರುವುವು. ಈ ರಹಸ್ಯವನ್ನು ಮಳೆಸುರಿಸುವ ಮೇಘಗಳು ಬಲ್ಲವು.

೫. ಪೂರ್ವೋಕ್ತದೃಷ್ಟಾಂತದಿಂದ ವ್ಯಾಪ್ತ್ಯೋಪಾಸಕರ ಲಕ್ಷಣವನ್ನು ತಿಳಿಸುತ್ತಾರೆ. ನೋಡುವ ಸಮಸ್ತವಸ್ತುಗಳಲ್ಲಿ, ಪ್ರವಾಹತೋನಿತ್ಯವಾದ ಕಾಲಪ್ರವಾಹದಲ್ಲಿ, ವಾಸಿಸುವ ಸ್ಥಳ, ಆಡ್ಡಾಡುವ ಜಾಗ ಇತ್ಯಾದಿ ದೇಶಗಳಲ್ಲಿ, ವಿವಿಧಅವಸ್ಥಾವಿಶೇಷಗಳಲ್ಲಿ, ಸರ್ವತ್ರ ಭಗವದ್ರೂಪಗಳನ್ನು ಮನಸಾ ಚಿಂತಿಸುತ್ತಾ, ಸಕಲ ಠಾವಿನಲ್ಲಿ ಆಯಾಯಾ ಭಗವದ್ರೂಪಗಳನ್ನು ನೋಡುತ್ತಿರುವ ಸಾಧಕರಿಗೆ ವ್ಯಾಪ್ತ್ಯೋಪಾಸಕರೆಂದು ಹೆಸರು. ಇಂತಹ ವ್ಯಾಪ್ತ್ಯೋಪಾಸಕರು **ಕಂಡಕಂಡಲ್ಲಿ ವಿಶ್ವರೂಪಕಾಂಬ** ಮಹಾಮಹಿಮರು. ಅವರ ಮನಸ್ಸು ಎಂಬ ಪ್ರವಾಹವು ನದನದಿಗಳ ಪ್ರವಾಹಕ್ಕೆ ಸದೃಶ. ನದನದಿಗಳು ಸಮುದ್ರ ಸೇರುವ ಪರ್ಯಂತ ಪ್ರತ್ಯೇಕವಾಗಿ ತಮ್ಮ ತಮ್ಮ ರೂಪನಾಮಗಳಿಂದ ಪ್ರಸಿದ್ಧವಾಗಿರುವಂತೆ, ಸರ್ವತ್ರದಲ್ಲಿ ಭಗವಚ್ಚಿಂತನಾಸ್ಥಿತಿ ಮುಟ್ಟುವವರೆಗೂ, ಅವರ ಮನಸ್ಸು 'ವಿಧ್ಯುಕ್ತವಾಗಿ ಮಾಡಲೇಬೇಕಾದ **ವಿಧಿ** ಮತ್ತು ಶಾಸ್ತ್ರರೀತ್ಯಾ ತ್ಯಾಗಮಾಡಬೇಕಾದ **ನಿಷೇಧ** ಎಂಬ ಕರ್ಮಾನುಷ್ಠಾನದಲ್ಲಿ ರತವಾಗಿರುವುದು. ಸಮುದ್ರವನ್ನು ಸೇರಿದನಂತರ ಆ ನದನದಿಗಳ ನೀರು ಸಮುದ್ರೋದಕದೊಡನೆ ಬೆರೆತು, ಕ್ರೀಡಿಸಿ, ತನ್ಮಯವಾಗುವಂತೆ, ಸರ್ವವಸ್ತು, ಕಾಲ, ದೇಶ, ಅವಸ್ಥಾದಿಗಳಲ್ಲಿ ಭಗವದ್ರೂಪಗಳ ಚಿಂತಸಿ, ಉಪಾಸನೆ, ದರ್ಶನಮಾಡುತ್ತಿರುವ ಮೇಲ್ಮಟ್ಟದ ಸಾಧಕಜೀವರಿಗೆ ಮನಸ್ಸು, ಬುದ್ಧಿ, ಚಿತ್ತ ಇತ್ಯಾದಿ ಮನೋವ್ಯಾಪಾರಗಳೂ ಮತ್ತು ಇಂದ್ರಿಯಾದಿದೈಹಿಕಕ್ರಿಯೆಗಳೂ ಸರ್ವತ್ರವ್ಯಾಪ್ತನಾದ ಆ ಪರಮಾತ್ಮನಲ್ಲಿಯೇ ರತವಾಗಿರುವುವು. ಅವರಿಗೆ ಅನ್ಯವಿಷಯಗಳಲ್ಲಿ ಆಸಕ್ತಿ ಇಲ್ಲ. ಅವರು ಬಾಹ್ಯಜ್ಞಾನರಹಿತರಾಗಿ, ಅಸಂಪ್ರಜ್ಞಾತಸಮಾಧಿಸ್ಥಿತಿಯಲ್ಲಿರುವರು. ಅವರ ಸಕಲಕ್ರಿಯಾವಿಶೇಷಗಳೂ ಶ್ರೀಹರಿಯ ಮಹಾಮಹಿಮಾರೂಪವಾದ ಗುಣಗಾನದಲ್ಲಿಯೇ ತನ್ಮಯವಾಗಿ ಲೀನವಾಗಿರುವುವು. ಫಲಾಪೇಕ್ಷಾರಹಿತರಾಗಿ ಭಗವತ್ಪ್ರೀತಿಗಾಗಿ ಕರ್ಮಾಚರಣೆ ಮಾಡುವರು. ಕಾಮ್ಯಕರ್ಮಗಳಲ್ಲಿ ಅವರ ಮನಸ್ಸು ತೊಡಗುವುದಿಲ್ಲ. ಅಲ್ಲದೆ ಸಮಸ್ತವಾದ ದೈಹಿಕ, ವಾಚನಿಕ,

ಮಾನಸಿಕ, ಐಂದ್ರಿಕ, ಕಾಲಿಕ, ದೈಶಿಕಾದಿ ಕರ್ಮಗಳನ್ನೆಲ್ಲಾ ಬಿಂಬರೂಪಿಯಾದ ಶ್ರೀಹರಿಯೇ ನಿಂತು ಪ್ರೇರಿಸಿ, ಮಾಡಿ ಮಾಡಿಸುತ್ತಾನೆಂಬ ಬಿಂಬ ಕ್ರಿಯಾರೂಪವಾದ ಉತ್ತಮ ಜ್ಞಾನಾನುಸಂಧಾನಿಗಳೇ **ಬುಧರು.** ಅಂತಹ ಬುಧರಿಗೆ ವಿಧಿನಿಷೇದಕರ್ಮಗಳ ಲೇಪವಿಲ್ಲ. "ನಾನು ಅಸ್ವತಂತ್ರ, ಸಕಲ ಶುಭ, ಅಶುಭ, ಮಿಶ್ರಕ್ರಿಯೆಗಳೆಲ್ಲವೂ ಭಗವತ್ಪ್ರೇರಿತವಾಗಿ ಬಿಂಬಕ್ರಿಯಾ ದ್ವಾರಾ, ನಡೆಯುತ್ತಿರುವುವು ಎಂಬ ನಿತ್ಯಾನುಸಂಧಾನವುಳ್ಳ ಬುಧರಿಗೆ ಕರ್ಮಲೇಪವೆಲ್ಲಿಹುದು ? ಎಂದು ವ್ಯಾಪ್ತೋಪಾಸಕರ ಲಕ್ಷಣವನ್ನು ತಿಳಿಸುತ್ತಾರೆ, ನದನದಿಗಳ ಪ್ರವಾಹ ಸಮುದ್ರೋದಕವನ್ನುಸೇರುವ ಸುಂದರ ದೃಷ್ಟಾಂತದಿಂದ. ||೮||

## ಪದ್ಯ ೯

**ಮೂಲ :**

**ಕಲಿಯೆ ಮೊದಲಾದಖಿಳ ದಾನವ |**
**ರೊಳಗೆ ಬ್ರಹ್ಮಭವಾದಿ ದೇವ |**
**ರ್ಕಳು ನಿಯಾಮಕರಾಗಿ ಹರಿಯಾಜ್ಞೆಯಲಿ ಅವರವರ ||**
**ಕಲುಷಕರ್ಮವ ಮಾಡಿ ಮಾಡಿಸಿ |**
**ಜಲರುಹೇಕ್ಷಣಗರ್ಪಿಸುತ ನಿ |**
**ಶ್ಚಲ ಸುಭಕ್ತಿ ಜ್ಞಾನಪೂರ್ಣರು ಸುಖಿಪರವರೊಳಗ || ೯ ||**

**ಅವತರಣಿಕೆ :**

ಕಲಿಯಿಂದ ಪ್ರಾರಂಭಿಸಿ ಸಕಲದೈತ್ಯರಲ್ಲಿ ಬ್ರಹ್ಮ, ರುದ್ರಾದಿ ತತ್ವಾಭಿಮಾನಿದೇವತಾವರ್ಗ ಶ್ರೀಶನ ಆಜ್ಞೆಯಂತೆ ನಿಯಾಮಕರಾಗಿದ್ದು, ಆ ದೈತ್ಯರದ್ವಾರಾ ಪಾಪಕರ್ಮಗಳನ್ನು ಮಾಡಿ ಮಾಡಿಸುತ್ತಾ,ಭಗವದಾಜ್ಞಾಧೀನರಾಗಿ, ಪುಂಡರೀಕದಳಾಯತಾಕ್ಷನಾದ ಬಿಂಬರೂಪೀ ಶ್ರೀಹರಿಗೆ ಅರ್ಪಿಸುತ್ತಾ, ಆ ದುಷ್ಕರ್ಮಗಳ ಲೇಪವಿಲ್ಲದಂತೆ, ದೃಢವಾದ ಭಕ್ತಿ ಮತ್ತು ಸುಜ್ಞಾನ

ಪೂರ್ಣರಾಗಿದ್ದು, ಆ ದೈತ್ಯರಲ್ಲಿ ತತ್ತ್ವಕಾರ್ಯ ನಡೆಯಿಸಿದರೂ, ಆನಂದದಿಂದ ಇರುತ್ತಾರೆಂದು ತಿಳಿಸುತ್ತಾರೆ – **ಕಲಿಯೆ ಮೊದಲಾದ** ಎಂಬ ಪ್ರಸಕ್ತ ಸಂಧಿಗತ ೯ನೆಯ ಮೇಲಿನ ಪದ್ಯದಿಂದ. ॥೯॥

**ಪ್ರತಿಪದಾರ್ಥ :**

**ಕಲಿಯೆ ಮೊದಲಾದ**=ತಮೋಯೋಗ್ಯಜೀವರಲ್ಲಿ ನೀಚತಮನಾದ ಕಲಿಯಿಂದ ಪ್ರಾರಂಭಿಸಿ, **ಅಖಿಳ ದಾನವರೊಳಗೆ**=ಸಮಸ್ತರಾದ ದೈತ್ಯರಲ್ಲಿ, **ಬ್ರಹ್ಮಭವಾದಿ**=ಚತುರ್ಮುಖ ಬ್ರಹ್ಮದೇವರು, ರುದ್ರದೇವರೇ ಮೊದಲಾಗಿ, **ದೇವರ್ಕಳು**=ದೇವತಾವರ್ಗವು, **ನಿಯಾಮಕರಾಗಿ**=ಆಯಾಯ ದೈತ್ಯರ ಸ್ಥೂಲದೇಹಗಳಲ್ಲಿ ತಾರತಮ್ಯಾನುಸಾರ ತತ್ತ್ವನಿಯಾಮಕರಾಗಿ, **ಹರಿಯಾಜ್ಞೆಯಲಿ**=ಬಿಂಬರೂಪೀ ಶ್ರೀಪರಮಾತ್ಮನ ಆಜ್ಞೆಯಂತೆ, **ಅವರವರ**=ಆಯಾಯಾ ದೈತ್ಯರ, **ಕಲುಷಕರ್ಮವ**=ಭಗವದ್ದ್ವೇಷ ಇತ್ಯಾದಿ ಪಾಪಕಾರ್ಯಗಳನ್ನು, **ಮಾಡಿ ಮಾಡಿಸಿ**=ಬಿಂಬಕ್ರಿಯಾದ್ವಾರಾ ತಾವು ಮಾಡಿ, ದೈತ್ಯರ ಮೂಲಕ ಮಾಡಿಸಿ, **ಜಲರುಹೇಕ್ಷಣಗೆ**=ಕಮಲನೇತ್ರನಾದ ಬಿಂಬರೂಪೀ ಶ್ರೀಪರಮಾತ್ಮನಿಗೆ, **ಅರ್ಪಿಸುತ**=ತಾವು ಮಾಡಿದ ತತ್ತ್ವಕಾರ್ಯಗಳನ್ನು ಅರ್ಪಿಸುತ್ತಾ, **ನಿಶ್ಚಲ**=ದೃಢವಾದ, **ಸುಭಕ್ತಿ**=ಸಮೀಚೀನವಾದ ಭಕ್ತಿ, **ಜ್ಞಾನಪೂರ್ಣರು**=ಸುಜ್ಞಾನದಿಂದಪೂರ್ಣರಾದ ದೇವತೆಗಳು, **ಅವರೊಳಗೆ**=ಆ ದೈತ್ಯರಲ್ಲಿದ್ದು, **ಸುಖಿಪರು**=ಸುಖಮಯರಾಗಿರುತ್ತಾರೆ. (ಅವರಿಗೆ ಪಾಪಕರ್ಮದ ಫಲರೂಪವಾದ ದುಃಖವಿಲ್ಲ) ॥೯॥

## ವ್ಯಾಖ್ಯಾನಗಳು

### ೧ ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :

ದೈತ್ಯರಿಗೆ ನಿಯಾಮಕರು ದೇವತೆಗಳೆಂತಲೂ, ಅವರಲ್ಲಿ ತಾವು ಪಾಪಕರ್ಮಗಳ ಮಾಡತಾರೆ ಎಂತಲೂ ಹೇಳತಾರೆ.

ತಮೋಯೋಗ್ಯಜೀವರಲ್ಲಿ ಅತ್ಯಂತ ನೀಚನಾದ ಕಲಿಯ ಮೇಲೆ,

ನೀಚರು ಇಲ್ಲದಂಥಾ ಕಲಿನಾಮಕ ದೈತ್ಯ ಮೊದಲಾದ ಸಮಸ್ತರಾದ ದೈತ್ಯರ ಒಳಗೆ ಬ್ರಹ್ಮವಾಯುಗಳು ಕಲಿಯಲ್ಲಿ ನಿಯಾಮಕರು. ಈ ಕಲಿಗಿಂತಲೂ ಕಿಂಚಿದುತ್ತಮನಾದ ದೈತ್ಯನಲ್ಲಿ ಬ್ರಹ್ಮ, ವಾಯು, ರುದ್ರ ಮೊದಲಾದ ದೇವತೆಗಳು ಆಯಾ ದೈತ್ಯರ ಸ್ಥೂಲದೇಹಗಳಲ್ಲಿ ತಾರತಮ್ಯಾನುಸಾರ ತತ್ತ್ವ ನಿಯಾಮಕರಾಗಿ, ಶ್ರೀಪರಮಾತ್ಮನ ಆಜ್ಞಾದಿಂದ, ಆಯಾದೈತ್ಯರ, ಭಗವಂತ ನಲ್ಲಿ ದ್ವೇಷಮಾಡತಕ್ಕ ದೋಷಕರ್ಮಗಳ ಶ್ರೀಪರಮಾತ್ಮನ ದ್ವಾರಾ ತಾವು ಮಾಡಿ, ತಮ್ಮ ಕ್ರಿಯಾ ದ್ವಾರಾ ದೈತ್ಯರಿಂದ ಮಾಡಿಸಿ, ಕಮಲದಳದೋಪಾದಿ ಯಲ್ಲಿ ನೇತ್ರವುಳ್ಳ ಬಿಂಬರೂಪೀ ಶ್ರೀಪರಮಾತ್ಮನಿಗೆ, ತಾವು ಮಾಡಿದಂಥ ಪಾಪಗಳ ಅರ್ಪಣಮಾಡುತ್ತಾ, ಅಚಂಚಲವಾದ ಸಮೀಚೀನವಾದ ಭಕ್ತಿ ಜ್ಞಾನದಿಂದ ಪೂರ್ಣರಾದ ದೇವತೆಗಳು, ಆಯಾ ದೈತ್ಯರಲ್ಲಿ ಇದ್ದು ಸುಖವಂತ ರಾಗಿರುತ್ತಾರೆ.

**ವಿಶೇಷಾರ್ಥ :**

ದೈತ್ಯರಲ್ಲಿ ದೇವತಾನಿಯಾಮಕತ್ವ ಹ್ಯಾಗೆಂದರೆ, ದೇವತೆಗಳಿಗೆ ಸಮಾನ ರಾದ ದೈತ್ಯರು ಇದ್ದಾರೆ. ಸಮಾನರೆಂದರೆ, ದೇವತೆಗಳಲ್ಲಿ ಸುಜ್ಞಾನ ಬಲ ಸುಲಕ್ಷಣಾದಿಗಳು ಎಷ್ಟು ಅವೋ ತತ್ಸಮಾನರಾದ ದೈತ್ಯರಲ್ಲಿ ತದ್ವಿಪರೀತ ದಿಂದ ಸಮಾನವಾಗಿ ಅವೆ. ಇವರೇ ದೇವತೆಗಳಿಗೆ ಸಮಾನರಾದ ದೈತ್ಯರು ಎಂಬುದು. ನಿಯಾಮಕತ್ವ ಎಂಬುದು ಸಮಾನದೈತ್ಯರಲ್ಲಿ ಸಮಾನದೇವತೆಗಳ ನಿಯಾಮಕತ್ವ ಇರೋದಾಗಿ ಅದೆ. ರುದ್ರದೇವರಿಗಿಂತಲೂ, ಉತ್ತಮರಾದ ದೇವತೆಗಳ ನಿಯಾಮಕತ್ವವೂ ಅದೆ. ಸಮಾನರಲ್ಲದ ದುರ್ಗಣಗಳಲ್ಲಿ ಅಧಿಕ ರಾದ ದೈತ್ಯರಲ್ಲಿ ಸಮಾನದೇವತೆಗಳ ನಿಯಾಮಕತ್ವ ಇಲ್ಲ. ಈ ಪ್ರಕಾರ ದೈತ್ಯಾಂತವರಿಗೂ ತಾರತಮ್ಯದಿಂದ ತಿಳಿಯಬೇಕು, ದೈತ್ಯರಲ್ಲಿ ದೈತ್ಯ ನಿಯಾಮಕತ್ವ ಅದೆ. ಅದು ಹ್ಯಾಗೆಂದರೆ, ಆ ದೈತ್ಯರಲ್ಲಿ ದುರ್ಗುಣಗಳ ಹಿಡಿದು ನೀಚೋಚ್ಚ ತಾರತಮ್ಯ ಅದೆ. ಈ ರೀತ್ಯಾ ನೀಚನಲ್ಲಿ ಉತ್ತಮ ನಿಯಾಮಕತ್ವ ಇಲ್ಲ. ಉತ್ತಮನಲ್ಲಿ ನೀಚ ನಿಯಾಮಕತ್ವ ಉಂಟು. ಈ ಪ್ರಕಾರ ತಿಳಿಯಬೇಕು. ದೇವತೆಗಳಲ್ಲಿ ಅಸುರರ ನಿಯಾಮಕತ್ವ ಇಲ್ಲ. ಅಸುರಾವೇಶ ಉಂಟು. ಅದೂನೂ ಸಮಾನದೇವತೆಗಳಲ್ಲಿ ಸಮಾನರಾದ

ಅಸುರಾವೇಶ ಇಲ್ಲ. ದುರ್ಲಕ್ಷಣದಿಂದ ಉತ್ತಮರಾದ ಅಸುರಾವೇಶ ಇರೋ ದಾಗಿ ಇರುತ್ತದೆ. ಈ ತಾರತಮ್ಯಾನುಸಾರ ಇದರನ್ನ ತಿಳಿಯಬೇಕು. ಮಾನುಷರಲ್ಲಿ ದೇವ ದೈತ್ಯರು ಉಭಯರೂ ತತ್ತ್ವನಿಯಾಮಕರಾಗಿರುರುತ್ತಾರೆ. ಈ ತತ್ತ್ವಾಭಿಮಾನಿದೈತ್ಯರು ಸಮಾನದೇವತೆಗಳ ಅಧೀನರಾಗಿರುತ್ತಾರೆ. ದೇವತೆಗಳು ದೈತ್ಯರಲ್ಲಿ ಪಾಪಕರ್ಮ ಮಾಡಿ ಅರ್ಪಿಸಿದ ವಿಚಾರ, ಪಾಪ ಅರ್ಪಿಸಬೇಕು ಎಂಬುದಕ್ಕೆ ಇದೇ ಸೂಚನೆ. ದೇವತೆಗಳೂನೂ ತ್ರಿಗುಣಾತ್ಮಕ ಲಿಂಗಬದ್ಧರು. ತ್ರಿಗುಣಾತ್ಮಕ ಸ್ಥೂಲಶರೀರವೂ ಹೌದು. ತಮೋಗುಣದ ಕಾರ್ಯ ಪಾಪಕಾರ್ಯ. ತಮೋಗುಣ ಅಂಗೀಕರಿಸಿದರೆ, ಅದರ ಕಾರ್ಯ ಅಂಗೀಕರಿಸಬೇಕು. ದೈತ್ಯರಲ್ಲಿ ದೇವತೆಗಳು ಭಗವದಾಜ್ಞಾದಿಂದ ಅವರವರ ಸ್ವರೂಪವನ್ನನುಸರಿಸಿ ತಮ್ಮ ತಮ್ಮ ತಮೋಗುಣವನ್ನು ನಿಮಿತ್ತಮಾಡಿ ಪಾಪಕಾರ್ಯಗಳ ಮಾಡಿ ಭಗವದರ್ಪಣ ಮಾಡತಾರೆ. ಈ ಪಾಪಗಳ ಅರ್ಪಿಸೋಣ ನಿಷಿದ್ಧವಾದರೆ, ದೇವತೆಗಳು ಅರ್ಪಿಸಬಾರದು. ಆದ್ದರಿಂದ ಪಾಪಗಳ ಅರ್ಪಿಸೋಣ ವಿಧಿಯೇ. ತದ್ವತ್ ಮನುಷ್ಯರಿಗೂ ತಮೋಗುಣವಿದೆ. ಅದರ ಕಾರ್ಯ ಪಾಪವೇ. ದೇವರ ಆಜ್ಞಾದಿಂದ ಇವರು ಪಾಪಕಾರ್ಯ ಮಾಡಿದ್ದರನ್ನ ಅರ್ಪಿಸೋದೇ ವಿಧಿ ಅಂತ ಆಗತದೆ. ಅರ್ಪಿಸಬಹುದು ಇದರಲ್ಲಿ ತಾರತಮ್ಯವದೆ. ಅಹಂಮಮತಾಯುಕ್ತರಾಗಿ ಜ್ಞಾನ, ಭಕ್ತಿ ಮತ್ತು ವೈರಾಗ್ಯಗಳಿಂದ ಶೂನ್ಯರಾಗಿ ವಿಷಯಾಸಕ್ತರಾಗಿ ಸಕಾಮರಾಗಿ ಇರ ತಕ್ಕ ಅಪಕ್ವದಶಾದಲ್ಲಿ ಪಾಪಗಳ ಅರ್ಪಿಸಬಹುದೆಂದು ಸಂಗತಿ ತಿಳಕೊಂಡು ಅರ್ಪಿಸಿದರೆ, ಅದರನ್ನ ದೇವರು ಅಂಗೀಕರಿಸೋದಿಲ್ಲ. ಅಂಥಾದರನ್ನ ಸ್ವೀಕರಿಸಿ ಅವರ ಫಲ ಮತ್ತೂ ಅವರಿಗೇ ಉಣಸತಾನೆ. ದೇವತೆಗಳಿಗೆ ಹಾಂಗಲ್ಲ. ಅದರನ್ನ ಭೋಗಕ್ಕೆ ಕೋಡೋಲ್ಲ. ಅಪಕ್ವಾಧಿಕಾರಿಮಾನುಷರು ಪಕ್ವಕಾಲ ದಲ್ಲಿ ಕೊಟ್ಟದ್ದರನ್ನ ಅಂಗೀಕರಿಸಿ ತತ್ಫಲ ಭೋಗಕ್ಕೆ ಕೊಡೋದಿಲ್ಲ, ಇದು ನೇಮ. ಇದರ ಸಂಗತಿ ಬಹಳವದೆ ॥೯॥

**೨. ಭಾವಪ್ರಕಾಶಿಕೆ :**

ಕಲಿ ಮೊದಲಾದ ತಮೋಯೋಗ್ಯರಲ್ಲಿ ಬ್ರಹ್ಮಾದಿಗಳು ಇದ್ದು, ಪಾಪ ಕರ್ಮಗಳನ್ನು ಮಾಡಿಸಿ, ಹರಿಗೆ ಸಮರ್ಪಿಸುತ್ತ ನಿರ್ಲಿಪ್ತರಾಗಿರುವರೆಂದು ಹೇಳುತ್ತಾರೆ.

ಕಲಿ ಮೊದಲಾದ ಸಕಲದೈತ್ಯರಲ್ಲಿಯೂ ಬ್ರಹ್ಮ, ರುದ್ರ ಮೊದಲಾದ ತತ್ತ್ವೇಶರು ಇದ್ದು, ಅವರವರ ಯೋಗ್ಯತಾನುಸಾರ ಭಗವದ್ವೇಷಾದಿ ಪಾಪ ಕರ್ಮಗಳನ್ನು ಭಗವದಾಜ್ಞಾಪ್ರಕಾರ ತಾವು ಮಾಡಿ, ಅವರಿಂದ ಮಾಡಿಸಿ, ಅವುಗಳನ್ನು ಪರಮಾತ್ಮನಿಗೆ ಸಮರ್ಪಿಸುತ್ತಾ, ತಾವುಗಳು ನಿಶ್ಚಲವಾದ ಭಕ್ತಿ ಜ್ಞಾನದಿಂದ ಕೂಡಿ, ಅವರೊಳಗೆ ಸುಖದಿಂದಿರುವರು. ॥೯॥

೩. ಭಾವದರ್ಪಣ :

ಶ್ರೀಪರಮಾತ್ಮನ ಪಾದಾಬ್ಜದ ಮಕರಂದಾಸ್ವಾದನತತ್ಪರರಾದ ಬ್ರಹ್ಮಾದಿ ದೇವತೆಗಳು ಕಲ್ಯಾದ್ಯಸುರರಲ್ಲಿ ನಿಂತು, ದುಷ್ಕರ್ಮ ಮಾಡಿ, ಹರಿಗೆ ಅರ್ಪಿಸುವರೆಂದು ಹೇಳುತ್ತಾರೆ—ಕಲೀತಿ ॥ ೯ ॥

೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ :

ದಾನವರಲ್ಲಿ ತತ್ತ್ವೇಶದೇವತೆಗಳು ಪ್ರೇರಿಸುತ್ತಾರೆ. ಅವರು ಶ್ರೀಹರಿಯ ಆಜ್ಞಾಪಾಲಕರು. ಈ ಕಾರಣದಿಂದ ಅವರಿಗೆ ಪಾಪಲೇಪವಿಲ್ಲ. ಅದರ ಬದಲು ಅಧಿಕಪುಣ್ಯವೇ ಇರುವುದೆಂದು ಈ ಪದ್ಯದಿಂದ ತಿಳಿಸುತ್ತಾರೆ. ಇಲ್ಲಿ ಉಕ್ತವಾದ ವಿಷಯಗಳನ್ನು ಹಿಂದಿನ ಪದ್ಯಗಳ ವ್ಯಾಖ್ಯಾನಗಳಲ್ಲಿ ಉಲ್ಲೇಖಿಸಲಾಗಿದೆ. ॥ ೯ ॥

೫. ಶ್ರೀಗುರುಹೃದಯಪ್ರಕಾಶಿಕೆ :

ಇದೇ ರೀತಿಯಾಗಿ ದೇವರ ಆಜ್ಞೆಯಿಂದ ದೇವತೆಗಳು ಅಸುರರಲ್ಲಿದ್ದು ಪಾಪಕರ್ಮ ಪ್ರೇರಿಸಿದಾಗ್ಯೂ, ಅವರಿಗೆ ಪಾಪಲೇಪವಿಲ್ಲೆಂದು, ಕಲಿಯೆ ಎಂಬ ಮೊದಲು ಮೂರು ಪದ್ಯಗಳಿಂದ ತಿಳಿಸುತ್ತಾರೆ. ಕಲಿಯೇ ಮೊದಲಾದ ಸಕಲ ದಾನವರೆಂಬ ದುರ್ಜನರಲ್ಲಿ ಬ್ರಹ್ಮರುದ್ರಾದಿಗಳು ದೇವರ ಆಜ್ಞೆಯಿಂದ ನಿಯಾಮಕರಾಗಿ, ಆಯಾಯಾ ದುರ್ಜನರ ಪೂರ್ವಕರ್ಮಾನುಸಾರ ಪಾಪ ಕರ್ಮಗಳನ್ನು ಪ್ರೇರಣೆಮಾಡಿ ಮಾಡಿಸುತ್ತಾ, ಶ್ರೀಹರಿಯೇ ನಿನ್ನ ಆಜ್ಞಾನುಸಾರ ಮಾಡಿಸಿದ್ದೇವೆಂದು ಅವನಿಗೆ ಒಪ್ಪಿಸುತ್ತಾ, ದೃಢಸುಭಕ್ತಿ ಜ್ಞಾನಪೂರ್ಣರಾದ್ದರಿಂದ ತಮ್ಮಲ್ಲೇ ಸುಖವಾಗಿರುವರು. ॥ ೯ ॥

# ಸರ್ವವ್ಯಾಖ್ಯಾನಸಾರಸಂಗ್ರಹ

ಕಲ್ಯಾದಿದೈತ್ಯರಲ್ಲಿ ಬ್ರಹ್ಮರುದ್ರಾದಿ ತತ್ತ್ವಾಭಿಮಾನಿದೇವತೆಗಳು, ಭಗವದಾಜ್ಞಾನುಸಾರ ಮಾಡಿ ಮಾಡಿಸುವ ದುಷ್ಕರ್ಮಗಳನ್ನು ಜಲಹುರೇಕ್ಷಣನಾದ ಲಕ್ಷ್ಮೀಪತಿಯ ಪಾದಾರವಿಂದಗಳಲ್ಲಿ ಅರ್ಪಿಸುತ್ತಾ ತಾವು ಆ ದುಷ್ಕರ್ಮಗಳ ಫಲರೂಪವಾದ ಪಾಪಗಳಿಂದ ನಿರ್ಲಿಪ್ತರಾಗಿದ್ದು, ನಿಶ್ಚಲ ಸುಭಕ್ತಿ ಜ್ಞಾನಪೂರ್ಣರಾಗಿರುತ್ತಾರೆಂದು ತಿಳಿಸುತ್ತಾರೆ, ಪ್ರಸಕ್ತ ೯ನೆಯ ಪದ್ಯದಿಂದ.

೧. ತಮೋಯೋಗ್ಯ ಜೀವವರ್ಗದಲ್ಲಿ **ಕಲಿಯು** ನೀಚತಮನಾದ ದೈತ್ಯ ಅವನಿಗಿಂತ ನೀಚಕಾರ್ಯಗಳನ್ನು ಮಾಡುವವರು ಸಮಸ್ತದೈತ್ಯ ವರ್ಗದಲ್ಲಿಯೇ ಇಲ್ಲ.

೨. ನಮ್ಮ ಸ್ಥೂಲಶರೀರದಲ್ಲಿ ಬ್ರಹ್ಮರುದ್ರಾದಿ ತತ್ತ್ವಾಭಿಮಾನಿ ದೇವತೆಗಳಿದ್ದಾರೆ. ಒಬ್ಬೊಬ್ಬರು ಒಂದೊಂದು ತತ್ತ್ವಕ್ಕೆ ನಿಯಾಮಕರು. ಬಿಂಬರೂಪಿಯಾದ ಪದ್ಮದಳಾಯತಾಂಬಕನು ಆ ತತ್ತ್ವೇಶರಲ್ಲಿ ಅಂತರ್ಯಾಮಿಯಾಗಿ ನಿಂತು, ತತ್ತ್ವಕಾರ್ಯಗಳನ್ನು ಪ್ರೇರಿಸಿ ನಡೆಯಿಸುವನು. ತತ್ತ್ವಾಭಿಮಾನಿ ದೇವತೆಗಳಂತೆಯೇ ನಮ್ಮೀದೇಹದಲ್ಲಿ ದೈತ್ಯರೂ ಸಹ ವಿದ್ಯಮಾನರಾಗಿದ್ದಾರೆ. ತ್ರಿವಿಧವರ್ಗದ ಜೀವರಲ್ಲಿ ತಮ್ಮ ಯೋಗ್ಯತೆಗನುಗುಣವಾಗಿ, ಅನಾದಿ ಲಿಂಗಗತ ಕರ್ಮಕ್ಕನುಸಾರ, ಶುಭ, ಮಿಶ್ರ ಮತ್ತು ಅಶುಭ ಕಾರ್ಯಗಳು ಬಿಂಬಕ್ರಿಯಾ ದ್ವಾರಾ ನಡೆಯುತ್ತಿರುವುವು. ದೇವತೆಗಳ ದ್ವಾರಾ ಪುಣ್ಯಕರ್ಮಗಳೂ, ದೈತ್ಯರ ದ್ವಾರಾ ಪಾಪಕರ್ಮಗಳೂ ಪ್ರವರ್ತನವಾಗುತ್ತಿರುವುವು. ಅಂತಹ ತತ್ತ್ವ ನಿಯಾಮಕರಾದ ದೇವತೆಗಳು ದೈತ್ಯರಲ್ಲಿದ್ದು, ಬಿಂಬಪ್ರೇರಣಾನುಸಾರ, ಭಗವದಾಜ್ಞೆಯಿಂದ ಪಾಪಕಾರ್ಯಗಳನ್ನು ದೈತ್ಯರದ್ವಾರಾ ಮಾಡಿ ಮಾಡಿಸುವರು.

೩. ದೈತ್ಯರಲ್ಲಿ ತಮೋಗುಣದ ಪ್ರಾಚುರ್ಯ ಅಧಿಕವಾಗಿರುವುದು. ಈ ಕಾರಣದಿಂದ ತಮೋಗುಣ ನಿಮಿತ್ತಿಕವಾಗಿ, ಭಗವದ್ದ್ವೇಷ, ವಿಷ್ಣುಭಕ್ತ

ರಲ್ಲಿ ದ್ವೇಷ, ಸಜ್ಜನರ ಪೀಡೆ, ಇತ್ಯಾದಿ ದುಷ್ಕರ್ಮಗಳು ದೈತ್ಯರ ದ್ವಾರಾ ನಡೆಯುತ್ತಿರುವುವು. ಆದರೆ ಅವರಲ್ಲಿ ಈ ದುಷ್ಕರ್ಮರೂಪವಾದ ಪಾಪ ಕಾರ್ಯಗಳು, ಆ ದೈತ್ಯರಲ್ಲಿರುವ ತತ್ತ್ವಾಭಿಮಾನಿದೇವತೆಗಳಿಂದಲೇ ಪ್ರವರ್ತನ ಗೊಳ್ಳುವುವು. ಆಗ ಆ ದೇವತೆಗಳಿಗೆ ದುಷ್ಕರ್ಮಾನುಷ್ಠಾನಪ್ರವರ್ತಕ ರಾಗಿರುವ ಕಾರಣ, ಪಾಪಲೇಪವಾಗಬೇಕು. ಆದರೆ ಆ ದೇವತೆಗಳು ಭಗವ ದಾಜ್ಞೆಯಿಂದ, ಅದೊಂದು ಭಗವತ್ಸೇವೆ ಎಂಬ ಜ್ಞಾನಾನುಸಂಧಾನದಿಂದ ಮಾಡುತ್ತಾರಾದ್ದರಿಂದ, ಅವರಿಗೆ ಪಾಪಕರ್ಮಗಳ ಲೇಪವಿಲ್ಲ. ರಾಜನ ಆಜ್ಞೆಯಂತೆ ಸೇವಕರು ಒಬ್ಬನನ್ನು ಕೊಂದರೆ, ಆ ಕೃತ್ಯದಿಂದ ಆ ಸೇವಕರಿಗೆ ಶಿಕ್ಷೆ ಪ್ರಾಪ್ತಿಯಾಗುವುದಿಲ್ಲ. ಅವರು ರಾಜಾಜ್ಞೆಯಂತೆ ಕಾರ್ಯನಿರ್ವಹಿಸುವರು.

೪. ದೈತ್ಯರ ದ್ವಾರಾ ದೇವತೆಗಳು ನಡೆಯಿಸತಕ್ಕ ದುಷ್ಕರ್ಮಗಳನ್ನು ತಮ್ಮ ಬಿಂಬರೂಪಿಯಾದ ಜಲರುಹೇಕ್ಷಣನ ಪಾದಕಂಜಗಳಿಗೆ ಅರ್ಪಿಸುವರು. ಪುಣ್ಯಕರ್ಮವನ್ನು ಮಾತ್ರ ದೇವರಿಗೆ ಅರ್ಪಿಸಬೇಕು. ಪಾಪಕರ್ಮಗಳನ್ನು ಸುತರಾಂ ಅರ್ಪಿಸಬಾರದು ಎಂಬ ಶಂಕೆ ಮೂಡುವುದು ಸಹಜ. ಆದರೆ ಶ್ರೀಹರಿಯು ಮಾತ್ರ ಸರ್ವತಂತ್ರಸ್ವತಂತ್ರನು. ಶ್ರೀಲಕ್ಷ್ಮಿಯನ್ನೂ ಸೇರಿಸಿ ಕೊಂಡು, ಉಳಿದ ಜೀವಕೋಟಿಪ್ರವಿಷ್ಟರಾದ ಸಕಲ ಚೇತನರೂ ಅಸ್ವತಂತ್ರರು. ಅವರ ಕರ್ತೃತ್ವಶಕ್ತಿ ಭಗವದಧೀನವಾಗಿದೆ. ಪುಣ್ಯ, ಮಿಶ್ರ ಮತ್ತು ಪಾಪ ಕರ್ಮಗಳೆಲ್ಲವೂ ಸ್ವತಂತ್ರನಾದ ಬಿಂಬನಿಂದಲೇ ಪ್ರೇರಿತವಾಗಿ ನಡೆಯುವುವು. ಜಗತ್ತಿನ ಸಮಸ್ತ ವ್ಯಾಪಾರವಿಶೇಷಗಳಿಗೂ ಬಿಂಬಕ್ರಿಯೆಯೇ ಮುಖ್ಯ ಕಾರಣವು. ಪರಾಧೀನಕರ್ತೃತ್ವವನ್ನು ಹೊಂದಿರುವ ಸಕಲ ಜೀವವರ್ಗ ಅವನಿಂದ ಪ್ರೇರ್ಯರು ಮತ್ತು ನಿಯಮ್ಯರು. ಬಿಂಬರೂಪಿಯಾದ ಶ್ರೀಹರಿಯು ಜೀವರ ಸ್ವರೂಪಯೋಗ್ಯತೆ ಮತ್ತು ಅನಾದಿಕರ್ಮಕ್ಕೆ ಅನುಗುಣವಾಗಿ ಕಾರ್ಯ ಮಾಡಿಸಿ, ತತ್ತತ್ಫಲಗಳನ್ನು ಜೀವರಿಗೆ ಕೊಡುವನು. ಸಮಸ್ತದೋಷ ವಿದೂರನಾದ ಶ್ರೀಪರಮಾತ್ಮನಿಗೆ ವೈಷಮ್ಯ, ನೈರ್ಘೃಣ್ಯ ಮುಂತಾದ ದೋಷಗಳ ಲೇಪ ಲವಲೇಶವೂ ಇಲ್ಲ. ಈ ಉತ್ತಮವಾದ ಜ್ಞಾನಾನು ಸಂಧಾನವು ದೇವತೆಗಳಿಗೆ ಇರುವುದರಿಂದ, ದೈತ್ಯರಲ್ಲಿ ಬಿಂಬಪ್ರೇರಣಾನುಸಾರ ಪಾಪಕಾರ್ಯಗಳನ್ನು ಮಾಡಿಸಿದಾಗ್ಯೂ ಅವರಿಗೆ ಪಾಪಕರ್ಮಲೇಪವಿಲ್ಲ. ಸಮಸ್ತ

ಕ್ರಿಯೆಗಳನ್ನೂ ಬಿಂಬನಾದ ಶ್ರೀಪರಮಾತ್ಮನೇ ಅಂತರ್ಯಾಮಿಯಾಗಿದ್ದು ಮಾಡಿ ಮಾಡಿಸುತ್ತಾನೆಂಬ ಜ್ಞಾನಾಕಾರವೇ "ಶ್ರೀಹರಿಗೆ ದ್ವಂದ್ವಕರ್ಮ ಸಮರ್ಪಣೆ" ಎಂದೆನಿಸುವುದು, ಅದಲ್ಲದೇ ಜೀವರೇ ಕರ್ಮ ಮಾಡುತ್ತಾರೆ. ಆ ಕರ್ಮವನ್ನು ಶ್ರೀಹರಿಗೆ ಅರ್ಪಿಸುವರು ಎಂಬುದಲ್ಲ. ಸಕಲಬಿಂಬಕ್ರಿಯಾಜ್ಞಾನವೇ **ಭಗವದರ್ಪಣ** ಎಂದೆನಿಸುವುದು. ಈ ತತ್ತ್ವರಹಸ್ಯವನ್ನು ದೇವತೆಗಳು ಅರಿತಿರುವುದರಿಂದ, ದೈತ್ಯರಲ್ಲಿದ್ದು ಪಾಪಕರ್ಮಗಳನ್ನು ಭಗವತ್ಪ್ರೇರಣೆಯಿಂದ ಮಾಡಿ, ದೈತ್ಯರದ್ವಾರಾ ಮಾಡಿಸುತ್ತಿದ್ದರೂ, ಅವರು ಪಾಪಕರ್ಮನಿರ್ಲಿಪ್ತರಾಗಿ, ದೃಢವಾದ ಭಕ್ತಿ, ಸಮೀಚೀನವಾದ ಭಗವತ್ಸಂಬಂಧವಾದ ಜ್ಞಾನ ಇವುಗಳಿಂದ ಸದಾ ಯುಕ್ತರಾಗಿದ್ದು, ಆನಂದಪೂರ್ಣರಾಗಿರುವರು.

೫. ದೇವತೆಗಳಿಗೆ ಕಲ್ಯಾದಿ ಅಸುರಾವೇಶ ಉಂಟು, ಪರಶುಕ್ಲತ್ರಯ ವರ್ಗಕ್ಕೆ ಸೇರಿದ ಬ್ರಹ್ಮ, ವಾಯು, ಸರಸ್ವತೀ, ಭಾರತೀ, ಋಜುವರ್ಗದವರಿಗೆ ಕಲ್ಯಾವೇಶವಿಲ್ಲ. ಅವರಿಗೆ ಕಲಿಯ ಸಂಪರ್ಕವೇ ಇಲ್ಲ. ಆಖಣಾಶ್ಮಸಮರು. ಅವರರಾದ ರುದ್ರಾದಿದೇವತೆಗಳಿಗೆ ಕಲ್ಯಾವೇಶ ಉಂಟು. ಆದರೆ ಅದೇ ದೇವತೆಗಳು ತತ್ತ್ವಕಾರ್ಯಗಳಲ್ಲಿ ನಿರತರಾಗಿ, ತತ್ತ್ವಾಭಿಮಾನಿಗಳಾಗಿ ಕಾರ್ಯನಿರ್ವಹಿಸುವಾಗ, ಅಸುರಾವೇಶ ಲವಲೇಶವೂ ಇಲ್ಲ. ॥ ೯ ॥

## ಪದ್ಯ ೧೦

ಮೂಲ :

ಆವ ಜೀವರೊಳಿದ್ದರೇನಿ ।
ನ್ನಾವ ಕರ್ಮವ ಮಾಡಲೇನಿ ।
ನ್ನಾವ ಗುಣರೂಪಗಳುಪಾಸನೆ ಮಾಡಲೇನವರು॥
ಕಾವನಯ್ಯನ ಪರಮ ಸತ್ಕರು।
ಣಾವಲೋಕನ ಬಲದಿ ಚರಿಸುವ।
ದೇವತೆಗಳನು ಮುಟ್ಟಲಾಪವೆ ಪಾಪಕರ್ಮಗಳು॥ ॥೧೦॥

**ಅವತರಣಿಕೆ :**

ಸದಾ ಶ್ರೀಪರಮಾತ್ಮನ ಕರುಣಾಕಟಾಕ್ಷವೀಕ್ಷಣಕ್ಕೆ ಪಾತ್ರರಾದ ದೇವತೆಗಳಿಗೆ ಯಾವ ಜೀವರಲ್ಲಿ ವ್ಯಾಪ್ತರಾಗಿದ್ದರೂ, ಯಾವ ಕರ್ಮಾನುಷ್ಠಾನರತರಾಗಿದ್ದರೂ, ತಾವು ಯಾವ ಅಧಿಷ್ಠಾನದಲ್ಲಿದ್ದು ಆ ಅಧಿಷ್ಠಾನಗತಭಗವದ್ರೂಪಗಳ ಗುಣರೂಪೋಪಾಸನೆ ಮಾಡುತ್ತಿದ್ದರೂ, ಪಾಪಕರ್ಮಗಳು ಲೇಪವಾಗುವುದಿಲ್ಲವೆಂದು ತಿಳಿಸುತ್ತಾರೆ, ಪ್ರಸಕ್ತಸಂಧಿಗತ ೧೦ನೆಯ ಈ ಪದ್ಯದಿಂದ ॥೧೦॥

**ಪ್ರತಿಪದಾರ್ಥ :**

**ಅವರು**=ಪೂರ್ವೋಕ್ತರಾದ ತತ್ತ್ವಾಭಿಮಾನಿದೇವತೆಗಳು, **ಆವ ಜೀವರೊಳಿದ್ದರೇನು**=ತ್ರಿವಿಧವರ್ಗಕ್ಕೆ ಸೇರಿದ ಯಾವ ಜೀವನ ಸ್ಥೂಲದೇಹದಲ್ಲಿ ವಿದ್ಯಮಾನರಾಗಿದ್ದರೂ, **ಇನ್ನಾವ ಕರ್ಮವ ಮಾಡಲೇನು**=ಆಯಾಯ ಜೀವರ ಸಾಧನೆಗನುಗುಣವಾಗಿ ತತ್ತ್ವಕಾರ್ಯಗಳನ್ನು ಮಾಡಿದರೇನು, **ಇನ್ನಾವ ಗುಣರೂಪಗಳುಪಾಸನೆ ಮಾಡಲೇನು**=ಆಯಾಯ ಜೀವನ ಅಧಿಷ್ಠಾನಗತ ಭಗವದ್ರೂಪಗಳ ಗುಣ ಹಾಗೂ ರೂಪವಿಶೇಷಗಳನ್ನು ಉಪಾಸನೆ ಮಾಡಿದರೇನು, **ಕಾವನಯ್ಯನ**=ತನ್ನಿಂದ ಸೃಷ್ಟಿಯಾದ ಈ ಸಮಸ್ತಜಗತ್ತನ್ನೂ ಸಂರಕ್ಷಿಸುತ್ತಿರುವ ಜಗತ್ಪಿತನಾದ ಶ್ರೀಪರಮಾತ್ಮನ (**ಭಾವಜನಯ್ಯನ** ಎಂಬ ಪಾಠಾಂತರವೂ ಇದೆ. –ಆಗ **ಭಾವಜ**= ಮನ್ಮಥನ **ಐಯ್ಯ**=ತಂದೆಯಾದ ಶ್ರೀಹರಿ ಎಂದರ್ಥ). **ಪರಮಸತ್ಕರುಣಾವಲೋಕನ**=ಶ್ರೇಷ್ಠವಾದ ಕರುಣಾಪೂರಿತದೃಷ್ಟಿವೀಕ್ಷಣದ, **ಬಲದಿ**=ಅನುಗ್ರಹಬಲದಿಂದ, **ಚರಿಸುವ ದೇವತೆಗಳನು** = ಸ್ಥೂಲದೇಹಗತತತ್ತ್ವನಿಯಾಮಕ ದೇವತಾವರ್ಗವನ್ನು, **ಪಾಪಕರ್ಮಗಳು**=ದುಷ್ಕರ್ಮ ಫಲರೂಪವಾದ ಪಾಪಗಳು, **ಮುಟ್ಟಲಾಪವೆ**=ಸ್ಪರ್ಶಿಸಲು ಸಾಧ್ಯವಾದೀತೇ ? ಅಂದರೆ, ಪಾಪಕರ್ಮಗಳಿಂದ ನಿರ್ಲೇಪರಾಗಿರುತ್ತಾರೆಂದು ಅರ್ಥ. ॥೧೦॥

# ವ್ಯಾಖ್ಯಾನಗಳು

## ೧ ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ದೇವತೆಗಳಿಗೆ ಪಾಪಕರ್ಮ ಲೇಪವಾಗೋದಿಲ್ಲ ಎಂತ ಹೇಳತಾರೆ.

ಪೂರ್ವೋಕ್ತರಾದ ದೇವತೆಗಳು ತ್ರಿವಿಧರಾದ ಯಾವ ಜೀವರಲ್ಲಿ ವ್ಯಾಪ್ತರಾಗಿದ್ದರೇನು ಮತ್ತು ಆಯಾ ಜೀವರ ಅನಾದಿಕರ್ಮವನ್ನನುಸರಿಸಿನ್ನೂ, ಆಗಾಮಿ–ಸಂಚಿತಕರ್ಮ ಅನುಸರಿಸಿನ್ನೂ, ಪಾಪ–ಪುಣ್ಯ–ಉದಾಸೀನ ಈ ಕರ್ಮಗಳ, ಇನ್ನೂ ದಾವ ಕರ್ಮ ಮಾಡಿದರೂನೂ ಮತ್ತು ನೀಚಾಧಿಷ್ಠಾನ ದೈತ್ಯರು, ಮಧ್ಯಮಾಧಿಷ್ಠಾನ ನಿತ್ಯಸಂಸಾರಿಗಳು, ಉತ್ತಮಾಧಿಷ್ಠಾನ ದೇವತೆಗಳು ಈ ಅಧಿಷ್ಠಾನಗಳಲ್ಲಿ ಯಾವ ಅಧಿಷ್ಠಾನಗತ ಭಗವದ್ರೂಪಗಳ, ಆ ರೂಪಗತ ಗುಣಗಳ ಉಪಾಸನೆ ಮಾಡಲೇನು, ಮನ್ಮಥನ ತಂದೆಯಾದ ಪರಮಾತ್ಮನ ಅತಿಶ್ರೇಷ್ಠವಾದ ಸಮೀಚೀನವಾದ ಕರುಣದಿಂದ ನೋಡೋಣದರ ಬಲದಿಂದ ಸಂಚಾರ ಮಾಡತಕ್ಕ ದೇಹಗತ ತತ್ತ್ವನಿಯಾಮಕ ದೇವತೆಗಳನ್ನು ದೋಷ ಕರ್ಮಗಳಾದದ್ದು ಫಲರೂಪದಿಂದ ಭೋಗಕ್ಕೆ ಒದಗಿ ಸ್ಪರ್ಶಮಾಡಲಾಪವೇ ಅಂದರೆ, ಶುದ್ಧವಾಗಿ ಮುಟ್ಟಲಾರವು. ದೇವತೆಗಳ ಪಾಪಕರ್ಮ ಮುಟ್ಟದೇ ಇರುವುದಕ್ಕೆ ಕಾರಣ, ಶ್ರೀಪರಮಾತ್ಮನ ಪೂರ್ಣಾಂತಃಕರಣಕ್ಕೆ ಪಾತ್ರರಾಗಿ ಪಾಪಗಳು ಅರ್ಪಿತ ಮಾಡಿದ್ದರಿಂದ ಅವರನ್ನ ಮುಟ್ಟಲಿಲ್ಲ. ಅಧಿಕಾರಿಗಳು ತಮ್ಮತಮ್ಮ ಯೋಗ್ಯತಾನುಸಾರ ಪರಮಾತ್ಮನ ಪೂರ್ಣಾಂತಃಕರಣಕ್ಕೆ ಪಾತ್ರರಾಗಿ, ಪಾಪಗಳ ಅರ್ಪಿಸಿದರೆ, ಆ ಪಾಪಗಳನ್ನ ಅವರಿಗೆ ಭೋಗಕ್ಕೆ ಕೊಡೋದಿಲ್ಲ. ತದ್ವ್ಯತಿರಿಕ್ತರಿಗೆ ಅವಶ್ಯ ಭೋಗಕ್ಕೆ ಕೊಡತಾನೆ ಎಂತ ತಾತ್ಪರ್ಯ.

**ಪ್ರಮಾಣ–'ಪ್ರೇರಕಾ ಅಪಿ ಪಾಪಸ್ಯ ನ ದೇವಾಃ ಫಲಭಾಗಿನಃ'** ಎಂತಲೂ, **ದೇಹವಾಗ್ಬುದ್ಧಿಜಂ ಧೀರಾ ಧರ್ಮಜ್ಞಾಃ ಶ್ರದ್ಧಯಾನ್ವಿತಾಃ।**
**ಕ್ಷಪಯಾಘಂ ನುಹದಪಿ ವೇಣುಗುಲ್ಮಮಿವಾನಳಃ।**
**ಅಘಂ ಧುನ್ವಂತಿ ಕಾರ್ತ್ಸ್ನ್ಯೇನ ನಿಹಾರಮಿವ ಭಾಸ್ಕರಃ॥** ಇತಿ ಭಾಗವತದಲ್ಲಿ ಉಕ್ತಿ॥ ॥೧೦॥

**೨ ಭಾವಪ್ರಕಾಶಿಕೆ :**

ಬ್ರಹ್ಮಾದಿಗಳು ಕಲಿ ಮೊದಲಾದವರಲ್ಲಿದ್ದು, ಪಾಪಕರ್ಮಗಳನ್ನು ಮಾಡುವುದರಿಂದ ಪಾಪಲೇಪವಿಲ್ಲವೆಂದು ಹೇಳುತ್ತಾರೆ.

**"ದೇವಾನಾಂ ಪುಣ್ಯಪಾಪಾಭ್ಯಾಂ ಸುಖಮೇವೋತ್ತರೋತ್ತರಂ"- ಎಂಬ ಭಾಗವತ ಏಕಾದಶಸ್ಕಂಧ ತಾತ್ಪರ್ಯಾನುಸಾರ** ದೇವತೆಗಳು ಪುಣ್ಯ ಮಾಡಲಿ, ಪಾಪಮಾಡಲಿ, ಅವರಿಗೆ ಸುಖವೆ ಹೊರತು, ದುಃಖವಿಲ್ಲವೆಂದು ಹೇಳಿರುವಂತೆ ಬ್ರಹ್ಮಾದಿ ತತ್ತ್ವೇಶರು ಕಲಿ ಮೊದಲಾದ ಯಾವ ಪಾಪಿಗಳಲ್ಲಿದ್ದರೇನು ? ಅವರಲ್ಲಿದ್ದು ಯಾವ ತಾಮಸ ರಾಜಸಾದಿ ಕ್ಷುದ್ರದೇವತೋಪಾಸನೆ ಮಾಡಿದರೇನು, ಶ್ರೀಪರಮಾತ್ಮನ ಕರುಣಾಕಟಾಕ್ಷದ ಬಲದಿಂದ ಸಂಚರಿಸುವ ದೇವತೆಗಳಿಗೆ ಪಾಪಸಂಬಂಧವಾಗುವವೇ ? ಎಂದಿಗೂ ಇಲ್ಲವೆಂಬ ತಾತ್ಪರ್ಯ. ॥೧೦॥

**೩ ಭಾವದರ್ಪಣ**

ಭಗವದ್ಭಕ್ತಿಯುಳ್ಳವರಿಗೆ ಪಾಪಕರ್ಮ ಮುಟ್ಟೋದಿಲ್ಲವೆಂದು ಹೇಳುತ್ತಾರೆ-ಆನೇತಿ। ಪಾಪೇತಿ--**"ದೇಹವಾಗ್ಬುದ್ಧಿಜಂ ಧೀರಾ ಧರ್ಮಜ್ಞಾಃ ಶ್ರದ್ಧಯಾನ್ವಿತಾಃ। ಕ್ಷಿಪತ್ಯಘಂ ಮಹದಪಿ ವೇಣುಗುಲ್ಮಭಿವಾನಲಃ॥ ಅಥಂ ಘ್ನನ್ವಂತಿ ಕಾಸ್ತ್ರ್ಯೇನ ನೀರಾಹಾರಮಿವ ಭಾಸ್ಕರ॥"**

**-ಇತಿ ಭಾಗವತೋಕ್ತೇಃ ॥** ॥೧೦॥

**೪ ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :**

ಶ್ರೀಹರಿಯು ಸರ್ವತಂತ್ರಸ್ವತಂತ್ರನು. ಅವನ ಕರುಣಾಪಾಂಗದಿಂದ ಪ್ರೇರಿತರಾಗಿ ದೇವತೆಗಳು ದೈತ್ಯರ ಶರೀರಗಳಲ್ಲಿ ಪಾಪಕರ್ಮಗಳನ್ನು ಮಾಡಿಸುವರು. ಆದರೂ ಆ ದುಷ್ಕರ್ಮಗಳು ಅವರ ದುಃಖಭೋಗಕ್ಕೆ ಕಾರಣವಾಗಲಾರವು. ಇನ್ನೂ ಅಧಿಕವಾದ ಪುಣ್ಯಪ್ರಾಪ್ತಿಯಾಗುವುದು.

"ಮುಟ್ಟಲಾಪವೇ ?"–ಎಂದರೆ ಎಂದಿಗೂ ಇಲ್ಲವೆಂಬ ಭಾವ. ಇದರಲ್ಲಿ ಕಾಕುಸ್ವರವಿದೆ. ॥೧೦॥

**॥ ಶ್ರೀಗುರುಹೃದಯ ಪ್ರಕಾಶಿಕೆ :**

ಕಾಮನಯ್ಯನೆಂಬ ಮನ್ಮಥಜನಕನಾದ ದೇವರ ಪರಮಸತ್ಕರುಣಾವಲೋಕನವೆಂಬ ಉತ್ಕೃಷ್ಟ ದಯಾದೃಷ್ಟಿಬಲದಿಂದ ಸಂಚರಿಸುವ ದೇವತೆಗಳನ್ನು, ಪಾಪಕರ್ಮಗಳು ಮುಟ್ಟಲಾಪವೇ, ಅಂದರೆ ಪಾಪವು ತಗಲಲಾರದೆಂದರ್ಥ. ಆದ್ದರಿಂದ ಆ ದೇವತೆಗಳು ಯಾವ ಜೀವರಲ್ಲಿದ್ದರೇನು, ಯಾವ ಕಾರ್ಯಗಳನ್ನು ಮಾಡಿದರೇನು, ಯಾವ ಯಾವ ತಾಮಸ ರಾಜಸಗುಣರೂಪ ನಿಯಾಮಕ, ಶ್ರೀಹರಿಯ ರೂಪಗಳ ಉಪಾಸನೆ ಮಾಡಿದರೇನು, ಅವರಿಗೆ ಅದರಿಂದ ಬಾಧಕವಿಲ್ಲೆಂದರ್ಥ. ॥೧೦॥

# ಸರ್ವವ್ಯಾಖ್ಯಾನಸಾರಸಂಗ್ರಹ

ಜೀವರ ಸ್ಥೂಲದೇಹದಲ್ಲಿ ವಿದ್ಯಮಾನರಾಗಿ, ಭಗವದಾಜ್ಞೆಯಿಂದ ತತ್ತ್ವಕಾರ್ಯಗಳನ್ನು ನಿರ್ವಹಿಸುತ್ತಿರುವ ತತ್ತ್ವಾಭಿಮಾನಿದೇವತೆಗಳಿಗೆ ಅಧೋಕ್ಷಜನ ಕೃಪಾಕಟಾಕ್ಷವೀಕ್ಷಣದಿಂದ ಯಾವ ಪಾಪಕರ್ಮಗಳೂ ಸ್ಪರ್ಶಿಸುವುದಿಲ್ಲವೆಂದು ತಿಳಿಸುತ್ತಾರೆ, **ಆವ ಜೀವರೊಳಿದ್ದರೇನು**–ಎಂಬ ಪ್ರಸಕ್ತ ಪದ್ಯದಿಂದ.

೧. ಜೀವಕೋಟಿಯಲ್ಲಿ ಸಾತ್ವಿಕ, ರಾಜಸ, ತಾಮಸರೆಂಬ ತ್ರಿವಿಧ ಜೀವರಿದ್ದಾರೆ. ಸಕಲಜೀವರ ಸ್ಥೂಲದೇಹದಲ್ಲಿ ತತ್ತ್ವಾಭಿಮಾನಿಗಳು ವ್ಯಾಪಿಸಿದ್ದು, ಶ್ರೀಹರಿಯ ಆಣತಿಯಂತೆ ತತ್ತ್ವಕಾರ್ಯಗಳನ್ನು ನಿರ್ವಹಿಸುತ್ತಿರುವರು. ಅಂತೆಯೇ ೭೨,೦೦೦ ನಾಡೀಗತ ನಾಡ್ಯಭಿಮಾನಿದೇವತೆಗಳು ಮತ್ತು ರೋಮಕೂಪಗತ ಕ್ಷೇತ್ರಾಭಿಮಾನಿದೇವತೆಗಳೂ ನೆಲೆಸಿದ್ದು, ಶ್ರೀಬಿಂಬನ ಪ್ರೇರಣಾನುಸಾರ ತಮ್ಮತಮ್ಮ ನಿಯಮಿತ ಕಾರ್ಯಗಳನ್ನು ಮಾಡುತ್ತಿರುವರು. ಅಂತಹ ದೇವತೆಗಳು ರಾಜಸ ಮತ್ತು ತಾಮಸ ಜೀವರಲ್ಲಿದ್ದು,

ಆಯಾಯ ಜೀವರ ಕರ್ಮಾನುಸಾರ **ಈಶಪ್ರೇರಣೆಯಿಂದ** ಪಾಪಕರ್ಮಗಳನ್ನು ಮಾಡಿ ಮಾಡಿಸುತ್ತಿದ್ದರೂ, ಅವರಿಗೆ ಆ ಪಾಪಕರ್ಮಗಳ ಲೇಪವಿಲ್ಲ.

೨. ದೇವತೆಗಳು ಮುಕ್ತಿಯೋಗ್ಯಜೀವವರ್ಗಕ್ಕೆ ಸೇರಿದವರು. ಆ ದೇವತೆಗಳು ರಾಜಸ, ತಾಮಸ ಜೀವರಲ್ಲಿದ್ದು, ಯಾವ ರೀತಿಯ ಕರ್ಮಗಳನ್ನು ಮಾಡಿಸುತ್ತಲಿದ್ದರೂ ಅವರು ಪಾಪಕರ್ಮಲೇಪರಹಿತರು.

೩. ರಜೋಗುಣ ಹಾಗೂ ತಮೋಗುಣ ಪ್ರವರ್ತಕನಾದ ಬಿಂಬರೂಪೀ ಶ್ರೀಹರಿಯ ಆಯಾಯ ಭಗವದ್ರೂಪಗಳನ್ನು ಉಪಾಸನೆ ಮಾಡುತ್ತಿರುವ ದೇವತಾವರ್ಗ ಪಾಪಕರ್ಮಗಳ ಸೋಂಕಿನಿಂದ ನಿರ್ಲಿಪ್ತರು.

೪. ಸಕಲಜಗತ್ತನ್ನೂ ಲೀಲಾಮಾತ್ರದಿಂದ ನಿರಾಯಾಸವಾಗಿ ತನ್ನ ಇಚ್ಛಾಮಾತ್ರದಿಂದ ಸೃಷ್ಟಿಸಿ, ಸಮಸ್ತಜೀವಗಣವನ್ನು ಸದಾ ಸಂರಕ್ಷಿಸುತ್ತಿರುವ ಆ ಕರುಣಾಮಯನು **ಕಾವನಯ್ಯನು. ಭಾವಜನೈಯ್ಯ**ನೆಂತಲೂ ಪಾಠಾಂತರವಿದೆ. ಭಾವ ಎಂದರೆ ಮನಸ್ಸು ಅದರಿಂದ ಉತ್ಪನ್ನನಾದವನು ಭಾವಜನಾದ **ಮನ್ಮಥನು.** ಅಂಥಹ ಮನ್ಮಥಜನಕನಾದ ಶ್ರೀಲಕ್ಷ್ಮೀಪತಿಗೆ ಭಾವಜನೈಯ್ಯನೆಂದು ಹೆಸರು. ಮಾರಪಿತನಾದ ಶ್ರೀಪರಮಾತ್ಮನು ಪರಮ ಕರುಣಾಸಾಗರನು. ಆತನ ದಯಾದೃಷ್ಟಿಯ ಬಲದಿಂದ ಕಾರ್ಯನಿರ್ವಹಿಸುತ್ತಿರುವವರೇ ಜೀವರ ಸ್ಥೂಲದೇಹಗತದೇವತಾವರ್ಗ. ಅಂತಹ ದಯಾಮಯನ ಕೃಪಾಕಟಾಕ್ಷಕ್ಕೆ ಪಾತ್ರರಾದ ದೇವತೆಗಳನ್ನು ಪಾಪಕರ್ಮಗಳು ಎಂದೆಂದಿಗೂ ಮುಟ್ಟಲು ಸಾಧ್ಯವಿಲ್ಲ. ಅವರು ದುಷ್ಕರ್ಮಗಳ ಫಲರೂಪವಾದ ಪಾಪಗಳಿಂದ ನಿರ್ಲಿಪ್ತರಾಗಿರುವರು. ಇದಕ್ಕೆ ಸರ್ವಪಾಪಪರಿಹಾರಕನಾದ ಬಿಂಬರೂಪೀ ಶ್ರೀಹರಿಯ ಕರುಣಾಕಟಾಕ್ಷವೇ ಕಾರಣವೆಂದು ಈ ಪದ್ಯದ ತಾತ್ಪರ್ಯಾರ್ಥ. ॥೧೦॥

## ಪದ್ಯ ೧೧

**ಮೂಲ :**

**ಪತಿಯೊಡನೆ ಮನಬಂದ ತೆರದಲಿ ।**
**ಪ್ರತಿದಿವಸದಲಿ ರಮಿಸಿ ಮೋದಿಸಿ ।**
**ಸುತರ ಪಡೆದಿಳೆಯೊಳು ಜಿತೇಂದ್ರಿಯಳೆಂದು ಕರೆಸುವಳು ॥**
**ಕೃತಿಪತಿ ಕಥಾಮೃತ ಸುಭೋಜನ ।**
**ರತ ಮಹಾತ್ಮರಿಗಿತರ ದೋಷ ।**
**ಪ್ರತತಿಗಳು ಸಂಬಂಧಿಸುವುವೇಽಚ್ಯುತ ದಾಸರಿಗೆ ॥** ॥೧೧॥

**ಅವತರಣಿಕೆ :**

ಕೃತಿಪತಿ ಪ್ರದ್ಯುಮ್ನಾಖ್ಯ ಶ್ರೀಪರಮಾತ್ಮನ ಸುಕಥಾಮೃತವೆಂಬ ದಿವ್ಯ ಪಾನದಲ್ಲಿ ಸದಾ ರತರಾಗಿರುವ ಮಹಾಮಹಿಮರಾದ ಭಗವದ್ಭಕ್ತರಿಗೆ ದೋಷ ಸಮೂಹಗಳು ಬಾಧಿಸುವುದಿಲ್ಲವೆಂದು ಸುಂದರವಾದ ದೃಷ್ಟಾಂತದಿಂದ ತಿಳಿಸುತ್ತಾರೆ **ಪತಿಯೊಡನೆ**– ಎಂಬ ಪ್ರಸಕ್ತ ಸಂಧಿಗತ ೧೧ನೆಯ ಈ ಪದ್ಯದಿಂದ.

**ಪ್ರತಿಪದಾರ್ಥ :**

**ಪತಿಯೊಡನೆ**=ತನ್ನ ಗಂಡನ ಜೊತೆಯಲ್ಲಿ, **ಮನಬಂದ ತೆರದಲಿ**= ತನ್ನ ಇಷ್ಟಾನುಸಾರ, **ಪ್ರತಿದಿವಸ**=ಪ್ರತಿದಿನದಲ್ಲಿಯೂ, **ಸತಿ**=ಸಹಧರ್ಮಿಣಿಯಾದ ಹೆಂಡತಿಯು, **ರಮಿಸಿ**=ಭೋಗಿಸಿ, **ಮೋದಿಸಿ**=ಸುಖವನ್ನು ಹೊಂದಿ, **ಇಳೆಯೊಳು**=ಭೂಮಿಯಮೇಲೆ, **ಜಿತೇಂದ್ರಿಯಳೆಂದು**=ಇಂದ್ರಿಯಗಳನು ಜಯಿಸಿದವಳು ಎಂದು, **ಕರೆಸುವಳು**=ಕರೆಯಿಸುತ್ತಾಳೆ, **ಕೃತಿಪತಿ**=ಕೃತಿ ನಾಮಕ ಶ್ರೀಲಕ್ಷ್ಮಿಯ ಪತಿಯಾದ ಪ್ರದ್ಯುಮ್ನನಾಮಕ ಶ್ರೀಪರಮಾತ್ಮನ, **ಕಥಾ**=ಗುಣ, ರೂಪ, ಕ್ರಿಯಾವಿಶಿಷ್ಟವಾದ ಚರಿತ್ರೆಯು, **ಅಮೃತ**=ಅಮೃತ ಸಮಾನವಾದ, **ಸುಭೋಜನ**=ಉತ್ತಮವಾದ ಭೋಜನದಲ್ಲಿ, ಅಂದರೆ ಶ್ರೀಹರಿಯ ಕಥಾಮೃತವನ್ನು ಕೇಳುವುದು, ಅನುವಾದಮಾಡುವುದು, ಪ್ರವಚನ

ಕ್ರಿಯೆ, ಉಪದೇಶ, ಗಾಯನ, ಚಿಂತನಾರೂಪವಾದ ಉಪಸನಾಕ್ರಮ ಇತ್ಯಾದಿ ವ್ಯಾಪಾರ ವಿಶೇಷಗಳೆಲ್ಲವೂ ಭೋಜನವೆಂದೆನಿಸುವುವು, **ರತ**=ಅಂತಹ ಕೃತಿಪತಿ ಕಥಾಮೃತಪಾನದಲ್ಲಿ ಆಸಕ್ತರಾದ, **ಮಹಾತ್ಮರಿಗೆ**=ಮಹಿಮೋಪೇತರಾದ, **ಅಚ್ಯುತನ ದಾಸರಿಗೆ**=ನಾಶರಹಿತನಾದ ಶ್ರೀಹರಿಯ ಅಂತರಂಗ ದಾಸರಿಗೆ, **ಇತರ ದೋಷ ಪ್ರತತಿಗಳು**=ಬೇರೆ ಬೇರೆ ವಿಧವಾದ ಪಾಪಸಮೂಹಗಳು, **ಸಂಬಂಧಿಸುವುವೇ**=ಸಂಪರ್ಕಹೊಂದುವುವೇ ? ಅಂದರೆ ಎಂದೆಂದಿಗೂ ಇಲ್ಲ ವೆಂದರ್ಥ ॥೧೧॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :

ಶ್ರೀಪರಮಾತ್ಮನ ದಾಸರಾದ ಮಾನುಷರಿಗೆ ದೋಷಸಂಬಂಧವಾಗೋದಿಲ್ಲ ಎಂತ ಹೇಳಿ, ಮ್ಯಾಲೆ ದೇವತೆಗಳ ವಿಚಾರ ಹೇಳಿ ಈಗ ಮಾನುಷರ ವಿಚಾರ ಹೇಳತಾರೆ.

ಶಾಸ್ತ್ರೋಕ್ತದಿಂದ ವಿವಾಹಿತಳಾದ ಸ್ತ್ರೀಯಾದವಳು ತನ್ನ ಪತಿಯಾದವನ ಅಧೀನಳಾಗಿ, ಅವನ ಆಜ್ಞಾಧಾರಕಳಾಗಿ, ಅವನ ಸಂಗತಲೇ ಇದ್ದು, ಅವನ ಮನೋನುಸಾರ ನಡೆದುಕೊಂಡು ಪ್ರತಿದಿನದಲ್ಲೂನೂ ಅವನ ಕೂಡಾ ರತಿ ಕ್ರೀಡಾದಿಗಳು ನಡಿಸಿ, ಅವನ ಸಂತೋಷಪಡಿಸಿ, ಅವನ ಪ್ರೀತಿ ಸಂಪಾದಿಸಿ, ಮಕ್ಕಳನ್ನು ಪಡೆದಂಥಾವಳಾಗಿ, ಭೂಮಿಯಲ್ಲಿ ಗುಹ್ಯೇಂದ್ರಿಯ ಜಯಿಸಿದವಳೆಂದು ಕರಿಸೋವಳಾಗತಾಳೆ. ಹ್ಯಾಂಗೆಂದರೆ, ತನ್ನ ಪತಿ ವ್ಯತಿರಿಕ್ತ ಅನ್ಯರಿಗೆ ತನ್ನ ಗುಹ್ಯೇಂದ್ರಿಯ ವಶಮಾಡದೆ, ಜಿತಳಾಗಿ ಇರೋದು ದಾವದದೆ ಇದೇ ಜಿತೇಂದ್ರಿಯತ್ವವು. ತನ್ನ ಪತಿಯಲ್ಲಿ ವಿಮುಖಳಾದರೆ ದೋಷಿ ಎಂತ ಕರೆಸಿ ರಕ್ಷಕರಿಂದ ರಹಿತಳಾಗಿ ಕಷ್ಟಪಡತಾಳೆ. ತದ್ವತ್ ಕೃತಿಪತಿಯಾದ ಪ್ರದ್ಯುಮ್ನನಾಮಕಪರಮಾತ್ಮ ಸ್ತ್ರೀಯರಿಗೆ ಪತಿಯೋಪಾದಿಯಲ್ಲಿ ಜೀವರಿಗೆ ಪತಿಯಾದವ ಜೀವರಾದರೋ ಸತಿಸಾಮ್ಯರಾಗಿ ಪತಿಯಾದ ಪ್ರದ್ಯುಮ್ನನ ಆಜ್ಞಾಧಾರಕರು. ಸತಿಯಾದವಳು ಪತಿಕೂಡ ಹ್ಯಾಂಗೆ ರಮಿಸಿ ಅವನ ಸಂತೋಷಪಡಿಸಿ ತಾನು

ಸುತರ ಪಡೆವಳೋ ತದ್ವತ್, ತನ್ನ ಬುದ್ಧಿಯೆಂಬ ಸ್ತ್ರೀಯನ್ನ ಶ್ರೀಪರಮಾತ್ಮನಲ್ಲೇ ರಮಿಸುವಂತೆಮಾಡಿ, ಆ ಪರಮಾತ್ಮನ ದ್ವಾರಾ ಜ್ಞಾನ-ಭಕ್ತಿ-ವೈರಾಗ್ಯಗಳೆಂಬ ಪುತ್ರರನ್ನು ಪಡೆದರೆ, ಈ ಜೀವನು ಜಿತೇಂದ್ರಿಯನೆಂದು ಕರೆಸತಾನೆ. ತನ್ನ ಬುದ್ಧಿಯನ್ನ ಅನ್ಯಪುರುಷಸಾಂಕೇತವಾದ ವಿಷಯಾದಿಗಳ ವಶಮಾಡಿದರೆ ಜಿತೇಂದ್ರಿಯನೆಂದು ಕರಿಸಲಾರ. ಆದಕಡಿಯಿಂದ ಸತಿಯಾದವಳು ತನ್ನ ಪತಿಗತ ಸುಗಣಕಾರ್ಯಗಳೆಂಬೋ ಕಥಾಮೃತವನ್ನ ಒಳ್ಳೇ ಭೋಜನ ಮಾಡತಕ್ಕ ಪತಿ ಆಜ್ಞಾಧುರಂಧರಳಾದ, ಪತಿಯಲ್ಲೇ ಸಮೀಚೀನ ಆಸಕ್ತಿಯುಳ್ಳ, ಪತಿ ಅಂತರ್ಗತ ಶ್ರೀಪರಮಾತ್ಮನ ತಿಳದು ಸರ್ವಾನುಷ್ಠಾನವೂ ಸೇವಾದಿಗಳೂ ಮಾಡತಕ್ಕ ಮಹಾತ್ಮರಾದ ಸ್ತ್ರೀಯರಿಗೆ ಪತಿ ಆಜ್ಞಾದಿಂದ ಅನ್ಯವ್ರತಾದಿಗಳು ತ್ಯಾಗಮಾಡಿದ ಪಾಪಸಮೂಹಗಳು ಸಂಬಂಧವಾಗಲಾರವು ಎಂತ ಅರ್ಥ. ತದ್ವತ್ ಪತಿಯಾದ ಶ್ರೀಪರಮಾತ್ಮನ ದಾಸರಿಗೆ ದೋಷಲೇಪವಿಲ್ಲ ಎಂತ ತಾತ್ಪರ್ಯ.

ಮುಖ್ಯಾರ್ಥವೇನೆಂದರೆ, ಅಹಂಮಮತಾದಿಗಳಿಂದ ದೂರರಾಗಿ, ಪತೀಯಾದ ಶ್ರೀಪರಮಾತ್ಮನ ಸೃಷ್ಟ್ಯಾದಿ ವ್ಯಾಪಾರವೆಂಬ ಕಥಾಮೃತಭೋಜನ ಅವಿಚ್ಛಿನ್ನವಾಗಿ ಮಾಡುತಾ ಅವನಲ್ಲೇ ರತವಾದ ಮನುಸ್ಸುಳ್ಳವರಾಗಿ, ಬಿಂಬ ಕ್ರಿಯಾದ್ವಾರ ಮಾಡಲ್ಪಟ್ಟ ಪಾಪಗಳೇನು, ಪುಣ್ಯಕರ್ಮಗಳ ತ್ಯಾಗವೇನು ಇತ್ಯಾದಿಗಳು ಪತಿ ಆಜ್ಞಾದಿಂದ ನಾವು ಮಾಡತೇವೆಂದು ಅಹಂಮಮತಾದಿಗಳಿಂದ ದೂರರಾದ ಏತಾದೃಶ ಮಹಾತ್ಮರಾದ ಶ್ರೀಪರಮಾತ್ಮನ ಭಕ್ತರಿಗೆ ಇತರವಾದ ದೋಷಸಮೂಹಗಳು ಸಂಬಂಧವಾಗಲಾರವು. ಈ ಪ್ರಕಾರ ಅನುಸಂಧಾನಯುಕ್ತರಾಗಿ ಪಾಪಗಳ ಅರ್ಪಿಸಿದರೆ, ಶ್ರೀಪರಮಾತ್ಮ ಸ್ವೀಕರಿಸಿ ಪಾಪಸಂಬಂಧ ಮಾಡೋದಿಲ್ಲ. ಸುಮ್ಮನೆ ಅರ್ಪಿತ ಎಂದ ಮಾತ್ರಕ್ಕೆ ದೇವರು ಸ್ವೀಕರಿಸದೆ, ಇವರಿಗೇ ಲೇಪ ಮಾಡತಾ ಇರತಾನೆ. ॥೧೧॥

## ೨. ಭಾವಪ್ರಕಾಶಿಕೆ :

ಮೇಲಿನ ಪದ್ಯದಲ್ಲಿ ದೇವತೆಗಳಿಗೆ ಪಾಪಲೇಪವಿಲ್ಲವೆಂದು ಹೇಳಿದರು. ಈಗ ಪರಮಾತ್ಮನ ದಾಸರಾದ ಸ್ತ್ರೀಪುರುಷರಿಗೆ ಇತರ ಪಾಪಸಂಬಂಧವಿಲ್ಲವೆಂದ ಮೇಲೆ ದೇವತೆಗಳಿಗೆ ಹೇಳುವುದೇನು ಎಂಬ ಕೈಮುತ್ಯನ್ಯಾಯವನ್ನು

ಸಮರ್ಥಿಸುತ್ತಾರೆ. ಪರಮಾತ್ಮನ ಕಥಾಮೃತಪಾನದಲ್ಲಿ ಮಗ್ನರಾದ ಅಂದರೆ, ಸರ್ವದಾ ಕಥಾಶ್ರವಣಾದಿಗಳನ್ನು ಮಾಡುತ್ತಾ, ಪಾಡುತ್ತಾ ಇರುವ ಸ್ತ್ರೀಯರು ಪ್ರತಿದಿವಸ ಪತಿಯ ಕೂಡ ಬೇಕಾದ ಭೋಗಗಳನ್ನು ಅನುಭವಿಸಿ, ಸುಖವನ್ನು ಹೊಂದಿ, ಮಕ್ಕಳನ್ನು ಪಡೆದಿದ್ದರೂ,ಆಕೆಯನ್ನು ಜಿತೇಂದ್ರಿಯಳು ಅನ್ನುವರು. ಆದ್ದರಿಂದ ಮಹಾತ್ಮರಾದ ಭಗವದ್ದಾಸರಿಗೆ ಪಾಪಸಂಬಂಧಗಳು ಆಗುವುದಿಲ್ಲ. ॥೧೧॥

**೩. ಭಾವದರ್ಪಣಟೀಕಾ :**

ಪುನಃ ದಾರ್ಢ್ಯಕ್ಕಾಗಿ ಭಕ್ತರಿಗೆ ದೋಷಗಳಿಲ್ಲೆಂದು ಹೇಳುತ್ತಾರೆ, **ಪತಿಯೊಡನೆ–** ಇತಿ ॥ ॥೧೧॥

**೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತಮೂಲ) :**

"ಯದಿ ಕುರ್ಯಾತ್ ಪ್ರಮಾದೇನ"– ಇತ್ಯತ್ರ. "ಯೋಗೇನೈವ ದಹೇತ್ ದೇಹಮ್"– ಇತಿ। ಅಶುಚಿತ್ವಾದಿಕಂ ಚಾಸ್ಯ । "ಯದ್ಯ ಧರ್ಮಃ ಕೃತಃ ಸದ್ಭಿಃ ನ ಸವಾಚ್ಯಃ" ಇತ್ಯಾದಿ ಆತ್ಮಕೃತ್ಯಾರೂಢಂ ನಿದರ್ಶನಪೂರ್ವಕಂ ಕರೋತಿ "ಪತಿಯೊಡನೆ"– ಇತಿ॥ ಕೃತಿಃ ಪ್ರದ್ಯುಮ್ನಶಾಲಿನೀ ॥೧೧॥

**ಕನ್ನಡಾರ್ಥ :**

"ಯದಿ ಕುರ್ಯಾತ್ ಪ್ರಮಾದೇನ"– ಎಂಬಲ್ಲಿ "ಯೋಗದ್ವಾರಾ ದೇಹವನ್ನು ದಹಿಸತಕ್ಕದ್ದು"– ಎಂದು ಅಶುಚಿತ್ವ ಇತ್ಯಾದಿ ವಿಷಯಗಳು ಉಕ್ತವಾಗಿವೆ. "ಸಜ್ಜನರು ಅಧರ್ಮವನ್ನೆಸಗಿದರೆ, ಅದನ್ನು ಎಣಿಸಕೂಡದು" – ಎಂಬ ವಿಷಯವನ್ನು ದೃಷ್ಟಾಂತಪೂರ್ವಕವಾಗಿ ತಿಳಿಸುತ್ತಾರೆ. "ಪತಿಯೊಡನೆ" ಎಂಬ ಪದ್ಯದಿಂದ. ಕೃತಿಯು ಪ್ರದ್ಯುಮ್ನರೂಪೀ ಪರಮಾತ್ಮನ ಸತಿಯಾದ ಲಕ್ಷ್ಮೀರೂಪ, ॥೧೧॥

**೫. ಶ್ರೀಗುರುಹೃದಯಪ್ರಕಾಶಿಕೆ :**

ಶ್ರೀಹರಿಕಥೆಯಲ್ಲಿ ಮಗ್ನರಾದ ಸಜ್ಜನರಿಗೆ ಪಾಪಲೇಪವಿಲ್ಲ, ದೇವತೆಗಳಿಗೆ ಇಲ್ಲವೆಂದು ಹೇಳತಕ್ಕದ್ದೇನೆಂಬ ಕೈಮುತ್ಯ ದೃಷ್ಟಾಂತ ಸಹ ತಿಳಿಸುತ್ತಾರೆ.

ಪತಿ ಎಂದು. ತನ್ನ ಪತಿಯ ಸಂಗಡ ನಿತ್ಯದಲ್ಲಿಯೂ ಮನಬಂದ ತೆರದಲ್ಲಿ ಅಂದರೆ, ಗಂಡನ ಮನೋನುಕೂಲವಾಗಿ ದೇಶ ಕಾಲಾದಿ ವಿರೋಧವಿಲ್ಲದಂತೆ ಸಹ, ಯಥೇಚ್ಛೆಯಾಗಿ ವಿಹಾರಮಾಡಿ ಮಕ್ಕಳನ್ನು ಪಡೆದು ಪತಿವ್ರತೆಯಾದ ಸ್ತ್ರೀಯು ಜಿತೇಂದ್ರಿಯಳೆಂದು ಕರೆಯಿಸಿಕೊಳ್ಳುವ ಹಾಗೆ, ಕೃತಿಪತಿಯಾದ ಪ್ರದ್ಯುಮ್ನರೂಪ ಶ್ರೀಹರಿಯ ಕಥೆ ಎಂಬ ಭಾಗವತಾದಿ ಸಚ್ಛಾಸ್ತ್ರರೂಪ ಅಮೃತದ ಸುಭೋಜನ ಎಂದರೆ, ಮೋಕ್ಷಸಾಧನ ಶ್ರವಣಾಸಕ್ತರಾದ ಮಹಾ ಹರಿಭಕ್ತರಿಗೆ, ತದ್ಭೃತ್ಯಭಾವ ಹೊಂದಿದವರಿಗೆ ಇತರ ದೋಷಪ್ರತತಿಗಳೆಂಬ ಪಾಪಸಮೂಹಗಳು ಸಂಬಂಧಿಸಲಾರವು. ದೇವತೆಗಳಿಗೆ ಇಲ್ಲವೆಂದು ಹೇಳತಕ್ಕದ್ದೇನು ?

**'ಪ್ರೇರಕಾ ಅಪಿ ಪಾಪಸ್ಯ ನ ದೇವಾಃ ಫಲಭಾಗಿನಃ'** ಎಂಬ **ನಿರ್ಣಯ ಅರ್ಥವೂ, 'ಸ ವಾಗ್ವಿಸರ್ಗೋ ಜನತಾಘವಿಪ್ಲವೋ'** ಎಂಬ **ಭಾಗವತಾರ್ಥ** ಸಹ ಇದರಿಂದ ವಿವರಿಸಲ್ಪಟ್ಟಿತು. ॥೧೧॥

## ಸರ್ವವ್ಯಾಖ್ಯಾನಸಾರಸಂಗ್ರಹ

ಪರಮಮಂಗಳಚರಿತನಾದ ಶ್ರೀಹರಿಯ ಕಥಾಮೃತದಲ್ಲಿ ಸದಾ ಆಸಕ್ತರಾಗಿರುವ ಅಚ್ಯುತನ ಭಟರಿಗೆ ಯಾವ ದೋಷರೂಪವಾದ ಪಾಪವೃಂದಗಳು ಲೇಪವಾಗುವುದಿಲ್ಲ ಎಂದು ತಿಳಿಸುತ್ತಾರೆ ಪ್ರಸಕ್ತ ೧೧ನೆಯ ಪದ್ಯದಿಂದ.

೧. ಅಪ್ರಾಕೃತ ಪರಮಪುರುಷನಾದ ಶ್ರೀಪರಮಾತ್ಮನು ನಿತ್ಯನು. ಅಂತಹ ನಿತ್ಯನೂ, ನಿರ್ವಿಕಾರನೂ, ಸಮಸ್ತದೋಷವಿದೂರನೂ ಆದ ಶ್ರೀಹರಿಯು ನಾಶರಹಿತನು. ಜನನ ಮರಣರಹಿತನು. ಶಶ್ವದೇಕಪ್ರಕಾರನಾಗಿ ವಿರಾಜಮಾನವಾಗಿರುವ ಆ ಶಾಶ್ವತ ಜಗದ್ವಿಲಕ್ಷಣನಾದ ಪ್ರಭುವಿಗೆ **ಅಚ್ಯುತ**ನೆಂದು ನಾಮ.

೨. ಅಂತಹ ಅಚ್ಯುತನಾಮಕ ಶ್ರೀಹರಿಯ ಕಿಂಕರರು ಅಚ್ಯುತನದಾಸವರ್ಗಕ್ಕೆ ಸೇರಿದ ಮಹಾಮಹಿಮರು. ಆ ಭಗವದ್ದಾಸರು ಮಂಗಳಾತ್ಮರು.

ಮೂಲರೂಪೀ ಶ್ರೀಮನ್ನಾರಾಯಣನು ಪ್ರದ್ಯುಮ್ನನಾಮಕನಾಗಿ ಪ್ರಾದುರ್ಭವಿಸಿದಾಗ, ಅವನ ನಿತ್ಯಾವಿಯೋಗಿನಿಯಾದ ಶ್ರೀಲಕ್ಷ್ಮೀದೇವಿಯು ಪತಿಯ ಇಚ್ಛಾನುವರ್ತಿಯಾಗಿ ಕೃತಿನಾಮಕಳಾದಳು. ಆ **ಕೃತಿಪತಿಯೇ** ಪ್ರದ್ಯುಮ್ನನು. ಕೃತಿಪತಿಯ ಗುಣ, ರೂಪ, ಕ್ರಿಯಾವಿಶೇಷಗಳು ಇತ್ಯಾದಿ ಅನಂತಕಲ್ಯಾಣಗುಣಗಳನ್ನು ತಿಳಿಸುವ ಶಾಸ್ತ್ರಗಳೇ ಅವನ **ಕಥೆಯು**. ಅಂತಹ ಕೃತಿಪತಿಯ ಕಥಾಶ್ರವಣದಿಂದ ಉಂಟಾಗುವ ಫಲಮೋಕ್ಷಸದೃಶವಾದ ಆನಂದವು. ಇದೇ ಕೃತಿಪತಿಯ ಕಥಾಮೃತವು. ಅದರಲ್ಲಿಯೇ ನಿರಂತರವೂ ಮಗ್ನರಾಗಿ ಸುಖಿಸುವ ಕ್ರಿಯಾವಿಶೇಷವೇ **ಸುಭೋಜನವು.** ಸುಭೋಜನ ಎಂದರೆ ಕೇವಲ ರಸಾಸ್ವಾದನರೂಪವಾದ ಭೋಜನವಲ್ಲ. ಸಕಲೇಂದ್ರಿಯಗಳ ದ್ವಾರಾ ಭಗವದ್ವಿಷಯವನ್ನು ಮನಸ್ಸಿಗೆ ತಂದು, ಚಿತ್ತದಲ್ಲಿ ನಿಲ್ಲಿಸಿ, ಧ್ಯಾನೋಪಾಸನೆ ಮಾಡುವುದೇ ಕೃತಿಪತಿಕಥಾಮೃತಸುಭೋಜನವು. ಅನುಪಮ ಚರಿತ್ರನಾದ ಶ್ರೀಹರಿಯ ಗುಣಗಾನ ಮಾಡುವುದು, ಚರಿತ್ರೆಯ ಶ್ರವಣಕಾರ್ಯ ಪ್ರವಚನಕ್ರಿಯೆ, ಗಾಯನರೂಪವಾದ ಸೇವಾದಿಗಳು ಇತ್ಯಾದಿಗಳೆಲ್ಲವೂ ಸುಭೋಜನರೂಪವಾದ ಅನುಭವಾನಂದವಿಶೇಷವು. ಅಂತಹ ಕೃತಿಪತಿ ಕಥಾಮೃತಪಾನದಲ್ಲಿ ಆಸಕ್ತರಾಗಿರುವ ಅಚ್ಯುತನ ದಾಸರು **ಮಹಾತ್ಮರು.** ಶ್ರೀಶನ ಪೂರ್ಣಾನುಗ್ರಹಕ್ಕೆ ಪಾತ್ರರಾದ ಅಂತಹ ಮಹಾಮಹಿಮರಿಗೆ ದೋಷರೂಪವಾದ ಪಾಪರಾಶಿಗಳು ದೂರೋಪಾಸ್ತವೇ. ಎಂದೆಂದಿಗೂ ಆ ಪಾಪ ಸಮೂಹಗಳು ಅವರನ್ನು ಮುಟ್ಟಲಾರವು. ಅವರು ಪಾಪಗಳಿಂದ ನಿರ್ಲಿಪ್ತರಾಗಿರುವರು.

೩. ಮೇಲಿನ ತತ್ತ್ವವನ್ನು ಒಂದು ಸುಂದರವಾದ ದೃಷ್ಟಾಂತದಿಂದ ದಾಸರಾಯರು ತಿಳಿಸುತ್ತಾರೆ. ಪತಿವ್ರತೆಯಾದ ಹೆಂಗಸು, ಅನ್ಯವಿಷಯಾದಿಗಳಲ್ಲಿ ಆಸಕ್ತಳಾಗದೆ, ತನ್ನ ಪತಿಯೊಡನೆ ನಾನಾ ರೀತಿಗಳಲ್ಲಿ ಭೋಗಿಸಿ, ಸುಖಪಡುವಳು. ಪತಿಯಿಂದ ಇಂದ್ರಿಯ ಸುಖವನ್ನು ಪಡೆದರೂ, ಆ ಸಾಧ್ವಿಯು **ಜಿತೇಂದ್ರಿಯಳು** ಎಂದೆನಿಸುವಳು. ವಿಧ್ಯುಕ್ತವಾಗಿ ಕೈಹಿಡಿದ ಪತಿಯೊಡನೆ ರಮಿಸುವುದು ಪಾಪವಲ್ಲ. ಅದು ಗೃಹಸ್ಥಾಶ್ರಮಧರ್ಮವಾದ ಪುಣ್ಯಕರ್ಮವೆನಿಸುವುದು. ಅಂತೆಯೇ ಜಗತ್ಪ್ರಭುವಾದ ಶ್ರೀಹರಿಯು ಎಲ್ಲರಿಗೂ **ನಿಯಾಮಕನು.**

ಪತಿಯ ಇಚ್ಛಾನುಸಾರ ಪತ್ನಿ ನಡೆಯುವಂತೆ, ಸರ್ವತಂತ್ರಸ್ವತಂತ್ರನಾದ ಈಶನ ಪ್ರೇರಣೆಯಿಂದಲೇ ಈ ಜಗತ್ತು ಮತ್ತು ಜೀವಕೋಟಿಯ ಸಮಸ್ತವ್ಯಾಪಾರಗಳು ಪ್ರವರ್ತಿತವಾಗುತ್ತಿರುವುವು. ಪರಾಧೀನಕರ್ತೃತ್ವಯುಕ್ತರಾದ ಜೀವರೆಲ್ಲರೂ ಭಗವದಧೀನರು. ಅವನ ಚಿತ್ತವೇ ಜೀವರೆಲ್ಲರ ಭಾಗ್ಯವಿಶೇಷ. ಪತಿಯೊಡನೆ ಪತಿವ್ರತಾಸ್ತ್ರೀಯು ರಮಿಸುವಂತೆ, ಅಚ್ಯುತನದಾಸರ ದೇಹ, ಮನಸ್ಸು, ಚಿತ್ತ, ಬುದ್ಧಿ ಇತ್ಯಾದಿ ಸಮಸ್ತಸಾಧನಪರಿಕರಗಳು ಆ ಕೃತಿಪತಿಯ ಕಥಾಮೃತದಲ್ಲಿ ಆಸಕ್ತವಾಗಿ ಕ್ರೀಡಿಸುವುವು. ಶ್ರೀಶನ ಪಾದಾರವಿಂದಗಳಲ್ಲಿಯೇ ರತವಾದ ಮನಸ್ಸುಳ್ಳ ಭಗವದ್ದಾಸರಿಗೆ ಪಾಪಕರ್ಮಗಳ ಸಂಪರ್ಕವೇ ಇಲ್ಲ. ಪತಿವ್ರತಾಸ್ತ್ರೀಯು, ಪತಿಯೊಡನೆ ರಮಿಸಿ, ತತ್ಸಂಬಂಧವಾದ ಸುಖಗಳನ್ನು ಅನುಭವಿಸಿದರೂ, ಪುಣ್ಯವೇ ಒದಗುವಂತೆ, ಭಗವದ್ದಾಸರಿಗೆ ಕಾರಣಾಂತರಗಳಿಂದ ಒದಗುವ ದೋಷರೂಪವಾದ ಪಾಪರಾಶಿಗಳನ್ನು ಶ್ರೀಹರಿಯು ತನ್ನ ಕರುಣಾಕಟಾಕ್ಷವೀಕ್ಷಣದಿಂದ ಭಸ್ಮಮಾಡುವನು. ಇದರಿಂದ ಪಾಪಕರ್ಮಸಮೂಹಗಳು ಶ್ರೀಹರಿಯ ಕಿಂಕರರಿಗೆ ಲೇಪವಾಗುವುದಿಲ್ಲ ಎಂದು ಪ್ರಸಕ್ತಪದ್ಯದ ತಾತ್ಪರ್ಯಾರ್ಥವು. ॥ ೧೧ ॥

## ಪದ್ಯ ೧೨

ಮೂಲ :

ಸೂಸಿ ಬಹ ನದಿಯೊಳಗೆ ತನ್ನ ಸ ।
ಹಾಸ ತೋರುವನೆಂದು ಜಲಕೆದು ।
ರೀಸಿದರೆ ಕೈಸೋತು ಮುಳುಗುವ ಹರಿಯ ಬಿಟ್ಟವನು ॥
ಕ್ಲೇಶ ಐದುವನಾದಿಯಲಿ ಸ ।
ರ್ವೇಶ ಕ್ಲುಪ್ತಿಯ ಮಾಡಿದುದ ಬಿ ।
ಟ್ಟಾಶೆಯಿಂದಲಿ ಅನ್ಯರಾರಾಧಿಸುವ ಮಾನವನು ॥ ೧೨ ॥

**ಅವತರಣಿಕೆ :**

ಸರ್ವನಿಯಾಮಕನಾದ ಶ್ರೀಹರಿಯನ್ನು ಬಿಟ್ಟು, ಅನ್ಯದೇವತೆಗಳನ್ನು ಆರಾಧಿಸುವ ಮಾನವರಿಗೆ ಗತಿಯಿಲ್ಲ. ಅವರಿಗೆ ದುಃಖಪ್ರಾಪ್ತಿಯೇ ಹೊರತು ಅನ್ಯಥಾ ಇಲ್ಲವೆಂದು ಹೃದಯಂಗಮವಾದ ಒಂದು ದೃಷ್ಟಾಂತದಿಂದ ತಿಳಿಸುತ್ತಾರೆ—**ಸೂಸಿ ಬಹ**–ಎಂಬ ಪ್ರಸಕ್ತ ಸಂಧಿಗತ ೧೨ನೆಯ ಈ ಪದ್ಯದಿಂದ.
॥ ೧೨ ॥

**ಪ್ರತಿಪದಾರ್ಥ :**

**ಸೂಸಿಬಹ**=ಎರಡು ದಡಗಳನ್ನೂ ಮೀರಿ ತುಂಬಿ ಪ್ರವಾಹದಿಂದ ಹರಿಯುತ್ತಿರುವ, **ನದಿಯೊಳಗೆ**=ನದಿಯಲ್ಲಿ, **ತನ್ನ ಸಹಾಸ ತೋರುವನೆಂದು**=ತನ್ನ ಸಾಮರ್ಥ್ಯವನ್ನು ಪ್ರದರ್ಶಿಸುತ್ತೇನೆ ಎಂಬ ಅಹಂಕಾರ ಮಮಕಾರಗಳಿಂದಗ್ರಸ್ತನಾಗಿ, **ಜಲಕೆದುರು**=ಪ್ರವಾಹಕ್ಕೆ ಎದುರಾಗಿ (ಅಭಿಮುಖವಾಗಿ), **ಈಸಿದರೆ**=ಈಜಲು ಪ್ರಯತ್ನಿಸಿದರೆ, **ಕೈಸೋತು**= ಪ್ರವಾಹದ ಬಲವನ್ನು ಎದುರಿಸಲಾರದೆ ಬೀಸುತ್ತಿರುವ ಕೈಗಳು ಬಳಲಿಕೆಯಿಂದ ಸೋತು, **ಮುಣುಗುವ**=ನೀರಿನಲ್ಲಿ ಮುಳುಗುತ್ತಾನೆ, **ಹರಿಯ ಬಿಟ್ಟವನು**=ಅಂತೆಯೇ ಸರ್ವಜೀವರಿಗೂ ಬಿಂಬರೂಪಿಯಾದ ಹರಿಯನ್ನು ಬಿಟ್ಟವನು, **ಕ್ಲೇಶ ಐದುವ**=ದುಃಖವನ್ನು ಹೊಂದುತ್ತಾನೆ, **ಅನಾದಿಯಲಿ**= ಅನಾದಿಕಾಲದಿಂದಲೂ, **ಸರ್ವೇಶ**=ಸರ್ವಕ್ಕೂ ನಿಯಾಮಕನಾದ ಶ್ರೀಪರಮಾತ್ಮನು, **ಕ್ಲುಪ್ತಿಯ ಮಾಡಿದುದ**=ತನ್ನ ಸಂಕಲ್ಪಾನುಸಾರ ಜೀವರಿಗೆ ಇಷ್ಟೇ ಪ್ರಾಪ್ತವಾಗಬೇಕೆಂದು ನಿಯಮನ ಮಾಡಿರುವುದರಿಂದ, **ಬಿಟ್ಟು**= ಅಂತಹ ಸ್ವಾಮಿಯನ್ನು ಬಿಟ್ಟು, **ಆಶೆಯಿಂದಲಿ**=ತನ್ನಯೋಗ್ಯತೆಗೆ ಮೀರಿದ ಇಷ್ಟಾರ್ಥಗಳನ್ನು ಬಯಸುತ್ತಾ, ಅಧಿಕವಾದ ಆಶೆಯಿಂದ, **ಅನ್ಯರ**=ಅನ್ಯರಾದ ಕ್ಷುದ್ರದೇವತೆಗಳನ್ನು, **ಆರಾಧಿಸುವ**=ಪೂಜಾಮಾಡುವ, **ಮಾನವನು**=ಅಲ್ಪನಾದ ನರನು, **ಕ್ಲೇಶ ಐದುವನು**=ದುಃಖಕ್ಕೆ ಒಳಗಾಗುವನು.
॥ ೧೨ ॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :

ಶ್ರೀಪರಮಾತ್ಮನನ್ನು ಬಿಟ್ಟು ಅನ್ಯರನ್ನ ಪೂಜಾಮಾಡಿ ಸೇವಾದಿಗಳು ಮಾಡಿದವರಿಗೆ ಗತಿಯಿಲ್ಲ ಎಂತ ಹೇಳತಾರೆ.

ಉಭಯದಡದವರಿಗೂ ಪೂರ್ಣವಾಗಿ ಉದಕ ಗಂಭೀರವಾಗಿ ಪ್ರವಹಿಸುತ್ತಾ ಬರತಕ್ಕ ನದೀ ಒಳಗೆ, ತನ್ನ ಸಾಮರ್ಥ್ಯ ತೋರಿಸತೇನೆ ಅಂತ ಪ್ರವಾಹಕ್ಕೆ ಅಭಿಮುಖವಾಗಿ, ನೀರಿನಾಗೆ ಬಿದ್ದು ಈಜಿದರೆ, ಕೈಗಳು ಸೋತು ಬಹಳ ಶ್ರಮಪಟ್ಟು, ತನ್ನ ಸಾಹಸ ವ್ಯರ್ಥವಾಗಿ ಮುಣುಗಿ ಮೃತಿಯನ್ನು ಐದತಾನೆ. ತದ್ವತ್ ಸರ್ವಸ್ವಾಮಿಯಾದ ಶ್ರೀಪರಮಾತ್ಮನು ಅನಾದಿ ಕಾಲದಿಂದ ಗೊತ್ತುಮಾಡಿಕೊಡಲ್ಪಟ್ಟ ಭೋಗಾದಿಗಳನ್ನು ಇದು ತನಗೆ ಬ್ಯಾಡ, ತನ್ನ ಇಷ್ಟಾನುಸಾರ ಭೋಗಗಳು ಪ್ರಾಪ್ತವಾಗಬೇಕೆಂದು ಅಧಿಕ ಆಶಾದಿಂದ, ಅನ್ಯರಾದ ಉಚ್ಛಿಷ್ಟಗಣಪತ್ಯಾದಿ ದೇವತೆಗಳ ಪೂಜಾ ಸೇವಾದಿಗಳು ಮಾಡತಕ್ಕ ಅಜ್ಞಾನಿಯಾದ ಮನುಷ್ಯನೇನು ಮತ್ತು ಅಧಿಕ ಆಶಾದಿಂದ ರುದ್ರಾದಿದೇವತೆಗಳ ಅಂತರ್ಗತ ಶ್ರೀಪರಮಾತ್ಮನ ತಿಳಿಯದೇ ಬಿಟ್ಟು, ಇವರನ್ನ ಪೃಥುಕ್ತ್ವೇನ ರುದ್ರಾದಿ ದೇವತೆಗಳ ಪೂಜಾ ಮಾಡಿದವನು ಐಹಿಕ ಪಾರತ್ರಿಕವಲ್ಲಿ ದುಃಖ ಐದೋವನಾಗತಾನೆ.

**ತಾತ್ಪರ್ಯ :** ದೇವರ ಸಂಕಲ್ಪಾನುಸಾರವೇ ಹೋಗತಾ ದೇವರು ಕೊಟ್ಟದ್ದು ಕ್ಲೇಶರಹಿತನಾಗಿ ಸಂತೋಷದಿಂದ ಭೋಗಮಾಡತಾ, ದೇವರನ್ನೇ ಆರಾಧಿಸುತ್ತಾ, ಆ ಆರಾಧನೆಯಿಂದ ದೇವರು ಅದರನ್ನ ಪರಿಹರಿಸತಾನೋ ಇಲ್ಲವೋ, ಅದರ ಕ್ಲೇಶ ಹಚ್ಚಿಕೊಳ್ಳದೆ ಅದಕ್ಕಾಗಿ ಅನ್ಯದೇವತೆಗಳನ್ನು ಆಗಲಿ, ಹರಿಯ ಬಿಟ್ಟು ಸುದೇವತೆಗಳನ್ನು ಆಗಲಿ ಭಜನ ಮಾಡದೇ ನದೀ ಪ್ರವಾಹದಂತೆ ತಾನೂನೂ ಈಸತಾ ದಡದ ಸಮೀಪಕ್ಕೆ ದಾವಾಗ ಸೇರೇನು

ಎಂಬಂತೆ, ಶ್ರೀಶನ ಸಂಕಲ್ಪವನ್ನು ನಿರೀಕ್ಷಿಸುತ್ತಾ ದೇವರಿಂದ ಕೊಡಲ್ಪಟ್ಟಿದ್ದ ರನ್ನ ಭೋಗಿಸುತ್ತಾ ಸುಖದಿಂದ ಇರಬೇಕೆಂದು ತಾತ್ಪರ್ಯ.

**ವಿಶೇಷಾರ್ಥ :** ಶ್ರೀಪರಮಾತ್ಮನ ಸಂಕಲ್ಪಾಖ್ಯಪ್ರವಾಹ ಎಂದರೆ ಪ್ರಾಣಿಗಳು, ಅಸೃಜ್ಯರಾಶಿಯಿಂದ ಸೃಷ್ಟಿಗೆ ತಂದಾರಭ್ಯ ಲಿಂಗಭಂಗದವರಿಗೂ ಭೋಗಮಾಡತಕ್ಕ ಕರ್ಮಬೀಜ, ಈಶ್ವರನಿಂದ ರಚಿತವಲ್ಲದ್ದು. ಅನಾದಿಯಿಂದ ಲಿಂಗದ ತೃತೀಯಪರಿಚ್ಛೇದದಲ್ಲಿ ವಿದ್ಯಮಾನವಾದದ್ದರನ್ನ ಅಂಕುರಮಾಡಿ, ಅದರಿಂದ ಆಗಾಮಿ ಸಂಚಿತಗಳೆಂಬೋ ಶಾಖೋಪಶಾಖೆಗಳು ಮಾಡಿ, ಪ್ರತಿ ಕ್ಷಣದಲ್ಲಿ ಪ್ರತಿಜನ್ಮದಲ್ಲಿ ಭೋಗಿಸತಕ್ಕ ಕರ್ಮ ಇಂಥಾದ್ದೇ ಎಂತ ಅನೇಕ ಪ್ರಕಾರ ವಿಭಾಗ ಮಾಡಿ ಸಂಕಲ್ಪ ಮಾಡಿ ಇರೋವನಾಗಿ ಇದ್ದಾನೆ. ಇಂಥಾ ಈಶ್ವರನ ಸಂಕಲ್ಪ ಎಂದರೆ ಕಾಲನಾಮಕ ಪರಮಾತ್ಮನೇ ಉದಕಸದೃಶ. ಅವನ ಸಂಕಲ್ಪವೇ ಪ್ರವಾಹಸದೃಶ.ಇಂಥಾ ಪ್ರವಾಹಕ್ಕೆ ಎದುರೀಸೋಣ ಎಂಬೋದೇ, ಈಶನ ಸಂಕಲ್ಪದಿಂದ ದಾವ ಕಾಲಕ್ಕೆ ಏನು ಪ್ರಾಪ್ತವಾಗತದೋ ಅದರನ್ನ ಬಿಟ್ಟು ಅದಕ್ಕೆಅನ್ಯಥಾ ಬಯಸೋಣವೇ. ಇದರಿಂದ ವೃಥಾ ಬಯಸಿದ ದೋಷ ದಿಂದ ನರಕಾದಿಗಳಲ್ಲಿ ಮುಣುಗೋಣ ಎಂತ ಅರ್ಥ. ಕಾರ್ಯವೇನೂ ಆಗದೆ ವೃಥಾ ಕಷ್ಟಪಟ್ಟಂತಾಯಿತೇ ಹೊರ್ತು ಬ್ಯಾರೆ ಒಂದೂ ಆಗೋದಿಲ್ಲ ಎಂತ ತಾತ್ಪರ್ಯ. ॥ ೧೨ ॥

## ೨. ಭಾವಪ್ರಕಾಶಿಕೆ :

ಪರಮಾತ್ಮನನ್ನು ಬಿಟ್ಟು ಅನ್ಯದೇವತಾ ಭಜನೆ ಮಾಡುವವನು ಕಷ್ಟ ಹೊಂದುವನೆಂದು ಸದೃಷ್ಟಾಂತವಾಗಿ ಹೇಳುತ್ತಾರೆ ;–

ಎರಡು ದಡಗಳವರೆಗೂ ತುಂಬಿ ಸಂಪೂರ್ಣಪ್ರವಾಹ ಬರುತ್ತಿರುವ ನದೀ ನೀರಿನಲ್ಲಿ ತನ್ನ ಸಾಮರ್ಥ್ಯವನ್ನು ತೋರಿಸುವೆನೆಂದು ಸಾಹಸದಿಂದ ಆ ನೀರಿಗೆ ಅಭಿಮುಖವಾಗಿ ಈಸಿಕೊಂಡು ಬಂದರೆ, ಹೇಗೆ ಕೈಸೋತು ನೀರೊಳು ಮುಳುಗುವನೋ, ಹಾಗೆಯೇ, ಈಶ್ವರನು ನಮಗೆ ಮೊದಲೇ ಕ್ಲುಪ್ತ ಮಾಡಿದ ಭೋಗದಿಂದ ತೃಪ್ತಿ ಪಡದೆ, ದುರಾಶೆಯಿಂದ ಪರಮಾತ್ಮನನ್ನು ಬಿಟ್ಟು, ಅನ್ಯ

ದೇವತೆಗಳನ್ನು ಭಜಿಸುವವರು ಕಡೆಗೆ ಇಹ-ಪರದಲ್ಲಿಯೂ ಸಹ ಕಷ್ಟ ಪಡು ಪಡುವರು ॥೧೨॥.

**೩. ಭಾವದರ್ಪಣ :**

ಪೂರ್ಣಭಕ್ತಿಯಿಂದ ಭಗವದುಪಾಸನಾ ಮಾಡಿದರೆ ಸದ್ಗತಿ ಕಾಣುವ ನೆಂತಲೂ, ಅನ್ಯದೇವತಾ ಉಪಾಸನೆಯಿಂದ ಕೆಡುವನೆಂತಲೂ ಹೇಳುತ್ತಾರೆ **ಸೂಸಿಬಹೇತಿ॥** ಹರಿ ಶ್ರೀಶನು ಪ್ರವಾಹನು ॥೧೨॥.

**೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ :**

ತುಂಬಿ ಹರಿಯುತ್ತಿರುವ ನೀರಿಗೆ ಎದುರಾಗಿ ಈಜಲು ಪ್ರಯತ್ನಿಸುವವನು ಮುಳುಗಿ ಕ್ಲೇಶವನ್ನೈದುವನು. ಇಲ್ಲಿ "ಹರಿಯ" ಎಂಬ ಶಬ್ದಪ್ರಯೋಗವು ದ್ವಂದಾರ್ಥಸೂಚಕವಾಗಿದೆ. ಪರಮಾತ್ಮನನ್ನು ಬಿಟ್ಟವರು--ಎಂದು ಹೇಳು ವಾಗ "ಹರಿನಾರಾಯಣ" ಎಂದು ಒಂದರ್ಥ. "ಪ್ರವಾಹದ ಹರಿವನ್ನೂ ಬಿಟ್ಟವರು" – ಎಂದು ದೃಷ್ಟಾಂತದಲ್ಲಿ ಅರ್ಥ ಹೊಂದಿಸುವಾಗ, "ಪ್ರವಾಹದ ಹರಿ" ಎಂದು ದ್ವಿತೀಯಾರ್ಥ. ಅಂದರೆ ಹರಿಯನ್ನು ಬಿಟ್ಟವರು, ಪ್ರವಾಹದ ಹರಿವನ್ನು ಬಿಟ್ಟವನೂ, ನಾರಾಯಣನನ್ನೂ ಬಿಟ್ಟವನೂ ಇಬ್ಬರೂ ಹರಿ ಯನ್ನು ಬಿಟ್ಟವರು – ಎಂದು ಉಭಯರಲ್ಲಿ ಹರಿಯ ಬಿಟ್ಟವರು ಎಂದು ಸಮನ್ವಯ ಮಾಡಿಕೊಳ್ಳಬಹುದು ॥೧೨॥.

**೫. ಶ್ರೀ ಗುರುಹೃದಯ ಪ್ರಕಾಶಿಕೆ :**

ಶ್ರೀಹರಿಭಕ್ತರಲ್ಲದವರಿಗೆ ಈ ಉಪಾಸನೆ ದೊರಕದೆಂದು 'ಸೂಸಿಬಹ' ಎಂಬುದು ಮೊದಲುಗೊಂಡು ಆರು ಪದ್ಯಗಳಿಂದ ಸದೃಷ್ಟಾಂತದಿಂದ ನಿರೂಪಿ ಸುತ್ತಾರೆ. ಸೂಸಿಬಹ ಎಂದರೆ, ತುಂಬಿ ತುಳುಕುತ್ತ ಬರುವ ನದಿಯಲ್ಲಿ ತನ್ನ ಸಾಹಸ ಎಂದರೆ, ಅಶಕ್ಯ ಪ್ರಯತ್ನವನ್ನು ತೋರಿಸುವೆನೆಂದು ನೀರಿಗೆ ಎದುರಾಗಿ ಈಜಿದರೆ, ಕೈಸೋತುಹೋಗಿ ಮುಳುಗುವಂತೆ ಹರಿಯ ಬಿಟ್ಟವನು ಮುಳುಗುವನು ಅಂದರೆ, ಪ್ರವಾಹ ಅನುಸರಿಸದವನು ನೀರಿನಲ್ಲಿ ಮುಳುಗಿ ನಷ್ಟವಾಗುವ ಹಾಗೆ, ಶ್ರೀಹರಿಯನ್ನು ಅನುಸರಿಸದ ಭಕ್ತಿಯಿಲ್ಲದವನು ಸರ್ವ ಸ್ವಾಮಿದೇವರು ಅನಾದಿಯಿಂದ ತನಗೆ ಕ್ಲುಪ್ತಮಾಡಿರುವುದನ್ನು ಬಿಟ್ಟು ತನ್ನ

ಯೋಗ್ಯತೆ ಮೀರಿ ಆಶೆಯಿಂದ ಅನ್ಯರನ್ನು ಎಂದರೆ, ಇನ್ನೊಬ್ಬರಂತೆ ತಾನಾಗ ಬೇಕೆಂಬ ಅಪೇಕ್ಷೆಯಿಂದ ಶ್ರೀಹರಿಗೆ ಇತರರಾದ ಮನುಷ್ಯಾದಿಗಳನ್ನು ಸೇವಿಸು ವವನು ಇಹ-ಪರದಲ್ಲಿ ಸಹ ದುಃಖವನ್ನು ಹೊಂದುವನು ॥೧೨॥

# ಸರ್ವವ್ಯಾಖ್ಯಾನಸಾರಸಂಗ್ರಹ

೧. ಜೀವರಾಶಿಗಳ ಸಮಸ್ತವ್ಯಾಪಾರಗಳಿಗೂ ಶ್ರೀಹರಿಯೇ ನಿಯಾಮಕನು. ಪ್ರತಿಬಿಂಬಭೂತರಾದ ಜೀವವರ್ಗ ಅವನಿಂದ ನಿಯಮ್ಯರು. ಸರ್ವಕ್ಕೂ ನಿಯಾಮಕನಾಗಿರುವ ಶ್ರೀಪರಮಾತ್ಮನಿಗೆ **ಸರ್ವೇಶ** ಎಂದು ಹೆಸರು. ಸ್ವರೂಪದೇಹಕ್ಕೆ ಆವರ್ಕರೂಪದಲ್ಲಿರುವ ಲಿಂಗದೇಹವು ಅನಾದಿ ಯಾದದ್ದು. ಈ ಅನಾದಿಲಿಂಗದೇಹವು ತ್ರಿಗುಣಾತ್ಮಕವಾದದ್ದು ಮತ್ತು ಷೋಡಶಕಲಾಯುಕ್ತವಾಗಿದೆ. ಈ ಲಿಂಗದೇಹದ ತೃತೀಯ ಪರಿಚ್ಛೇದದಲ್ಲಿ ಅನಾದಿಕರ್ಮಬೀಜಗಳಿವೆ. ಜೀವರಿಗೆ ಅನಾದಿಕಾಲದಿಂದಲೂ ಬಂಧಕ ವಾಗಿರುವ ಕರ್ಮವು ಈಶ್ವರನಿಂದ ನಿರ್ಮಿತವಲ್ಲ. ಆದರೆ ಭಗವದಧೀನ ವಾಗಿದೆ. ಅಸೃಜ್ಯರಾಶಿಯಿಂದ ಜೀವರನ್ನು ಸೃಷ್ಟಿಗೆ ತಂದಕಾಲದಿಂದ ಪ್ರಾರಂಭ ವಾದ ಕರ್ಮಸಂಬಂಧ ಮೋಕ್ಷಪರ್ಯಂತ ಜೀವರಿಗೆ ಹತ್ತಿರುವುದು. ಲಿಂಗ ಭಂಗವಾಗುವವರೆಗೂ ಕರ್ಮಾನುಭವ ಸಿದ್ಧವು. ಪ್ರತಿಜೀವರು ತಮ್ಮ ಅನಾದಿಕರ್ಮಾನುಸಾರವಾಗಿ ಜನನ-ಮರಣಾಖ್ಯರೂಪವಾದ ಭವವೆಂಬ ಈ ಸಂಸಾರಸಾಗರದಲ್ಲಿ ನಿರತರಾಗಿರುವರು. ಇಂತಹ ಕರ್ಮಾನುಭೋಗವು ಆಯಾಯಾ ಜೀವರಿಗೆ ಅವರವರ ಯೋಗ್ಯತಾನುಸಾರ ಕ್ಲೃಪ್ತವಾಗಿರುವುದು. ಈ ಕರ್ಮಾನುಭವರೂಪವಾದ ವ್ಯಾಪಾರವು ಈಶ್ವರಾಧೀನವಾಗಿದೆ. ಸರ್ವೇಶ ನಾದ ಅವನ ನಿಯಾಮಕತ್ವದ ಅಂಕೆಯಲ್ಲಿದೆ. ಈ ಅಭಿಪ್ರಾಯವನ್ನೇ ದಾಸ ರಾಯರು **ಸರ್ವೇಶ ಕ್ಲೃಪ್ತಿಯ ಮಾಡಿದುದ** ಎಂದು ಪ್ರಸಕ್ತಪದ್ಯದಲ್ಲಿ ತಿಳಿಸಿರು ತ್ತಾರೆ. ಈಶನ ಸಂಕಲ್ಪವನ್ನು ಮೀರಿ ಯಾರೂ ನಡೆಯಲಾರರು. ಶ್ರೀಹರಿಯ ನಿಜವಾದ ದಾಸರು ಈ ತತ್ತ್ವವನ್ನು ಚೆನ್ನಾಗಿ ಅರಿತು, **"ನಿನ್ನ ಚಿತ್ತ, ಎನ್ನ ಭಾಗ್ಯ"** ಎಂಬ ಜ್ಞಾನಾನುಸಂಧಾನನ್ನು ಹೊಂದಿರುವರು.

೨. ಕರ್ಮಪತಿಯೂ, ಕರ್ಮನಿಯಾಮಕನೂ ಆದ ಆ ಧರ್ಮಾತ್ಮರೂಪೀ ಶ್ರೀಹರಿಯಸಂಕಲ್ಪದ ಹಿರಿಮೆ-ಗರಿಮೆಗಳನ್ನು ಅರಿಯದೆ, ತನ್ನ ಮನಸ್ಸಿನ ಹಲವಾರು ಇಷ್ಟಾರ್ಥಸಿದ್ಧಿಗಳಿಗಾಗಿ ಕ್ಷುದ್ರದೇವತೆಗಳ ಉಪಾಸನಾ ಮಾಡುವರು. ಹಾಗೆ ಅಧಿಕವಾದ ಐಹಿಕ ಆಶೆಯಿಂದ, ಆ ಆಶಾಸಿದ್ಧಿಗಾಗಿ ಕ್ಷುದ್ರದೇವತೋಪಾಸನೆ ಮಾಡತಕ್ಕ ಮಾನವರು, ಅತ್ಯಂತ ದುಃಖಕ್ಕೆ ಒಳಗಾಗುವರು. ಕೊನೆಯಲ್ಲಿ ಸರ್ವನಾಶವನ್ನು ಹೊಂದುವರು. "ಶ್ರೀಹರಿಯು ಸತ್ಯಸಂಕಲ್ಪನು. ಜೀವರೆಲ್ಲರೂ ಭ್ರಷ್ಟಸಂಕಲ್ಪರು. ನಮ್ಮ ಸಂಕಲ್ಪಶಕ್ತಿ ಭಗವದಧೀನವಾಗಿದೆ" ಎಂಬ ಮರ್ಮವನ್ನು ಅರಿತು, ಬಿಂಬಕ್ರಿಯಾದ್ವಾರಾ ನಡೆಯುತ್ತಿರುವ ಸಕಲ ಕಾರ್ಯಕಲಾಪಗಳನ್ನು ಆ ಕರ್ಮಪತಿಗೆ ಅರ್ಪಿಸುವುದೇ ಉತ್ತಮಸಾಧಕರ ಹೆದ್ದಾರಿ.

೩. ಭಗವತ್ಸಂಕಲ್ಪಕ್ಕೆ ಅನನ್ಯ ಶರಣಾಗುವ ಸತ್ಸಾಧನೆಯ ಮರ್ಮವನ್ನು ದಾಸರಾಯರು ಒಂದು ಸುಂದರವಾದ ದೃಷ್ಟಾಂತದಿಂದ ತಿಳಿಸಿರುತ್ತಾರೆ. ನದಿಯಲ್ಲಿ ತುಂಬು ಪ್ರವಾಹವಿದೆ. ಆ ನದಿಯ ಪ್ರವಾಹವು ಎರಡು ದಡಗಳನ್ನು ಮೀರಿ ಹರಿಯುತ್ತಿದೆ. ಅಂತಹ **ಸೂಸಿಬಹ ನದಿಯೊಳಗೆ** ಒಬ್ಬನು ಈಜಲು ಪ್ರಯತ್ನಿಸುತ್ತಾನೆ. ತನ್ನ ಸಾಮರ್ಥ್ಯವನ್ನು ಜನರಿಗೆ ತೋರಿಸಬೇಕೆಂಬ ಹೆಮ್ಮೆಯಿಂದ, ಹರಿಯುತ್ತಿರುವ ಪ್ರವಾಹಕ್ಕೆ ಎದುರಾಗಿ ಈಜಲು ಪ್ರಯತ್ನಿಸುತ್ತಾನೆ. ಆ ಪ್ರವಾಹದ ಮುಂದೆ ಅಲ್ಪನಾದ ಈ ಮಾನವನ ಶಕ್ತಿ, ಸಾಮರ್ಥ್ಯಗಳು ಏನೇನೂ ಇಲ್ಲ. ಕೊನೆಯಲ್ಲಿ ಕೈಸೋತು, ಬಳಲಿ ಬೆಂಡಾಗಿ, ನೀರಿನಲ್ಲಿ ಮುಳುಗುತ್ತಾನೆ. ಅಂತೆಯೇ ಸರ್ವಪಾಪಪರಿಹಾರಕನೂ ಸರ್ವಚೇಷ್ಟಾಪ್ರವರ್ತಕನೂ ಆದ ಬಿಂಬರೂಪೀ ಶ್ರೀಹರಿಯನ್ನು ಬಿಟ್ಟು, ಸ್ವಸಾಮರ್ಥ್ಯವಿದೆ ಎಂದಾಗಲೀ, ಅನ್ಯದೇವತೆಗಳ ಉಪಾಸನೆಯಿಂದಲಾಗಲೀ, ಅವನಿಗೆ ದುರ್ಗತಿಯೇ ಹೊರತು, ಸದ್ಗತಿ ಇಲ್ಲ. ಶ್ರೀಹರಿಯ ಸಂಕಲ್ಪ ಪ್ರವಾಹ ಸದೃಶ. ಪ್ರವಾಹಕ್ಕೆ ಎದುರಾಗಿ ಈಜಲು ಪ್ರಯತ್ನಿಸುವ ಮಾನವನ ಸಾಮರ್ಥ್ಯವು ಸತ್ಯಸಂಕಲ್ಪನ ಇಚ್ಛೆಗೆ ವಿರುದ್ಧವಾದುದು. ಕೈಸೋತು ನೀರಿನಲ್ಲಿ ಮುಳುಗುವ ಅಜ್ಞಾನಿಯಂತೆ. ಸತ್ಯಸಂಕಲ್ಪನ ಇಚ್ಛೆಗೆ ವಿರುದ್ಧವಾಗಿ ಹೋಗಬೇಕೆಂಬ ಮಾನಸಿಕ ಯೋಚನೆಯೂ ಸಹ ನಮಗೆ

ದುರ್ಗತಿಗೆ ಕಾರಣವಾಗುವುದು. ಸಂಸಾರವೆಂಬುದೇ ಅಗಾಧವಾದ ಅಕ್ಷಯ ಸಾಗರ. ಅದನ್ನು ದಾಟಲು ಶ್ರೀಶನ ಸಂಕಲ್ಪಾನುಸಾರ ನಡೆದು, ಅವನ ಇಚ್ಛೆಗೆ ತಲೆಬಾಗಿ, ಅವನ ನಿಯಾಮಕತ್ವ ಮತ್ತು ಕರ್ತೃತ್ವಗಳಿಗೆ ಸಂಪೂರ್ಣ ಶರಣಾಗತರಾಗುವುದೊಂದೇ ಸುಮಾರ್ಗವೆಂದು ಪ್ರಸಕ್ತ ಪದ್ಯಾಭಿಪ್ರಾಯವು.

॥೧೨॥

## ಪದ್ಯ ೧೩

**ಮೂಲ :**

**ನಾನು ನನ್ನದು ಎಂಬ ಜಡಮತಿ ।**
**ಮಾನವನು ದಿನದಿನದಿ ಮಾಡುವ ।**
**ಸ್ನಾನ ಜಪ ದೇವಾರ್ಚನೆಯು ಮೊದಲಾದ ಕರ್ಮಗಳ ॥**
**ದಾನವರು ಸೆಳೆದೊಯ್ಯುವರಲ್ಲದೆ ।**
**ಶ್ರೀನಿವಾಸನು ಸ್ವೀಕರಿಸ ಮ ।**
**ದ್ದಾನೆ ಪಕ್ವ ಕಪಿತ್ಥ ಫಲ ಭಕ್ಷಿಸಿದವೋಲಹುದು ॥ ॥೧೩॥**

**ಅವತರಣಿಕೆ :**

ಅಹಂಕಾರ-ಮಮಕಾರಗಳಿಂದ ಗ್ರಸ್ತರಾದ ಮಾನವರು, ಸರ್ವಕರ್ಮವನ್ನು ಕೃಷ್ಣಾರ್ಪಣಮಸ್ತು ಎಂಬ ಸರ್ವಕರ್ಮಸಮರ್ಪಣಾವಿಧರೂಪವಾದ ಉತ್ತಮ ಜ್ಞಾನಾನುಸಂಧಾನವಿಲ್ಲದೆ ಮಾಡುವ ಸರ್ವಕರ್ಮಗಳೂ ನಿರರ್ಥಕ ಮತ್ತು ಅವುಗಳನ್ನು ಶ್ರೀಹರಿಯು ಸ್ವೀಕರಿಸುವುದಿಲ್ಲ ಎಂಬ ವಿಷಯವನ್ನು ಮದ್ದಾನೆ ಎಂಬ ಫಲದಲ್ಲಿಯೇ ಇರುವ ಹುಳುವು ಪಕ್ವವಾದ ಬೇಲದ ತಿರುಳನ್ನು ತಾನು ತಿಂದು, ಆ ಫಲವನ್ನು ಟೊಳ್ಳು ಮಾಡುವಂತೆ, ಸ್ನಾನ,ಜಪ ದೇವತಾರ್ಚನೆ ಇತ್ಯಾದಿ ಸತ್ಕರ್ಮಗಳ ಫಲ ಆ ಜಡಮತಿ ಮಾನವನಿಗೆ ದಕ್ಕದೇ, ದೇಹಗತ ದೈತ್ಯರು ಸೆಳೆದೊಯ್ಯುರು ಎಂದು ತಿಳಿಸುತ್ತಾರೆ **ನಾನು ನನ್ನದು** ಎಂಬ ಪ್ರಸಕ್ತಪದ್ಯದಿಂದ ॥೧೩॥.

**ಪ್ರತಿಪದಾರ್ಥ :**

**ನಾನು** = ಅಹಂಕರ್ತೃತ್ವಾಭಿಮಾನವುಳ್ಳ, **ನನ್ನದು** = ಇದೆಲ್ಲವೂ ನನಗೇ ಸೇರಿದ್ದು ಎಂಬ ಮಮಕಾರವುಳ್ಳ, **ಎಂಬ ಜಡಮತಿ ಮಾನವರು** = ಜಡವಾದ ಶರೀರವೇ ನಾನು ಎಂಬ ಆತ್ಮಪ್ರತ್ಯಯ ಜ್ಞಾನವಿರುವ ಅಲ್ಪನರರು, **ದಿನ ದಿನದಿ** = ಪ್ರತಿದಿವಸದಲ್ಲಿಯೂ, **ಮಾಡುವ** = ಆಚರಿಸುವ, **ಸ್ನಾನ** = ದೇಹ ಪ್ರಕ್ಷಾಳನರೂಪವಾದ ಸ್ನಾನವೆಂಬ ವಿಧಿ, **ಜಪ** = ಮಾನಸಿಕವಾಗಿ ಮಾಡುವ ಗಾಯತ್ರೀ ಇತ್ಯಾದಿ ಜಪಗಳು, **ದೇವಾರ್ಚನೆಯು** = ದೇವರ ಪೂಜಾವಿಧಿಗಳು, **ಮೊದಲಾದ ಕರ್ಮಗಳ** = ಪೂರ್ವೋಕ್ತ ಸತ್ಕರ್ಮಗಳನ್ನು, **ದಾನವರು** = ಶರೀರಗತ ತತ್ತ್ವದೈತ್ಯರು, **ಸೆಳೆದೊಯ್ವರಲ್ಲದೇ** = ಅಪಹರಿಸಿಕೊಂಡು ಹೋಗುತ್ತಾರಲ್ಲದೆ, **ಶ್ರೀನಿವಾಸನು** = ಶ್ರೀಲಕ್ಷ್ಮೀಪತಿಯಾದ ಪರಮಾತ್ಮನು, **ಸ್ವೀಕರಿಸ** = ತಾನು ಎಂದೆಂದಿಗೂ ಸ್ವೀಕಾರ ಮಾಡುವುದಿಲ್ಲ, **ಮದ್ದಾನೆ** = ಫಲದಲ್ಲಿಯೇ ಹುಟ್ಟಿ, ಅಲ್ಲಿಯೇ ಬೆಳೆದು, ಫಲಗತವಾಗಿರುವ ಮದ್ದಾನೆ ಎಂಬ ಸಣ್ಣ ಕ್ರಿಮಿಯು (ಮದ್ದಾನೆ ಎಂದರೆ ಮದಿಸಿದ ಆನೆ ಎಂಬ ಅರ್ಥವಲ್ಲ) **ಪಕ್ವ ಕಪಿತ್ಥ ಫಲ** = ಹಣ್ಣಾಗಿರುವ ಬೇಲದ ಹಣ್ಣನ್ನು, **ಭಕ್ಷಿಸಿದವೋಲಹುದು** = ಒಳಗೇ ಇದ್ದು ಕೊರೆದು, ತಿನ್ನುವಂತೆ ಆ ಕರ್ಮಾನುಷ್ಠಾನದ ಗತಿ ಆಗುತ್ತದೆ. ॥೧೩॥

# ವ್ಯಾಖ್ಯಾನಗಳು

## ೧ ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಅಹಂಮಮತಾರಹಿತನಾಗಿ ಕರ್ಮಗಳ ಮಾಡಬೇಕೆಂದು ಹೇಳುತಾರೆ. ಪರಾಧೀನಕರ್ತೃತ್ವವುಳ್ಳ ತಾನು, ನಾನು ಎಂತ ಸ್ವಾಧೀನಕರ್ತೃತ್ವವನ್ನು ಆರೋಪಣೆ ಮಾಡಿಕೊಂಡು, ಪರಾಧೀನಕರ್ತೃತ್ವವಿಲ್ಲದ ಸ್ವತಂತ್ರನಾದ ಶ್ರೀಪರಮಾತ್ಮನ್ನ ಮರೆಯೋಣ, ಸರ್ವದೋಷಗಳೊಳಗೆ ಪ್ರಬಲದೋಷ. ಮುಕ್ತಿಯೋಗ್ಯರು ಮಾಡತಕ್ಕ ಬ್ರಹ್ಮಹತ್ಯಾದಿ ಪಾಪಗಳಿಗೆ ಕಿರೀಟಸ್ಥಾನಾಪನ್ನ ವಾದದ್ದು. ಇದು ಒಂದು. ಸರ್ವವೂ ಸೃಷ್ಟಿಮಾಡಿದವ ಶ್ರೀಪರಮಾತ್ಮನು.

ಯಾವತ್ತೂ ಈಶ್ವರನದು ಎಂದೇ ಹೊರ್ತು ಅನ್ಯರದು ಅಲ್ಲ. ಇಂಥಾದ ರನ್ನ ಸರ್ವವೂ ನನ್ನದು ಎಂತ ಆತ್ಮಾರೋಪಣೆ ಮಾಡಿಕೊಂಬುವುದೊಂದು ಪ್ರಬಲದೋಷ, ಅಂತು ಎರಡು ಪ್ರಕಾರ. (ನಾನು ನನ್ನದು) ಅನತಕ್ಕವರು ಸರ್ವದಾ ಶ್ರೀಪರಮಾತ್ಮಗೆ ಹಿತರಲ್ಲ. ಇಂಥಾ ಶುದ್ಧಜ್ಞಾನಹೀನನಾದ ಅಲ್ಪಮನುಷ್ಯನು ಪ್ರತಿದಿನದಲ್ಲೂ ಮಾಡತಕ್ಕಂಥಾ ಸ್ನಾನವೇನು, ಜಪಗಳೇನು, ದೇವರಪೂಜೆಗಳೇನು ಇನ್ನೂ ಅನೇಕವಾದ ಸತ್ಕರ್ಮಗಳನ್ನ ದೈತ್ಯರಾದವರು ಅಪಹರಿಸಿಕೊಂಡು ಹೋಗತಾರೆ. ಅಲ್ಲದೆ, ದಾನವರು ಯದ್ಯಪಿ ಅಸ್ವತಂತ್ರ ರಾದಾಗ್ಯೂನು ಅವರಂತರ್ಗತನಾದ ಪರಮಾತ್ಮ ಅವರಿಗೆ ಅಂಥಾ ಬುದ್ಧಿಪ್ರೇರಣೆ ಮಾಡಿ, ಈ ಅಧಿಕಾರಿ ಮಾಡಿದ ಪುಣ್ಯಕರ್ಮಗಳ ದೈತ್ಯರಿಗೆ ಕೊಡತಾನೆ. ಲೋಕದಲ್ಲಿ ಪುಣ್ಯಗಳು ಮತ್ತೊಬ್ಬರಿಗೆ ಧಾರೆ ಎರೆಯೋಪಾದಿಯಲ್ಲಿ ದಾನವರು ಅಲ್ಲದೇ, ಅನ್ಯನಾದ ಪರಮಾತ್ಮನು ಸ್ವೀಕಾರ ಮಾಡೋದಿಲ್ಲ. ಈ ಪ್ರಕಾರ ಸತ್ಕರ್ಮ ಮಾಡಿದ ಅಧಿಕಾರಿಗೆ ಫಲ ಎಂಥಾದಾಗತದೆ ಎಂದರೆ, ಚಂದಾಗಿ ಮದ ಹಿಡದು ಇರುವಂಥಾ ಗಜಕ್ಕೆ ಚಂದಾಗಿ ಪಕ್ವವಾದ ಬ್ಯಾಲದಹಣ್ಣಿನ ತಿನಲಿಕ್ಕೆ ಕೊಟ್ಟರೆ ಅದು ತಿನತದೆ. ಪೂರ್ವವತ್ ಫಲಧಾಂಗೆ ಮಲದಲ್ಲಿ ಆ ಬ್ಯಾಲದ ಹಣ್ಣು ಹೊರಗೆ ಬರತದೆ. ಒಡೆದು ನೋಡಿದರೆ ಅದರಲ್ಲಿ ಒಂದೂ ಇಲ್ಲದೇ ಬರೀ ವೋಡು ಮಾತ್ರ ಇರಿತದೆ. ಇದರಂತೆ ಅಹಂಮಮತಾಯುಕ್ತನಾಗಿ ಸತ್ಕರ್ಮಗಳು ಮಾಡಿದರೆ, ಆನೆಗೆ ಹಾಕಿದ ಬ್ಯಾಲದ ಹಣ್ಣಿನೋಪಾದಿಯಲ್ಲಿ ಬರೀ ಚಿಪ್ಪುರೂಪವಾದ ದುಷ್ಫಲವನ್ನು ಹೊಂದಿ ದುಃಖಿಪಡತಾನೆ. ದ್ರವ್ಯ ದಿಂದಲೂ ದೇಹದಿಂದಲೂ ಮಾಡಿದ ಕಾರ್ಯ ನಿಷ್ಫಲವಾಗಿ ದೇಹಾಯಾಸ, ದ್ರವ್ಯಧ್ವಂಸವೆ. ಪರಂತು ಅದರಿಂದ ಫಲವೇನೂ ಕಾಣೋದಿಲ್ಲ. ಆದಕಡಿ ಯಿಂದ ಅಹಂಮಮತಾ ತ್ಯಾಗಮಾಡಬೇಕು. ಆದರೆ ದೈತ್ಯರು ಅಪಹರಿಸಿದ ಪುಣ್ಯ, ದೇವರು ತಾನು ಅಪಹರಿಸಿ ದೇವತೆಗಳಿಗೆ ವಿಭಾಗ ಮಾಡಿಕೊಡತಾನೆ. ಅಪಹರಿಸಿ ದೈತ್ಯರನ್ನು ಶಿಕ್ಷಿಸುತ್ತಾನೆ ಎಂತ ತಾತ್ಪರ್ಯ. ॥೧೩॥

೨ **ಭಾವಪ್ರಕಾಶಿಕೆ**

ಸಕಲಕರ್ಮಗಳನ್ನು ಈಶ್ವರನು ಮಾಡಿಸುವನೆಂಬ ಜ್ಞಾನವಿಲ್ಲದೆ, ಸ್ವತಂತ್ರ ಕರ್ತೃತ್ವಾಭಿಮಾನದಿಂದ ನಾನೇ ಮಾಡುವೆನೆಂಬ ಅಭಿಮಾನಉಳ್ಳವರು

ಮಾಡಿದ ದೇವತಾರ್ಚನಾದಿಕರ್ಮಗಳು ನಿಷ್ಫಲವೆಂದು ಈ ಪದ್ಯದಿಂದ ಹೇಳುತ್ತಾರೆ :

**"ನಾಹಂ ಕರ್ತಾ ಹರಿಃ ಕರ್ತಾ"**—ಎಂಬ ನ್ಯಾಯದಿಂದ ಎಲ್ಲಾ ಕಾರ್ಯಗಳನ್ನೂ ಪರಮಾತ್ಮನೇ ಮಾಡಿಸುವನು. ನಾನು ಮಾಡುವವನಲ್ಲ—ಎಂಬ ಜ್ಞಾನವನ್ನು ಮರೆತು, ಎಲ್ಲಾ ಕಾರ್ಯಗಳನ್ನೂ ಸ್ವತಂತ್ರದಿಂದ ನಾನೇ ಮಾಡುವೆನು, ಈ ವಸ್ತುಗಳೆಲ್ಲವೂ ನನ್ನವು ಎಂಬ ಅಭಿಮಾನವುಳ್ಳ ಮೂರ್ಖನು ಮಾಡುವ ಸ್ನಾನ, ಜಪ, ದೇವತಾರ್ಚನಾದಿ ಸಕಲಕರ್ಮಗಳ ಫಲವನ್ನು ದೈತ್ಯರು ಅಪಹರಿಸುವವರಲ್ಲದೆ ಶ್ರೀಪರಮಾತ್ಮನು ಸ್ವೀಕರಿಸನು. ಅದು ಹೇಗೆಂದರೆ, ಬೇಲದ ಹಣ್ಣನ್ನು ಆನೆಯು ನುಂಗಲು, ಹಣ್ಣಿನಲ್ಲಿರುವ ತಿರುಳು ಮಾಯವಾಗಿ ಚಿಪ್ಪುಮಟ್ಟಿಗೆ ಹೊರಗೆ ಬರುವುದು, ಹಾಗೆ ॥ ॥೧೩॥

### ೩ ಭಾವದರ್ಪಣ

ನಾನೇ ಕರ್ತಾ ಎಂದು ಮಾಡಿದ ಸತ್ಕರ್ಮಗಳು ಯಾವತ್ತೂ ದೈತ್ಯರೇ ಶೆಳೆದೋಯ್ವರೆಂದು ಸದೃಷ್ಟಾಂತ ಹೇಳುತ್ತಾರೆ–**ನಾನು ಇತಿ॥** ॥೧೩॥

### ೪ ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ)

"ನಾನು"–ಇತಿ॥ "ಅವೈಷ್ಣವ ಕೃತಃ ಯಜ್ಞೋ ದೀನೈಃ ದೇವೈಃ ತು ಭಾಜ್ಯತೇ॥ ದೇವಸಂಜ್ಞಾಃ ಚ ದೀನತ್ವಾತ್ ಬ್ರಹ್ಮೇಂದ್ರಾದಿ ಸನಾಮಕಾಃ॥" ಇತಿ ವಚನಾತ್॥ "ಅಹಂತೇತಿ ನೃಣಾಂ ಕರ್ಮಗಜಭುಕ್ತ ಕಪಿತ್ಥವತ್॥" ಅಹುದು=ಆಗೋದು ॥ ॥೧೩॥

### ಕನ್ನಡಾರ್ಥ :

ವಿಷ್ಣುಭಕ್ತಿರಹಿತರಾದ ಅವೈಷ್ಣವರು ಮಾಡುವ ಯಜ್ಞಾದಿ ಕರ್ಮಗಳು ನಿಷ್ಫಲ. ಆ ಯಜ್ಞಫಲವನ್ನು ದೀನರಾದ ದೇವತೆಗಳ ಹೆಸರಿನಿಂದ ಇರುವ ದೈತ್ಯರು ಅಪಹರಿಸುತ್ತಾರೆ. ದೈತ್ಯರಿಗೆ ದೀನರಾದುದರಿಂದ, "ದೇವ"–ಎಂಬ ಸಂಜ್ಞಾರ್ಥಸೂಚಕ. ಆಯಾ ದೇವತೆಗಳ ಹೆಸರೂ ಅವರಿಗೆ ಬಂದಿರು

ತ್ತದೆ"–ಎಂಬ ಪ್ರಮಾಣವಾಕ್ಯಗಳಿವೆ. ಈ ಕಾರಣದಿಂದ ಅವೈಷ್ಣವರು ಆ ದೇವತೆಗಳ ಹೆಸರಿನಿಂದ ಆಹುತಿಕೊಟ್ಟರೂ, ಆ ಹೆಸರಿನ ದೈತ್ಯರು ಅವುಗಳನ್ನು ಅಪಹರಿಸಿ, ಸುಕರ್ಮಫಲಗಳನ್ನು ವಿಫಲಗೊಳಿಸುತ್ತಾರೆ. "ನಾನು, ನನ್ನದು"–ಎಂಬ ಅಹಂಕಾರದಿಂದ ಮಾಡಿದ ಮಾನವರ ಕರ್ಮವು ಆನೆಯಿಂದ ಭಕ್ಷಿಸಲ್ಪಟ್ಟ ಕಪಿತ್ಥಫಲದಂತೆ ವ್ಯರ್ಥ. ಗಜಸ್ನಾನವು ಹೇಗೆ ವ್ಯರ್ಥವೋ, ಹಾಗೆ ಅಹಂಕಾರಯುಕ್ತವಾಗಿ ಮಾಡಿದ ಸಕಲಕರ್ಮಗಳೂ ವ್ಯರ್ಥವಾಗುತ್ತವೆ" ಎಂದು ಅಭಿಪ್ರಾಯ ॥ ॥೧೩॥

## ೫ ಶ್ರೀಗುರುಹೃದಯ ಪ್ರಕಾಶಿಕೆ

ನಾನು ನನ್ನದು ಎಂಬ ಜಡಮತಿ ಮಾನವನು ಅಂದರೆ, ಶ್ರೀಹರಿಯೇ ಸರ್ವರಿಗೂ ದೇಹಾದಿಗಳನ್ನು ಕೊಟ್ಟಿರುವುದರಿಂದ ಅವನೇ ಸರ್ವಪ್ರೇರಕ ಸ್ವತಂತ್ರನೆಂದು ತಿಳಿಯದೆ, ನಾನೆಂಬ ಅಹಂಕಾರಜ್ಞಾನಕ್ಕೆ ಗೋಚರನಾದ ಜೀವನೇ ಸ್ವತಂತ್ರ, ದೇಹಾದಿಗಳೆಲ್ಲಾ ತಾನೇ ಸಂಪಾದಿಸಿದ್ದು ತನ್ನದು ಎಂದು ಎಣಿಸಿರುವ ಮನುಷ್ಯನು, ನಿತ್ಯ ಮಾಡುವ ಸ್ನಾನ, ಜಪ, ದೇವತಾರ್ಚನೆ ಮುಂತಾದ ಪುಣ್ಯಕರ್ಮಗಳನ್ನು ಬ್ರಹ್ಮೇಂದ್ರಾದಿನಾಮುಗಳುಳ್ಳ, ದೀನರಾದ್ದರಿಂದ ದಾನವರೆಂತ ಕರೆಯಲ್ಪಡುವ ತತ್ತ್ವೇಶ ಅಸುರರು ಸೆಳೆದು ಅಪಹರಿಸುವರೇ ಹೊರ್ತು, ಶ್ರೀನಿವಾಸನೂ ದೇವತೆಗಳೂ ಸಹ ಅಂಗೀಕರಿಸರು. ಮದ್ದಾನೆ ಪಕ್ವಬೇಲದ ಹಣ್ಣು ನುಂಗಿ, ಹಣ್ಣು ಒಡೆಯದೇ ಇರುವುದರಿಂದ ಒಳಗೆ ತಿರುಳು ಇರುವುದೆಂದು ತೋರಿದಾಗ್ಯೂ, ಒಡೆದು ನೋಡಿದರೆ ಏನೂ ಇಲ್ಲದಿರುವಂತೆ, ಅಸುರರು ತೋರಿಸಿದ ದುರ್ಭೋಗವನ್ನೇ ಸುಖವನ್ನಾಗಿ ಎಣಿಸಿ ಕೆಡುವನು ಎಂದರ್ಥ. **ದೀನತ್ವಾದ್ದೇವನಾಮಾನಃ ಬ್ರಹ್ಮೇಂದ್ರಾದಿ ನ ನಾಮಕಾಃ** ಎಂಬ **ಗೀತಾ ತಾತ್ಪರ್ಯ** ವಿವರಿಸಲ್ಪಟ್ಟಿತು. ॥೧೩॥

# ಸರ್ವವ್ಯಾಖ್ಯಾನಸಾರಸಂಗ್ರಹ

೧. ಈ ಜಗತ್ತಿನಲ್ಲಿ ವ್ಯವಹಾರ ಮಾಡುವ ಕಾಲದಲ್ಲಿ ನಾವು ಬಳಸುವ ಮಾತುಗಳಲ್ಲಿ ಸಾಮಾನ್ಯವಾಗಿ ಈ ಶಬ್ದಗಳನ್ನು ಉಪಯೋಗಿಸುತ್ತೇವೆ. "ನಾನು" "ನನ್ನಿಂದ" ಮತ್ತು "ನನ್ನ". ಈ ಶಬ್ದಗಳ ಬಳಕೆ ಔಪಚಾರಿಕ

ವಾಗಿ ಇರದೆ, ಸಹಜವಾಗಿಯೇ ಇರುತ್ತದೆ. "ಈ ಕೆಲಸವನ್ನು ಮಾಡಿದವನು **ನಾನು**", "ಇವೆಲ್ಲಾ **ನನ್ನಿಂದ** ನಡೆಯಿತು", "ಈ ವಸ್ತುಗಳೆಲ್ಲವೂ **ನನ್ನದು**". "ನಾನು" ಎಂಬ ಅಹಂಕರ್ತೃತ್ವಾಭಿಮಾನಕ್ಕೆ ಅಹಂಕಾರವೆಂದು ಹೆಸರು. ಎಲ್ಲವೂ ನನಗೇ ಸೇರಿದ್ದು – ಇದು ನನ್ನದು ಎಂಬ ಭಾವವು ಮಮಕಾರವೆನಿಸು ವುದು. ಹೀಗೆ ಅಹಂಕಾರ ಮತ್ತು ಮಮಕಾರಗಳಿಂದ ಗ್ರಸ್ತರಾದ ಮಾನವರು ಆಚರಿಸುವ ಸತ್ಕರ್ಮಗಳೆಲ್ಲವೂ ವ್ಯರ್ಥವೆಂದು ತಿಳಿಸುತ್ತಾರೆ ಪ್ರಸಕ್ತಪದ್ಯ ದಿಂದ.

೨. ನಮ್ಮ ಸ್ಥೂಲದೇಹವು ಪಾಂಚಭೌತಿಕಶರೀರವಾಗಿದೆ. ಪಂಚ ಭೂತಗಳು ಜಡವಸ್ತುಗಳು. ಈ ಕಾರಣದಿಂದ ಇದಕ್ಕೆ ಜಡದೇಹವೆಂದು ಹೆಸರು. ಅಂತಹ ಜಡದೇಹವೇ ನಾನು. ನಾನೇ ಈ ದೇಹದ ರೂಪದಲ್ಲಿ ಇದ್ದೇನೆ - ಎಂಬ ಭಾವನೆ ಇರುವ ಮಾನವರನ್ನು **ಜಡಮತಿ** ಎಂದು ಕರೆ ದಿದ್ದಾರೆ ದಾಸವರ್ಯರು.

೩. ಜೀವನಾದರೋ ಚೇತನಸ್ವರೂಪಿಯು. ಜೀವನಿಗೆ ಮನಸ್ಸು, ಚಿತ್ತ, ಬುದ್ಧಿ ಇತ್ಯಾದಿ ಮನೋವ್ಯಾಪಾರಕ್ಕೆ ಸಹಕಾರಿಯಾದ ಪರಿಕರಗಳಿವೆ. ಜೀವನಿಗೆ ಆಲೋಚನಾಶಕ್ತಿ, ಸಂಕಲ್ಪಶಕ್ತಿ, ವಿವೇಚನಾಶಕ್ತಿ ಇತ್ಯಾದಿಗಳಿವೆ. ಆದರೆ ಜಡವಸ್ತುಗಳಿಗೆ ಈ ಗುಣಧರ್ಮಗಳಿಲ್ಲ. ಈ ಕಾರಣದಿಂದ ಜಡ ರೂಪವಾದ ದೇಹವೇ ಬೇರೆ. ಅದರಲ್ಲಿ ಪ್ರಕಾಶತೋವ್ಯಾಪ್ತನಾಗಿ ವಾಸಿ ಸುವ ಚೇತನನು ದೇಹದಿಂದ ಭಿನ್ನನು. ಜಡಜೀವ ಭೇದಪಂಚಭೇದಗಳಲ್ಲಿ ಒಂದು ಭೇದವಾಗಿದೆ.

೪. ಇಂತಹ ಜಡದೇಹದಿಂದ ವಿಲಕ್ಷಣನಾದ ಚೇತನನು ಅಸ್ವತಂತ್ರನು. ಅವನ ದೈಹಿಕ, ವಾಚನಿಕ, ಮಾನಸಿಕ, ಭೌದ್ಧಿಕ ಇತ್ಯಾದಿ ಸಕಲಕರ್ಮಗಳೂ ಸರ್ವತಂತ್ರಸ್ವತಂತ್ರನಾದ ಬಿಂಬರೂಪೀ ಶ್ರೀಹರಿಯ ಪ್ರೇರಣೆಯಿಂದಲೇ ನಡೆಯುವುವು. ಜೀವನಿಗೆ ಕರ್ತೃತ್ವಶಕ್ತಿ ಇದೆ. ಆದರೆ ಜೀವನ ಕರ್ತೃತ್ವವು ಭಗವದಧೀನವಾಗಿದೆ. ಈ ರೀತಿ ಸರ್ವತಂತ್ರಸ್ವತಂತ್ರನೂ, ಸ್ವತಂತ್ರ ಕರ್ತೃತ್ವವುಳ್ಳ ಬಿಂಬನಾದ ಈಶನು ಪರಾಧೀನ ಕರ್ತೃತ್ವವನ್ನು ಹೊಂದಿರುವ ಪ್ರತಿಬಿಂಬಭೂತನಾದ ಜೀವನಿಗಿಂತ ಅತ್ಯಂತಭಿನ್ನನು. ಅಂದರೆ ಜೀವೇಶ ಭೇದವು.

೫. ದೇಹಾತ್ಮೈಕ್ಯಭಾವವುಳ್ಳ, ಅಹಂಕಾರ ಮತ್ತು ಮಮಕಾರಗಳಿಂದ ಗ್ರಸ್ತರಾದ **ಜಡಮತಿಮಾನವರು** ಪ್ರತಿದಿವಸದಲ್ಲಿಯೂ ಆಚರಿಸುವ ಸ್ನಾನ, ಜಪ, ತಪ, ದೇವತಾರ್ಚನೆ ಇತ್ಯಾದಿ ಸತ್ಕರ್ಮಗಳ ಫಲ ಅವರಿಗೆ ದೊರೆಯದೆ, ದೈತ್ಯರು ಬಲಾತ್ಕಾರದಿಂದ **ಸೆಳೆದು ಒಯ್ವರೆಂದು** ಹೇಳುತ್ತಾರೆ. ಅಂತಹ ಸತ್ಕರ್ಮಾನುಷ್ಠಾನದಿಂದ ಉಂಟಾಗುವ ಫಲ ಶ್ರೀಪರಮಾತ್ಮನು ಸ್ವೀಕರಿಸುವುದಿಲ್ಲ. ಇದರಿಂದ ಆ ಕರ್ಮಗಳೆಲ್ಲವೂ ನಿಷ್ಫಲಗಳಾಗಿ ವ್ಯರ್ಥವೆಂದೆನಿಸುವುವು. ಸ್ನಾನ ಮಾಡುವಾಗ, ಜಡವಾದ ನೀರಿನಿಂದ ಈ ಜಡದೇಹವನ್ನು ತೊಳೆಯುತ್ತಿದ್ದೇನೆ ಎಂಬ ಭಾವನೆ ಇದ್ದರೆ, ಆ ಸ್ನಾನ ಕರ್ಮರೂಪವಾದ ಫಲ ಆ ಜೀವನಿಗೆ ದೊರೆಯುವುದಿಲ್ಲ. ಜಡವಾದ ಉದಕದಲ್ಲಿ ಅಂತರ್ಗತವಾದ ಭಗವದ್ರೂಪಕ್ಕೂ ಜಲಾಭಿಮಾನಿ ದೇವತಾಂತರ್ಗತ ಭಗವದ್ರೂಪಕ್ಕೂ ಈ ಜಡದೇಹದಲ್ಲಿ ದೇಹಾಕಾರನಾಗಿ ಆಪಾದಮೌಳಿ ವ್ಯಾಪಿಸಿರುವ ಪುರುಷನಾಮಕ ಭಗವದ್ರೂಪಕ್ಕೂ, ಜೀವಾಂತರ್ಯಾಮಿಯಾಗಿ ಜೀವನಾಕಾರವಾಗಿರುವ ಬಿಂಬರೂಪೀ ಶ್ರೀಹರಿಯ ಭಗವದ್ರೂಪಕ್ಕೂ ಐಕ್ಯ ಚಿಂತನೆಮಾಡಿ, ಸ್ನಾನಮಾಡಿದರೆ ಅದು ನಿಜವಾದ ಕರ್ಮವೆನಿಸುವುದು. ಕರ್ಮವು ಜ್ಞಾನಕ್ಕೆ ಸಹಕಾರಿಯಾಗಿರಬೇಕು. ಕೇವಲ ಜಡಕರ್ಮಾನುಷ್ಠಾನ ಯಾಂತ್ರಿಕವಾಗುವುದೇ ಹೊರತು ಭಗವತ್ಪ್ರೀತಿಯಾಗುವುದಿಲ್ಲ. ಅಂತೆಯೇ, ಸ್ನಾನ, ಮಾನಸಿಕವಾಗಿ ಆಚರಿಸುವ ಜಪತಪಾದಿಕರ್ಮಗಳು, ತಂತ್ರಸಾರೋಕ್ತ ದೇವತಾರ್ಚನೆ ಇತ್ಯಾದಿ ಸತ್ಕರ್ಮಗಳೆಲ್ಲಾ ಭಗವತ್ಪ್ರೀತಿಕರವಾಗಿರಬೇಕು. ಬಿಂಬರೂಪಿಯಾದ ಶ್ರೀಹರಿಯೇ ಜೀವನಲ್ಲಿ ನಿಂತು. ಜೀವನಪರವಾಗಿ ಸಕಲಕಾರ್ಯಗಳನ್ನು ತಾನೇ ಮಾಡಿ, ತತ್ವೇಶರ ದ್ವಾರಾ ಮಾಡಿಸಿ, ಈ ದೇಹದಲ್ಲಿ ಪ್ರಕಾಶತೋ ವ್ಯಾಪ್ತನಾದ ಜೀವನ ಅನುಭವಕ್ಕೆ ತಂದೀಯುವವನು ಎಂಬುದೇ ಉತ್ತಮ ಮಟ್ಟದ ಜ್ಞಾನಾನುಸಂಧಾನವು. ಭಗವದನುಗ್ರಹಕ್ಕೆ ಪಾತ್ರರಾದ ಚೇತನರಿಗೆ ಮಾತ್ರ ಈ ಜ್ಞಾನಾನುಸಂಧಾನವಿರುವುದು. ಇತರರೆಲ್ಲರೂ ನಾನು ನನ್ನದು ಎಂಬ ಭ್ರಾಂತಿಯಿಂದ ಯುಕ್ತರಾದ ಜಡಮತಿ ಮಾನವರು.

೬. ದೈತ್ಯರು ಸ್ವರೂಪತಃ ತಮೋಯೋಗ್ಯರು. ಅವರಿಗೆ ಸತ್ಕರ್ಮಗಳನ್ನು ಮಾಡುವ ಸಾಮಗ್ರಿವಿಶೇಷವೇ ಇಲ್ಲ. ಅಂತಹ ದೈತ್ಯರು ನಮ್ಮ

ಶರೀರಸ್ಥರಾಗಿದ್ದು, ಅಹಂಕಾರ ಮಮಕಾರಯುಕ್ತರಾದ ಜಡಮತಿ ಮಾನವರು ಮಾಡುವ ಸತ್ಕರ್ಮಗಳ ಫಲವನ್ನು ಬಲಾತ್ಕಾರವಾಗಿ ಅಪಹರಿಸುವರು. ದೈತ್ಯರು ಸತ್ಕರ್ಮಫಲ ಚೋರರು. **"ನಾಹಂ ಕರ್ತಾ ಹರಿಃಕರ್ತಾ"** ಎಂಬ ಜ್ಞಾನಾನುಸಂಧಾನುವಿಲ್ಲದೆ ಮಾಡುವ ಕರ್ಮಗಳು ಸತ್ಕರ್ಮಗಳೇ ಆದರೂ, **ಶ್ರೀನಿವಾಸನು** ಅವುಗಳನ್ನು ಸ್ವೀಕರಿಸುವುದಿಲ್ಲ. ಈ ತತ್ವವನ್ನು ಒಂದು ಸುಂದರ ದೃಷ್ಟಾಂತದಿಂದ ದಾಸರಾಯರು ವಿವರಿಸುತ್ತಾರೆ. **ಮದ್ದಾನೆ** ಎಂದು ಕರೆಯಲ್ಪಡುವ ಒಂದು ವಿಶೇಷಜಾತಿಯ ಹುಳುವು ಹಣ್ಣಿನಬೀಜದಲ್ಲಿಯೇ ಇದ್ದು, ಹೊರಗೆ ಕಾಣಿಸಿಕೊಳ್ಳದೆ, ಫಲದ ತಿರುಳನ್ನೇ ತಿಂದು. ಟೊಳ್ಳುಮಾಡುವುದು. ಇಂತಹ ಹುಳು ಬೇಲದ ಹಣ್ಣಿನಲ್ಲಿರುವುದು. **(ಕಪಿತ್ಥಫಲ)** ಪಕ್ವವಾಗಿರುವ ಬೇಲದ ಹಣ್ಣು ಹೊರಗಿನಿಂದ ನೋಡುವುದಕ್ಕೆ ಗಟ್ಟಿಯಾಗಿ ಕಾಣಿಸುತ್ತಿದ್ದರೂ, ಒಳಗೆ ತಿರುಳಿನಸಾರವನ್ನು ಕಳೆದುಕೊಂಡು ಟೊಳ್ಳಾಗಿರುವುದು. ಅಂತೆಯೇ ತಿರುಳಿನ ರೂಪದಲ್ಲಿರುವ ಫಲಗತಸಾರಭೂತವಾದ ವಸ್ತುವು ಸತ್ಕರ್ಮಗಳು. ಮದ್ದಾನೆಯಂತಿರುವವರು, ಸತ್ಕರ್ಮಫಲಚೋರರಾದ ದೈತ್ಯರು. ಈ ದೃಷ್ಟಾಂತದಿಂದ, ಅಹಂಕಾರ ಮಮಕಾರಗಳಿಂದ ಅಹಂಕರ್ತೃತ್ವ ಜ್ಞಾನವುಳ್ಳ ಜಡಮತಿಮಾನವರು ಸತ್ಕರ್ಮಠರೆಂದು ಬಾಹ್ಯವಾಗಿ ತೋರುವರೇ ಹೊರತು, ನಿಜವಾಗಿ ಒಳಗೆ ಟೊಳ್ಳೇ ಆಗಿರುವರು.

**ವಿಚಾರಾಂಶ :** ವ್ಯಾಖ್ಯಾನಗಳಲ್ಲಿ **ಮದ್ದಾನೆ** ಎಂಬ ಶಬ್ದಕ್ಕೆ ಮದಿಸಿದ ಆನೆ ಎಂಬ ಅರ್ಥವನ್ನು ಹೇಳಿದೆ. ಆದರೆ ಆನೆಯಿಂದ ತಿನ್ನಲ್ಪಟ್ಟ ಬೇಲದ ಹಣ್ಣು ಅದರ ಮಲದಲ್ಲಿ ಹಾಗೆಯೇ ಬರುವುದಿಲ್ಲ. ಆ ಫಲದ ತಿರಳನ್ನು ತಿಂದು ಜೀರ್ಣಮಾಡಿಕೊಳ್ಳುವುದು. ಹಣ್ಣಿನ ಚಿಪ್ಪನ್ನು ಒಡೆದು ಹಾಗೆಯೇ ಹೊರಗೆ ಬಿಸಾಡುವುದು ಎಂಬ ಇನ್ನೊಂದು ವಿವರಣೆ ಇದೆ. ಪ್ರಸಕ್ತ ಪದ್ಯದಲ್ಲಿ ಜಡಮತಿಮಾನವರು ಮಾಡುವ ಸತ್ಕರ್ಮಗಳ ಫಲ ವ್ಯರ್ಥ ಎಂಬ ಅರ್ಥ ಬರಬೇಕಾದರೆ, ಬೇಲದ ಹಣ್ಣು ಹಾಗೆಯೇ ಕಾಣಿಸುತ್ತಿರಬೇಕು. ಆದರೆ ಒಳಗಿನ ತಿರಳು ಹೋಗಿ ಟೊಳ್ಳಾಗಬೇಕು. ಇದರಿಂದ ಮದ್ದಾನೆ ಎಂಬ ಕ್ರಿಮಿ ವಿಶೇಷವೆಂದು ಪರಿಗಣಿಸಿದರೆ ಸೂಕ್ತ ॥೧೩॥

## ಪದ್ಯ ೧೪

**ಮೂಲ :**

**ಧಾತ್ರಿಯೊಳಗುಳ್ಳಖಿಳ ತೀರ್ಥ**
**ಕ್ಷೇತ್ರಚರಿಸಿದರೇನು ಪಾತ್ರಾ ।**
**ಪಾತ್ರನರಿತನ್ನಾದಿದಾನವ ಮಾಡಿ ಫಲವೇನು ॥**
**ಗಾತ್ರನಿರ್ಮಲನಾಗಿ ಮಂತ್ರ ।**
**ಸ್ತೋತ್ರ ಪಠಿಸಿದರೇನು ಹರಿ ಸ ।**
**ರ್ವತ್ರಗತನೆಂದರಿಯದೆಲೆ ತಾ ಕರ್ತೃ ಎಂಬುವನು ॥** ॥೧೪॥

**ಅವತರಣಿಕೆ :**

ಅಹಂಕರ್ತೃತ್ವಾಭಿಮಾನವು ಸತ್ಸಾಧಕನಿಗೆ ಪ್ರತಿಬಂಧಕವು. ಅಹಂಕಾರ ಮಮಕಾರಗಳಿಂದ ಗ್ರಸ್ತನಾದ ಮಾನವನು ಮಾಡುವ ತೀರ್ಥಕ್ಷೇತ್ರಾಟನೆ, ಅನ್ನದಾನಾದಿ ಪುಣ್ಯಕಾರ್ಯಗಳು, ಶುಚಿರ್ಭೂತನಾಗಿ ಮಾಡುವ ಮಂತ್ರ ಸ್ತೋತ್ರಗಳ ಪಠಣಾದಿಗಳಿಂದ ಏನೂ ಫಲವಿಲ್ಲವೆಂದೂ ತಿಳಿಸುತ್ತಾರೆ— **ಧಾತ್ರಿಯೊಳು**– ಎಂಬ ಪ್ರಸಕ್ತ ಸಂಧಿಗತ ೧೪ನೆಯ ಪದ್ಯದಿಂದ.

**ಪ್ರತಿಪದಾರ್ಥ :**

**ಧಾತ್ರಿಯೊಳಗೆ**=ಭೂಮಂಡಲದಲ್ಲಿ, **ಉಳ್ಳ**=ವಿದ್ಯಮಾನವಾಗಿರುವ, **ಅಖಿಳತೀರ್ಥಕ್ಷೇತ್ರ**=ಸಮಸ್ತ ತೀರ್ಥಕ್ಷೇತ್ರಗಳೆಂದು ಪುರಾಣ ಪ್ರಸಿದ್ಧವಾದ ಪವಿತ್ರಸ್ಥಾನಗಳಲ್ಲಿ, **ಚರಿಸಿದರೇನು**=ಸಂಚರಿಸಿದರೇನು?, **ಪಾತ್ರ ಅಪಾತ್ರ ನರಿತು**=ಯೋಗ್ಯ ಅಯೋಗ್ಯಾಧಿಷ್ಠಾನಗಳನ್ನು ತಿಳಿದು, **ಅನ್ನಾದಿ ದಾನವ ಮಾಡಿ**=ಅನ್ನೋದಕಗಳನ್ನು ಕೊಡುವುದು, "ಆದಿ" ಶಬ್ದದಿಂದ ಧನ, ಧಾನ್ಯ, ಭೂ ಇತ್ಯಾದಿ ದಾನಗಳನ್ನು ಮಾಡುವುದು, **ಫಲವೇನು**=ಇಂತಹ ದಾನಾದಿಗಳಿಂದ ಫಲವೇನೂ ಬರಲಾರದು, **ಗಾತ್ರನಿರ್ಮಲನಾಗಿ**=ದೇಹವನ್ನು

ಸ್ವಚ್ಛವಾನ ತೊಳೆದು, **ಮಂತ್ರ ಸ್ತೋತ್ರ**=ವೇದೋಕ್ತಮಂತ್ರಗಳು, ಋಕ್ಕುಗಳು. ದೇವತಾಪರವಾದ ಸ್ತೋತ್ರಗಳ, **ಪಠಿಸಿದರೇನು**=ಕಂಠೋಕ್ತ ಪಠಣದಿಂದ ಪ್ರಯೋಜನ ದೊರೆಯಲಾರದು. ಪೂರ್ವೋಕ್ತ ಸತ್ಕರ್ಮಗಳಿಂದ ಫಲವಿಲ್ಲ, ಕಾರಣವೇನೆಂದರೆ, **ಹರಿ**=ಸರ್ವಪಾಪಪರಿಹಾರಕನಾದ, ಬಿಂಬರೂಪೀ ಹರಿನಾಮಕ ಪರಮಾತ್ಮನು, **ಸರ್ವತ್ರಗತನೆಂದು**=ಸರ್ವಸ್ಥಳಗಳಲ್ಲಿ, ಸರ್ವಾವಸ್ಥೆಗಳಲ್ಲಿ, ಸರ್ವಕಾಲಗಳಲ್ಲಿ, ಸರ್ವಜೀವರಲ್ಲಿ ಪರಿಪೂರ್ಣನಾಗಿ ವ್ಯಾಪ್ತನಾಗಿದ್ದಾನೆಂದು, **ಅರಿಯದಲೆ**=ಶಾಸ್ತ್ರಯೋನಿತ್ವಾತ್ ಗುರೂಪದೇಶದ್ವಾರಾ ತಿಳಿಯದೆ, **ತಾ ಕರ್ತೃ ಎಂಬುವನು**=ಸರ್ವಕ್ಕೂ ನಾನೇ ಕರ್ತಾ ಎಂಬ ಅಹಂ ಕರ್ತೃತ್ವಾಭಿಮಾನ ಉಳ್ಳವನು ॥೧೪॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :

**ಅಹಂಮಮತಾ ಎಂಬುದು ಸರ್ವಸತ್ಸಾಧನೆಯ ನಾಶಮಾಡತದೆ ಎಂತ ಹೇಳತಾರೆ.**

ಅಹಂಮತಾಯುಕ್ತನಾಗಿ, ಮದಮತ್ಸರಕಾಮಯುಕ್ತನಾಗಿ ಇರುವ ಅಧಿಕಾರಿಯು ಈ ಭೂಮಿಯಲ್ಲಿ ವಿದ್ಯಮಾನವಾದ ಪ್ರಸಿದ್ಧಗಳಾದ ತೀರ್ಥಗಳೇನು, ಕ್ಷೇತ್ರಗಳೇನು ಇವುಗಳಲ್ಲಿ ಸಂಚಾರಮಾಡಿದರೇನು, ಇನ್ನೂ ಯೋಗ್ಯಾಯೋಗ್ಯ ಅಧಿಷ್ಠಾನವನ್ನು ತಿಳಿದು ಅದರಲ್ಲಿ ಯೋಗ್ಯವಾದ ಅಧಿಷ್ಠಾನದಲ್ಲಿ ಅನ್ನೋದಕ ಮೊದಲಾದ, ಇನ್ನೂ ಅತಿಶಯವಾದ ಸುವರ್ಣಾದಿ ದಾನವನ್ನು ಮಾಡಿ ಫಲವೇನು ಎಂದರೆ, ಶುದ್ಧವಾಗಿ ಫಲವಿಲ್ಲದೇ ದೇಹಾಯಾಸ ಕೊಡತದೆ ಎಂತ ಅರ್ಥ. ದೇಹವನ್ನು ಚಂದಾಗಿ ನೀರಿನಿಂದ ತೊಳೆದು, ನಾಮ-ಮುದ್ರೆಗಳಿಂದ ಅಲಂಕರಿಸಿ, ದಿವ್ಯವಸ್ತ್ರಾಭರಣಗಳ ಧರಿಸಿ, ನಿರ್ಮಲತ್ವ ಹೊಂದಿದವನಾಗಿ, ವೇದಗಳೇನು, ದೇವರಸ್ತೋತ್ರಗಳೇನು ಕಂಠೋಕ್ತ ಪಠನಮಾಡಿದರೇನು ಎಂದರೆ ಏನು ಮಾಡಿದರೂ ಫಲವಿಲ್ಲ. ಇಷ್ಟುಮಾಡಿ ಫಲ ಯಾಕೆ ಇಲ್ಲಿ ಇಲ್ಲ ಎಂದರೆ, ಅಹಂಮಮತಾ ಎಂಬ ಎರಡು ಗುಣಗಳ ತನ್ನಲ್ಲಿ ಆರೋಪಣೆಮಾಡಿ

ಕೊಂಡು, ಬಿಂಬರೂಪಿಯಾದ ಶ್ರೀಹರಿ ಸರ್ವಸ್ಥಳಗಳಲ್ಲಿ ಸರ್ವರಲ್ಲಿ ಅಂತರ್ಗತನಾಗಿ ಇದ್ದಾನೆ ಎಂತಲೂ, ಸರ್ವವೂ ಈಶಾಧೀನ ಎಂತಲೂ, ಈ ಪ್ರಕಾರ ತಿಳಿಯದಲೆ, ಗುರುಮುಖದಿಂದ ತಿಳಿದು ತಾನು ಅನುಷ್ಠಾನಯುಕ್ತನಾಗದೆ ಸರ್ವವೂ ನಾನು ಮಾಡತೇನೆ, ನನ್ನದು ಎನತಕ್ಕ ಅಧಿಕಾರಿ ಏನು ಸತ್ಕರ್ಮ ಮಾಡಿದರೂ ನಿಷ್ಫಲವಾಗಿ ದೇಹಾಯಾಸಕೊಟ್ಟು, ಕಡಿಗೆ ತಾನು ಮಾಡಿದ ಪುಣ್ಯಫಲಕ್ಕೆ ಮಹಾದೋಷಫಲಹೊಂದಿ ದುಃಖ ಪಡತಾನೆ ಎಂತ ತಾತ್ಪರ್ಯ. ॥೧೪॥

೨. ಭಾವಪ್ರಕಾಶಿಕೆ :

ಯಾವ ಮನುಷ್ಯನು, ಸರ್ವತ್ರ ಇದ್ದು, ಸಕಲಕಾರ್ಯಗಳನ್ನೂ ಪರಮಾತ್ಮನೇ ಮಾಡಿಸುವನೆಂದರಿಯದೇ, ತಾನೇ ಸ್ವತಂತ್ರದಿಂದ ಮಾಡುವುದಾಗಿ ತಿಳಿದಿರುವನೋ, ಅಂತಹವನು ಭೂಮಿಯೊಳಗಿರುವ ಎಲ್ಲಾ ತೀರ್ಥಕ್ಷೇತ್ರಗಳನ್ನು ತಿರುಗಿಬಂದರೇನು? ಪಾತ್ರಾಪಾತ್ರಾವಿವೇಕದಿಂದ ಸತ್ಪಾತ್ರರಲ್ಲಿ ಅನ್ನಾದಿದಾನಗಳನ್ನು ಕೊಟ್ಟಿದ್ದರಿಂದಲೂ ಫಲವಿಲ್ಲ. ಸ್ನಾನಾದಿಗಳನ್ನೂ, ಮಂತ್ರಸ್ತೋತ್ರ ಪಠಣಮಾಡಿದರೂ ಫಲವೇನು? ಎಲ್ಲವೂ ನಿಷ್ಫಲ ॥೧೪॥

೩. ಭಾವದರ್ಪಣಟೀಕಾ :

ಕರ್ತಾ ನಾನಲ್ಲವೆಂದು ದಾರ್ಢ್ಯ ಹುಟ್ಟಬೇಕೆಂದು ಸದೃಷ್ಟಾಂತದಿಂದ ನಾಲ್ಕು ಪದ್ಯದವರೆಗೆ ಹೇಳುತ್ತಾರೆ–ಧಾತ್ರೀತಿ.

೪. ಶ್ರೀವ್ಯಾಸ ಸಿದ್ಧಾಂತ ಕೌಮುದೀ (ಸಂಸ್ಕೃತಮೂಲ) :

"ಧಾತ್ರಿ ಇತಿ"॥ "ಕುರುಕ್ಷೇತ್ರೇಣ" ಕಿಂ ತಸ್ಯ ಕಿಂ ಕಾಶ್ಯಾ ಪುಷ್ಕರೇಣ ವಾ॥ ಬ್ರಹ್ಮಕಾಂಡೇ ವಿಂಶಾಧ್ಯಾಯೇ ಭದ್ರೋಕ್ತಿಃ॥ "ಕಾಶೀ ನಿವಾಸೇನ ಚ ಕಿಂ ಪ್ರಯೋಜನಂ ಕಿಂ ವಾ ಪ್ರಯಾಗೇ ಮರಣೇನ ತಾತ ಕಿಂ ವಾ ಮಖೈಃ ಸಾಂಗಮನುಷ್ಠಿತೇನ॥ ಸಮಸ್ತ ತೀರ್ಥಾಟನ ತಶ್ಚ ಕಿಂವಾ ಅಧೀತಶಾಸ್ತ್ರೇಣ ಸುತೀಕ್ಷ್ಣ ಬುಧ್ಯಾ॥ ಯೇಷಾಂ ಜಿಹ್ವಾಗ್ರೇಹರಿನಾಮ್ನೈವ ಸಸ್ತಿ"॥ ಇತ್ಯುಕ್ತೇಃ ॥೧೪॥

**ಕನ್ನಡಾರ್ಥ :**

ಪ್ರಸಕ್ತ ಪದ್ಯೋಕ್ತ ದಾಸರಾಯರ ವಚನವು– "ಕುರುಕ್ಷೇತ್ರವಾಸ ದಿಂದ ಏನು ಪ್ರಯೋಜನ? ಕಾಶಿ, ಪ್ರಯಾಗ, ಇತ್ಯಾದಿ ಕ್ಷೇತ್ರಯಾತ್ರೆಗಳಿಂದ ಪ್ರಯೋಜನವೇನು?" ಎಂದು ಹೇಳುವ ಪುರಾಣವಚನಗಳಿಗನುಸಾರವಾಗಿದೆ. "ಕಾಶೀವಾಸ, ಪ್ರಯಾಗದಲ್ಲಿ ಮರಣ, ರಣದಲ್ಲಿ ಶತ್ರು ಸಮ್ಮುಖದಲ್ಲಿ ವೀರ ಮರಣ, ಸಾಂಗ ಯಜ್ಞಾನುಷ್ಠಾನ, ಸಕಲತೀರ್ಥಕ್ಷೇತ್ರ ಸಂಚಾರ, ತೀಕ್ಷ್ಣ ಬುದ್ಧಿಯಿಂದ ಶಾಸ್ತ್ರಾಧ್ಯಯನ ಇತ್ಯಾದಿ, ಅಹಂಕಾರರಹಿತನಾಗದೆ, ಹರಿಸ್ಮರಣೆ ಯಿಲ್ಲದ ಮಾನವನಿಗೆ ಯಾವ ಫಲವನ್ನೂ ಈಯಲಾರವು. ಪ್ರತಿಯಾಗಿ ವಿಪರೀತ ಫಲವನ್ನೇ ಕೊಡುವವು"— ಎಂದು **ಗರುಡ ಪುರಾಣ, ಬ್ರಹ್ಮ ಕಾಂಡದ ೨೦ನೆಯ ಅಧ್ಯಾಯದಲ್ಲಿ** ನಿರೂಪಿತವಾಗಿದೆ.

**೫. ಶ್ರೀಗುರುಹೃದಯ ಪ್ರಕಾಶಿಕೆ :**

ಶ್ರೀಹರಿ ಸರ್ವತ್ರ ಇರುವನೆಂದು ಭಾವಿಸವೆ, ದೇವರು ಎಂಬುವನು ಒಬ್ಬನು ಇದ್ದಾಗ್ಯೂ ನಾನು ಚಾಕರಿಮಾಡಿದೆ ಯಾರೂ ಕೊಡಲಾರದೆಂದು, ತಾನೇ ಸ್ವತಂತ್ರನೆಂದು ತಿಳಿದವನು ಭೂಮಿಯಲ್ಲಿರುವ ಅಖಿಳ ತೀರ್ಥಕ್ಷೇತ್ರ ಯಾತ್ರೆ ಮಾಡಿದರೂ, ಯೋಗ್ಯರಿಗೆ ಅನ್ನಾದಿಗಳನ್ನು ದಾನಮಾಡಿ ಅಯೋಗ್ಯ ರಿಗೆ ಕೊಡದೇ ಇದ್ದಾಗ್ಯೂ, ಸ್ನಾನಾದಿಗಳಿಂದ ದೇಹಶುದ್ಧಿಮಾಡಿ ಮಂತ್ರ ಸ್ತೋತ್ರಪಠಿಸಿದಾಗ್ಯೂ ಏನು ಫಲ, ಅಂದರೆ ಸತ್ಫಲವಿಲ್ಲವೆಂದರ್ಥ ॥೧೪॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಶ್ರೀಹರಿಯು ಸರ್ವತಂತ್ರಸ್ವತಂತ್ರನು. ತನ್ನಿಂದ ಸೃಷ್ಟರಾದ ಸಮಸ್ತ ಜೀವಗಣ ಅವನಿಂದ ನಿಯಮ್ಯರು. ಸಮಗ್ರ ವಿಶ್ವಗತ ಸಮಸ್ತ ವಸ್ತುಗಳೆಲ್ಲ ಭಗವದಧೀನವಾಗಿವೆ. **"ತೇನ ವಿನಾ ತೃಣಮಪಿ ನ ಚಲತಿ"** ಎಂಬ ವಾಕ್ಯಾನುಸಾರವಾಗಿ, ಶ್ರೀಹರಿಯ ಪ್ರೇರಣೆಯಿಲ್ಲದೆ ಅಲ್ಪ ತೃಣವೂ ಚಲಿಸಲಾರದು. ಸಮಸ್ತ ಕಾರ್ಯವಿಶೇಷಗಳ ನಿರ್ವಹಣೆ, ಅವನ ಇಚ್ಛಾನುಸಾರ ಆಗುವುದು. ಜಡವಸ್ತುಗಳಲ್ಲಿ ಖಂಡಾಖಂಡರೂಪದಿಂದ ವ್ಯಾಪ್ತನಾಗಿ ಅವುಗಳ ಸ್ವಭಾವಪ್ರವರ್ತಕನಾಗಿದ್ದಾನೆ. ಸಕಲಜೀವರಲ್ಲಿ ಅಂತರ್ಯಾಮಿ ರೂಪದಿಂದ ಇದ್ದು,

ಬಿಂಬನಾಗಿ ಸಕಲ ಕಾರ್ಯಗಳನ್ನು ಪ್ರೇರಿಸಿ, ಮಾಡಿ ಮಾಡಿಸುತ್ತಿರುವ ಆ ಅಪ್ರತಿಮಲ್ಲನ ಸೇವಕರು ಸರ್ವಜೀವರು. ಜಡವಸ್ತುಗಳಿಂದ ಭಿನ್ನನಾದ ಜೀವನಿಗೆ ಜ್ಞಾನ, ಇಚ್ಛಾ ಮತ್ತು ಕ್ರಿಯಾ ಶಕ್ತಿಗಳಿವೆ. ಆದರೆ ಈ ಗುಣಗಳು ಈಶ್ವರ ಅಧೀನವಾಗಿವೆ. ಜೀವರು ಸ್ವತಂತ್ರರಾಗಿ ಸ್ವಗತ ಕ್ರಿಯೆಗಳನ್ನು ಮಾಡಲಾರರು. ಶಕ್ತ್ಯಾತ್ಮವಾಗಿರುವ ಈ ಸಾಮರ್ಥ್ಯಗಳು ಕ್ರಿಯಾತ್ಮಕವಾಗಬೇಕಾದರೆ, ಬಿಂಬ ರೂಪೀ ಶ್ರೀಪರಮಾತ್ಮನ ಪ್ರೇರಣೆಯಿಂದ ಮಾತ್ರ ಸಾಧ್ಯ. ಈ ಕಾರಣದಿಂದ ಸರ್ವಜೀವರೂ ಪರಾಧೀನಕರ್ತೃತ್ವ ಉಳ್ಳವರು. ಆ ಕರ್ತೃತ್ವಶಕ್ತಿ ಪ್ರಕಟ ವಾಗಬೇಕಾದರೆ, ಬಿಂಬನ ವ್ಯಾಪಾರದಿಂದಲೇ. ಈ ರಹಸ್ಯತತ್ತ್ವವನ್ನು ಶಾಸ್ತ್ರ ದ್ವಾರಾ, ಗುರೂಪದೇಶದ್ವಾರಾ ಅರಿಯಬೇಕು. ಈ ಜ್ಞಾನವು ನಮ್ಮ ಅನುಭವಕ್ಕೆ ಬರಬೇಕು. ಅನುಭವಸಿದ್ಧವಾದ ಈ ಜ್ಞಾನವೊಂದೇ ಭಗವತ್ಪ್ರೀತಿಗೆ ಮುಖ್ಯಸಾಧನ. ಇದನ್ನರಿಯದೆ "ಎಲ್ಲವನ್ನೂ ನಾನೇ ಮಾಡುತ್ತಿದ್ದೇನೆ. ಈ ಸಮಸ್ತ ವಸ್ತುಗಳೂ ನನಗೇ ಸೇರಿದ್ದು"–ಎಂಬ ಅಹಂಕಾರ ಮಮಕಾರ ಗ್ರಸ್ತನಾಗಿ, ಅಹಂಕರ್ತೃತ್ವಭಾವವನ್ನು ತನ್ನಲ್ಲಿ ಆರೋಪಿಸಿಕೊಂಡು, ಮಾಡುವ ಸಕಲ ಸತ್ಕರ್ಮಗಳೂ ನಿಷ್ಫಲ ಎಂದು ಹೇಳುತ್ತಾರೆ ಪ್ರಸಕ್ತ ೧೪ನೆಯ ಈ ಪದ್ಯದಿಂದ.

೨. ಭೂಮಂಡಲದಲ್ಲಿ ಅನೇಕ ತೀರ್ಥಕ್ಷೇತ್ರಗಳಿವೆ. ಧಾತ್ರಿಯೊಳಗುಳ್ಳ ಇಂತಹ ತೀರ್ಥಕ್ಷೇತ್ರಗಳು ಪುರಾಣಪ್ರಸಿದ್ಧವಾಗಿವೆ. ತಿರುಪತಿ, ಬದರಿ, ಕಾಶೀ, ಪ್ರಯಾಗ ಇತ್ಯಾದಿ ಪವಿತ್ರ ಕ್ಷೇತ್ರಗಳ ಯಾತ್ರೆ ಮಾಡುವಾಗ, ಈ ಶರೀರವೇ ಒಂದು ಕ್ಷೇತ್ರ. ಶರೀರಸ್ಥಬಿಂಬನೇ ಕ್ಷೇತ್ರಗತಮೂರ್ತಿ ಎಂಬ ಉತ್ತಮಾನುಸಂಧಾನದಿಂದ ಕ್ಷೇತ್ರಯಾತ್ರೆ ಮಾಡಿದರೆ, ಅದು ಸತ್ಫಲಕ್ಕೆ ಕಾರಣ ವಾಗುವುದು. ಅಂತೆಯೇ ಗಂಗಾದಿ ಪವಿತ್ರ ತೀರ್ಥಗಳಲ್ಲಿ ಸ್ನಾನ ಮಾಡುವಾಗ, ತೀರ್ಥಾಭಿಮಾನಿದೇವತೆಗಳ ಅಂತರ್ಯಾಮಿ ಭಗವದ್ರೂಪಗಳನ್ನು ಸ್ಮರಿಸುತ್ತಾ ತೀರ್ಥಕ್ಷೇತ್ರ ವಿಧಿಗಳನ್ನು ಆಚರಿಸಬೇಕು. ಈ ಅನುಸಂಧಾನ ರಹಿತವನಾಗಿ, 'ನಾನು ಕ್ಷೇತ್ರಯಾತ್ರೆ ಮಾಡಿದೆ, ಪವಿತ್ರ ತೀರ್ಥಗಳಲ್ಲಿ ಮಿಂದು ಪವಿತ್ರನಾದೆ'–ಎಂಬ ಸ್ವತಂತ್ರಕರ್ತೃತ್ವಾಭಿಮಾನದಿಂದ ಮಾಡಿದ ತೀರ್ಥ ಕ್ಷೇತ್ರಾಟನೆ ವ್ಯರ್ಥ ಎಂದು ತಿಳಿಸುತ್ತಾರೆ.

೩. ಅನ್ನದಾನ, ದ್ರವ್ಯದಾನ, ಗೋದಾನ, ಭೂದಾನ ಇತ್ಯಾದಿ ದಾನಾದಿ ಕರ್ಮಗಳನ್ನು ಆಚರಿಸುವಾಗ, ಪಾತ್ರಾಪಾತ್ರವರಿತು ಮಾಡಬೇಕು. ಅಪಾತ್ರರಲ್ಲಿ ದಾನ, ಅಯೋಗ್ಯರಲ್ಲಿ ಉಪದೇಶ ಇತ್ಯಾದಿ ನಿಷ್ಫಲ. ಅಲ್ಲದೇ ಪ್ರತಿಕೂಲವಾಗಿ ಪರಿಣಮಿಸುವುವು. ಸತ್ಪಾತ್ರರಲ್ಲಿ ದಾನ ಮಾಡುವಾಗ, "ನಾನು ದಾನ ಮಾಡುತ್ತಿದ್ದೇನೆ" ಎಂಬ ಅಹಂಕಾರಭಾವವನ್ನು ತ್ಯಜಿಸಿ, ಕೇವಲ ಭಗವತ್ಪ್ರೀತಿಗಾಗಿ ಮಾಡಬೇಕು. ದಾನ ಮಾಡುವ ದ್ರವ್ಯಾಂತರ್ಗತ, ಪಾತ್ರನಾದ ದಾನವನ್ನು ಸ್ವೀಕರಿಸುವ ಅಧಿಷ್ಠಾನಾಂತರ್ಗತ, ಭಗವದ್ರೂಪಗಳಿಗೂ ಸ್ವಬಿಂಬನಿಗೂ ಐಕ್ಯಚಿಂತನಾಪೂರ್ವಕ ದಾನ ಮಾಡಬೇಕು.

೪. ಸ್ನಾನವಿಧಿಯಂತೆ, ನಮ್ಮ ದೇಹವನ್ನು ಶುದ್ಧವಾದ ಜಲದಿಂದ ತೊಳೆದು ಸ್ವಚ್ಛಮಾಡಿಕೊಳ್ಳುತ್ತೇವೆ. "ಇದು ನನ್ನ ದೇಹ. ನಾನೇ ಸ್ನಾನ ಮಾಡುತ್ತಿದ್ದೇನೆ"–ಎಂಬ ಅಹಂಕಾರ ಕರ್ತೃತ್ವಾಭಿಮಾನವನ್ನು ತ್ಯಜಿಸಿ, ಸ್ನಾನವು ದೇವಮಂದಿರವೆನಿಸುವ ಈ ದೇಹಸ್ಥ ಪುರುಷನಾಮಕ ಶ್ರೀಪರಮಾತ್ಮನಿಗೆ ಅಭಿಷೇಕ ಎಂದು ಅನುಸಂಧಾನವಿರಬೇಕು. ಸ್ನಾನಾನಂತರ, ವೇದೋಕ್ತ ಮಂತ್ರಗಳನ್ನು ಎಲ್ಲರ ಪ್ರದರ್ಶನಕ್ಕಾಗಿ, ಎಲ್ಲರೂ, ತನ್ನ ಜ್ಞಾನವನ್ನು ಮೆಚ್ಚಲಿ–ಎಂದು ದುರಾಗ್ರಹದಿಂದ ಕಂಠಪಾಠಮಾಡಿ, ಸುಸ್ವರ ಪೂರ್ವಕ ಸ್ಫುಟವಾಗಿ ಪಠಿಸಿದರೆ, ಅದರಿಂದ ಏನೂ ಫಲವಿಲ್ಲ. ಅಂತೆಯೇ ಅಹಂಕರ್ತೃತ್ವಾಭಿಮಾನದಿಂದ ಮಾಡುವ ದೇವತಾಸ್ತೋತ್ರಗಳಿಂದ ಯಾವ ಫಲವೂ ಬರುವುದಿಲ್ಲ ಎಂದು ತಿಳಿಸುತ್ತಾರೆ.

೫. ಅಣುರೇಣುತೃಣಕಾಷ್ಠಾದಿಗಳಲ್ಲಿ, ಸರ್ವತ್ರವ್ಯಾಪ್ತನಾದ ಆ ಮಹಾಮಹಿಮನ ಗುಣಗಾನವನ್ನು ಮಾಡುತ್ತಾ, "ನಾನು ಕರ್ತನಲ್ಲ, ಶ್ರೀಹರಿಯೇ ಕರ್ತನು"–ಎಂಬ ಅನುಸಂಧಾನವಿಲ್ಲದ ಮಾನವರು ಕೇವಲ ಅಹಂಕರ್ತೃತ್ವಾಭಿಮಾನದಿಂದ ಮಾಡಿದ ಸಕಲ ಸತ್ಕರ್ಮಗಳೂ ನಿಷ್ಫಲ, ವ್ಯರ್ಥ. ಭಗವತ್ಪ್ರೀತಿಯಾಗುವುದಿಲ್ಲ ಎಂದು ಪ್ರಸಕ್ತ ಪದ್ಯಾಭಿಪ್ರಾಯವು.

|| ೧೪ ||

## ಪದ್ಯ ೧೫

**ಮೂಲ :**

**ಕಂಡ ನೀರೊಳು ಮುಣುಗಿ ದೇಹವ ।**
**ದಂಡಿಸಿದರೆ ಫಲವೇನು ದಂಡ ಕ ।**
**ಮಂಡಲುಗಳನೆ ಧರಿಸಿ ಯತಿಯೆಂದೆನಿಸಿ ಫಲವೇನು ॥**
**ಅಂಡಜಾಧಿಪನಂಸಗನ ಪದ ।**
**ಪುಂಡರೀಕದಿ ಮನವಹರ್ನಿಶಿ ।**
**ಬಂಡುಣಿಯವೋಲಿರಿಸಿ ಸುಖಪಡದಿಪ್ಪ ಮಾನವನು ॥೧೫॥**

**ಅವತರಣಿಕೆ :**

ಗರುಡಧ್ವಜನಾದ ಮಾರಮಣನ ಪಾದಪುಂಡರೀಕಗಳಲ್ಲಿ ಮಧುಕರನಂತೆ ನಲಿಯುತ್ತಾ, ಆ ಮಂಗಳಮಹಿಮನ ನಾಮಾಮೃತಪಾನಮಾಡದಿರುವ ಮಾನವನು ದೇಹವನ್ನು ದಂಡಿಸುತ್ತಾ, ಕಂಡಕಂಡ ನೀರಲ್ಲಿ ಮುಳುಗಿದರೇನು, ದಂಡಕಮಂಡಲುಧಾರಿಯಾಗಿ ಯತಿಯಾದರೇನು, ಎಲ್ಲವೂ ನಿಷ್ಫಲವೆಂದು ಹೇಳುತ್ತಾರೆ–**ಕಂಡನೀರೊಳು**–ಎಂಬ ಪ್ರಸಕ್ತ ಸಂಧಿಗತ ೧೫ನೆಯ ಈ ಪದ್ಯ ದಿಂದ.

**ಪ್ರತಿಪದಾರ್ಥ :**

**ಕಂಡನೀರೊಳು ಮುಣುಗಿ**=ತನಗೆ ತಿಳಿದಿರುವ ನದೀ, ಸರೋವರ, ಪುಷ್ಕರಣೀ ಇತ್ಯಾದಿ ತೀರ್ಥಗಳಲ್ಲಿ ಮುಳುಗಿ, ಸ್ನಾನ ಮಾಡಿದರೆ ಫಲವೇನು? **ದೇಹವ ದಂಡಿಸಿ ಫಲವೇನು**=ಜ್ಞಾನಾನುಸಂಧಾನವಿಲ್ಲದೆ ಅಂತಹ ತೀರ್ಥ ಸ್ನಾನಾದಿಗಳಿಂದ ಫಲವೇನೂ ಪ್ರಾಪ್ತವಾಗುವುದಿಲ್ಲ. ಕೇವಲ ದೇಹಶ್ರಮ ವಾಗುವುದು, **ದಂಡಕಮಂಡಲುಗಳನೆ ಧರಿಸಿ**=ಶಿಖೋಪವೀತಗಳನ್ನು ತ್ಯಜಿಸಿ, ದಂಡಧಾರಿಯಾಗಿ, ಕಮಂಡಲು ಧರಿಸಿಕೊಂಡು, **ಯತಿಯೆಂದೆನಿಸಿ ಫಲವೇನು**=ಸನ್ಯಾಸಿ ಎಂದೆನಿಸಿಕೊಂಡರೆ ಬಂದ ಫಲವೇನು. ಯತಿಯು

ಸರ್ವಸಂಗ ಪರಿತ್ಯಾಗಿಯೂ. ವಿರಾಗಿಯೂ, ಆ ಧರ್ಮವಿರಬೇಕಾದರೆ ಮೊದಲು ಅಹಂಮಮತಾದಿಗಳನ್ನು ತ್ಯಾಗ ಮಾಡಿರಬೇಕು. ಅಹಂಕಾರ ಮಮಕಾರಗಳ ತ್ಯಾಗವೇ ಸರ್ವಸಂಗಪರಿತ್ಯಾಗದ ಪ್ರಥಮ ಹಂತವು, **ಅಂಡಜಾಧಿಪನ**= ಪಕ್ಷಿಶ್ರೇಷ್ಠನಾದ ಶ್ರೀಗರುಡದೇವರ (ಅಂಡ-ಮೊಟ್ಟೆ, ಅಂಡಜ-ಮೊಟ್ಟೆ ಒಡೆದು ಮರಿಯಾಗುವ ಪಕ್ಷಿ. ಅಂಡಜಾಧಿಪ-ಅಂತಹ ಪಕ್ಷಿಗಳಿಗೆ ರಾಜನು ಗರುಡನು), **ಅಸಂಗನ**=ಭುಜದ ಮೇಲೆ ಕೂತು ಸಂಚರಿಸುವ, ಅಂದರೆ ಗರುಡವಾಹನನಾದ ಶ್ರೀಮನ್ನಾರಾಯಣನ, **ಪದಪುಂಡರೀಕದಿ**=ಚರಣಗಳೆಂಬ ಕಮಲಗಳಲ್ಲಿ, **ಬಂಡುಣಿಯುವೋಲ್**=ದುಂಬಿಯಂತೆ (ಬಂಡು-ಕಮಲಗತ ಮಕರಂದ, ಬಂಡುಣಿ-ಆ ಮಕರಂದವನ್ನು ಪಾನ ಮಾಡುವ ಭ್ರಮರ) **ಮನವ**=ತನ್ನ ಮನಸ್ಸನ್ನು, **ಅಹರ್ನಿಶಿ**=ಹಗಲು ರಾತ್ರಿ, ಅಂದರೆ ನಿರಂತರ ದಲ್ಲಿ, **ಇರಿಸಿ**=ಇಟ್ಟು, ಅಂದರೆ ಶ್ರೀಹರಿಯ ಪಾದದಲ್ಲಿ ಮನಸ್ಸನ್ನು ಲೀನ ಗೊಳಿಸಿ, **ಸುಖಪಡದಿಪ್ಪ ಮಾನವನು**=ಆನಂದವನ್ನು ಹೊಂದದ ನರನು ಪೂರ್ವೋಕ್ತ ಕರ್ಮಗಳನ್ನು ಮಾಡಿದರೂ ಫಲವಿಲ್ಲವೆಂದು ತಾತ್ಪರ್ಯ. ॥೧೫॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ :

ಇನ್ನೂ ಪೂರ್ವೋಕ್ತ ಅಹಂಮಮತಾ ವಿಚಾರವೇ ಹೇಳುತಾರೆ. ಪ್ರಬಲ ವಾದ ಅಹಂಮಮತಾಯುಕ್ತನಾದ ಮನುಷ್ಯನು ಪ್ರಾತಃಸ್ನಾನಯುಕ್ತನಾಗಿ ಅನುಸಂಧಾನರಹಿತನಾಗಿ ಕಾಗೆ ಮುಣುಗಿದಂತೆ, ದಾವ ನೀರೊಳಗೆ ಸ್ನಾನ ಮಾಡಿದರೂ, ಅನೇಕ ಜಪ-ತಪಾದಿಗಳು, ಚಾಂದ್ರಾಯಣ ವಿಷ್ಣುಪಂಚಕ ಅಲವಣ ಅಖಂಡ ಚಾತುರ್ಮಾಸ್ಯವ್ರತ, ಏಕಾದಶೀವ್ರತ ಇನ್ನೂ ಅನೇಕವಾದ ವ್ರತಗಳಿಂದ ದೇಹವನ್ನು ಶುಷ್ಕ ಮಾಡಿಕೊಂಡು, ಇನ್ನೂ ಅನೇಕ ಸತ್ಕರ್ಮಗಳು ಮಾಡಿ ಏನೂ ಫಲವಿಲ್ಲ. ಇನ್ನೂ ಶಿರೋಮುಂಡನ ಮಾಡಿಕೊಂಡು ಯಜ್ಞೋಪವೀತ ಕಟಿಸೂತ್ರ ತ್ಯಜಿಸಿ ಕಾಷಾಯವಸ್ತ್ರ ಧರಿಸಿ ದಂಡ-ಕಮಂಡಲು ಗಳನ್ನು ಧರಿಸಿ, ಕೃಷ್ಣಾಜಿನೋದ್ಯಾಸನೋಪವಿಷ್ಟನಾಗಿ, ಸಂನ್ಯಾಸಿ ಎಂತ ಕರಸಿದವನಾಗಿ, ಸರ್ವಶ್ರೇಷ್ಠ ಎಂತ ಅನಿಸಿಕೊಂಬೋಣದರಿಂದ ಏನೂ

ಸ್ವಲ್ಪವಾದರೂ ಫಲವಿಲ್ಲ. (ಹಾಂಗಾದರೆ ಸರ್ವೋತ್ತಮವಾದ ಸಾಧನ ದಾವದೆಂದರೆ, ಪ್ರಥಮದಲ್ಲಿ ಅಹಂ ಮಮತಾ ಎಂಬ ಎರಡು ಗುಣಗಳ ತ್ಯಾಗ ಮಾಡಿ) ಪಕ್ಷಿಶ್ರೇಷ್ಠನಾದ ಗರುಡದೇವರ ಭುಜದಿ ಕೂತು ಸಂಚಾರ ಮಾಡತಕ್ಕ ಶ್ರೀನಾರಾಯಣದೇವರ ಪಾದಗಳೆಂಬ ಕಮಲಗಳಲ್ಲಿ ರಾತ್ರಿ ಹಗಲು ಮನಸ್ಸನ್ನು ಭ್ರಮರದೋಪಾದಿಯಲ್ಲಿ ಇಟ್ಟು, ಅವನ ಅನುಗ್ರಹಕ್ಕೆ ಪಾತ್ರನಾಗಿ ನಿಸ್ಪೃಹನಾಗಿ ಸುಖವನ್ನು ಹೊಂದದೇ, ನಾನು ನನ್ನದು ಎಂಬ ಮಾನವನು, ಶುದ್ಧ ಪಶುತುಲ್ಯನಾಗಿ, ಸರ್ವಸಾಧನಿಯೂ ಕಳಕೊಂಡು, ಇಹ ದಲ್ಲಿ ಕೇವಲ ಮಮತಾದಿಂದ ದುಃಖಪಟ್ಟವನಾಗಿ ಪಾರತ್ರಿಕವಾದ ಮಹಾ ನರಕಗಳಲ್ಲಿ ಬಹುಕಾಲ ದುಃಖಪಡತಾ ಇರತಾನೆ.

**ತಾತ್ಪರ್ಯ :** ಕಮಲಗತ ಮಕರಂದವನ್ನು ಭ್ರಮರ ಸದಾ ಅದರಲ್ಲೇ ಮಗ್ನವಾಗಿ ಇದ್ದು ಮಧುಪಾನ ಮಾಡಿದಂತೆ, ಮನವೆಂಬ ಭ್ರಮರವನ್ನು ದೇವರ ಪಾದಗಳೆಂಬ ಕಮಲದಲ್ಲಿ ಇಟ್ಟು, ಪಾದಗತ ಮಹಾತ್ಮ್ಯೆ ಎಂಬ ಮಕ ರಂದ ಪಾನ ಮಾಡೋಣ ದಾವದದೇ ಇದೇ ಸರ್ವೋತ್ತಮವಾದ ಪುಣ್ಯ ಸಾಧನೆ ಎಂತ ತಾತ್ಪರ್ಯ. ॥೧೫॥

**೨. ಭಾವಪ್ರಕಾಶಿಕೆ :**

ಗರುಡಾರೂಢನಾದ ಶ್ರೀ ಪರಮಾತ್ಮನ ಪಾದಕಮಲಗಳಲ್ಲಿ ಜೇನು ಹುಳುವು ಕಮಲದಲ್ಲಿ ಸೇರುವಂತೆ, ಯಾವನು ಮನಸ್ಸನ್ನು ಸ್ಥಿರವಾಗಿ ನಿಲ್ಲಿಸು ವುದಿಲ್ಲವೋ, ಅಂತಹ ಮನುಷ್ಯನು ದೃಷ್ಟಿಗೆಬಿದ್ದ ನೀರೊಳಗೆ ಮುಣುಗಿ, ಚಳಿ ಮೊದಲಾದವುಗಳಿಂದ ದೇಹವನ್ನು ಕಷ್ಟಪಡಿಸುವುದರಿಂದ ಪ್ರಯೋಜನವೇನು? ದಂಡಕಾಷ್ಠ ಕಮಂಡಲು ಮೊದಲಾದವುಗಳನ್ನು ಧರಿಸಿ ಯತಿ ಎಂದು ಪ್ರಸಿದ್ಧ ನಾದರೂ ಪ್ರಯೋಜನವೇನು ? ॥ ೧೫ ॥

**೩. ಭಾವದರ್ಪಣ ಟೀಕಾದ ವ್ಯಾಖ್ಯಾನ ಈ ಪದ್ಯಕ್ಕೆ ಕೊಟ್ಟಿಲ್ಲ :**

**೪. ಶ್ರೀ ವ್ಯಾಸದಾಸ ಸಿದ್ಧಾಂತಕೌಮುದಿ (ಸಂಸ್ಕೃತಮೂಲ) :**

"ಕಂಡ"–ಇತಿ ॥ "ಕಿಂ ಸ್ಯಾತ್ ವರ್ಣಾಶ್ರಮಾಚಾರ್ಯೈಃ ॥ "ಇತ್ಯುಕ್ತೇಃ ॥ "ವೇಣುಭಿಃ ನ ಭವೇತ್ ಯತಿಃ" ॥ ಅಂಡಜಾಧಿಪಃ ಗರುಡಃ ॥ ಪುಷ್ಪರಸ ಗಂಧಃ ॥ ಬಂಡುಣಿ=ಭ್ರಮರ ॥ ೧೫ ॥

**ಕನ್ನಡಾರ್ಥ :**

ಪ್ರಸಕ್ತ ಪದ್ಯದಲ್ಲಿ ದಾಸರಾಯರು, ಕೇವಲ ವರ್ಣಾಶ್ರಮ ಧರ್ಮಾಚರಣೆಯಿಂದ ಫಲವೇನೂ ಸಿದ್ಧಿಸುವುದಿಲ್ಲ. ಹರಿಭಕ್ತಿ ವಿಹೀನನಾದವನಿಗೆ ಇದೆಲ್ಲವೂ ವ್ಯರ್ಥ. ಹರಿಭಕುತಿಯಿಲ್ಲದವನು ಪರಮಾತ್ಮನನ್ನು ಶ್ರವಣ ಮನನ ಧ್ಯಾನಗಳ ದ್ವಾರಾ ಉಪಾಸನೆ ಮಾಡದ ಯತಿಯು ದಂಡ, ಕಮಂಡಲು ಧಾರಣೆ ಮಾತ್ರದಿಂದ "ಸನ್ಯಾಸಿ" ಎನಿಸಲಾರ. ಈ ವಚನಗಳಿಗೆ ಪುರಾಣಗಳ ಆಧಾರವಿದೆ. ಅಂಡಜ, ಅಂಡ=ತತ್ತಿ. ಇದರಿಂದ ಪಕ್ಷಿಗಳ ಉತ್ಪತ್ತಿ. ಇವುಗಳಿಗೆ ಅಧಿಪ=ನಾಯಕನಾದ ಗರುಡ.ಪುಷ್ಪರಸ=ಸೌಗಂಧ. ಬಂಡುಣಿ= ಭ್ರಮರ-ಗುಂಗೇಹುಳ-ದುಂಬಿ. ॥ ೧೫ ॥

**೫. ಶ್ರೀ ಗುರುಹೃದಯಪ್ರಕಾಶಿಕೆ ;**

ಅಂಡಜಾಧಿಪನಂಸಗನ ಪದಪುಂಡರೀಕದಿ-ಎಂದರೆ, ಪಕ್ಷಿಶ್ರೇಷ್ಠನಾದ ಗರುಡನ ಹೆಗಲಿನಲ್ಲಿರುವ ದೇವರ ಪಾದಕಮಲಗಳಲ್ಲಿ ಅಹರ್ನಿಶಿ-ಎಂದರೆ, ಯಾವಾಗಲೂ ಬಂಡುಣಿಯವೋಲ್ ಎಂದರೆ, ಬಂಡೆಂಬ ಪುಷ್ಪರಸವನ್ನು ಪಾನಮಾಡುವ ದುಂಬಿಯಂತೆ ಮನಸ್ಸನ್ನು ಇಟ್ಟು ಸಂತೋಷಿಸದ ಮನುಷ್ಯನು ಕಂಡ ಕಂಡ ನೀರಿನಲ್ಲಿ ಮುಳುಗಿ, ಉಪವಾಸಾದಿ ಶರೀರ ದಂಡನೆ ತಪಸ್ಸು ಮಾಡಿದಾಗ್ಯೂ, ದಂಡ ಕಮಂಡಲು ಧರಿಸಿ ಸನ್ಯಾಸಿ ಎನಿಸಿದಾಗ್ಯೂ ಸತ್ಫಲವಿಲ್ಲ.

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಅಂಡವೆಂದರೆ ಮೊಟ್ಟೆ ಎಂದರ್ಥ. ಇಂತಹ ಅಂಡ ಒಡೆದು ಪಕ್ಷಿಗಳು ಜನಿಸುವುವು. ಇದರಿಂದ ಪಕ್ಷಿಗಳಿಗೆ ಅಂಡಜ ಎಂದು ಹೆಸರು. ಅಂತಹ ಪಕ್ಷಿಸಮೂಹದಲ್ಲಿ ಗರುಡನು ಶ್ರೇಷ್ಠನಾದವನು. ಪಕ್ಷಿರಾಜನಾದ ಗರುಡನು **ಅಂಡಜಾಧಿಪನು.** ಅಂತಹ ಗರುಡನ ಹೆಗಲಿನ ಮೇಲೆ ಕೂತು, ಸಂಚರಿಸುವವನು ಶ್ರೀಮನ್ನಾರಾಯಣನು. ಅಂತಹ **ಅಂಡಜಾಧಿಪನಂಸಗ**

**ನಾದ** ಶ್ರೀಹರಿಯ ಚರಣಕಮಲಗಳಲ್ಲಿ ಸದಾ ಮನಸ್ಸಿಟ್ಟು ಸ್ಮರಣೆಯಲ್ಲಿ ಮಗ್ನವಾಗಿರಬೇಕೆಂದು ತಿಳಿಸುತ್ತಾರೆ ಪ್ರಸಕ್ತ ಪದ್ಯದಲ್ಲಿ.

೨. ಕಮಲದಲ್ಲಿ ಸುಗಂಧವಾದ ಮಕರಂದವಿದೆ. ಇಂತಹ ಪುಷ್ಪರಸಕ್ಕೆ **ಬಂಡು** ಎಂದು ಹೆಸರು. ಅಂತಹ ಪುಷ್ಪರಸರೂಪವಾದ ಬಂಡನ್ನು ಪಾನ ಮಾಡುವ ಭ್ರಮರವು **ಬಂಡುಣಿ** ಎನಿಸುವುದು. ಬಂಡುಣಿಯು ಕಮಲ ಪುಷ್ಪದ ಸುತ್ತಲೂ ಹಾರಾಡುತ್ತಾ, ಅದರಲ್ಲಿರುವ ಮಕರಂದವನ್ನು ಸ್ವೀಕರಿಸಿ, ಮಧುಪಾನಾಸಕ್ತವಾಗಿರುವುದು. ಅಂತೆಯೇ ಗರುಡವಾಹನನ ಚರಣಾರವಿಂದ ಗತ ಮಧುವೆಂಬ ಹರಿನಾಮಸ್ಮರಣೆಯಲ್ಲಿ ಬಂಡುಣಿಯಂತೆ ಮಗ್ನನಾಗಿ, ಹಗಲಿರುಳೂ ಎಡಬಿಡದೆ ಪಾನಾಸಕ್ತರಾದ ಆ ಪಂಕಜನಾಭನ ಕಿಂಕರರು ನಿತ್ಯಾನಂದದಲ್ಲಿರುವರು.

೩. ಹಾಗೆ ಹರಿನಾಮ ಸಂಕೀರ್ತನೆಯಲ್ಲಿ ಮೈಮರೆತು, ಸುಖಪಡ ದಿರುವ ಮಾನವರು ತಾವು ಹೋದ ಹೋದಲ್ಲೆಲ್ಲಾ ದೃಷ್ಟಿಗೆ ಬೀಳುವ ನೀರಿನಲ್ಲಿ ಮುಳುಗಿ, ಸ್ನಾನ ಮಾಡಿದರೆ ಫಲವೇನೂ ಇಲ್ಲ ಎಂದು ತಿಳಿಸುತ್ತಾರೆ. ಅದು ಕೇವಲ ದೇಹಶ್ರಮರೂಪವಾದ ದಂಡನೆಯೇ ಹೊರತು, ನಿಷ್ಫಲವು. ಚಾಂದ್ರಾಯಣ, ಏಕಾದಶೀ ಇತ್ಯಾದಿ ಉಪವಾಸ ವ್ರತಗಳನ್ನು ಭಗವತ್ಪ್ರೀತಿ ಗಾಗಿ, ಶ್ರೀಹರಿಸ್ಮರಣೆಪೂರ್ವಕವಾಗಿ ಮಾಡಿದರೆ, ಸಾರ್ಥಕವಾಗುವುದು. ಹರಿ ಸ್ಮರಣೆಯನ್ನೇ ಬಿಟ್ಟು, ಮಾಡಿದ ಕರ್ಮಗಳೆಲ್ಲವೂ ಶುಷ್ಕ ಕರ್ಮಗಳೆಂದೆನಿಸು ವುವು. ಅದರಿಂದ ದೇಹದಂಡನೆಯಾಗುತ್ತದೆಯೇ ಹೊರತು, ಫಲಪ್ರದವಾಗು ವುದಿಲ್ಲ.

೪. ಆಶ್ರಮ ಚತುಷ್ಟಯಗಳಲ್ಲಿ ಯತ್ಯಾಶ್ರಮ ಶ್ರೇಷ್ಠವು. ಅಹಂ ಕಾರ ಮತ್ತು ಮಮಕಾರಗಳನ್ನು ತ್ಯಜಿಸದೆ, ಕೇವಲ ದಂಡ ಕಮಂಡಲು, ಕಾಷಾಯವಸನಭೂಷಿತನಾಗಿ ಯತಿಯಾದರೆ, ಫಲವೇನೂ ಇಲ್ಲವೆಂದು ತಿಳಿಸು ತ್ತಾರೆ. ಸನ್ಯಾಸವೆಂದರೆ ಸರ್ವಸಂಗಪರಿತ್ಯಾಗವೆಂದರ್ಥ. ಐಹಿಕವಿಷಯ ಗಳಲ್ಲಿ ವೈರಾಗ್ಯಭಾವವನ್ನು ತಾಳಿ, ಪ್ರಾಪಂಚಿಕ ಕಾಮನೆಗಳನ್ನು ಬಿಟ್ಟು, ಹಂಸನಾಮಕಪರಮಾತ್ಮನ ಸ್ಮರಣೆಯಲ್ಲಿ ನಿರಂತರ ನಿರತನಾಗಿರುವವನೇ ನಿಜ

ವಾದ ಯತಿಯು. ಅಹಂಕರ್ತೃತ್ವಾಭಿಮಾನದ ತ್ಯಾಗವೇ ಸತ್ಕರ್ಮಾನುಷ್ಠಾನದ ಫಲಪ್ರದತ್ವಕ್ಕೆ ಮುಖ್ಯಕಾರಣವೆಂಬುದೇ ಪ್ರಸಕ್ತ ಪದ್ಯದ ಅಭಿಪ್ರಾಯವು.

|| ೧೫ ||

## ಪದ್ಯ ೧೬

**ಮೂಲ :**

**ವೇದಶಾಸ್ತ್ರ ಪುರಾಣ ಕಥೆಗಳ |**
**ಓದಿ ಪೇಳಿದರೇನು ಸಕಲ ನಿ |**
**ಷೇಧ ಕರ್ಮವ ತೊರೆದು ಸತ್ಕರ್ಮಗಳ ಮಾಡೇನು ||**
**ಓದನಂಗಳ ಜರಿದು ಶ್ವಾಸನಿ |**
**ರೋಧ ಗೈದರೇನು ಕಾಮ |**
**ಕ್ರೋಧವಳಿಯದೆ ನಾನು ನನ್ನದು ಎಂಬ ಮಾನವನು ||೧೬||**

**ಅವತರಣಿಕೆ :**

ಅಹಂಕಾರ ಮಮಕಾರಗಳ ವರ್ಜನೆಯ ವೈಶಿಷ್ಟ್ಯವನ್ನು ಇನ್ನೂ ವಿವರಿಸಿ, ತಿಳಿಸುತ್ತಾರೆ ಪ್ರಸಕ್ತ ಸಂಧಿಗತ 16ನೆಯ ಈ ಪದ್ಯದಿಂದ. ನಾನು ಮತ್ತು ನನ್ನದು ಎಂಬ ಮಮತೆಯನ್ನು ಬಿಡದವನು ವೇದಶಾಸ್ತ್ರ ಪುರಾಣಾದಿಗಳನ್ನು ಓದಿದರೇನು? ಪ್ರವಚನ ಮಾಡಿದರೇನು? ನಿಷಿದ್ಧ ಕರ್ಮತ್ಯಾಗಪೂರ್ವಕ ಸತ್ಕರ್ಮಗಳನ್ನು ಆಚರಿಸಿದರೇನು? ಅನ್ನೋದಕಗಳನ್ನು ತೊರೆದು, ಶ್ವಾಸ ನಿರೋಧಮಾಡಿ, ಹಠದಿಂದ ಸತ್ಕರ್ಮಗಳನ್ನು ಮಾಡಿ ಫಲವೇನು? ಕಾಮ ಕ್ರೋಧಾದಿ ಅರಿಷಡ್ವರ್ಗಗಳನ್ನು ಗೆದ್ದು, ಜಿತೇಂದ್ರಿಯನಾಗಿ, ಅಹಂ ಮಮ ಕಾರಗಳನ್ನು ತ್ಯಜಿಸಿ, ಸದಾ ಪದುಮೀವಲ್ಲಭನ ಪಾದಾರವಿಂದಗಳಲ್ಲಿ ಮನಸ್ಸನ್ನು ಅನುಗೊಳಿಸಬೇಕೆಂದು ತಿಳಿಸುತ್ತಾರೆ. ||೧೬||

**ಪ್ರತಿಪದಾರ್ಥ :**

**ವೇದ**=ಋಗಾದಿ ಚತುರ್ವೇದಗಳು, **ಶಾಸ್ತ್ರ**=ಬ್ರಹ್ಮಸೂತ್ರ, ಪಾಂಚರಾತ್ರಾದಿ ಶಾಸ್ತ್ರಗಳು, **ಪುರಾಣ**=ಭಾಗವತಾದಿ ಪುರಾಣಗಳು, **ಕಥೆಗಳ**=ಭಾರತಾದಿ ಇತಿಹಾಸಗಳು, **ಓದಿ**=ಇತ್ಯಾದಿ ಗ್ರಂಥಗಳನ್ನು ಅಧ್ಯಯನಮಾಡಿ, **ಪೇಳಿದರೇನು**=ಪ್ರವಚನ ಉಪದೇಶರೂಪಗಳಿಂದ ಹೇಳಿದರೇನು ಪ್ರಯೋಜನ? **ಸಕಲನಿಷೇಧಕರ್ಮವ ತೊರೆದು**=ಶಾಸ್ತ್ರಗಳಲ್ಲಿ ಹೇಳಿರುವ ನಿಷಿದ್ಧರೂಪವಾದ ಕರ್ಮಗಳನ್ನು ತ್ಯಾಗಮಾಡಿ, **ಸತ್ಕರ್ಮಗಳ ಮಾಡೇನು**=ವಿಧ್ಯುಕ್ತವಾದ ವಿಹಿತಕರ್ಮಗಳನ್ನು ಮಾಡಿದರೂ ಫಲವಿಲ್ಲ. **ಓದನಂಗಳ ಜರಿದು**=ಅನ್ನೋದಕಗಳನ್ನು ಬಿಟ್ಟು, **ಶ್ವಾಸನಿರೋಧಗೈಸಿದರೇನು**=ಹಠಯೋಗದಿಂದ ಶ್ವಾಸವನ್ನು ಬಂಧಿಸಿ, ತಪಸ್ಸನ್ನು ಆಚರಿಸಿದರೇನು ಫಲ?, **ಕಾಮಕ್ರೋಧ ವಳಿಯದೆ**=ಧನ, ಕೀರ್ತಿಸಂಪಾದನೆ ಇವುಗಳಲ್ಲಿ ಆಶೆಬಿಡದೆ ಸತ್ಸಾಧನೆಗೆ ಪ್ರತಿಬಂಧಕವಾದ ಕೋಪವನ್ನು ಬಿಡದೆ, **ನಾನು ನನ್ನದು**=ಸರ್ವಕ್ಕೂ ನಾನೇ ಸ್ವತಂತ್ರನು, ಎಲ್ಲವೂ ನನ್ನಿಂದಲೇ ನಡೆಯುವುದು. ಎಲ್ಲವೂ ನನಗೇ ಸೇರಿದ್ದು ಎಂಬ ಅಹಂಕರ್ತೃತ್ವಾಭಿಮಾನರೂಪವಾದ ಅಹಂಮಮಕಾರಗಳಿಂದ ಗ್ರಸ್ತನಾದ **ಮಾನವನು**=ನರನು. ॥೧೬॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ :

ಇನ್ನೂ ಪೂರ್ವೋಕ್ತ ಅಹಂಮಮತಾ ದೋಷ ವಿಚಾರವನ್ನೇ ಹೇಳತಾರೆ.

ಚತುರ್ವೇದಗಳು, ಭಾರತ ಭಾಗವತಾದಿ ಶಾಸ್ತ್ರಗಳು ಇನ್ನೂ, ಧರ್ಮಪ್ರವೃತ್ತಿಮೊದಲಾದ ಧರ್ಮಶಾಸ್ತ್ರಗಳು, ಇನ್ನೂ ಅಷ್ಟಾದಶ ಪುರಾಣಗಳು ಉಪಪುರಾಣಗಳು ಚಂದಾಗಿ ಘಟ್ಟಿಮಾಡಿಕೊಂಡು, ಅನೇಕ ಜನರುಗಳಿಗೆ ಪುರಾಣರೂಪದಿಂದ ಆಗಲಿ ಅಥವಾ ಉಪದೇಶರೂಪದಿಂದ ಆಗಲಿ ಹೇಳೋಣದರಿಂದ ಫಲವಿಲ್ಲ. ಇನ್ನೂ ಶಾಸ್ತ್ರತಃ ನಿಷೇಧಗಳು ಎಂತ ಹೇಳತಕ್ಕ ಸಮಸ್ತವಾದ ನಿಷಿದ್ಧಕರ್ಮಗಳನ್ನು ತ್ಯಾಗಮಾಡಿ, ಶಾಸ್ತ್ರೋಕ್ತಪ್ರಕಾರ ವಿಹಿತವಾದ ಸತ್ಕರ್ಮ

ಮಾಡಿದರೂ ಫಲವಿಲ್ಲ, ಇನ್ನೂ ಅನ್ನೋದಕಾದಿಗಳು ತ್ಯಾಗಮಾಡಿ, ಹಟ ಯೋಗವಾದ ಶ್ವಾಸನಿರೋಧಮಾಡಿ ಆಯುವೃದ್ಧಿ ಮಾಡಿಕೊಂಡು ಮಹಾತ್ಮ ನೆಂದು ಲೋಗರಿಂದ ಕರಿಸೋಣದರಿಂದ ಫಲವಿಲ್ಲ. (ಯಾತರಿಂದ ಫಲವಿಲ್ಲ ಎಂದರೆ) ಸರ್ವಕರ್ಮಗಳು ಸಕಾಮನಾಗಿ ಮಾಡಿ, ಆದರಲ್ಲಿ ಸರ್ವರಿಗೂ ಮನ ಸ್ತೃಪ್ತಿಯಿಲ್ಲದಂಥ ಆದರಹೀನನಾಗಿ ಅತ್ಯಾಗ್ರಹಪೂರ್ವಕದಾಗಿನ್ನೂ, ಜನರು ಗಳ ದಯಸಂಪಾದಿಸೋದಕ್ಕಾಗಿನ್ನೂ, ಕೋಪವೂನೂ ಬಿಡದೆ, ಸರ್ವ ಸ್ವತಂತ್ರನೇ ನಾನು ಎಂತಲೂನೂ, ಸರ್ವವೂ ನಾನು ಹೊರ್ತು ಬ್ಯಾರೆ ಪುರುಷರಿಲ್ಲ ಎಂತ ಅಂದುಕೊಂಡು, ಸರ್ವವೂ ನನ್ನಾಧೀನದಲ್ಲಿ ಅದೆ, ನಾನೇ ಸರ್ವಕ್ಕೂ ಯಜಮಾನ ಎಂತ ಈ ಪ್ರಕಾರ ಅಭಿಮಾನ ಹಚ್ಚಿಕೊಂಡು ಇದ್ದ ಮನುಷ್ಯನು ಏನು ಸತ್ಕರ್ಮ ಮಾಡಿದರೂ ಫಲವಿಲ್ಲ. ಸಮೀಚೀವಾದ ಸತ್ಕರ್ಮ ಗಳೆಂಬ ಕ್ಷೀರವನ್ನು ಸಂಪಾದನೆ ಮಾಡಿ ಅದರಲ್ಲಿ ಅಹಂಮಮತಾ ಎಂಬ ವಿಷ ವನ್ನು ಕಲಿಸಿದರೆ ಆ ಕ್ಷೀರ ಪಾನಕ್ಕೆ ಯೋಗ್ಯವಾಗದೆ ಹ್ಯಾಂಗೆ ವ್ಯರ್ಥವಾಗಿ ಹೋಗತದೋ, ತದ್ವತ್ ಅಹಂಮಮತಾ ಎಂಬ ಜ್ಞಾನಯುಕ್ತನಾದವ ಏನು ಸತ್ಕರ್ಮ ಮಾಡಿದರೂ ಫಲವಿಲ್ಲ, ವ್ಯರ್ಥವಾಗತದೆ ಎಂತ ತಾತ್ಪರ್ಯ. ॥ ೧೬ ॥

## ೨. ಭಾವಪ್ರಕಾಶಿಕೆ :

ಕಾಮಕ್ರೋಧವನ್ನು ಬಿಡದೆ, ನಾನು ನನ್ನದು ಎಂಬ ಸ್ವತಂತ್ರಾಭಿಮಾನ ವುಳ್ಳ ಮನುಷ್ಯನು, ಏನು ಪುರಾಣ ವೇದಶಾಸ್ತ್ರಗಳನ್ನು ಓದಲಿ, ಹೇಳಲಿ, ಅದ ರಿಂದೇನೂ ಪ್ರಯೋಜನವಿಲ್ಲ. ನಿಷೇಧ ಕರ್ಮವನ್ನು ಬಿಟ್ಟು ವಿಧ್ಯುಕ್ತ ಸತ್ಕರ್ಮ ಗಳನ್ನು ಅನುಷ್ಠಾನ ಮಾಡಿದರೂ ಪ್ರಯೋಜನವಿಲ್ಲ. ಮಹಾಯೋಗಿಯೆಂದೆ ನಿಸಿಕೊಂಡು ಅನ್ನಾದ್ಯಾಹಾರವನ್ನು ಬಿಟ್ಟು ಶ್ವಾಸನಿರೋಧ ಮಾಡಿದರೂ, ಪರಮಾತ್ಮನೇ ಮಾಡಿಸಿದವನೆಂದು ತಿಳಿದು ಕಾಮ ಕ್ರೋಧವನ್ನು ಜೈಸುವ ವರೆಗೂ ಏನೂ ಪ್ರಯೋಜನವಾಗುವುದಿಲ್ಲ ॥೧೬॥

## ೩. ಭಾವದರ್ಪಣಟೀಕಾ ವಾಖ್ಯಾನ ಈ ಪದ್ಯಕ್ಕೆ ಕೊಟ್ಟಿಲ್ಲ :

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ (ಸಂಸ್ಕೃತಮೂಲ) :

"ವೇದ"–ಇತಿ॥ ಖಿಲಗೀತಾಯಾಂ ಚ "ಕಿಂ ವಿದ್ಯಯಾ ಕಿಂ ತಪಸಾ ಕಿಂ ದಾನೇನ ಶ್ರುತೇನ ವಾ॥ ಕಿಂ ವಿವಿಕ್ತೇನ ಮೌನೇನ ಸ್ತ್ರೀ ಭಿಃ ಯಸ್ಯ ಮನಃ

ಸ್ಮೃತಮ್" ॥ ಇತಿ ॥ "ಭವತ್ಯಭಿಭವಃ ಕ್ವಾಪಿ ಪುನಃ ಕಾಲೇ ಫಲತ್ಯಪಿ ॥ ಏವಂ ಪ್ರಾಯೇಣ ಲೋಕೇಽಸ್ಮಿನ್ ಜಹ್ವೋಪಸ್ಥಂ ಚ ದುರ್ಜಯಮ್ ॥ ರಹಸ್ತಾ ಕಾಮುಕೀ ನಾರೀ ಯಾ ವಾ ಕಾವಾಪಿ ಲಭ್ಯತೇ ॥ ನಶಕ್ಯಾ ಲಂಘಿತುಂ ಪ್ರಾಯಃ ತತೋ ವೈ ವರ್ಜಯೇದ್ರಹಃ ॥ ವಿರಲಾಃ ಸಂತಿ ಧೀರಾಃ ತೇ ಕಾಶ್ಚಿತ್ ಧೀರಾಶ್ಚ ಯೋಷಿತಃ ॥ ಅತಃ ಸರ್ವತ್ರ ನೋ ಶಂಕಾಕಾರ್ಯಾ ಪುಂಸಿ ಚ ಯೋಷಿತಿ ॥ ವೃಥಾ ಶಂಕಾಂ ಪ್ರಕುರ್ವಾಣಃ ತಾವತ್ ಪಾಪಂ ಲಭೇತ ಸಃ ॥ ವಿದ್ವಾನ್ ಪರಿಹರೇತ್ ಸಂಗಂ ತಥಾ ನಾರ್ಯಪಿ ಭೂರಿಶಃ ॥ ದೈವಾತ್ ಉಪಗತೇ ಸಂಗೇ ನ ಪ್ರಮಾದ್ಯೇತ್ ವಿವಿಕ್ತ ಧೃಕ್ ॥ ಕ್ಷಣಿಕಸ್ಯ ಸುಖಸ್ಯಾರ್ಥೇ ಮಹಾನರ್ಥಂ ಕಥಂ ಸಹೇತ್ ॥ ವೀರಃ ಸ ಏವಲೋಕೇಽಸ್ಮಿನ್ ಧನ್ಯೋ ವಿದ್ವಾನ್ ಸ ಏವ ಹಿ ॥ ಪ್ರಹಾರೈಃ ಕಾಮಬಾಣಾನಾಂ ನೈವಮೋಹಂ ವ್ರಜೇತ ಯಃ ॥ ಶ್ವಾನತ್ವಂ ಊರ್ವಶೀ ಸಂಗಾತ್ ವಿಶ್ವಾಮಿತ್ರೋಽಭಜನ್ ಮುನಿಃ ॥ ಸಹಸ್ರ ಭಗತಾಂ ಪ್ರಾಪ್ತಃ ಶಕ್ರಃ ಚಂದ್ರಶ್ಚ ಸಂಕ್ಷಯಮ್ ॥ ತಪಸಃ ಚ್ಯಾವಿತಃ ಮತ್ಸ್ಯ ಸಂಗಾತ್ ಯೋಗೀ ಸ ಸೌಭರಿಃ ॥ ಅಹಲ್ಯಾತು ಶಿಲಾ ದೇಹಂ ಅನ್ಯೇ ನಾನಾ ಮುನೀಶ್ವರಾಃ ॥ ರಾಜರ್ಷಯಃ ದೇವರ್ಷಯಶ್ಚ ಮಹಾಯೋಗೇಶ್ವರಾಃ ಅಪಿ ॥ ಆರೂಢಯೋಗಾಃ ಪ್ರಾಯೇಣ ಸ್ತ್ರೀ ಸಂಗಾತ್ ಚ್ಯಾವಿತಾಃ ಧ್ರುವಮ್ ॥ ಸುಶೀಲಾ ಬ್ರಾಹ್ಮಣೀ ಪೂರ್ವಂ ವ್ಯಜ್ಞಾಪುಂ ಸಂಗಾತ್ ಈದೃಶಂ ಸುಖಮ್ ॥ ನಾನುಭೂತಂ ಮಯಾಪೂರ್ವಂ ಭೂಯಾತ್ ಇತಿ ತದ್ದೈವ ಹಿ ॥ ಮೃತೇ ವಿದೇಹನಗರೇ ವೇಶ್ಯಾಽಭೂತ್ ಪಿಂಗಲಾಭಿದಾ ॥ ನಾನಾ ಸತ್ಕರ್ಮ ನಿಚಯೈಃ ಸಾಽಂತೇ ಲೇಭೇ ಪರಾಂ ಗತಿಮ್ ॥ ಸದಸದ್ವಾಪಿ ಯತ್ ಕರ್ಮ ಸ ವೃಥಾ ಜಾಯತೇ ಧ್ರುವಮ್"॥–ಇತಿ ವಿಷ್ಣುರಹಸ್ಯೇ ॥೧೬॥

**ಕನ್ನಡಾರ್ಥ :**

ಕಾಮಕ್ರೋಧಾದಿಗಳನ್ನು ಜಯಿಸಿದವನಿಗೆ ವೇದಶಾಸ್ತ್ರಗಳ ಪಠಣ, ಪ್ರವಚನದಿಂದ ಏನೂ ಉದ್ಧಾರವಿಲ್ಲ. ಕಾಮನಿಗ್ರಹದ ವಿಷಯವಾಗಿ ಗೀತಾ ವಾಕ್ಯವನ್ನು ಉದಹರಿಸುತ್ತಾರೆ ದಾಸವರ್ಯರು. "ಸ್ತ್ರೀಯರ ಮೋಹಪಾಶೆಯಲ್ಲಿ ಸಿಲುಕಿ ಮನಸ್ಸಿನ ಚಾಂಚಲ್ಯವನ್ನು ಹೊಂದಿರುವ ಮಾನವನಿಗೆ ಏಕಾಂತ

ವಾದ ಮೌನಾಚರಣೆ, ಅಗಾಧ ಪಾಂಡಿತ್ಯ, ತಪಸ್ಸು, ದಾನ, ಶ್ರವಣಾದಿ ಕರ್ಮಗಳು ಏನೂ ಪ್ರಯೋಜನವನ್ನು ಕೊಡಲಾರವು.” ಇದು **ಐಲಗೀತ** ಪದ್ಯಾರ್ಥ. ಜಗತ್ತಿನಲ್ಲಿ ಸಾಮಾನ್ಯವಾಗಿ ಎರಡು ಇಂದ್ರಿಯಗಳ ಜಯ ದುಃಸಾಧ್ಯ. ಒಂದನೆಯದು ಜಿಹ್ವಾಚಾಪಲ್ಯ ಮತ್ತು ಇನ್ನೊಂದು ಉಪಸ್ಥ. ಏಕಾಂತದಲ್ಲಿರುವಾಗ ಕಾಮನ ಬಲಿಗೆ ಬೀಳುವವರೇ ಅಧಿಕ. ಅಂತಹ ಕಾಮ ಜಯವನ್ನು ಹೊಂದಿರುವ ಪುರುಷರಾಗಲೀ ಸ್ತ್ರೀಯರಾಗಲೀ ದೊರೆಯುವುದು ವಿರಳ. ಈ ಕಾರಣದಿಂದ ಜ್ಞಾನಿಯಾದವನು ವಿಷಯ ಸಹವಾಸವನ್ನು ಜಾಗರೂಕತೆಯಿಂದ ತಪ್ಪಿಸಿಕೊಳ್ಳಬೇಕು. ಕ್ಷಣಿಕ ಸುಖ ಮಹಾ ಅನರ್ಥ ಪರಂಪರೆಗೆ ಕಾರಣ. ಕಾಮದ ವ್ಯಾಮೋಹವನ್ನು ಜಯಿಸಿದವನೇ ನಿಜವಾದ ಧೀರನು. ದೊಡ್ಡ ವಿದ್ವಾಂಸ. ಅವನೇ ಮಾನ್ಯ ಹಾಗೂ ಧನ್ಯನು.

ಊರ್ವಶಿಯ ಸಂಗದಿಂದ ವಿಶ್ವಾಮಿತ್ರನಂಥ ಮಹಾಮುನಿ ಶ್ವಾನನಾದನು. ಸ್ತ್ರೀವ್ಯಾಮೋಹದಿಂದ ಇಂದ್ರನು ಶಾಪಗ್ರಸ್ತನಾಗಿ ಸಹಸ್ರಭಗನಾದ. ಚಂದ್ರನು ಕ್ಷಯವನ್ನು ಹೊಂದಿದನು. ಮೀನಿನ ಸಹವಾಸದ ಫಲವಾಗಿ ಸೌಭರಿಮುನಿಯು ತಪಸ್ಸಿನಿಂದ ಚ್ಯುತನಾದ. ಅಹಲ್ಯಾ ಶಿಲೆಯಾದಳು. ಅನೇಕ ರಾಜರ್ಷಿಗಳೂ ಮಹರ್ಷಿಗಳೂ ಸಹ ಸ್ತ್ರೀ ವ್ಯಾಮೋಹದಿಂದ ಕೆಟ್ಟಿದ್ದಾರೆ. ಸುಶೀಲಾ ಎಂಬ ಬ್ರಾಹ್ಮಣ ಸ್ತ್ರೀಯು ಪುರುಷಸಂಗದಿಂದ ವಿದೇಹ ದೇಶದಲ್ಲಿ ಪಿಂಗಳಾ ಎಂಬ ನಾಮದಿಂದ ವೇಶ್ಯೆಯಾಗಿ ಜನಿಸಿದಳು. ಸತ್ಕರ್ಮ ಮತ್ತು ಅಸತ್ಕರ್ಮಗಳು ವ್ಯರ್ಥವಾಗದೆ ಫಲಪ್ರದವಾಗುತ್ತವೆ–ಎಂದು **ಶ್ರೀವಿಷ್ಣುರಹಸ್ಯದಲ್ಲಿ** ಉಕ್ತವಾಗಿದೆ. ॥೧೬॥

**ಆ. ಶ್ರೀ ಗುರುಹೃದಯಪ್ರಕಾಶಿಕೆ :**

ಕಾಮ, ಕ್ರೋಧವಳಿಯದೆ, ಅಂದರೆ ಜೀವಗೆ ಈಶೈಕ್ಯವಾಗುವುದೆಂಬ ದುರಾಸೆ, ಅದು ಆಗುವುದಿಲ್ಲವೆಂದು ಹೇಳುವ ಸಶ್ಶಾಸ್ತ್ರಾದಿಗಳಲ್ಲಿ ಕ್ರೋಧ ಅಥವಾ ದುರ್ಭೋಗಾಸೆ. ಶ್ರೀಹರಿ–ದೇವಾದಿ ದ್ವೇಷ ಸಹ ಬಿಡದೆ, ನಾನು ಸ್ವತಂತ್ರನು ದೇಹಾದಿಗಳು, ತಾನು ಸಂಪಾದಿಸಿದ್ದು, ತನ್ನದೆಂದು ತಿಳಿದವನು, ವೇದಶಾಸ್ತ್ರ ಪುರಾಣ ಕಥೆಗಳ ಓದಿ ಕೇಳಿದಾಗ್ಯೂ, ಸಮಸ್ತಪಾಪಕೃತ್ಯ ಬಿಟ್ಟು, ಸಮಸ್ತ ಪುಣ್ಯ ಮಾಡಿದಾಗ್ಯೂ, ಓದನವೆಂಬ ಅನ್ನಾದಿಗಳನ್ನು ಬಿಟ್ಟು, ಶ್ವಾಸ ನಿರೋಧವೆಂಬ ಪ್ರಾಣಾಯಾಮಾದಿಗಳನ್ನು ಮಾಡಿದಾಗ್ಯೂ ಸತ್ಫಲವಿಲ್ಲೆಂದರ್ಥ.

**ನಿಶ್ಶೇಷ ಧರ್ಮಕರ್ತಾಪ್ಯಭಕ್ತಶ್ಚೇನ್ನರಕೇ ಹರೇಃ ।**
**ಸದಾ ತಿಷ್ಠತಿ ಭಕ್ತಶ್ಚೇದ್ಬ್ರಹ್ಮಹಾಪಿ ವಿಮುಚ್ಯತೇ ॥**
**–ಎಂಬ ನಿರ್ಣಯಾರ್ಥವು** ವಿವರಿಸಲ್ಪಟ್ಟಿತು.

# ಸರ್ವವ್ಯಾಖ್ಯಾನಸಾರಸಂಗ್ರಹ

೧. ಭಗವಂತನ ಅನಂತಾನಂತಗುಣರಾಶಿಗಳನ್ನು ಪರಿಚಯ ಮಾಡಿ ಕೊಡುವ ಶಬ್ದಪ್ರಪಂಚವೇ **ವೇದ**ಗಳು. ಶ್ರೀಪರಮಾತ್ಮನು ವೇದಪ್ರತಿಪಾದ್ಯನು. ಅಂತೆಯೇ ವೇದಾತೀತನೂ ಹೌದು. ವೇದಗಳು ಅಪೌರುಷೇಯ. ಸಂಖ್ಯೆಯಲ್ಲಿ ಅನಂತ. ಇಂತಹ ಅನಂತಸಂಖ್ಯಾಕವಾದ ವೇದಗಳು ನಿತ್ಯ. ವೇದಗಳಿಗೆ ಅಪೌರುಷೇಯತ್ವ ಮತ್ತು ನಿತ್ಯತ್ವ ಇರುವುದರಿಂದ, ಶ್ರುತಿ ಮೂಲವು ಪ್ರಧಾನ ಪ್ರಮಾಣವೆನಿಸುತ್ತದೆ. ಶ್ರೀಮನ್ನಾರಾಯಣನು ದೇವತೆಗಳಿಂದ ಪ್ರಾರ್ಥಿತನಾಗಿ, ವೇದವ್ಯಾಸರೂಪದಿಂದ ವಸುಧೆಯೊಳವತರಿಸಿ, ವೇದರಾಶಿಗಳನ್ನು ನಾಲ್ಕು ಭಾಗಗಳಾಗಿ ವಿಭಾಗಿಸಿ, ತನ್ನ ನಾಲ್ಕು ಮಂದಿ ಶಿಷ್ಯರಿಗೆ ಉಪದೇಶಿಸಿದನು. ಇವೇ ಋಗಾದಿ ಚತುರ್ವೇದಗಳು.

೨. ವೇದಾರ್ಥನಿರ್ಣಾಯಕವಾದ ಬ್ರಹ್ಮಸೂತ್ರ, ಪಂಚರಾತ್ರಾಗಮ ಇತ್ಯಾದಿಗಳು ರಹಸ್ಯವಾದ ತತ್ತ್ವಪ್ರಮೇಯಗಳಿಂದ ಘಟಕವಾಗಿರುವುವು. ಇವುಗಳಿಗೆ **ಶಾಸ್ತ್ರ**ಗಳೆಂದು ಹೆಸರು.

೩. ಭಾಗವತಾದಿ ಅಷ್ಟಾದಶ ಪುರಾಣಗಳು ಹಾಗೂ ಅಷ್ಟೇ ಸಂಖ್ಯಾಕವಾದ ಉಪಪುರಾಣಗಳು ಸ್ಮೃತಿವರ್ಗಕ್ಕೆ ಸೇರಿವೆ. ಭಗವನ್ಮಹಿಮಾಪ್ರತಿಪಾದಕವಾದ ಈ ಪುರಾಣಗಳು ಶ್ರೀವೇದವ್ಯಾಸರಿಂದ ರಚಿತವಾಗಿದ್ದು, ಶ್ರುತ್ಯರ್ಥಾನುಸಾರಿಯಾಗಿವೆ.

೪. ಮೂಲರಾಮಾಯಣ, ಪಂಚಮವೇದವೆಂದು ಪ್ರಸಿದ್ಧವಾಗಿರುವ ಮಹಾಭಾರತಗಳು ದೀರ್ಘಕಥಾರೂಪವಾದ **ಇತಿಹಾಸ**ಗಳೆಂದು ಕರೆಯಲ್ಪಡುವುವು. ಇಂತು ಮಾನವನು ತನ್ನ ಸಂಸ್ಕಾರವಿಶೇಷಬಲದಿಂದ ವೇದಗಳ

ಉಪನಿಷತ್ತುಗಳು, ಶಾಸ್ತ್ರಗಳು, ಪುರಾಣ ಇತಿಹಾಸಾದಿಗಳನ್ನು ಆಳವಾಗಿ ಅಧ್ಯಯನ ಮಾಡಿರಬಹುದು. ಶಾಂತಿಪಾಠಹಾಕಿ, ಗುರುಗಳ ಅಡಿದಾವರೆಗಳಲ್ಲಿ ಕೂತು, ಗುರೂಪದೇಶದ್ವಾರಾ ಶಾಸ್ತ್ರಾಭ್ಯಾಸ ಮಾಡಿ, ಸುಪ್ರಸಿದ್ಧ ವಿದ್ವಾಂಸನೆಂದು ಶಾಸ್ತ್ರಸಂಪನ್ನನಾಗಿರಬಹುದು. ಆದರೆ ಸಕಲ ಶಾಸ್ತ್ರಪ್ರತಿಪಾದ್ಯನಾದ ಹಾಗೂ ಅವುಗಳ ಮುಖ್ಯವಿಷಯನಾದ ಶ್ರೀಪರಮಾತ್ಮನ ಸ್ವತಂತ್ರಕರ್ತೃತ್ವವನ್ನರಿಯದೆ ನಾನು ನನ್ನದು ಎಂಬ ಅಹಂಮಮಕಾರಗಳಿಂದ ಕೂಡಿ, ಶಾಸ್ತ್ರಾಧ್ಯಯನ ಮತ್ತು ಪಾಠಪ್ರವಚನಾದಿಗಳನ್ನು ಮಾಡಿದಾಗ್ಯೂ ನಿಷ್ಪ್ರಯೋಜನವೆಂದು ದಾಸರಾಯರು ತಿಳಿಸುತ್ತಾರೆ ಪ್ರಸಕ್ತ ಪದ್ಯದಿಂದ. ತನ್ನ ಪಾಂಡಿತ್ಯದಿಂದ ಜನರನ್ನು ಮೆಚ್ಚಿಸಬಹುದೇ ಹೊರತು, ಜನಾರ್ದನನಿಗೆ ಮೆಚ್ಚುಗೆಯಾಗುವುದಿಲ್ಲ. ಭಗವತ್ಪ್ರೀತಿಕರವಾಗದ ಎಲ್ಲಾ ಸತ್ಕರ್ಮಗಳೂ ವ್ಯರ್ಥ.

೫. ಮಾಡಲೇಬಾರದೆಂದಿರುವ ಶಾಸ್ತ್ರೋಕ್ತಕರ್ಮಗಳಿಗೆ **ನಿಷಿದ್ಧ ಕರ್ಮಗಳೆಂದು ಹೆಸರು.** ಅಂತಹ ನಿಷಿದ್ಧ ಕರ್ಮಗಳನ್ನು ಶಾಸ್ತ್ರವಿಧಿಯಂತೆ ತ್ಯಾಗಮಾಡಿ, ಕೇವಲ ಕರ್ಮಠನಾದರೆ ಪ್ರಯೋಜನವಿಲ್ಲ. "ನಾನೇ ಸಕಲ ಕರ್ಮಗಳನ್ನು ಮಾಡುತ್ತಿದ್ದೇನೆ"–ಎಂಬ ಅಹಂಕರ್ತೃತ್ವಾಭಿಮಾನದಿಂದ ಮಾಡಿದ ಕರ್ಮಗಳು ಶ್ರೀಹರಿಯ ಪ್ರೀತಿಗೆ ಕಾರಣವಾಗುವುದಿಲ್ಲ. ಅದರಿಂದ ದೇಹದಂಡನಾರೂಪವಾದ ಶ್ರಮವೇ ಹೊರತು, ಫಲದಾಯಕವಾಗುವುದಿಲ್ಲ.

೬. ಕೆಲವು ಹಠಯೋಗಿಗಳಿರುತ್ತಾರೆ. ಅವರು ಅನ್ನೋದಕಗಳನ್ನು ಬಿಟ್ಟು, ಶ್ವಾಸವನ್ನು ಬಂಧಿಸಿ ಪ್ರಾಣಾಯಾಮ ಯೋಗದ್ವಾರಾ ತಪಸ್ಸನ್ನು ಆಚರಿಸುವರು. ಧ್ಯಾನಾದಿಗಳ ಮುಖ್ಯ ಉದ್ದೇಶ, ಮನಸ್ಸನ್ನು ಸರ್ವೇಂದ್ರಿಯಗಳನ್ನು ಬಿಂಬನಾದ ಶ್ರೀಪರಮಾತ್ಮನ ಸ್ಮರಣೆಯಲ್ಲಿ ಲೀನಗೊಳಿಸುವುದು. ಆಗ ಮನಸ್ಸು ಅನ್ಯ ವಿಷಯಗಳ ಕಡೆಗೆ ಹೊರಳದೆ, ಚಕ್ರಪಾಣಿಯ ಚರಣಾರವಿಂದಗಳಲ್ಲಿ ರಮಿಸುವುದು.

೭. ಕಾಮಾದಿ ಅರಿಷಡ್ವರ್ಗಗಳು ನಮ್ಮ ಸತ್ಸಾಧನೆಗೆ ಪ್ರತಿಬಂಧಕಗಳು. ಅವುಗಳನ್ನು ಜಯಿಸಿದ ಹೊರತು, ವೈರಾಗ್ಯಭಾವ ಹುಟ್ಟುವುದಿಲ್ಲ.

ಶ್ರೀಪರಮಾತ್ಮನಲ್ಲಿ ಮಾನವನು ತೋರಿಸುವ ನಿರತಿಶಯವಾದ, ಅವಿಚ್ಛಿನ್ನವಾದ ಪ್ರೇಮಪ್ರವಾಹರೂಪವಾದ ಸ್ನೇಹವೇ ಭಕ್ತಿಯು. ಇಂತಹ ಶುದ್ಧಭಕ್ತಿಯಿಂದ ಶ್ರೀಹರಿಯನ್ನು ಆರಾಧಿಸುವವನು ಜಿತೇಂದ್ರಿಯನಾಗಿರಬೇಕು. ಆಗ ಭಕ್ತಿಯೆಂಬ ಪ್ರೇಮಪ್ರವಾಹವು ಆ ಅನಂತಕಲ್ಯಾಣಗುಣಸಾಗರನಲ್ಲಿ ಸೇರುವುದು. ಆಗ ಸರ್ವಕ್ಕೂ ಶ್ರೀಹರಿಯೇ ನಿಯಾಮಕ. ಅವನೇ ಸರ್ವತಂತ್ರ ಸ್ವತಂತ್ರನು. ಸ್ವತಂತ್ರಕರ್ತೃತ್ವವುಳ್ಳ ಆ ಬಿಂಬನಿಂದ ಪರಾಧೀನಕರ್ತೃತ್ವ ಉಳ್ಳ ಸಕಲಜೀವರೂ ನಿಯಮ್ಯರು ಎಂಬ ಜ್ಞಾನಾನುಸಂಧಾನ ಉಂಟಾಗುವುದು. ಹೀಗೆ ಈಶ್ವರನ ಸರ್ವನಿಯಾಮಕತ್ವವನ್ನು ಅರಿಯದೇ, ಕೇವಲ ಅಹಂಕರ್ತೃತ್ವಾಭಿಮಾನದಿಂದ ಮಾಡುವ ಶಾಸ್ತ್ರಾಧ್ಯಯನ, ಅಧ್ಯಾಪನ, ಪಾಠ ಪ್ರವಚನಾದಿಗಳು, ನಿಷಿದ್ಧಕರ್ಮಗಳ ತ್ಯಾಗ, ಸತ್ಕರ್ಮಾನುಷ್ಠಾನ, ಧ್ಯಾನ, ತಪಸ್ಸು ಇತ್ಯಾದಿ ಕರ್ಮಗಳ ಆಚರಣೆಯಿಂದ ಏನೂ ಪ್ರಯೋಜನವಾಗದೆಂದು ಪ್ರಸಕ್ತ ಪದ್ಯಾಭಿಪ್ರಾಯವು.

**ವಿಶೇಷ ವಿಚಾರ :**

ಶ್ರೀಶನ ನಿಜವಾದ ಭಕ್ತರು ಯಾವ ಕಾಮನೆಯನ್ನೂ ಇಟ್ಟುಕೊಳ್ಳದೇ, ಕೇವಲ ಭಗವತ್ಪ್ರೀತ್ಯರ್ಥವಾಗಿ ಕರ್ಮ ಮಾಡುವರು. ಅಲ್ಲದೇ ಆ ಸಕಲ ಕರ್ಮಗಳನ್ನೂ ಬಿಂಬರೂಪಿಯಾದ ಶ್ರೀಹರಿಯೇ ತಮ್ಮ ಅಂತರ್ಯಾಮಿಯಾಗಿದ್ದು, ಮಾಡಿ ಮಾಡಿಸುತ್ತಿರುವನೆಂಬ ಉತ್ತಮ ಬಿಂಬಕ್ರಿಯಾರೂಪವಾದ ಜ್ಞಾನಾನುಸಂಧಾನವಿರುವುದು. ಅವರು ಕ್ಷಣಿಕವಾದ ಸ್ವರ್ಗಾದಿ ಸುಖಗಳನ್ನಾಗಲೀ, ಅಷ್ಟೇ ಯಾಕೆ, ಪರಮ ಪುರುಷಾರ್ಥರೂಪವಾದ ಮೋಕ್ಷವನ್ನೂ ಸಹ ಬಯಸದೆ, ನಿಷ್ಕಾಮಕರಾಗಿರುವರು, ಇದೇ ಜಗನ್ನಾಥದಾಸವರ್ಯರು ತಮ್ಮ ಕೀರ್ತನೆಯೊಂದರಲ್ಲಿ–ಆ **ಕೈವಲ್ಯ ಭೋಗಸುಖ ಅವರಿಗೇಕೆ?** –ಎಂದು ರಂಗನ ಅಂತರಂಗದಾಸರಾದ ಮಂಗಳಾತ್ಮರ ಲಕ್ಷಣವನ್ನು ತಿಳಿಸಿರುತ್ತಾರೆ. ॥ ೧೬ ॥

## ಪದ್ಯ ೧೭

**ಮೂಲ :**

**ಏನು ಕೇಳಿದರೇನು ನೋಡಿದ ।**
**ರೇನು ಓದಿದರೇನು ಪೇಳಿದ ।**
**ರೇನು ಪಾಡಿದರೇನು ಮಾಡಿದರೇನು ದಿನದಿನದಿ ॥**
**ಶ್ರೀನಿವಾಸನ ಜನ್ಮಕರ್ಮ ಸ ।**
**ದಾನುರಾಗದಿ ನೆನೆದು ತತ್ತ ।**
**ತ್ಸ್ಥಾನದಲಿ ತದ್ರೂಪ ತನ್ನಾಮಕನ ಸ್ಮರಿಸದವ ॥ ೧೭॥**

**ಅವತರಣಿಕೆ :**

ಶ್ರೀನಿವಾಸನಾಮಕ ಶ್ರೀಹರಿಯ ಅವತಾರವಿಶೇಷಗಳು, ಜಗತ್ಸೃಷ್ಟ್ಯಾದಿ ಕಾರ್ಯವಿಶೇಷಗಳನ್ನು ಆಯಾಯಾ ಅಧಿಷ್ಠಾನಗತ ಭಗವದ್ರೂಪಗಳನ್ನೂ, ತತ್ತತ್ಸ್ಥಾನಗತ ಭಗವನ್ನಾಮಗಳನ್ನೂ ಸ್ಮರಿಸದೇ ಇರುವ ಮಾನವನು ಶಾಸ್ತ್ರ ಶ್ರವಣ, ಅವಲೋಕನ, ಅಧ್ಯಯನ, ಪಾಠಪ್ರವಚನಗಳು, ಗಾಯನಾದಿ ಸೇವೆ ಇತ್ಯಾದಿ ಪ್ರತಿದಿವಸದಲ್ಲಿಯೂ ಕರ್ಮಗಳನ್ನು ಆಚರಿಸಿದರೇನು ಫಲ ?– ಎಂದು ತಿಳಿಸುತ್ತಾರೆ ಪ್ರಸಕ್ತ ಸಂಧಿಗತ ೧೭ನೆಯ ಈ ಪದ್ಯದಿಂದ ॥೧೭॥

**ಪ್ರತಿಪದಾರ್ಥ :**

**ದಿನದಿನದಿ**=ಪ್ರತಿನಿತ್ಯದಲ್ಲಿಯೂ, **ಶ್ರೀನಿವಾಸನ**=ಶ್ರೀಲಕ್ಷ್ಮೀ ಪತಿಯೂ, ಲಕ್ಷ್ಮೀಧರನೂ ಆದ ಶ್ರೀಪರಮಾತ್ಮನ, **ಜನ್ಮ**=ರಾಮಕೃಷ್ಣಾದಿ ಅನಂತ ಅವತಾರರೂಪವಾದ ಕ್ರಿಯಾವಿಶೇಷಗಳು. **ಕರ್ಮ**=ಜಗತ್ತಿನ ಸೃಷ್ಟ್ಯಾದ್ಯಷ್ಟಕರ್ತೃತ್ವ, ಸರ್ವನಿಯಾಮಕತ್ವ ಇತ್ಯಾದಿ ವ್ಯಾಪಾರವಿಶೇಷಗಳು, **ಸದಾನುರಾಗದಿ**=ಭಕ್ತಿಪೂರ್ವಕವಾಗಿ, **ನೆನೆದು**=ಮನಸಾ ಚಿಂತಿಸುತ್ತಾ, **ತತ್ತತ್ಸ್ಥಾನದಲಿ**=ಸರ್ವಸ್ಥಳ, ಕಾಲ, ಕರ್ಮಗಳಲ್ಲಿ, **ತದ್ರೂಪ**=ತದಾಕಾರ ವಾಗಿ ವಿದ್ಯಮಾನನಾಗಿರುವ ಭಗವದ್ರೂಪಗಳನ್ನು, **ತನ್ನಾಮಕನ**=

ಆಯಾಯಾ ದೇಶ. ಕಾಲ, ಜಡವಸ್ತುಗಳು, ಚೇತನವರ್ಗ ಇತ್ಯಾದಿ ಅಧಿಷ್ಠಾನಗಳ ಹೆಸರಿನಿಂದಲೇ ವಾಚ್ಯನಾಗಿರುವ ಶ್ರೀಪರಮಾತ್ಮನ ಆಯಾಯಾ ನಾಮಗಳನ್ನು, **ಸ್ಮರಿಸದವ**=ಉಪಾಸನೆಗೆ ವಿಷಯವನ್ನಾಗಿ ಮಾಡಿ, ಮನಸಾ ಧ್ಯಾನ ಮಾಡದೇ ಇರುವ ಮಾನವನು, **ಏನು ಕೇಳಿದರೇನು**=ಯಾವ ಶಾಸ್ತ್ರಗಳನ್ನು ಶ್ರವಣ ಮಾಡಿದರೇನು, **ನೋಡಿದರೇನು**=ಶಾಸ್ತ್ರಾವಲೋಕನ ಮಾಡುತ್ತಿದ್ದರೆ ಏನು, **ಓದಿದರೇನು**=ಶಾಸ್ತ್ರಾಧ್ಯಯನ ಮಾಡುತ್ತಿದ್ದರೆ ಏನು, **ಪೇಳಿದರೇನು**=ಪಾಠಪ್ರವಚನಗಳ ದ್ವಾರಾ ಇತರರಿಗೆ ತಿಳಿಸುತ್ತಿದ್ದರೆ ಏನು, **ಪಾಡಿದರೇನು**=ಗಾಯನರೂಪದಿಂದ ಅವನ ಗುಣಗಾನ ಮಾಡಿದರೇನು ? ಇವೆಲ್ಲವೂ ನಿಷ್ಪ್ರಯೋಜಕವಾಗುವುವು ಎಂದು ತಿಳಿಸುತ್ತಾರೆ.

॥ ೧೭ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :

ಇನ್ನೂ ಪೂರ್ವೋಕ್ತ ಅಹಂಮಮತಾ ವಿಚಾರವೇ ಅವಶಿಷ್ಟ ಹೇಳತಾರೆ.

ಮನುಷ್ಯನಾದವನು ಮದ-ಮತ್ಸರ, ಕಾಮ-ಕ್ರೋಧ, ಇನ್ನೂ ಅಹಂಮಮತಾಜ್ಞಾನ ಇವುಗಳಿಂದ ಯುಕ್ತನಾಗಿ ಶಾಸ್ತ್ರಪುರಾಣಗ್ರಂಥ ಇವುಗಳಲ್ಲಿ ಹೇಳಿದ ಕ್ರಮಗಳನ್ನು ಬಹುಮುಖತಃ ಕೇಳಿದರೇನು, ಅನೇಕ ತೀರ್ಥಕ್ಷೇತ್ರಯಾತ್ರಮಾಡಿ ಅಲ್ಲಲ್ಲಿದ್ದ ಭಗವನ್ಮೂರ್ತಿಗಳು ತಥಾ ಭಗವದ್ಭಕ್ತರ ನೋಡಿದರೇನು, ಗುರುಗಳಲ್ಲಿ ದಿವ್ಯ ಸಚ್ಛಾಸ್ತ್ರಗಳನ್ನು ಮನಃಪೂರ್ವಕ ಓದಿದರೇನು, ಭಗವತ್ತತ್ತ್ವಗಳ ಅನ್ಯರಿಗೆ ಉಪದೇಶ ತಥಾ ಪುರಾಣರೂಪದಿಂದ ಹೇಳಿದರೇನು, ಯಜ್ಞ-ಯಾಗಾದಿಗಳು ದಾನ-ತಪಸ್ಸು ಇವುಗಳ ಮಾಡಿದರೇನು, ದಾಸತ್ವವಹಿಸಿ ದಿವ್ಯಗಾನರೂಪದಿಂದ ಕಥಾಗಳಿಂದ ಜನರಿಗೆ ಸಂತೋಷವೂ ಪರಮಾತ್ಮನ ಪ್ರೀತಿಗಾಗಿಯೂ, ಗಾನಮಾಡಿದರೇನೂ ಫಲವಿಲ್ಲ. ಯಾಕೆ ಫಲವಿಲ್ಲವಾಗತದೆ ಎಂದರೆ, ಪ್ರತಿದಿನದಲ್ಲೂ ಶ್ರೀಲಕ್ಷ್ಮೀಪತಿಯಾದ ಪರಮಾತ್ಮನ ಅವತಾರರೂಪವಾದ, ಸೃಷ್ಟ್ಯಾದಿವ್ಯಾಪಾರರೂಪವಾದ ಕರ್ಮ ಇವುಗಳನ್ನ

ಅವಿಚ್ಛಿನ್ನವಾಗಿ ಕೇವಲ ಭಕ್ತಿಪೂರ್ವಕ ನೆನೆದು ಸರ್ವಸ್ಥಳ, ಸರ್ವಕರ್ಮಗಳಲ್ಲಿ ತದಾಕಾರನಾಗಿರುವ ಶ್ರೀಪರಮಾತ್ಮಗೂ ತನ್ನ ಬಿಂಬರೂಪಕ್ಕೂ ಐಕ್ಯ ಚಿಂತಿಸುತ್ತಾ, ಆಯಾ ಅಧಿಷ್ಠಾನದಲ್ಲಿರುವ ಶ್ರೀಪರಮಾತ್ಮಗೆ ಅದೇರೂಪ ಎಂತಲೂ, ಇನ್ನೂ ಆ ಆ ಅಧಿಷ್ಠಾನಕ್ಕೆ ದಾವ ನಾಮವೋ ಅದೇ ನಾಮವೇ ಶ್ರೀಪರಮಾತ್ಮನ ನಾಮ ಎಂತಲೂ ಈಪ್ರಕಾರ ಅನುಸಂಧಾನಮಾಡಿ, ಶ್ರೀಪರಮಾತ್ಮನ ಸ್ಮರಣಾದಿಗಳು ಮಾಡದೇ, ಪೂರ್ವೋಕ್ತ ಗುಣಯುಕ್ತನಾಗಿ ಇರುವದ್ದರಿಂದ ಫಲವಿಲ್ಲ. ಎಂದರೆ ಕರ್ಮಗಳ ತ್ಯಾಗ ಮಾಡಬೇಕೆಂತಾಗಲೀ, ಶ್ರೀಪರಮಾತ್ಮನಲ್ಲಿ ಭಕ್ತಿ ಇದ್ದವನೇ ಆ ಕರ್ಮಗಳು ಮಾಡಬೇಕೆಂತಾಗಲೀ, ತಾತ್ಪರ್ಯವಲ್ಲ. ಕರ್ಮ ಎಂಬುವುದು ಜೀವರನ್ನು ಬಿಟ್ಟದ್ದಲ್ಲ. ಕರ್ಮಮಾಡೇತೀರಬೇಕು. ಮೋಕ್ಷದಲ್ಲಿ ಕೂಡ ಕರ್ಮವದೆ. ಪುರುಷನಾದವ ಕರ್ಮವು ಮಾಡೋದರಲ್ಲಿ ತಾನೂ ಸಾರ್ಥಿಕ್ಯಹೊಂದಿ ಸುಖಪಡಬೇಕೆಂಬ ಕುತೂಹಲವಿದ್ದು ಕರ್ಮಮಾಡಬೇಕೇ ಹೊರತು, ವೃಥಾ ದೇಹ ಕಷ್ಟಪಟ್ಟು ಸಾರ್ಥಿಕ್ಯ ಹೊಂದದೇ, ದುಃಖಪಡೋಣದರಿಂದ ಪ್ರಯೋಜನವಿಲ್ಲವಾದ ಕಡಿಯಿಂದ, ಪೂರ್ವೋಕ್ತ ದುಷ್ಟವಾದ ಗುಣಗಳ ತ್ಯಾಗಮಾಡಿ ಸುಗುಣಗಳನ್ನ ಆಚರಣೇ ಮಾಡತಾ ಬರಬೇಕು' ಕರ್ಮ ಎಂಬುದು ಶ್ರೀಪರಮಾತ್ಮಗೂ ಸೃಷ್ಟ್ಯಾದಿ ವ್ಯಾಪಾರವದೆ. ಆದಕಡಿಯಿಂದ ಅಹಂಮಮತಾದಿಗಳ ಬಿಟ್ಟುಬಿಡಬೇಕಂತ ತಾತ್ಪರ್ಯ ॥೧೭॥

**೨. ಭಾವಪ್ರಕಾಶಿಕೆ :**

ಶ್ರೀಪರಮಾತ್ಮನ ಅವತಾರ ಚರಿತ್ರೆಗಳನ್ನು ಸರ್ವಕಾಲದಲ್ಲಿ ಭಕ್ತಿಯಿಂದ ಚಿಂತಿಸುತ್ತಾ, ತೀರ್ಥಕ್ಷೇತ್ರಗಳಲ್ಲಿ ವೇದಪುರಾಣಾದಿಗಳಲ್ಲಲ್ಲೂ, ಸರ್ವಪ್ರಾಣಿಗಳಲ್ಲೂ ಸಹ ತತ್ತದ್ರೂಪಿಯಾಗಿ ಆಯಾ ಹೆಸರುಗಳಿಂದ ವ್ಯಾಪ್ತನಾಗಿದ್ದು, ಸರ್ವಕಾರ್ಯಗಳನ್ನು ಪರಮಾತ್ಮನೇ ಮಾಡಿಸುತ್ತಿರುವನೆಂದು ಉಪಾಸನಾ ಮಾಡದೆ, ತಾನೇ ಮಾಡುವೆನೆಂದು ಭಾವಿಸುವ ಪುರುಷನು ಯಾವ ಕಥಾ ಕೇಳಿದರೇನು? ಯಾವ ಪ್ರತಿಮೆಗಳನ್ನು ನೋಡಿದರೇನು? ಯಾವ ಗ್ರಂಥವನ್ನೋದಿದರೇನು? ಯಾವ ಗ್ರಂಥವನ್ನು ಪಾಠ ಹೇಳಿದರೇನು, ? ಪುರಾಣ ಹೇಳಿದರೇನು? ಯಾವುದನ್ನು ಹಾಡಿದರೇನು? ಎಂತಹಾ ಸತ್ಕರ್ಮಗಳ ಅನುಷ್ಠಾನ ಮಾಡಿದರೇನು? ಯಾವುದರಿಂದಲೂ ಪ್ರಯೋಜನವಿಲ್ಲ. ॥೧೭॥

**೩. ಭಾವದರ್ಪಣ**–ಟೀಕೆ ಇಲ್ಲ.

## ೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :

"ಏನು" ಇತಿ॥ ಅಭ್ಯಾಸಃ ತಾತ್ಪರ್ಯಾರ್ಥಃ ॥

ಪ್ರಸಕ್ತ ಪದ್ಯದಲ್ಲಿ "ಏನು"– ಎಂಬ ಪದವು ಪುನರುಕ್ತಿಯಾಗಿದೆ. ಕೇಳಿದರೇನು? ಓದಿದರೇನು?– ಎಂಬ ವಿಶಿಷ್ಟ ಪ್ರಶ್ನಾಕ್ಷೇಪಗಳ ಅರ್ಥಗಳು ಆಗಬೇಕಾಗಿತ್ತು. ಹೀಗೆ ಒಂದೇ ಪದವನ್ನು ಅನೇಕಾವರ್ತಿ ಪ್ರಯೋಗ ಮಾಡುವುದು, ವಿಷಯ ದಾರ್ಢ್ಯ ಮತ್ತು ಆದರ ತಾತ್ಪರ್ಯಗಳನ್ನು ಸೂಚಿಸುವುದು. ॥೧೭॥

## ೫. ಶ್ರೀಗುರುಹೃದಯಪ್ರಕಾಶಿಕೆ ವ್ಯಾಖ್ಯಾನ :

ಲಕ್ಷ್ಮೀಪತಿಯಾದ ಸರ್ವಾಂತರ್ಯಾಮಿದೇವರ ಜನ್ಮ ಅಂದರೆ, ರಾಮ ಕೃಷ್ಣಾದ್ಯವತಾರಗಳನ್ನು, ಕರ್ಮ ಎಂದರೆ ಆ ಅವತಾರ ಚರಿತ್ರೆಗಳನ್ನು ಸದಾ ಅನುರಾಗವೆಂಬ ಭಕ್ತಿಯಿಂದ ಸ್ಮರಿಸಿ, ತತ್ತತ್ ಸ್ಥಾನದಲ್ಲಿ ತದ್ರೂಪ ತನ್ನಾಮಕನನ್ನು ಸ್ಮರಿಸಿದವ ಅಂದರೆ, 'ಮೂಲರೂಪನು ಮನದೊಳಿಹ ಎಂಬ ಪದ್ಯದಲ್ಲಿ ಆರನೇಸಂಧಿಯಲ್ಲಿ ಹೇಳಿರುವ ತತ್ತ್ವನ್ಯಾಸದ ಮೇರೆಗೆ ಮನುಸ್ಸು, ಕಿವಿ, ಕಣ್ಣು ಮೊದಲಾದ ಹನ್ನೊಂದು ಸ್ಥಾನದಲ್ಲಿ, ನಾರಾಯಣಾದಿ ರೂಪ-ನಾಮವುಳ್ಳ ದೇವರನ್ನು ಚಿಂತಿಸದವನು ಏನು ಶಾಸ್ತ್ರ ಕೇಳಿದಾಗ್ಯೂ, ಯಾವ ದೇವರ ರೂಪ ಪ್ರತ್ಯಕ್ಷ ನೋಡಿದಾಗ್ಯೂ, ಯಾವ ವೇದಾದಿಗಳನ್ನು ಓದಿದಾಗ್ಯೂ, ಯಾವ ಪುರಾಣಾದಿಗಳನ್ನು ಹೇಳಿದಾಗ್ಯೂ, ಯಾವ ಸಾಮಗಾನಾದಿಗಳನ್ನು ಮಾಡಿದಾಗ್ಯೂ, ಯಾವ ಸತ್ಕರ್ಮ ಮಾಡಿದರೂ ಸದಾ ಸತ್ಫಲ ಏನೂ ಇಲ್ಲವೆಂದರ್ಥ ।೧೭॥

# ಸರ್ವವ್ಯಾಖ್ಯಾನಸಾರಸಂಗ್ರಹ

ಶ್ರೀಹರಿಯ ಸಂಸ್ಮರಣಾವೈಶಿಷ್ಟ್ಯವನ್ನು ದಾರ್ಢ್ಯಕ್ಕಾಗಿ ತಿಳಿಸುತ್ತಾರೆ ಪ್ರಸಕ್ತ ಪದ್ಯದಿಂದ.

೧. ಶ್ರೀಲಕ್ಷ್ಮೀದೇವಿಯು ಶ್ರೀಮನ್ನಾರಾಯಣನ ವಕ್ಷೋಸ್ಥಳ ನಿವಾಸಿನಿಯು. ಲಕ್ಷ್ಮೀರಮಣನಾದ ಶ್ರೀಹರಿಯು ಇಂದಿರೆಗೆ ಆಶ್ರಯಪ್ರದನಾಗಿ

ಶ್ರೀವತ್ಸವೆಂಬ ಲಾಂಛನದಿಂದ ಯುಕ್ತನಾಗಿರುವುದರಿಂದ, **ಶ್ರೀನಿವಾಸ**ನೆಂದು ಹೆಸರು. ಶ್ರೀ ಎಂದರೆ ಪರಮಮಂಗಳಪ್ರದವಾದ ಲಕ್ಷ್ಮಿಯು. ಅವಳು ಯಾರಲ್ಲಿವಾಸಿಸುತ್ತಾಳೆ (ಆಶ್ರಯಹೊಂದಿರುವಳೊ) ಅಂತಹ ಶ್ರೀಹರಿಯೇ ಶ್ರೀನಿವಾಸನಾಮಕನು.

೨. ಶ್ರೀನಿವಾಸನಾಮಕನಾದ ಶ್ರೀಪರಮಾತ್ಮನು ಧರ್ಮಸಂರಕ್ಷಣೆಗಾಗಿ ದುಷ್ಟಶಿಕ್ಷಣ, ಶಿಷ್ಟ ಪರಿಪಾಲನೆಗಾಗಿ, ತನ್ನ ಇಚ್ಛೆಯಿಂದ ಕಾಲಕಾಲಕ್ಕೆ ಅವತರಿಸುವನು. ಇಂತಹ ಅವತಾರಗಳೇ ಅವನಿಗೆ **ಜನ್ಮ**ವೆಂದೆನಿಸುವುವು. ಜನನ ಮರಣ ವಿದೂರನಾದ ಶ್ರೀಪರಮಾತ್ಮನು ನಿತ್ಯನು, ಶಾಶ್ವತನು, ನಿರ್ವಿಕಾರನು, ಶಶ್ವದೇಕಪ್ರಕಾರನು. ಜನ್ಮ ಎಂದರೆ, ಅವತಾರರೂಪವಾದ ಅವನ ಪ್ರಾದುರ್ಭಾವವು.

೩. ಶ್ರೀಹರಿಯು ಸರ್ವತಂತ್ರಸ್ವತಂತ್ರನು. ಲೀಲಾಮಾತ್ರದಿಂದ, ನಿರಾಯಾಸವಾಗಿ ಸೃಷ್ಟ್ಯಾದಿ ಕಾರ್ಯಗಳನ್ನು ಮಾಡುವನು. ಆ ವಿಠ್ಠಲನ ಸೃಷ್ಟ್ಯಾದಿ ಅಷ್ಟಕರ್ತೃತ್ವ ಶಕ್ತಿ, ಸರ್ವತ್ರಬಿಂಬಕ್ರಿಯಾದಿಗಳು ಇವುಗಳಿಗೆ **ಕರ್ಮ**ವೆನ್ನುವರು. ಕರ್ಮವೆಂದರೆ, ಭಗವದ್ವ್ಯಾಪಾರ ವಿಶೇಷಗಳು.

೪. ಅಂತಹ ಶ್ರೀನಿವಾಸನ ಜನ್ಮಕರ್ಮಗಳನ್ನು ಮಹಾತ್ಮ್ಯಜ್ಞಾನ ಪೂರ್ವಕವಾಗಿ ಅರಿತು, ಅವನ ಪಾದಾರವಿಂದಗಳಲ್ಲಿ ಅವಿಚ್ಛಿನ್ನವಾಗಿ ಮಾಡುವ ಭಕ್ತಿಯೇ **ಸಾನುರಾಗವು.**

೫. ಅಂತಹ ನಿರತಿಶಯವಾದ ಪ್ರೇಮಪ್ರವಾಹರೂಪವಾದ ಅನುರಾಗ ದಿಂದ ಆ ಮಹಿಮನ ರೂಪ, ಗುಣ, ಕ್ರಿಯೆಗಳನ್ನು ಸದಾ ನೆನೆಯುತ್ತಾ ನಿರಂತರದಲ್ಲಿಯೂ ಭಗವದ್ಧ್ಯಾನದಲ್ಲಿ ಇರತಕ್ಕವರೇ ಅಂತರಂಗಭಕ್ತರು.

೬. ಸರ್ವಸ್ಥಳಗಳಲ್ಲಿ, ಸರ್ವಕಾಲಗಳಲ್ಲಿ, ಸರ್ವಾವಸ್ಥೆಗಳಲ್ಲಿ, ಸರ್ವ ಜಡ ಜಂಗಮ ವಸ್ತುಗಳಲ್ಲಿ ಶ್ರೀಪರಮಾತ್ಮನು ತದಾಕಾರನಾಗಿ, ತತ್ತದ್ರೂಪ ಗಳಿಂದ ವ್ಯಾಪ್ತನಾಗಿದ್ದಾನೆ. ಆಯಾಯ ವಸ್ತುಗಳ ಹೆಸರುಗಳಿಂದಲೇ ಕರೆಯಿಸಿ ಕೊಳ್ಳುತ್ತಾ, ತದ್ವಾಚ್ಯನಾಗಿ, **ತನ್ನಾಮಕ**ನಾಗಿದ್ದಾನೆ, ಪ್ರತಿಶಬ್ದ, ವರ್ಣ,

ಸ್ವರವೂ ಶ್ರೀಪರಮಾತ್ಮನನ್ನೇ ಪರಮ ಮುಖ್ಯವೃತ್ತಿಯಿಂದ ಪ್ರತಿಪಾದಿಸು ವುವು. ಸಕಲನಾಮಗಳಿಂದಲೂ ಅವನೇ ವಾಚ್ಯನು.

೭. ಇಂತು, ಶ್ರೀನಿವಾಸನ ರೂಪ, ಗುಣಗಳು, ಕ್ರಿಯಾವಿಶೇಷಗಳನ್ನು ಪ್ರತಿಯೊಂದರಲ್ಲಿಯೂ ಅವನು ತದ್ರೂಪ, ತದಾಕಾರ, ತನ್ನಾಮ ತದ್ವಾಚಕ ನಾಗಿದ್ದು ತದ್ಭಿನ್ನನಾಗಿದ್ದಾನೆ ಎಂದು ತಿಳಿಯದೇ, ಸಕಲಶಾಸ್ತ್ರಗಳನ್ನು ಶ್ರವಣ ಮಾಡುವುದರಿಂದ ಫಲವೇನೂ ಬರುವುದಿಲ್ಲ. ಕ್ಷೇತ್ರಯಾತ್ರೆಗೆ ಹೋದಾಗ, ಅಲ್ಲಲ್ಲಿ ಕ್ಷೇತ್ರಮೂರ್ತಿಗಳ ಸಂದರ್ಶನ, ಶಾಸ್ತ್ರಾವಲೋಕನ ಇತ್ಯಾದಿ **ನೋಡು ವುದು** ಎಂದೆನಿಸುವುವು. ಹಾಗೆ ನೋಡಿದರೇನು ಫಲ? ಶಾಸ್ತ್ರಗಳನ್ನು ಶಾಂತಿ ಹಾಕಿ ಗುರುದ್ವಾರಾ ತಿಳಿದುಅಧ್ಯಯನ ಮಾಡಿದರೂ ಫಲವೇನೂ ಇಲ್ಲವು. ಪಾಠ ಪ್ರವಚನಾದಿಗಳು, ತತ್ತ್ವೋಪದೇಶ ಇತ್ಯಾದಿ ಕರ್ಮಗಳನ್ನು **ಪೇಳಿದರೇನು** ಎಂದು ತಿಳಿಸುತ್ತಾರೆ.ಇದೂ ಸಹ ನಿಷ್ಫಲ. ದೈಹಿಕ, ಮಾನಸಿಕ, ಬೌದ್ಧಿಕ ವಾಚನಿಕ ಕ್ರಿಯೆಗಳನ್ನು **ಮಾಡಿದರೇನು** ಎಂದಿದ್ದಾರೆ. ಗಾಯನ ರೂಪದಿಂದ, ಸುಶ್ರಾವ್ಯವಾಗಿ ಹಾಡುವಿಕೆಯು **ಪಾಡಿದರೇನು** ಎಂದೆನಿಸುವುದು. ಹೀಗೆ ಪೂರ್ವೋಕ್ತ ಶ್ರೀಹರಿಯಸಂಸ್ಮರಣೆಯಿಲ್ಲದವನು, ಮಾಡುವ ಶಾಸ್ತ್ರಶ್ರವಣ, ಪಠಣ, ಅವಲೋಕನ, ಅಧ್ಯಯನ, ಅಧ್ಯಾಪನ, ಗಾಯನ, ಮುಂತಾದ ಸತ್ಕರ್ಮಗಳನ್ನು **ದಿನದಿನದಿ** ಅಂದರೆ, ನಿರಂತರದಲ್ಲಿಯೂ ಮಾಡುತ್ತಿದ್ದರೂ ಸಹ ಅವುಗಳು ವ್ಯರ್ಥವೇ ಸರಿ, ಫಲಪ್ರದವಾಗುವುದಿಲ್ಲ ಎಂಬುದೇ ಪ್ರಸಕ್ತ ಪದ್ಯದ ತಾತ್ಪರ್ಯವು. ॥೧೭॥

## ಪದ್ಯ ೧೮

**ಮೂಲ :**

**ಬುದ್ಧಿವಿದ್ಯಾಬಲದಿ ಪೇಳಿದ ।**
**ಶುದ್ಧಕಾವ್ಯವಿದಲ್ಲ ತತ್ತ್ವಸು**
**ಪದ್ಧತಿಗಳನು ತಿಳಿದ ಮಾನವನಲ್ಲ ಬುಧರಿಂದ ॥**
**ಮಧ್ವವಲ್ಲಭ ತಾನೆ ಹೃದಯದೊ ।**
**ಳಿದ್ದು ನುಡಿದಂದದಲಿ ನುಡಿದೆನ ।**
**ಪದ್ಧಗಳ ನೋಡದೆಲೆ ಕಿವಿಗೊಟ್ಟಾಲಿಪುದು ಬುಧರು ॥ ॥೧೮॥**

**ಅವತರಣಿಕೆ :**

ಪಂಡಿತೋತ್ತಮರೂ, ಅಪರೋಕ್ಷೀಕೃತಶ್ರೀಶರೂ ಆದ ಶ್ರೀಜಗನ್ನಾಥದಾಸ ವರೇಣ್ಯರು ಸ್ವಾಹಂಕಾರ ಖಂಡನಪೂರ್ವಕವಾಗಿ, ಬಿಂಬನಾದ ಗರುಡವಾಹನ ಶ್ರೀಲಕ್ಷ್ಮೀನರಸಿಂಹನೇ ತಮ್ಮ ಅಧಿಷ್ಠಾನದಲ್ಲಿ ನಿಂತು, ಪ್ರೇರಿಸಿ, ನುಡಿಸಿ, ರಚಿಸಿದ ಗ್ರಂಥದ ವಿಚಾರವಾಗಿ ತಿಳಿಸುತ್ತಾರೆ- **ಬುದ್ಧಿ ವಿದ್ಯಾ ಬಲದಿ** ಎಂಬ ಪ್ರಸಕ್ತ ಸಂಧಿಗತ ೧೮ನೆಯ ಈ ಪದ್ಯದಿಂದ. ॥೧೮॥

**ಪ್ರತಿಪದಾರ್ಥ :**

**ಬುದ್ಧಿ**=ಸ್ವಬುದ್ಧಿ ಸಾಮರ್ಥ್ಯದಿಂದ ವಿವೇಚನಾಬಲದಿಂದಾಗಲೀ, **ವಿದ್ಯಾ ಬಲದಿ**=ಪಾಂಡಿತ್ಯದ ಬಲದಿಂದಲಾಗಲೀ, **ಪೇಳಿದ**=ರಚಿಸಿದಂಥಾ, **ಶುದ್ಧ ಕಾವ್ಯವಿದಲ್ಲ**=ನಿರ್ಮಲನೂ,ಅನಂತಕಲ್ಯಾಣಗುಣಗಣ ಪರಿಪೂರ್ಣನಾದ ಶ್ರೀ ಪರಮಾತ್ಮನ ಮಹಾತ್ಮ್ಯೆಯನ್ನು ತಿಳಿಸತಕ್ಕ ಗ್ರಂಥವೇ ಹೊರತು ಯಾವ ವಿಧ ವಾದ ಗ್ರಂಥಸ್ಥ ದೋಷವೂ ಇಲ್ಲದಿರುವ ಕಾವ್ಯ ಗ್ರಂಥವಿದಲ್ಲ, **ಬುಧರಿಂದ**= ಭಗವದ್ಭಕ್ತರಾದ ಉತ್ತಮ ಜ್ಞಾನಿಗಳಿಂದ, **ತತ್ತ್ವಸುಪದ್ಧತಿಗಳನು**=ಭಗವ ತ್ಸಂಬಂಧವಾದ ಪ್ರಮೇಯರೂಪವಾದ ತತ್ತ್ವಜ್ಞಾನ ಮತ್ತು ಉತ್ತಮ ಪದ್ಧತಿ ಗಳನ್ನು (ಗ್ರಂಥರಚನಾ ಪದ್ಧತಿ) **ತಿಳಿದ ಮಾನವನಲ್ಲ**=ಅರಿತಿರುವ ಮಾನವ ನಾನಲ್ಲ, **ಮಧ್ವವಲ್ಲಭ**=ಶ್ರೀಮದಾನಂದತೀರ್ಥಭಗವತ್ಪಾದಗುರುವಂತರ್ಗತ ಶ್ರೀಪರಮಾತ್ಮನೇ, **ತಾನೆ ಹೃದಯದೊಳಿದ್ದು**=ಬಿಂಬರೂಪಿಯಾದ ಆ ಶ್ರೀಹರಿಯೇ ನನ್ನ ಹೃದಯಾಕಾಶದಲ್ಲಿ ಪ್ರತ್ಯಕ್ಷನಾಗಿದ್ದು, **ನುಡಿದಂದಲಿ**= ಬಿಂಬಕ್ರಿಯಾದ್ವಾರಾ ಏನನ್ನು ನುಡಿಸಿದ್ದಾನೆಯೋ, **ನುಡಿದೆನು**=ಅದರಂತೆ ಹೇಳಿರುತ್ತೇನೆ, **ಅಪದ್ಧಗಳ**=ದೋಷಗ್ರಸ್ತವಾದ, ಶಾಸ್ತ್ರಮರ್ಯಾದಾ ಮೀರಿದ, ವಾಚಾಪ್ರಮಾದಗಳನ್ನು **ನೋಡದಲೆ**=ಗಣನೆಗೆ ತಾರದೆ, **ಬುಧರು**=ಜ್ಞಾನಿಗಳಾದವರು, **ಕಿವಿಗೊಟ್ಟಾಲಿಪುದು**=ಗಮನವಿಟ್ಟು ಆಸಕ್ತ ರಾಗಿ ಕೇಳಬೇಕೆಂದು ಪ್ರಾರ್ಥನಾ ಮಾಡಿದ್ದಾರೆ ॥೧೮॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :

ಈ ಗ್ರಂಥಕರ್ತೃಗಳಾದ ಶ್ರೀಜಗನ್ನಾಥದಾಸರಾಯರು ಇದುವರೆಗೆ ಭಗವತ್ತತ್ತ್ವ ವಿಚಾರಹೇಳಿ, ಈಗ ತಾವು ಈ ಗ್ರಂಥವನ್ನು ಮಾಡಿದ ಕ್ರಮ ವನ್ನು ಹೇಳತಾರೆ.

ಈ ಕಾವ್ಯವೆಂಬುದರನ್ನ ಸ್ವಬುದ್ಧಿಯಿಂದ ಆಲೋಚನೆ ಮಾಡಿ ಆಗಲಿ, ಪಾಂಡಿತ್ಯಬಲದಿಂದಾಗಲಿ, ನಿರ್ಮಲನಾದ ಶ್ರೀಪರಮಾತ್ಮನ ಮಹಾತ್ಮೆ ಹೇಳಿ ದಂಥಾ ಈ ಗ್ರಂಥ ಇದಲ್ಲ ಎಂತ ಅರ್ಥ. ಇನ್ನೂ ನಾನು ಭಗವದ್ಭಕ್ತರಾದ ಜ್ಞಾನಿ ಗಳಿಂದ ಭಗವತ್ಸಂಬಂಧವಾದ ತತ್ತ್ವಗಳೇನು, ಉತ್ತಮವಾದ ಪದ್ಧತಿಗಳೇನು ತಿಳಿದುಕೊಂಡವನೂ ಅಲ್ಲ. ಅಥವಾ ತಿಳಿದುಕೊಂಡು ಅದರಂತೆ ಮಾಡಿದವನೂ ಅಲ್ಲ. ಆದರೆ ಮಾಡಿದ್ದು ಹ್ಯಾಂಗೆಂದರೆ, ಶ್ರೀಮದಾನಂದತೀರ್ಥಗುರ್ವಂತರ್ಗತ ಶ್ರೀವೇದವ್ಯಾಸದೇವರು ತನಗೆ ತಾನಾಗಿ ಹೃದಯಾಕಾಶದಲ್ಲಿ ಪ್ರತ್ಯಕ್ಷನಾಗಿದ್ದು, ಬಿಂಬಕ್ರಿಯಾದ್ವಾರಾ ನುಡಿದೋಪಾದಿಯಲ್ಲಿ ಪ್ರತಿಬಿಂಬನಾದ ನಾನು ನುಡಿದಿ ದ್ದೇನೆ. ಆದಕಡಿಯಿಂದ ಇದರಲ್ಲಿ ಏನಾದರೂ ವಾಚಾಪ್ರಮಾದ ಸಂಗತಿಗಳು ಇದ್ದರೆ, ಅದರನ್ನ ಶಾಸ್ತ್ರಾವರೂಢ ಮಾಡಿಕೊಂಡು ಜ್ಞಾನಿಗಳಾದವರು ಈ ಗ್ರಂಥ ಕೇಳೋದರಲ್ಲಿ ಕಿವಿಗೊಟ್ಟು ಕೇಳೋವರಾಗಬೇಕು ಅಂತ ಅರ್ಥ. **'ಸಂಕ್ಷಿಪ್ಸುವಾಕ್ಯೇ ಮಯಿಮಂದಬುದ್ಧೌ ಸಂತೋ ಗುಣಾಢ್ಯಾಃ ಕರುಣಾಂ ಕ್ರಿಯಾಸುಃ** ಎಂಬ **ಶ್ರೀಪಂಡಿತಾಚಾರ್ಯರ** ವಾಕ್ಯದಂತೆ ಪ್ರಾರ್ಥನಾ ಮಾಡಿ ದ್ದಾರೆ ಎಂತ ತಾತ್ಪರ್ಯ ||೧೮||

## ೨. ಭಾವಪ್ರಕಾಶಿಕೆ :

ದಾಸರಾಯರು ಕೇವಲ ತಮ್ಮ ಹರಿದಾಸತ್ವವನ್ನು ಪ್ರಕಟಿಸುತ್ತಾರೆ. ನಾನು ಗ್ರಂಥವನ್ನೇನೋ ಹೇಳಿರುವೆನು. ಆದರೆ ನಾನು ಬುದ್ಧಿವಂತನೆಂದಾ ಗಲೀ, ವಿದ್ಯಾವಂತನೆಂದಾಗಲೀ ತಿಳಿದುಕೊಂಡು ಇದನ್ನು ರಚಿಸಲಿಲ್ಲ. ಇದನ್ನು

ಕಾವ್ಯಲಕ್ಷಣದಿಂದ ಕೂಡಿದ ಶುದ್ಧ ಕಾವ್ಯವೆಂದು ನಾನು ಹೇಳುವುದಿಲ್ಲ. ಜ್ಞಾನಿಗಳಿಂದ ಸಿದ್ಧಾಂತ ಪದ್ಧತಿಯನ್ನು ಚೆನ್ನಾಗಿ ತಿಳಿದವನೂ ನಾನು ಅಲ್ಲ. ಆದರೂ ಶ್ರೀಮಧ್ವೇಶನು ತಾನೇ ನನ್ನೊಳಗೆ ಇದ್ದು ನುಡಿಸಿದಂತೆ ಹೇಳಿರುವೆನು. ಆದ್ದರಿಂದಲೇ ಸಾಧುಗಳು ಇದನ್ನು ಕಿವಿಗೊಟ್ಟು ಕೇಳಬೇಕೆಂದು ಬೇಡುವೆನು– ಎಂದು ದಾಸರಾಯರು ಈ ಪದ್ಯದಿಂದ ಹೇಳಿಕೊಂಡಿರುವರು. ಆದರೆ ನಿಜವಾಗಿ ದಾಸರಾಯರು ದೊಡ್ಡ ಪಂಡಿತರೆಂತಲೂ, ಸುಧಾದಿಗ್ರಂಥ ಪ್ರವಚನ ಮಾಡುತ್ತಾ ಇದ್ದರೆಂದು ಅವರ ಚರಿತ್ರೆಯಿಂದ ಸಕಲರಿಗೂ ತಿಳಿದ ವಿಷಯವೇ ಹಾಗಿದ್ದರೂ ನಾನು ವಿದ್ಯಾವಂತನಲ್ಲ. ಬುದ್ಧಿವಂತನಲ್ಲವೆಂದು ಹೇಗೆ ಹೇಳಿಕೊಂಡರೆಂದರೆ– **"ವಿದ್ಯಾವಾನ್ ಬುದ್ಧಿಮಾನ್"** –ವಿದ್ಯಾವಂತ, ಬುದ್ಧಿವಂತ ಎಂಬ ಹೆಸರು ಅಂತರ್ಯಾಮಿ ಪರಮಾತ್ಮನದೇ ಹೊರತು ನನ್ನದಲ್ಲವೆಂದು ತೋರಿಸುವುದಕ್ಕಾಗಿಯೂ, ಈ ಸಂಧಿಯಲ್ಲಿ ಮೇಲೆ ಹೇಳಿರುವಂತೆ ನಾನು ನನ್ನದು ಎಂಬುವನು ಏನು ಮಾಡಿದರೂ ನಿಷ್ಫಲವೆಂದು ತಾವು ಅನುಷ್ಠಾನಕ್ಕೆ ತಂದಿರುವುದನ್ನು ಸ್ಪಷ್ಟಮಾಡುವುದಕ್ಕಾಗಿಯೂ, ಈ ಪದ್ಯದಲ್ಲಿ ಹೀಗೆ ಹೇಳಿರುವರು. ಆದ್ದರಿಂದ ಈ ಪದ್ಯದ ಅರ್ಥವನ್ನು ಮಾಡುವ ಬಗೆ ಹೇಗೆಂದರೆ–ಬುದ್ಧಿ ವಿದ್ಯಾಬಲದಿಂದ ಪೇಳಿದ ಶುದ್ಧ ಕಾವ್ಯವಿಲ್ಲವೆಂದರೆ, ನಾನೇ ವಿದ್ಯಾವಂತ, ನಾನೇ ಬುದ್ಧಿವಂತನೆಂಬ ಅಹಂಕಾರದಿಂದ ಮಾಡಿದ ಅಶುದ್ಧವಾದ ಕಾವ್ಯವು ಇದಲ್ಲ. ಪರಮಾತ್ಮನೇ ನನ್ನೊಳಗೆ ಇದ್ದು, ವಿದ್ಯಾ ಬುದ್ಧಿ ಬಲದಿಂದ ಕೂಡಿ ಮಾಡಿಸಿದ ಶುದ್ಧವಾದ ಕಾವ್ಯವಿದು ಎಂದು ತಾತ್ಪರ್ಯ. ಯದ್ಯಪಿ ದಾಸರಾಯರು ಶ್ರೀರಾಘವೇಂದ್ರಸ್ವಾಮಿಗಳವರ ಪೀಳಿಗೆಗೆ ಸೇರಿದ ಶ್ರೀವರದೇಂದ್ರಸ್ವಾಮಿಗಳಲ್ಲಿ ವ್ಯಾಕರಣ ಶಾಸ್ತ್ರಗಳನ್ನು, ವೇದಾಂತ ಗ್ರಂಥಗಳನ್ನು ವ್ಯಾಸಂಗ ಮಾಡಿ, ಈ ಎರಡು ಶಾಸ್ತ್ರಗಳನ್ನು ತಮ್ಮ ಶಿಷ್ಯರಿಗೆ ಪಾಠ ಹೇಳುತ್ತಿದ್ದರೆಂದು ಪ್ರಸಿದ್ಧಿಯಾಗಿರುವುದು. ಜ್ಞಾನಿಗಳಿಂದ ತತ್ತ್ವಪದ್ಧತಿಗಳನ್ನು ತಾವು ತಿಳಿದವರಲ್ಲವೆಂದು ಹೇಳಿಕೋಡಿರುವರು. ಈ ವಾಕ್ಯಕ್ಕೂ, ಜ್ಞಾನಿಗಳಲ್ಲಿದ್ದು ಉಪದೇಶ ಮಾಡಿದವನೂ, ನನ್ನಲ್ಲಿದ್ದು ಓದಿ, ಓದಿಸಿ, ತಾನು ಪಂಡಿತನೆಂಬ ಹೆಸರನ್ನು ವಹಿಸಿ, ನನ್ನೊಳಗಿದ್ದು ಪಂಡಿತನೆಂಬ ಹೆಸರನ್ನು ನನಗೆ ಕೊಡಿಸಿದವನು ಪರಮಾತ್ಮನೇ ಎಂಬ ಭಾವನೆಯಿಂದ ನಾನು ತಿಳಿದವನಲ್ಲವೆಂದು ಹೇಳಿಕೊಂಡಿರುವರು. ॥ ೧೮ ॥

## ೩. ಭಾವದರ್ಪಣಟೀಕಾ :

ಸ್ವಾಹಂಕಾರಖಂಡನಾರ್ಥ ಹೇಳುತ್ತಾರೆ–ಬುದ್ಧೀತಿ ॥ ೧೮ ॥

## ೪. ಶ್ರೀ ವ್ಯಾಸದಾಸಸಿದ್ಧಾಂತಕೌಮುದೀ (ಸಂಸ್ಕೃತಮೂಲ)

"ಯದಾ ವಕ್ತಿ ಚ ದೇವೇಶಃ ತದಾ ವಕ್ತಿ ಚ ಚೇತನಃ" ॥ "ಬಿಂಬ ಪೂರ್ವಾಃ ಕ್ರಿಯಾಃ ಸರ್ವಾಃ ಪ್ರತಿಬಿಂಬಸ್ಯ" ॥ ಇತ್ಯಾದ್ಯಭಿಪ್ರೇತ ಬಿಂಬ ಕ್ರಿಯಾಂ ಬ್ರುವನ್ ಏವಂ ಪ್ರಾಕ್ತನ ಪ್ರಮೇಯಾನುವಾದಾಗತಾತ್ಮ ಮಹಿತ್ವಂ ವಿನಯೇನ ಭೂಷಯಃ ಯಾತಿ– "ಮಧ್ವ" ಇತಿ ॥ "ಅಸ್ಮೃತ್ವಾ ಪ್ರಥಮಂ ಮಧ್ವಂ ಯಃ ವಿಷ್ಣುಂ ಸ್ಮರತೇಽಬುಧಃ ॥ ಕಂಠೇ ತಸ್ಯ ಶಿಲಾಂ ಬಧ್ವಾ"– ಇತಿ ವಚನಾತ್ ॥ ೧೮ ॥

## ಕನ್ನಡಾರ್ಥ :

"ವಿದ್ಯಾ ಬುದ್ಧಿ ಬಲದಿಂದಲಾಗಲೀ, ನಾನೇ ಪಂಡಿತನೆಂಬ ಅಹಂಕಾರ ದಿಂದಾಗಲೀ ಈ ಗ್ರಂಥ ರಚಿತವಾಗಿಲ್ಲ. ಜ್ಞಾನಿಗಳಿಂದ ತಿಳಿದ ಮಾನವನೂ ಅಲ್ಲ."–ಎಂದು "ಮಧ್ವವಲ್ಲಭನು ಹೃದಯದೊಳಿದ್ದು ನುಡಿಸಿದಂದಲಿ ನುಡಿದೆ"–ಎಂದು ಶ್ರೀಪತಿಯನ್ನು ಮಧ್ವವಲ್ಲಭನೆಂದು ಸ್ತುತಿಸುತ್ತಾರೆ. ಹರಿಯು ದೇವೇಶನು. ಆ ಬಿಂಬನು ಯಾವಾಗ ನುಡಿಸುತ್ತಾನೆಯೋ, ಆಗ ಭಗವದಧೀನರಾದ ಪ್ರತಿಬಿಂಬರಾದ ಜೀವರು ನುಡಿಯುತ್ತಾರೆ. ಮೊದಲು ಬಿಂಬನ ವ್ಯಾಪಾರ. ಅನಂತರ ಅದನ್ನು ಅನುಸರಿಸಿ ಪ್ರತಿಬಿಂಬರ ವ್ಯಾಪಾರ ಗಳು ನಡೆಯುವುವು. ಬಿಂಬಕ್ರಿಯಾರೂಪವಾದ ವ್ಯಾಪಾರವನ್ನು ಪ್ರಸಕ್ತ ಪದ್ಯದಲ್ಲಿ ನಿರೂಪಿಸಿರುತ್ತಾರೆ. ಈ ಗ್ರಂಥದಲ್ಲಿ ಉಕ್ತವಾಗಿರುವ ವಿಷಯ ಗಳೆಲ್ಲವೂ ನನ್ನ ಪಾಂಡಿತ್ಯದಿಂದಾಗಲೀ, ವಿದ್ಯಾಬುದ್ಧಿ ಸಾಮರ್ಥ್ಯದಿಂದಾಗಲೀ ನಿರೂಪಿತವಲ್ಲ. ಕೇವಲ ಭಗವತ್ಪ್ರೇರಣೆಯಿಂದ ಉಕ್ತವಾಗಿವೆ–ಎಂದು ತಮ್ಮ ವಿನಯವನ್ನು ತೋರಿಸಿಕೊಂಡಿದ್ದಾರೆ. "ಮೊದಲು ಗುರುಮಧ್ವರಾಯರ ಸ್ಮರಣೆ. ತದನಂತರ ವಿಷ್ಣು ಸ್ಮರಣೆ. ಮಧ್ವರನ್ನು ಸ್ಮರಿಸದೆ ವಿಷ್ಣುವನ್ನು ಮಾತ್ರ ಸ್ಮರಿಸುವವರನ್ನು ಕುತ್ತಿಗೆಗೆ ಕಲ್ಲುಕಟ್ಟಿ ಸಮುದ್ರದಲ್ಲಿ ಹಾಕಬೇಕು"– ಎಂದು ಹೇಳಿರುವುದರಿಂದ, ತಮ್ಮ ಬಿಂಬವನ್ನು ಸ್ಮರಿಸುವಾಗ, "ಮಧ್ವ ವಲ್ಲಭ"–ಎಂದು ಗುರುಸ್ಮರಣೆಯನ್ನು ಮಾಡಿರುವರು. ॥ ೧೮ ॥

೫. **ಶ್ರೀ ಗುರುಹೃದಯಪ್ರಕಾಶಿಕೆ :**

ಅಹಂಕಾರದಿಂದ ತಿಳಿದವ ನಾನೆಂದು ಈ ಮಾತು ಹೇಳುವುದಿಲ್ಲ. ಇದ್ದದನ್ನು ವಿಜ್ಞಾಪಿಸುವೆನೆಂದು ಸಜ್ಜನರನ್ನ ಪ್ರಾರ್ಥಿಸುತ್ತಾರೆ, ಬುದ್ಧಿ ವಿದ್ಯಾ ಎಂದು. ಬುದ್ಧಿಯ ಚಾತುರ್ಯಬಲದಿಂದಲೂ, ವೇದಶಾಸ್ತ್ರ ತಿಳಿದ ಚಾತುರ್ಯಬಲದಿಂದಲೂ ಹೇಳಿದ ಇತರ ಕಾವ್ಯಗಳಂತೆ ಇದು ಮಹಾಶುದ್ಧ ಕಾವ್ಯವಲ್ಲ. ಬುಧರೆಂಬ ಜ್ಞಾನಿಗಳಿಂದ ತತ್ತ್ವಪದ್ಧತಿ ಎಂಬ ಪರಮಾತ್ಮಾದಿ ವಸ್ತುವಿಚಾರಮಾರ್ಗವೆಂಬ ವೇದಾಂತಭಾಗಗಳನ್ನು ವಿಶೇಷವಾಗಿ ಓದಿ ಕೇಳಿದವನು ನಾನಲ್ಲ. ಮಧ್ವಾಚಾರ್ಯರೆಂಬ ಸ್ವಾಮಿಗಳಿಗೆ ಅತಿಪ್ರಿಯನಾದ ದೇವರು ನನ್ನ ಬಾಯಲ್ಲಿದ್ದು, ಪೇಳಿ ಹೇಳಿಸಿದಂತೆ ಹೇಳಿದ್ದೇನೆ. ಅಬದ್ಧಗಳ ನೋಡದಲೆ ಅಂದರೆ ವ್ಯಾಕರಣವಿರುದ್ಧ ಅಸಂಗತಪದಗಳಿದ್ದಾಗ್ಯೂ ಮನಸ್ಸಿಗೆ ತಾರದೇ, ಸಚ್ಛಾಸ್ತ್ರಕ್ಕೆ ಅನುಕೂಲವಾಗಿರುವ ಅಭಿಪ್ರಾಯಗಳನ್ನೇ ಕಿವಿಗೊಟ್ಟು ಸಜ್ಜನರು ಕೇಳಬೇಕು. ಅಥವಾ ಅಬದ್ಧ ಇದರಲ್ಲೇನಾದರೂ ತೆಗೆಯಬೇಕೆಂಬ ಆಗ್ರಹ ಬಿಟ್ಟು, ಶಾಸ್ತ್ರತಾತ್ಪರ್ಯದಲ್ಲೇ ದೃಷ್ಟಿ ಇಡಬೇಕೆಂದರ್ಥ. ॥೧೮॥

# ಸರ್ವವ್ಯಾಖ್ಯಾನಸಾರಸಂಗ್ರಹ

ಸ್ವಾಹಂಕಾರಖಂಡನಾರ್ಥವಾಗಿ, ಅತ್ಯಂತ ವಿನಯಪೂರ್ವಕವಾಗಿ, ತಮ್ಮ ನೈಚ್ಯಾನುಸಂಧಾನಭಾವವನ್ನು ಪ್ರದರ್ಶಿಸುತ್ತಾರೆ, **ಬುದ್ಧಿ ವಿದ್ಯಾ ಬಲದಿ**–ಎಂಬ ಪ್ರಸಕ್ತ ಪದ್ಯದಿಂದ ಪಂಡಿತೋತ್ತಮರಾದ ದಾಸವರ್ಯರು.

೧. ಸ್ವಬುದ್ಧಿ ಸಾಮರ್ಥ್ಯದಿಂದಾಗಲೀ, ಪಾಂಡಿತ್ಯದ ಬಲದಿಂದಾಗಲೀ ರಚಿಸಿದ ಕಾವ್ಯರೂಪವಾದ ಗ್ರಂಥವಿದಲ್ಲ. ಸ್ವಬುದ್ಧಿ ಬಿಂಬರೂಪಿಯಾದ ಶ್ರೀಹರಿಯಿಂದಲೇ ಪ್ರೇರಿತವಾಗಿದೆ. ವಿದ್ಯಾಬಲವೂ ಅವನ ಅನುಗ್ರಹ ವಿಶೇಷವೇ. ಬಿಂಬನಾದ ಶ್ರೀಶನು ಸರ್ವತಂತ್ರಸ್ವತಂತ್ರನು. ಸಕಲ ಜೀವರೂ ಆತನಿಗೆ ಪ್ರತಿಬಿಂಬ ಸದೃಶರು. "ಬಿಂಬ ಚಲಿಸಿದರೆ ಪ್ರತಿಬಿಂಬ ಚಲಿಸುವುದು"–ಎಂಬ **ಬಿಂಬ ಪ್ರತಿಬಿಂಬ ನ್ಯಾಯದಿಂದ.** ನಾನು ಸ್ವತಂತ್ರನಲ್ಲ. ನನ್ನ ಕರ್ತೃತ್ವಶಕ್ತಿ ಭಗವದಧೀನವಾಗಿದೆ. ಅವನ ಪ್ರೇರಣೆಯೇ ಈ ಕಾವ್ಯ ರಚನೆಯ ಫಲ." ನನ್ನಲ್ಲಿ ಬುದ್ಧಿ, ವಿದ್ಯಾ, ಬಲವನ್ನು ಅನುಗ್ರಹಿಸಿರುವವನು

ಬಿಂಬರೂಪಿಯಾದ ಶ್ರೀಹರಿಯೇ, ಸರ್ವವ್ಯಾಪಾರವೂ ಬಿಂಬಾಧೀನ"– ಎಂದು ಸ್ವಾಹಂಕಾರಖಂಡನೆ ಮಾಡಿಕೊಂಡಿರುತ್ತಾರೆ.

೨. ಕಾವ್ಯರೂಪವಾದ ಈ ಗ್ರಂಥವು ದೋಷಗಳಿಂದ ದೂರವಾಗಿಯೇನೂ ಇಲ್ಲ. ಸಕಲ ಕಾವ್ಯ ಲಕ್ಷಣಗಳಿಂದ ಕೂಡಿದ ಶುದ್ಧಕಾವ್ಯವಿದಲ್ಲ. ಶಾಸ್ತ್ರಮರ್ಯಾದಾ ಮೀರಿದ ಅನೇಕ ದೋಷಗಳಿರಬಹುದು. ಅಪದ್ಧಗಳಿರಬಹುದು.

೩. ಪ್ರಮಾಣಪ್ರಮಿತವಾದ ಪ್ರಮೇಯರಹಸ್ಯಗಳೇ ಸುತತ್ತ್ವಗಳು. ಆ ತತ್ತ್ವಗಳನ್ನರಿಯಲು ಪರಂಪರಾಗತವಾದ ಶಾಸ್ತ್ರಕ್ರಮವಿದೆ. ಇದಕ್ಕೆ **ಸುಪದ್ಧತಿ** ಎನ್ನುವರು. ಅಂತಹ ಸುಪದ್ಧತಿಗಳನ್ನು ನಾನು ಅರಿತವನಲ್ಲ. ಉತ್ತಮೋತ್ತಮರಾದ ಜ್ಞಾನಿಗಳಿಂದ ಉಪದೇಶದ್ವಾರಾ ಆ ಸುಪದ್ಧತಿಗಳನ್ನು ತಿಳಿದ ಮಾನವ ನಾನಲ್ಲ.

೪. ಆದರೆ ಸುತತ್ತ್ವಪ್ರತಿಪಾದಕರಾದ ಶ್ರೀಮಧ್ವಮುನಿಗಳ ಪ್ರಭುವಾದ ಬಿಂಬನೇ ನನ್ನಲ್ಲಿ ನಿಂತು ಪ್ರೇರಿಸಿ, ನುಡಿದು ನುಡಿಸಿರುವನು. **ಆ ಮಧ್ವವಲ್ಲಭನ** ಪ್ರೇರಣೆಯಿಂದಲೇ ಪ್ರೇರಿತವಾದದ್ದು ಈ ಕಾವ್ಯ. ಅಂತಹ ಮಧ್ವಮುನಿಮಂದಿರನು ನನ್ನ ಹೃತ್ಪದ್ಮದಲ್ಲಿದ್ದು, ಬಿಂಬಕ್ರಿಯಾದ್ವಾರಾ ನುಡಿದು ನುಡಿಸಿದಂತೆ ಹೇಳಿರುವೆನು. ಇದರಲ್ಲಿ ನನ್ನ ಕರ್ತೃತ್ವವೇನೂ ಇಲ್ಲ. ಜಗದ್ಗುರುಗಳಾದ ಶ್ರೀಮಧ್ವರ ಸ್ಮರಣೆಯಿಲ್ಲದೇ ಮಾಡಿದ ಸಕಲಕರ್ಮಗಳೂ ನಿರರ್ಥಕ.

೫. ಜ್ಞಾನಿಗಳಾದವರು, ಈ ಕಾವ್ಯದಲ್ಲಿ ಕಂಡುಬರುವ ದೋಷರೂಪವಾದ ವಾಕ್ಯಗಳನ್ನಾಗಲೀ, ಅಪದ್ಧಗಳನ್ನಾಗಲೀ ಪರಿಗಣಿಸದೆ, ಶ್ರದ್ಧೆಯಿಂದ ಶ್ರೀಹರಿಯ ನಾಮಾಮೃತವನ್ನು ಆಲಿಸಿ, ಆ ಅಮೃತವನ್ನು ಉಂಡು, ಆನಂದಿಸಬೇಕೆಂದು ವಿನಯಪೂರ್ವಕವಾಗಿ ಸಜ್ಜನರಾದ ಜ್ಞಾನಿಗಳಲ್ಲಿ ಪ್ರಾರ್ಥನೆ ಮಾಡಿಕೊಂಡಿರುತ್ತಾರೆ. ಹಿಂದಿನ ಕೆಲವು ಪದ್ಯಗಳಲ್ಲಿ ನಾನು ನನ್ನದು ಎಂಬ

ಅಹಂಮಮಕಾರಗಳ ತ್ಯಾಗ ಮಾಡಬೇಕೆಂದು ಹೇಳಿದ್ದ ತತ್ತ್ವಗಳನ್ನು ಪ್ರಸಕ್ತ ಪದ್ಯದಲ್ಲಿ ಅನುಷ್ಠಾನರೂಪದಲ್ಲಿ ಪ್ರಕಟಿಸಿರುತ್ತಾರೆ. ॥ ೧೮ ॥

## ಪದ್ಯ ೧೯

**ಮೂಲ :**

**ಕಬ್ಬಿನೊಳಗಿಹ ರಸ ವಿದಂತನಿ ।**
**ಗಬ್ಬುಬಲ್ಲದೆ ಭಾಗ್ಯ ಯೌವನ ।**
**ಮಬ್ಬಿನಲಿ ಮೈಮರೆದವಗೆ ಹರಿಸುಚರಿತಾಮೃತವು ॥**
**ಲಭ್ಯವಾಗದು ಹರಿಪದಾಬ್ಜದಿ ।**
**ಹಬ್ಬಿದತಿ ಸದ್ಭಕ್ತಿರಸ ವ್ಯಂ ।**
**ಡುಬ್ಬಿ ಕೊಬ್ಬಿ ಸುಖಾಬ್ಧಿಯೊಳಗಾಡುವವಗಲ್ಲದೆಲೆ ॥೧೯॥**

**ಅವತರಣಿಕೆ :**

ಶ್ರೀಹರಿಯ ಚರಣಾರವಿಂದಗಳಲ್ಲಿ ಆಸಕ್ತಮನಸ್ಸು ಉಳ್ಳವನು ಮಾತ್ರ ಸಮೀಚೀನವಾದ ಭಕ್ತಿರಸದಿಂದ್ಯುದ್ರಿಕ್ತನಾಗಿ, ಆನಂದ ಸಮುದ್ರದಲ್ಲಿ ಮುಳುಗಿ ಸುಖಪಡುತ್ತಾನೆಂದು, ಕಬ್ಬಿನ ಸ್ವಾದುರಸ ಹಲ್ಲಿಲ್ಲದವನಿಗೆ ಹೇಗೆ ಅನುಭವಕ್ಕೆ ಬರುವುದಿಲ್ಲವೋ, ಧನಮದದಿಂದ ಯುಕ್ತರಾಗಿ, ಪ್ರಾಯದ ಕೊಬ್ಬಿನಲ್ಲಿ ಇರುವ ವಿಷಯಲಂಪಟರಾದ**ವರಿಗೆ,** ಹರಿಕಥಾಮೃತವು ಸೊಗಸುವುದೇ– ಎಂಬ ದೃಷ್ಟಾಂತದಿಂದ **ತಿಳಿಸುತ್ತಾರೆ–ಕಬ್ಬಿನೊಳಗಿಹ**–ಎಂಬ ಪ್ರಸಕ್ತಸಂಧಿಗತ ೧೯ನೆಯ ಪದ್ಯದಿಂದ. ॥ ೭೯ ॥

**ಪ್ರತಿಪದಾರ್ಥ :**

**ಕಬ್ಬಿನೊಳಗಿಹ**=ರಸಭರಿತವಾದ ಕಬ್ಬಿನಲ್ಲಿ ಇರುವ, **ರಸ**=ಅತ್ಯಂತ ಮಧುರವಾದ **ಇಕ್ಷುರಸವು. ವಿದಂತನಿಗೆ**=ಹಲ್ಲುಗಳಿಲ್ಲದ ಮನುಷ್ಯನಿಗೆ, **ಅಬ್ಬುಬಲ್ಲದೆ=ಕಬ್ಬನ್ನು** ಹಲ್ಲಿನಿಂದ ಸಿಗಿದು, ಇಕ್ಷುಗತ ರಸವನ್ನು ಮನದಣಿಯೆ

ಪಾನಮಾಡುವುದಕ್ಕೆ ಸಾಧ್ಯವಾಗುವುದೇ ? **ಭಾಗ್ಯ**=ನಶ್ವರವಾದ ಸಂಪತ್ತು, **ಯೌವನ**=ಅಸ್ಥಿರವಾದ ಪ್ರಾಯ, **ಮಬ್ಬಿನಲಿ**=ಇವುಗಳೇ ಶಾಶ್ವತ ಎಂದು ತಿಳಿದಿರುವ ಮದಾಂಧತೆಯಿಂದ, **ಮೈಮರೆದವಗೆ**=ಸುಜ್ಞಾನವನ್ನು ಮರೆತು, ಭಾಗ್ಯ ಯೌವನ ಮದದಿಂದ ಗ್ರಸ್ತನಾದವನಿಗೆ **ಹರಿಸುಕಥಾಮೃತವು**= ಸಕಲಪಾಪಪರಿಹಾರಕವಾದ ಶ್ರೀಪರಮಾತ್ಮನ ಮಹಾಮಹಿಮೋಪೇತವಾದ ಚರಿತಾಮೃತವು, **ಲಭ್ಯವಾಗದು**=ಪ್ರಾಪ್ತಿಯಾಗುವುದಿಲ್ಲ. **ಹರಿಪದಾಬ್ಜದಿ**= ಶ್ರೀಪರಮಾತ್ಮನ ಪಾದಪದ್ಮಗಳಲ್ಲಿ, **ಹಬ್ಬಿದ**=ವ್ಯಾಪಕವಾದ (ಪೂರ್ಣವಾದ) **ಅತಿ ಸದ್ಭಕ್ತಿರಸ**=ಶ್ರೇಷ್ಠವಾದ ಸಮೀಚೀನಭಕ್ತಿ ಎಂಬ ದಿವ್ಯರಸವನ್ನು, **ಉಂಡು**=ಪಾನಮಾಡಿ, **ಕೊಬ್ಬಿ**=ಆನಂದದಿಂದ ಮೈಮರೆತು, **ಸುಖಾಬ್ಧಿಯೊಳು**=ಪರಮಾತ್ಮನ ಧ್ಯಾನರೂಪವಾದ ಸಂತೋಷಸಾಗರದಲ್ಲಿ, **ಆಡುವನಗಲ್ಲದೆ**=ಕ್ರೀಡಿಸುವವಗಲ್ಲದೆ, ಪೂರ್ವೋಕ್ತ ಹರಿಚರಿತಾಮೃತವೆಂಬ ಪೀಯೂಷ ಪ್ರಾಪ್ತಿಯಾಗುವುದಿಲ್ಲ ಎಂದು ತಾತ್ಪರ್ಯ. ॥ ೧೯ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :

ಈ ಗ್ರಂಥ ದಾರಿಗೆ ಅಶ್ಲಾಘ್ಯವಾಗಿರತದೆ ಅಂದರೆ ಹೇಳತಾರೆ.

ಒಳ್ಳೆ ಬಲಿತ ಕಬ್ಬಿನಲ್ಲಿ ಇರತಕ್ಕ ಸ್ವಾದುಯುಕ್ತವಾದ ರಸವು ಹಲ್ಲುಗಳು ರಹಿತನಾದ ಮನುಷ್ಯನಿಗೆ, ಅದರನ್ನ ಕಚ್ಚಿ, ಅದರ ರಸ ಸ್ವೀಕರಿಸಿ ಮನದಣಿಯ ಪಾನ ಮಾಡೋದಕ್ಕೆ ಆಗೋದೆ ಎಂದರೆ, ಆಗಲಾರದು. ಜ್ಞಾನ-ಭಕುತಿಗಳೆಂಬೋ ದಂತದಿಂದ ಶೂನ್ಯನಾಗಿ ಭಾಗ್ಯವೇನು ಯೌವನವೇನು ಇದು ಎರಡೆಂಬ ವಸಡುಗಳುಳ್ಳ ಪುರುಷನು ಈ ಹರಿಕಥಾಮೃತಸಾರವೆಂಬ ಕಬ್ಬು ಸದೃಶವಾದ ಈ ಗ್ರಂಥವನ್ನು ಭುಂಜಿಸಿ, ತದ್ಗತ ಸಾರಭೂತವಾದ ಅನುಸಂಧಾನವನ್ನ ಗ್ರಹಿಸಿ, ಸಂತೋಷ ಪಡಿಯದೆ ಇರತಕ್ಕವನು ಅರಿಯನು ಮತ್ತು ವಿದಂತನಿಗೆ ಕಬ್ಬಿನರಸ ಹ್ಯಾಂಗೆ ಅಬ್ಬೋದಿಲ್ಲವೋ ತದ್ವತ್, ಐಶ್ವರ್ಯದಿಂದಲೂ ಯೌವನದಿಂದಲೂ ಕೇವಲ ವಿದ್ಯಾಮದದಿಂದಲೂ ಇರತಕ್ಕ ಮದಾಂಧತೆ

ಯೊಂದ ದೇಹದಲ್ಲಿ ಸುಜ್ಞಾನವೆಂಬ ಸ್ಮಾರಕವಿಲ್ಲದವನಿಗೆ ಶ್ರೀಪರಮಾತ್ಮನ ದಿವ್ಯ ಚರಿತೆಗಳೆಂಬ ಅಮೃತದಿಂದ ಸಹಿತವಾದ ಈ ಗ್ರಂಥವು ಅವಗೆ ಲಭಿಸೋದಿಲ್ಲ. (ಆದರೆ ದಾರಿಗೆ ಲಭ್ಯವಾಗತದೆ, ಎಂದರೆ) ಪರಮಾತ್ಮನ ಪಾದಕಮಲಗಳಲ್ಲಿ ಅತಿವ್ಯಾಪ್ತವಾದ ಅತ್ಯಂತ ಶ್ರೇಷ್ಠತರವಾದ ಭಕ್ತಿಯೆಂಬ ಮಕರಂದಾಖ್ಯ ರಸವನ್ನು ಪಾನಮಾಡಿ, ಅದರಿಂದ ಉಪಚಯವಾದ ಆನಂದದಿಂದ ಮೈಮರೆತು ವಿಷಯಾದಿಗಳು ತ್ಯಾಗಮಾಡಿ, ಜ್ಞಾನ-ಭಕ್ತಿ-ವೈರಾಗ್ಯಾದಿಗಳಿಂದ ಯುಕ್ತವಾದ ಕೊಬ್ಬು ಉಂಟಾಗಿ (ಅಥವಾ ಮದ ಉಂಟಾಗಿ). ಶ್ರೀ ಪರಮಾತ್ಮನಲ್ಲಿ ತದೇಕನಿಷ್ಠವಾದ ಸುಖಜ್ಞಾನಸಮುದ್ರದಲ್ಲಿ ಸಂಚಾರ ಮಾಡತಕ್ಕವರಿಗೆ ಈ ಗ್ರಂಥವು ಉಪಯೋಗವೇ ಹೊರತು, ತದನ್ಯರಿಗೆ ಉಪಯೋಗವಿಲ್ಲ. ಇದರಲ್ಲಿ ನಿಸ್ಪೃಹ ಅಭಿಮಾನತ್ಯಾಗಪೂರ್ವಕ ಭಗವದುಪಾಸನ ಹೇಳತದೆ. ಆದ್ದರಿಂದ ಕೇವಲ ಭಗವದ್ಭಕ್ತರಿಗೇವೇ ಉಪಯೋಗವಾಗತದೆ ಎಂತ ತಾತ್ಪರ್ಯ. ॥೧೯॥

### ೨. ಭಾವಪ್ರಕಾಶಿಕೆ :

ಈ ಗ್ರಂಥವು ಜ್ಞಾನಿಗಳಿಗೆ ರುಚಿಸುವುದಲ್ಲದೆ ಅಜ್ಞಾನಿಗಳಿಗೆ ರುಚಿಸಲಾರದೆಂದು ಸದೃಷ್ಟಾಂತವಾಗಿ ಹೇಳುತ್ತಾರೆ–

ಕಬ್ಬನ್ನು ಅಗಿದು, ಅದರ ರಸವನ್ನು ಪಾನಮಾಡಬೇಕಾದರೆ ಹಲ್ಲಿದ್ದವರಿಗೆ ಸಾಧ್ಯವೇ ಹೊರತು, ಹಲ್ಲಿಲ್ಲದವರಿಗೆ ಹೇಗೆ ಸಾಧ್ಯವಿಲ್ಲವೋ, ಹಾಗೆಯೇ ಪರಮಾತ್ಮನ ಪಾದಾರವಿಂದದಲ್ಲಿ ಹಬ್ಬಿರುವ ದೃಢಭಕ್ತಿರಸವನ್ನು ಪಾನಮಾಡಿ, ಅದರಿಂದ ಮೈಯುಬ್ಬಿ ಕೊಬ್ಬೇರಿ ಮತ್ತನಾಗಿ ಸುಖಸಮುದ್ರದಲ್ಲಿ ಓಲಾಡುತ್ತಿರುವವರಿಗೆ ಮಾತ್ರವೇ ಈ ಹರಿಕಥಾಮೃತಸಾರದ ರುಚಿಯು ಗೊತ್ತಾಗುವುದಲ್ಲದೆ, ಕಬ್ಬಿನಂತಿರುವ ಹರಿಕಥಾಮೃತಸಾರದ ರಸವನ್ನು, ಜ್ಞಾನವೆಂಬ ಹಲ್ಲು ಇಲ್ಲದ ಅಜ್ಞಾನಿಗಳು ಪಾನಮಾಡಬಲ್ಲರೆ ? ಆಗಲಾರದು. ॥೧೯॥

### ೩. ಭಾವದರ್ಪಣ :

ಕಬ್ಬಿನೊಳಗೆ ಕವಿತಾದಲ್ಲಿದ್ದ ರಸವು ವಿದಂತನಿಗೆ ಎಂದರೆ, ವಿತ್ ತಿಳಿದ ಜ್ಞಾನಿಗೆ ಅಂತ ಕೋನಿಗಿದ್ದ ಜ್ಞಾನಶೂನ್ಯನಾದ ಅಜ್ಞನಿಗೆ ಹಬ್ಬಬಲ್ಲದೆ ಈ

ರುಚಿ ಸಿಗಬಲ್ಲದೇ ! ಅಥವಾ ಕಬ್ಬು–ಇಕ್ಷುದಂಡ. ಇದರಲ್ಲಿದ್ದ ರಸ ವಿದಂತ– ದಂತಹೀನನಿಗೆ ಹ್ಯಾಗೆ ಅಸಾಧ್ಯವೋ, ತದ್ವತ್ ಈ ಹರಿಕಥಾಮೃತಸಾರಾಖ್ಯ ಗ್ರಂಥ ಭಗವದ್ಭಕ್ತಿಹೀನಗೆ ಅಸಾಧ್ಯವೆಂತಲೂ ಶ್ರೀಭಗವದ್ಭಕ್ತಿ ಉಳ್ಳವಗೆ ಸಾಧ್ಯವೆಂತಲೂ ಸದೃಷ್ಟಾಂತ ಹೇಳುತ್ತಾರೆ–ಕಬ್ಬೀತಿ ॥ ೧೯ ॥

೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ (ಸಂಸ್ಕೃತಮೂಲ) :

'ಕಬ್ಬ' ಇತಿ ॥ ಅಬ್ಬ=ದವಡಿ. ಕೊಬ್ಬಿ=ಸೊಕ್ಕಿ.

ಸ್ರುಕ್ ಚಂದನ ವನಿತಾ ವಿತ್ತಾದಿ ಭೋಗಗಳಲ್ಲಿ ಪರಮಾಸಕ್ತರಾದವರಿಗೆ ಹರಿಚರಿತಾಮೃತದ ಸವಿಯು ರುಚಿಸುವುದಿಲ್ಲ. ಹಲ್ಲುಗಳಿಲ್ಲದವನಿಗೆ ರುಚಿಸ ದಿರುವ ಇಡೀ ಕಬ್ಬಿನ ದೃಷ್ಟಾಂತವನ್ನು ಈ ಪದ್ಯದಿಂದ ತಿಳಿಸಿರುತ್ತಾರೆ. ಭಗವ ತ್ತತ್ವ, ಸುಜ್ಞಾನ, ದೃಢವಾದ ಭಕ್ತಿ, ವಿಷಯಾದಿಗಳಲ್ಲಿ ವೈರಾಗ್ಯ, ಶ್ರವಣ, ಮನನಾದಿಗಳ ದ್ವಾರಾ ಸ್ವೋಚಿತಕರ್ಮಾನುಷ್ಠಾನದಿಂದ ವಿರಕ್ತಿ ಹೊಂದಿರುವ ವನೇ ತತ್ತ್ವೋಪದೇಶಕ್ಕೆ ಅರ್ಹನೆಂದು ಈಶಾವಾಸ್ಯಾದಿ ಉಪನಿಷದ್ರಹಸ್ಯ ಗಳನ್ನು ತಿಳಿಸಿರುತ್ತಾರೆ. ॥ ೧೯ ॥

೫. ಶ್ರೀಗುರುಹೃದಯಪ್ರಕಾಶಿಕೆ

ಶ್ರೀಹರಿಭಕ್ತರಿಗೆ ಈ ಗ್ರಂಥ ಅಭಿರುಚಿಸುವುದು, ಇತರರಿಗೆ ಅಭಿಪ್ರಾಯ ಕೊಡುವುದಿಲ್ಲವೆಂದು ಸದೃಷ್ಟಾಂತವಾಗಿ ತಿಳಿಸುತ್ತಾರೆ. 'ಕಬ್ಬ' ಎಂಬುದು ಮೊದಲು, 'ಹರಿಭಕ್ತರಿಗಲ್ಲದಲೆ' ಎಂಬ ತನಕ ನಾಲ್ಕು ಪದ್ಯದಿಂದ, ಶ್ರೀಹರಿ ಪಾದಪದ್ಮದಲ್ಲಿ ಹಬ್ಬಿದ ಎಂದರೆ, ಆಶ್ರಯಿಸಿ ಅಭಿವೃದ್ಧಿ ಹೊಂದಿದ ಅತಿ ಸದ್ಭಕ್ತಿರಸವನ್ನುಂಡು ಎಂದರೆ, ದೇವರ ಸನ್ನಿಧಾನ ಇಲ್ಲದೆ ಯಾವದರಿಂದಲೂ ಸುಖ ಜೀವರಿಗೆ ದೊರಕದು. ಆದ್ದರಿಂದ ದೇವರೇ ಸರ್ವತ್ರ ಸುಖಪ್ರದನೆಂದು ಮನಸ್ಸಿನಲ್ಲಿ ಖಚಿತವಾಗಿರುವ ಅನುಭವದಿಂದ ಉಬ್ಬಿ, ಕೊಬ್ಬಿ, ಅಂದರೆ ಅತಿ ವೃದ್ಧಿ ಹೊಂದಿ, ಶ್ರೀಹರಿಪ್ರೇಮಸುಖವೆಂಬ ಸಮುದ್ರದಲ್ಲಿ ಮಗ್ನನಾಗಿರುವ ಸಜ್ಜನಗೆ ಹೊರ್ತು, ಭಾಗ್ಯ ಯೌವನವೆಂಬ ಪ್ರಾಯ ಮೊದಲಾದ ಮೊಬ್ಬು ಎಂದರೆ, ಅಜ್ಞಾನಾಂಧಕಾರದಲ್ಲಿ ಮೈಮರೆತವಗೆ ಅಂದರೆ, ಮದೋನ್ಮತ್ತರಿಗೆ ಈ ಹರಿಸುಚರಿತಾಮೃತವೆಂಬ ಗ್ರಂಥವು ಲಭ್ಯವಾಗದು ಅಂದರೆ, ಅಭಿಪ್ರಾಯ ಕೊಡುವುದಿಲ್ಲ. ಕಬ್ಬಿನೊಳಗಿರುವ ರಸವಿದಂತನಿಗೆ ಅಬ್ಬಬಲ್ಲದೆ,ಎಂದರೆ, ಹಲ್ಲಿಲ್ಲ

ದವನು ಕಬ್ಬು ಅಗಿದು ರಸವನ್ನು ಹ್ಯಾಗೆ ಸವಿಯಲಾರನೋ ಹಾಗೆ ಅರ್ಥ ಕೊಡುವುದಿಲ್ಲವೆಂದು ಅಭಿಪ್ರಾಯ ॥೧೯॥

# ಸರ್ವವ್ಯಾಖ್ಯಾನಸಾರಸಂಗ್ರಹ

ಹರಿಭಕ್ತಿಯಿಲ್ಲದವನಿಗೆ ಶ್ರೀಹರಿಚರಿತಾಮೃತವೆಂಬ ದಿವ್ಯರಸವು ರುಚಿಸದು ಎಂದು ಸುಂದರವಾದ ದೃಷ್ಟಾಂತದಿಂದ ವಿವರಿಸುತ್ತಾರೆ ಪ್ರಸಕ್ತ ೧೯ನೆಯ ಪದ್ಯದಿಂದ.

೧. ಭಕ್ತನಾದವನು ಶ್ರೀಹರಿಯ ಚರಣಗಳೆಂಬ ಕಮಲದಲ್ಲಿ ದುಂಬಿಯಂತಿರುವನು. ಶ್ರೀಪರಮಾತ್ಮನ ಸಂಸ್ಮರಣೆಯೇ ದಿವ್ಯಅಮೃತಪಾನ. ಅದರಲ್ಲಿ ಮನಸ್ಸು ಸದಾ ಅಸಕ್ತವಾಗಿ ವ್ಯಾಪಿಸಬೇಕು. ಹೀಗೆ ಹರಿಕಥಾಮೃತದಲ್ಲಿ ಮನಸ್ಸು ಹಬ್ಬಿದಾಗ, ಶ್ರೀಹರಿಯ ಸಮೀಚೀನವಾದ ಭಕ್ತಿ ಉಂಟಾಗುವುದು. ಕೃತಿಪತಿಯ ಕಥಾಮೃತವನ್ನು ಪಾನಮಾಡಿದವನಿಗೆ ಭಕ್ತ್ಯುದ್ರೇಕ ಉಂಟಾಗಿ, ಆ ಸದ್ಭಕ್ತಿರಸದಲ್ಲಿ ಮೈಮರೆಯುವನು. ಅಂತಹ ತನ್ಮಯಾವಸ್ಥೆಯಲ್ಲಿ ಭಕ್ತನ ತನು ಮನಾದಿ ಸಕಲೇಂದ್ರಿಯಗಳೂ ಅಮೃತರಸಪಾನದಿಂದ ಹಿಗ್ಗಿ, ಆ ಅಚ್ಯುತನ ನಾಮವೆಂಬ ಅಚ್ಚ ಮದ್ದು ತಲೆಗೆ ಏರಿ, ಭಕ್ತಿಭಾವದಿಂದ ಕೊಬ್ಬಿ ಉಬ್ಬುವನು. ಆಗ ಅವನ ಆನಂದಾನುಭವ ವರ್ಣನಾತೀತ. ಸಂತೋಷದ ಸಾಗರದಲ್ಲಿ ಓಲಾಡುವನು. ಮನಸ್ಸು, ಬುದ್ಧಿ, ಚಿತ್ತಗಳೆಲ್ಲವೂ ಹರಿನಾಮಸ್ಮರಣೆಯಲ್ಲಿ ತಲ್ಲೀನವಾಗಿ, ಆ ಅಪಾರಮಹಿಮನ ಗುಣಸ್ತೋಮಗಳನ್ನು ಕೊಂಡಾಡುತ್ತಾ, ರಮಿಸುವುವು.

೨. ಇಂತಹ ಹರಿಭಕ್ತನಿಗಲ್ಲದೇ ಕೇವಲ ವಿಷಯಸುಖಾದಿಗಳಲ್ಲಿ ಮೈಮರೆತು, ಭೋಗಾಸಕ್ತರಾಗಿರುವವರಿಗೆ ಆ ಹರಿಚರಿತ್ರಾಸುಧೆಯು ರುಚಿಸುವುದಿಲ್ಲವೆಂದು ಸುಂದರವಾದ ದೃಷ್ಟಾಂತದಿಂದ ನಿರೂಪಿಸುತ್ತಾರೆ.

ಬಲಿತ ಕಬ್ಬು ರಸಭರಿತವಾಗಿರುವುದು. ಅದನ್ನು ಹಲ್ಲಿನಿಂದ ಸಿಗಿದು ಅಗಿದಾಗಲೇ, ಕಬ್ಬಿನ ರಸದ ರುಚಿಯು ಅನುಭವವಾಗುವುದು. ಹಲ್ಲಿಲ್ಲದವನು

ಅಂತಹ ಕಬ್ಬಿನ ರಸದ ಸವಿಯ ಆನಂದವನ್ನು ಎಂದೆಂದಿಗೂ ಹೊಂದಲಾರ. ಅಂತೆಯೇ ನಶ್ವರವಾದ ಸಂಪತ್ತು, ಕ್ಷಣಭಂಗುರವಾದ ಪ್ರಾಯಾವಸ್ಥೆ, ಇವುಗಳ ಸಂಸರ್ಗದಿಂದ ಅಂಧನಾಗಿ, ಭಾಗ್ಯಮದ ಮತ್ತು ಯೌವನಮದಗಳಿಂದ ಉನ್ಮತ್ತನಾದ ವಿಷಯ ಲಂಪಟನಿಗೆ ಆ ಹರಿಚರಿತಾಮೃತದ ರುಚಿಯು ಪ್ರಾಪ್ತ ವಾದೀತೇ ? –ಎಂದುತಿಳಿಸುತ್ತಾರೆ.

ಈ ದೃಷ್ಟಾಂತದಲ್ಲಿ ಹರಿನಾಮ ಸುಧೆಯು ಕಬ್ಬಿನ ರಸದ ಸದೃಶ. ಹಲ್ಲು ಗಳಿದ್ದರೆ, ಕಬ್ಬನ್ನು ಅಗಿದಾಗ, ರಸೋತ್ಪತ್ತಿಯಾಗಿ, ರುಚಿಯ ಅನುಭವ ಉಂಟಾಗುವುದು. ಹಲ್ಲು ಅಗಿದು ಅರೆಯುವ ಸಾಧನ. ಅಂತೆಯೇ ಶಾಸ್ತ್ರ ಮಥನಮಾಡಿದಾಗ ತತ್ತ್ವವಿಷಯಗಳು ಪ್ರಕಟವಾಗುವುವು. ಶಾಸ್ತ್ರಜಿಜ್ಞಾಸೆಯು ಹಲ್ಲಿನಿಂದ ಕಬ್ಬನ್ನು ಅಗಿಯುವ ಕ್ರಿಯೆಗೆ ಸದೃಶ. ಜಿಜ್ಞಾಸೆಯಿಂದ ತತ್ತ್ವಗತ ರಸೋತ್ಪತ್ತಿಯಾಗಿ, ಭಾವುಕನು ಆ ರಸಾಸ್ವಾದನೆಯಿಂದ ಆನಂದಿಸುವನು. ಅಂತೆಯೇ ನಿರಂತರ ಹರಿಸ್ಮರಣೆಯ ದ್ವಾರಾ ಅವನ ಕಥಾಮೃತಪಾನ, ಆ ರುಚಿಯಿಂದ ಭಕ್ತಿ ಉಕ್ಕಿಹರಿದು, ಶಾಶ್ವತ ಸುಖಾನುಭವ-ಎಂಬುದು ಪ್ರಸಕ್ತ ಪದ್ಯದ ತಾತ್ಪರ್ಯಾರ್ಥವು ॥೧೯॥

## ಪದ್ಯ ೨೦

ಮೂಲ :

ಖಗವರಧ್ವಜನಂಘ್ರಿ ಭಕುತಿಯು ।
ಬಗೆಯುನರಿಯದ ಮಾನವರಿಗಿದು ।
ಒಗಟಿನಂದದಿ ತೋರುತಿಪ್ಪುದು ಎಲ್ಲ ಕಾಲದಲಿ ॥
ತ್ರಿಗುಣವರ್ಜಿತನಮಲಗುಣಗಳ ।
ಪೊಗಳಿ ಹಿಗ್ಗುವ ಭಾಗವತರಿಗೆ ।
ನಿಗೆ ಭಕುತಿ ವಿಜ್ಞಾನ ಸುಖವಿತ್ತವರ ರಕ್ಷಿಪುದು ॥೨೦॥

**ಅವತರಣಿಕೆ :**

ಶ್ರೀಹರಿಕಥಾಮೃತಸಾರಗತ ರಹಸ್ಯ ತತ್ತ್ವಪ್ರಮೇಯಗಳು ಗರುಡಧ್ವಜನಾದ ಶ್ರೀಹರಿಯ ಪಾದಕಮಲಗಳಲ್ಲಿ ಭಕ್ತಿಮಾಡತಕ್ಕ ಕ್ರಮವನ್ನು ತಿಳಿಯದ ಮಾನವರಿಗೆ ಒಗಟಿನಂತೆ ತೋರುತ್ತವೆ. ಅವರಿಗೆ ಅದರ ರಹಸ್ಯಾರ್ಥಗಳು ಅರ್ಥವಾಗುವುದಿಲ್ಲವೆಂದು ತಿಳಿಸುತ್ತಾರೆ— **ಖಗವರಧ್ವಜನಂಘ್ರಿ**–ಎಂಬ ಪ್ರಸಕ್ತಸಂಧಿಗತ ೨೦ನೆಯ ಈ ಪದ್ಯದಿಂದ ॥೨೦॥

**ಪ್ರತಿಪದಾರ್ಥ :**

**ಖಗವರ**=ಪಕ್ಷಿಶ್ರೇಷ್ಠರಾದ ಗರುಡದೇವರ, **ಧ್ವಜನಂಘ್ರಿ**=ಧ್ವಜದಿಂದ ವಿದ್ಯಮಾನನಾದ, ಅಂದರೆ ಗರುಡಧ್ವಜನಾದ ಶ್ರೀಹರಿಯ ದಿವ್ಯ ಪಾದಗಳಲ್ಲಿ, **ಭಕುತಿಯ**=ಸಮೀಚೀನವಾದ, ಹಾಗೂ ದೃಢವಾದ ಭಕ್ತಿ ಭಾವದ, **ಬಗೆಯುನರಿಯುದ**=ಕ್ರಮವನ್ನು ತಿಳಿಯದೇ ಇರುವ, **ಮಾನವರಿಗೆ**=ಮನುಷ್ಯರಿಗೆ, **ಇದು**=ಇಂತಹ ಹರಿಕಥಾಮೃತಸಾರದ ಅರ್ಥವು, **ಒಗಟಿನಂದದಿ**=ರಹಸ್ಯವನ್ನು ಬಿಡಿಸಲು ಕಷ್ಟವಾದ ಒಗಟಿನೋಪಾದಿಯಲ್ಲಿ, **ತೋರುತಿಪ್ಪದು**=ಕಾಣಿಸುತ್ತದೆ, **ಎಲ್ಲಕಾಲದಲ್ಲಿ**=ಯಾವಾಗಲೂ **ತ್ರಿಗುಣವರ್ಜಿತನ** ಪ್ರಾಕೃತ ಸತ್ತ್ವಾದಿ ಗುಣತ್ರಯಗಳಿಂದ,ದೂರನಾದ (ಪಾಕೃತಗುಣರಹಿತನಾದ) **ಅಮಲಗುಣಗಳ**=ಶ್ರೀಪರಮಾತ್ಮನ ದೋಷದೂರವಾದ ಅನಂತಕಲ್ಯಾಣ ಗುಣಸಮೂಹಗಳನ್ನು, **ಪೊಗಳಿ ಹಿಗ್ಗುವ**=ಸ್ತೋತ್ರಮಾಡುತ್ತಾ, ಆನಂದದಿಂದ ಹಿಗ್ಗುವ, **ಭಾಗವತರಿಗೆ**=ಭಗವದ್ಭಕ್ತರಿಗೆ, **ಮಿಗೆ**=ಅಧಿಕವಾದ, **ಭಕುತಿ**=ದೃಢವಾದ ಭಕ್ತಿ, **ವಿಜ್ಞಾನ**=ಭಗವತ್ಸಂಬಂಧವಾದ ವಿಶೇಷಜ್ಞಾನ, **ಸುಖವಿತ್ತು**=ಇಂತಹ ಭಕ್ತಿ ಜ್ಞಾನಗಳಿಂದುಟಾಗುವ ಆನಂದವನ್ನು ಕೊಟ್ಟು, **ಅವರ ರಕ್ಷಿಪುದು**=ಅಂತಹ ಭಗವದ್ಭಕ್ತರನ್ನು ಇಹಪರಗಳಲ್ಲಿ ಸಂರಕ್ಷಿಸುವುದು ॥೨೦॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :

ಈ ಗ್ರಂಥ ಭಗವದ್ಭಕ್ತರಿಗೆ ದಿವ್ಯಜ್ಞಾನಕೊಟ್ಟು ರಕ್ಷಿಸುತ್ತದೆ ಎಂತ ಹೇಳತಾರೆ.

ಪಕ್ಷಿಶ್ರೇಷ್ಠನಾದ ಗರುಡದೇವರ ಧ್ವಜಪತಾಕಾದಿಂದ ವಿದ್ಯಮಾನಾದ ಶ್ರೀಕೃಷ್ಣನ ಪಾದಗಳಲ್ಲಿ ಭಕ್ತಿ ಇರತಕ್ಕಂಥ ಕ್ರಮವನ್ನು ತಿಳಿಯದೆ ಇರತಕ್ಕಂಥ ಮನುಷ್ಯರಿಗೆ ಈ ಹರಿಕಥಾಮೃತಸಾರಗತ ಅರ್ಥವು ಗರ್ಭೀಭೂತವಾದ ಅರ್ಥದ ಹಾಂಗೆ ಅಸಾಧ್ಯವೆಂದು ತೋರುತದೆ ಮತ್ತು ವಿಷಯಾಸಕ್ತರಾದವರಿಗೆ ಇದರ ಆಚರಣೆ ಕೂಡಾ ಮನಸ್ಸಿಗೆ ಕಷ್ಟವೆಂತಲೇ ತೋರುತ್ತದೆ, ಸರ್ವದಾ ಎಂತ ಅರ್ಥ. (ಅಂದರೆ ದಾರಿಗೆ ಸಾಧ್ಯವಾಗಿ ಆಚರಣೆಗೆ ಬರತದೆ ಎಂದರೆ), ಪ್ರಾಕೃತ ಸತ್ವಾದಿ ಗುಣತ್ರಯಗಳಿಂದ ದೂರನಾದ ತನಗೆ ಅಭಿನ್ನಗಳಾದ ಸತ್ವಾದಿ ಗುಣತ್ರಯಗಳಿಂದ ಯುಕ್ತನಾದ ಗುಣಪೂರ್ಣನಾದ ಪರಮಾತ್ಮನ (ಅನುಗ್ರಹ ಸಂಪಾದಿಸಿ ಸದ್ಗತಿ ಪಡೆಯಬೇಕೆಂಬ ಇಚ್ಛಾದಿಂದ ವಿಷಯಾಶಾ ನೀಗಿ ಜ್ಞಾನ-ಭಕ್ತಿ-ವೈರಾಗ್ಯಗಳಿಂದ ಯುಕ್ತನಾಗಿ) ದೋಷದೂರನಾದ ತನ್ನ ಯೋಗ್ಯತಾನುಸಾರ ಸೃಷ್ಟ್ಯಾದಿ ಕರ್ಮಗುಣಗಳ ಉಚ್ಚಾರ ಮಾಡತ ಆನಂದದಿಂದ ಹಿಗ್ಗುತಾ ಇರತಕ್ಕ ಭಗವದ್ಭಕ್ತರಿಗೆ ಪೂರ್ವಾಪೇಕ್ಷಯಾ ಅಧಿಕವಾದ ಭಕುತಿಯನ್ನೇನು, ವಿಶೇಷ ಅನುಸಂಧಾನಮಾಡತಕ್ಕ ಜ್ಞಾನವೇನು ಇದರಿಂದ ಹುಟ್ಟಿದ ಸುಖವೇನು ಕೊಟ್ಟು ಅವರನ್ನು ಇಹದಲ್ಲಿ ಪರದಲ್ಲಿ ಸಂರಕ್ಷಿಸತದೆ ಎಂತ ತಾತ್ಪರ್ಯ ॥೨೦॥

## ೨. ಭಾವಪ್ರಕಾಶಿಕೆ :

ಮೇಲೆ ಹೇಳಿದುದನ್ನೇ ಧೃಢಮಾಡುವುದಕ್ಕಾಗಿ ಮತ್ತೂ ಹೇಳುತ್ತಾರೆ: ಶ್ರೀಪರಮಾತ್ಮನ ಪಾದಾರವಿಂದ ಭಕ್ತಿಮಾರ್ಗವನ್ನೇ ತಿಳಿಯದ ಮನುಷ್ಯರಿಗೆ ಈ ಗ್ರಂಥವು ಒಗಟಿನಂತೆ ಕಾಣುವುದು. ಅಪ್ರಾಕೃತನಾದ ಪರಮಾತ್ಮನಲ್ಲಿ ಧೃಢ ಭಕ್ತಿಯುಳ್ಳವರಾಗಿ ಅವನ ಮಹಿಮೆಯನ್ನು ಸರ್ವದಾ ಪಾಡುತ್ತಾ, ಪೊಗಳುತ್ತಾ ಸಂತೋಷಪಡುತ್ತಿರುವ ಭಗವದ್ಭಕ್ತರಿಗೆ, ವಿಶೇಷವಾದ ಭಕ್ತಿಯನ್ನೂ ಜ್ಞಾನವನ್ನೂ ವೃದ್ಧಿಮಾಡಿ ಸುಖವನ್ನು ಕೊಡುವುದು. ॥೨೦॥

## ೩. ಈ ಪದ್ಯಕ್ಕೆ ಭಾವದರ್ಪಣ ಟೀಕಾಕಾರರು ವ್ಯಾಖ್ಯಾನ ಬರೆದಿಲ್ಲ.

## ೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ (ಸಂಸ್ಕೃತಮೂಲ) :

"ಖಗೇತಿ"। "ಬಗೆ"-ಪ್ರಕಾರ। "ಒಗಟು" ಕನ್ಯಾಭ್ಯಾಸ್ತ ಗೂಢವಾಕ್ ಪ್ರಬಂಧಃ॥ ಯಥಾ ವಕ್ತಿ ಬಾಲಾ "ಅಡ್ಡಾಗೋಡೀ ಮ್ಯಾಲೆ ದುಡ್ಡು"॥

ಮಿಗೆ ಮತ್ತೂ। ಇತ್ತೂ- ಕೊಟ್ಟು ಇದು ಎಂಥದು ? ಉಕ್ತಗ್ರಂಥ : ರಕ್ಷಿಸು ಪುದು=ರಕ್ಷಿಸುವುದು. ॥೨೦॥

**ಕನ್ನಡಾರ್ಥ :**

ಭಕ್ತಿಯ ರೀತಿಯನ್ನು ತಿಳಿಯದವನಿಗೆ ಈ ಶಾಸ್ತ್ರವು ಒಗಟಿನಂತೆ ತೋರುತ್ತದೆ. ಪರಮ ಭಗವದ್ಭಕ್ತನಿಗೆ ಮಾತ್ರ, ಜ್ಞಾನ, ಭಕ್ತಿ, ವೈರಾಗ್ಯಗಳನ್ನು ಬೆಳೆಯಿಸಿ, ಸುಖ ಸಾಕ್ಷಾತ್ಕಾರಗಳನ್ನು ಮೋಕ್ಷವನ್ನು, ಕೊಟ್ಟು ರಕ್ಷಿಸುವುದು ॥೨೦॥

## ೫. ಶ್ರೀಗುರುಹೃದಯಪ್ರಕಾಶಿಕೆ

ತ್ರಿಗುಣವರ್ಜಿತನಾದ ಅಪ್ರಾಕೃತಜ್ಞಾನಾನಂದಾದ್ಯನಂತಗುಣಪೂರ್ಣ ದೇವರ ಭಕ್ತವಾತ್ಸಲ್ಯಾದಿ ನಿರ್ದೋಷಗುಣಗಳ ಪೊಗಳಿ ಹಿಗ್ಗುವ ಸದ್ಭಕ್ತರಿಗೆ ಮಿಗೆ ಎಂದರೆ, ಹೆಚ್ಚಾಗಿ ಭಕ್ತಿ ವಿಜ್ಞಾನವೆಂಬ ತಾರತಮ್ಯಜ್ಞಾನ ಸುಖವನ್ನು ಕೊಟ್ಟು, ಅನವರತ ಅವರನ್ನು ರಕ್ಷಿಸುವುದು. ಈ ಗ್ರಂಥ ಖಗವರಧ್ವಜನಂಘ್ರಿ ಭಕುತಿಯ ಬಗೆಯನರಿಯದ ಮಾನವರಿಗೆ ಅಂದರೆ, ಗರುಢಧ್ವಜನಾದ ಶ್ರೀಹರಿಯ ಚರಣದಲ್ಲಿ ಪರಮಸ್ನೇಹರೂಪ ಭಕ್ತಿಯ ರೀತಿಯನ್ನು ಅರಿಯದ ಅಜ್ಞರಿಗೆ ಒಗಟಿನಂದದಿ ತೋರುತಿಪ್ಪುದು ಎಲ್ಲ ಕಾಲದಲಿ ಅಂದರೆ, 'ಅಂಗಡಿ ಅಂಗಡಿ ಅರವತ್ತಂಗಡಿ ದೃಷ್ಟಿಸಿ ನೋಡಿದರೊಂದೇ ಅಂಗಡಿ' ಎಂಬ ಸಂಕೇತವಾದ ಮಾತು ತಿಳಿದವರಿಗೆ 'ಕಡತ' ಅಂದರೆ ಪುಸ್ತಕ ಎಂಬ ಅರ್ಥಕೊಟ್ಟು, ತಿಳಿಯದವರಿಗೆ ಅರ್ಥವಾಗದಂತೆ, ಅರ್ಥವಾಗದೆಂದಭಿಪ್ರಾಯ ॥೨೦॥

# ಸರ್ವವ್ಯಾಖ್ಯಾನಸಾರಸಂಗ್ರಹ

ಗರುಡಧ್ವಜನಾದ ಶ್ರೀಪರಮಾತ್ಮನ ಭಕ್ತಿಭಾವವನ್ನು ಅರಿತವರಿಗೆ ಮಾತ್ರ ಶ್ರೀಹರಿಕಥಾಮೃತಸಾರ ಗ್ರಂಥಸ್ಥ ರಹಸ್ಯಪ್ರಮೇಯಗಳು ಅರ್ಥವಾಗುತ್ತವೆಯೇ ಹೊರತು, ಇತರರಿಗೆ ಇದು ಒಗಟಿನಂತೆ ತೋರುವದೆಂದು ತಿಳಿಸುತ್ತಾರೆ-**ಖಗವರಧ್ವಜನ**–ಎಂಬ ಪ್ರಸಕ್ತ ಸಂಧಿಗತ ೨೦ನೆಯ ಪದ್ಯದಿಂದ.

೧. **ಖಗ,** ಎಂದರೆ ಆಕಾಶದಲ್ಲಿ ಸಂಚರಿಸುವ ಪಕ್ಷಿಗಳು. (ಖಂ–ಆಕಾಶ ವಾಚೀ, ಗ–ಗಮನ) ಅಂತಹ ಪಕ್ಷಿವರ್ಗದಲ್ಲಿ ಶ್ರೇಷ್ಠನಾದವನು **ಖಗವರನಾದ**

ಗರುಡನು. ಆ ಗರುಡದೇವರ ಭುಜಗಳ ಮೇಲೆ ಕೂತು, ಶ್ರೀಹರಿಯು ಸಂಚರಿಸುವನು. ಗರುಡದೇವರ ಲಾಂಛನದನ್ನು ಧ್ವಜವಾಗಿ ಉಳ್ಳ ಶ್ರೀಮನ್ನಾರಾಯಣನು **ಖಗವರ ಧ್ವಜನು.** ಧ್ವಜ ಎಂಬ ಪದಕ್ಕೆ ಪತಾಕೆ ಎಂಬ ಅರ್ಥವಿದೆ. ಅಂತಹ ಖಗವರಧ್ವಜನ ಪಾದಪದ್ಮಗಳಲ್ಲಿ ನಿರತಿಶಯವಾದ ಭಕ್ತಿ ಇರಬೇಕು. ಖಗವರಧ್ವಜನಂಘ್ರಿ ಭಕುತಿಕ್ರಮವನ್ನು ಬಲ್ಲವರು ಅವನ ಅಂತರಂಗ ಭಕ್ತರು. ಅವರ ಮನಸ್ಸು ಸದಾ ಶ್ರೀಹರಿಯ ಚರಣಾರವಿಂದ ಗಳಲ್ಲಿ ಭ್ರಮರದಂತೆ ರತವಾಗಿರುವುದು.

೨. ಹರಿಕಥಾಮೃತಸಾರವೆಂಬ ಗ್ರಂಥವು ಅನೇಕ ರಹಸ್ಯಪ್ರಮೇಯ ಗಳಿಂದ ಘಟಕವಾಗಿದೆ. ಕೇವಲ ಅಧ್ಯಯನ ಕ್ರಮದಿಂದಾಗಲೀ, ಉಪದೇಶ ದ್ವಾರವಾಗಲೀ ತಿಳಿಯಲು ಅಷ್ಟು ಸುಲಭವಲ್ಲ. ಭಗವದ್ಭಕ್ತಿಯುಳ್ಳ ಉಪಾಸಕರಿಗೆ ಮಾತ್ರ ಅವರ ಯೋಗ್ಯತಾನುಸಾರ ಅರ್ಥವಾಗುವುದು. ಅಭಕ್ತ ರಾದ ಇತರರಿಗೆ **ಒಗಟಿನಂತೆ** ತೋರುವುದು. ರಹಸ್ಯಗರ್ಭಿತವಾದ ವಿಷಯಕ್ಕೆ ಒಗಟು ಎನ್ನುವರು. ಅಂತಹ ಒಗಟನ್ನು ಬಿಡಿಸಿದರೆ ಮಾತ್ರ ಅದರ ಅಂತ ರಾರ್ಥವುಂಟಾಗಲು ಸಾಧ್ಯ.

೩. ಶ್ರೀಪರಮಾತ್ಮನು ಸತ್ವಾದಿಪ್ರಾಕೃತಗುಣಗಳಿಂದ ದೂರನು. ಪ್ರಕೃತಿ ಸಂಬಂಧವೇ ಇಲ್ಲದ ಪರಮವಿಲಕ್ಷಣವಾದ ಚಿದಾನಂದಮೂರ್ತಿಯು. ಅಂತಹ **ತ್ರಿಗುಣವರ್ಜಿತನ** ಗುಣಗಳು ಅಪಾರ. ಪ್ರತಿಗುಣವೂ ಪರಿಪೂರ್ಣ ವಾದವು. ಅನಂತ ಕಲ್ಯಾಣಗುಣಗಣಪರಿಪೂರ್ಣನಾದ ಆ ಅಗಣಿತಮಹಿಮನು ಸಮಸ್ತದೋಷವಿದೂರನು. ಅಂತೆಯೇ ಆತನ ಗುಣರಾಶಿಗಳು **ಅನುಲ** (ದೋಷಗಳಿಲ್ಲದ)ವೆನಿಸುವುವು. ಅಂತಹ **ತ್ರಿಗುಣವರ್ಜಿತನ ಅನುಲ ಗುಣಗಳನ್ನು** ಸದಾ ಕೊಂಡಾಡುತ್ತಾ, ಅದರಲ್ಲೇ ತನ್ಮಯನಾಗಿ, ಆನಂದದ ಉದ್ರೇಕದಿಂದ ಉಬ್ಬುತ್ತಾ ಹಿಗ್ಗುತ್ತಾ ಇರುವ ಲೋಕೋತ್ತರಪುರುಷರೇ **ಪೊಗಳಿ ಹಿಗ್ಗುವ ಭಾಗವತರು.**

೪. ಅಂತಹ ಪರಮಭಾಗವತರಿಗೆ ಹರಿಕಥಾಮೃತವು ಅಧಿಕವಾದ ಭಕ್ತಿಯನ್ನೂ, ಭಗವತ್ಸಂಬಂಧದಾದ ವಿಶೇಷ ಜ್ಞಾನವನ್ನೂ ಇತ್ತು, ಅವರಿಗೆ ದೃಢ ಭಕ್ತಿ, ವಿಜ್ಞಾನಗಳ ದ್ವಾರಾ ಅತಿಶಯವಾದ ಆನಂದವನ್ನು ಕೊಡುವುದು.

ಸದಾ ಹರಿಕಥಾಮೃತದಲ್ಲಿ ಆಸಕ್ತರಾಗಿರುವ ಅಂತಹ ಭಾಗವತರನ್ನು ಜೀವನ ದಲ್ಲಿ ಆಗಾಗ್ಗೆ ಬಂದು ಒದಗುತ್ತಿರುವ ವಿಪತ್ಪರಂಪರೆಗಳಿಂದ ರಕ್ಷಿಸಿ, ಕಾಪಾಡು ವುದೆಂದು ತಿಳಿಸುತ್ತಾರೆ–ಪ್ರಸಕ್ತ ಪದ್ಯದಿಂದ. ॥ ೨೦ ॥

## ಪದ್ಯ ೨೧

**ಮೂಲ :**

**ಪರಮತತ್ತ್ವ ರಹಸ್ಯವಿದು ಭೂ ।**
**ಸುರರು ಕೇಳುವುದು ಸಾದರದಿ ನಿ ।**
**ಷ್ಠುರಿಗಳಿಗೆ ಮೂಢರಿಗೆ ಪಂಡಿತಮಾನಿ ಪಿಶುಣರಿಗೆ ॥**
**ಅರಸಿಕರಿಗಿದು ಪೇಳ್ವುದಲ್ಲನ ।**
**ವರತ ಭಗವತ್ಪಾದಯುಗಳಾಂ ।**
**ಬುರುಹ ಮಧುಕರನೆನಿಸುವರಿಗಿದನರುಪು ಮೋದದಲಿ ॥೨೧॥**

**ಅವತರಣಿಕೆ :**

ಶ್ರೇಷ್ಠವಾದ ರಹಸ್ಯತತ್ತ್ವಗಳಿಂದ ಕೂಡಿದ ಈ ಹರಿಕಥಾಮೃತಸಾರ ವೆಂಬ ಗ್ರಂಥವನ್ನು ನಿಷ್ಠುರವಾಕ್ಯಗಳನ್ನೇ ಆಡುವವರಿಗೆ, ಭಗವದ್ಭಕ್ತಿ ರಹಿತರಾದ ಡಾಂಭಿಕರಿಗೆ, ಪಂಡಿತನೆಂಬ ಅಹಂಕಾರವುಳ್ಳವರಿಗೆ, ದೂಷಕರಿಗೆ ಅನಾರ್ಯರಿಗೆ (ಅಸಂಸ್ಕೃತರಿಗೆ) ಹೇಳಲೇಕೂಡದು. ನಿರಂತರದಲ್ಲಿಯೂ ಭಗವಂತನ ಪಾದಾರವಿಂದಗಳಲ್ಲಿ ದುಂಬಿಯಂತೆ, ಹರಿಚರಿತಾಮೃತವೆಂಬ ಅಮೃತಪಾನದಲ್ಲಿ ಆಸಕ್ತರಾದವರಿಗೆ ಮಾತ್ರ ಹೇಳತಕ್ಕದ್ದು–ಎಂದು ತಿಳಿಸು ತ್ತಾರೆ, ಪ್ರಸಕ್ತ ಸಂಧಿಗತ ೨೧ನೆಯ ಈ ಪದ್ಯದಿಂದ. ॥ ೨೦ ॥

**ಪ್ರತಿಪದಾರ್ಥ :**

**ಇದು**= ಹರಿಕಥಾಮೃತಸಾರವೆಂಬ ಪ್ರಸಕ್ತಗ್ರಂಥವು, **ಪರಮ**

**ರಹಸ್ಯ**=ಸರ್ವೋತ್ತಮವಾದ ಶ್ರೀಹರಿಯ (ಪರಮ) ವಿಷಯವಾದ ತತ್ತ್ವದ ಗೂಢಾರ್ಥಗಳಿಂದ ಕೂಡಿದ್ದು, **ಸಾದರದಿ**=ಅತ್ಯಂತ ಶ್ರದ್ಧಾಸಕ್ತಿಗಳಿಂದ ಕೂಡಿದವರಾಗಿ, **ಭೂಸುರರು**=ಜ್ಞಾನಿಗಳಾದ ವಿಪ್ರರು, **ಕೇಳುವುದು**=ಶ್ರವಣಮಾಡುವವರಾಗಬೇಕು, **ನಿಷ್ಠುರಿಗಳಿಗೆ**=ಇಂತಹ ರಹಸ್ಯವಿಷಯಗಳನ್ನು–ಇದರಲ್ಲೇನಿದೆ ಮಹಾ ? ಎಂಬ ಭಾವನೆ ಇರುವ ನಿಷ್ಠುರವಾಕ್ಯಗಳನ್ನು ಆಡುವವರಿಗೆ, **ಮೂಢರಿಗೆ**=ನಿಜವಾದ ಭಕ್ತಿಯಿಲ್ಲದೆ, ಕೇವಲ ಡಾಂಭಿಕ ಪ್ರದರ್ಶನಕ್ಕಾಗಿ ತಿಳಿಯಬೇಕೆಂಬ ಜ್ಞಾನರಹಿತರಿಗೆ, **ಪಂಡಿತಮಾನಿ**=ನಾನು ಮಹಾ ಪಂಡಿತನಾಗಿದ್ದೇನೆ. ಈ ಗ್ರಂಥದಿಂದ ಹೆಚ್ಚಾಗಿ ತಿಳಿಯಬೇಕಾದುದು ಏನೂ ಇಲ್ಲ ಎಂಬ ದುರಭಿಮಾನಿಗಳಿಗೆ, **ಪಿಶುಣರಿಗೆ**=ವಿನಾಕಾರಣ ದೂಷಣಮಾಡುವವರಿಗೆ, ಚಾಡಿ ಹೇಳತಕ್ಕವರಿಗೆ, **ಅರಸಿಕರಿಗೆ**=ತತ್ತ್ವಗತ ರಸಾಸ್ವಾದನ ಮಾಡಲು ಸಾಮರ್ಥ್ಯವಿಲ್ಲದ ಅಸಂಸ್ಕೃತರಿಗೆ, **ಇದು ಪೇಳ್ವುದಲ್ಲ**=ಈ ಗ್ರಂಥೋಕ್ತ ವಿಷಯಗಳನ್ನು ಹೇಳತಕ್ಕದ್ದಲ್ಲ, **ಅನವರತ**=ಸದಾ ಸರ್ವಕಾಲದಲ್ಲೂ, **ಭಗವತ್ಪಾದಯುಗಳ**=ಸರ್ವೋತ್ತಮನಾದ ಷಡ್ಗುಣೈಶ್ವರ್ಯಸಂಪನ್ನನಾದ ಭಗವಂತನ ಪಾದದ್ವಯಗಳೆಂಬ, **ಅಂಬುರುಹ**=ಕಮಲಗಳಿಗೆ, **ಮಧುಕರನೆನಿಸುವವರಿಗೆ**=ಭ್ರಮರ ಸದೃಶರಾಗಿರುವ, ಶ್ರೀಹರಿಪಾದಪದ್ಮಮಧುಪನೆನಿಸುವ, ಭಗವದ್ಭಕ್ತರಿಗೆ, **ಇದನು**=ಈ ರಹಸ್ಯ ವಿಷಯಗಳನ್ನು **ಮೋದದಲಿ**=ಸಂತೋಷದಿಂದ, **ಅರುಪು**=ತಿಳಿಸುವವನಾಗು. ॥ ೨೦ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :

ಈ ಗ್ರಂಥದ ಮರ್ಮವನ್ನು ದಾರಿಗೆ ತಿಳಿಸಬಹುದು, ದಾರಿಗೆ ತಿಳಿಸಬಾರದು ಎಂದರೆ ಅಂಥಾ ಅಧಿಕಾರಿಗಳನ ಹೇಳತಾರೆ.

ಈ ಹರಿಕಥಾಮೃತಸಾರವೆಂಬುದು ಅತ್ಯುತ್ತಮವಾದ ಅನುಷ್ಠಾನ ಮಾಡಿ ಸದ್ಗತಿ ಐದತಕ್ಕ ತತ್ತ್ವಗಳ ಹೇಳುವಂಥಾದ್ದು. ಇದರನ್ನ ಭೂದೇವತೆಗಳಾದ ಜ್ಞಾನಿಗಳಾದ ಬ್ರಾಹ್ಮಣರು ಕೇವಲ ಆಸಕ್ತಿ ಉಳ್ಳವರಾಗಿ ಕೇಳೋವ

ರಾಗಬೇಕು. ವಿಷಯವಿರಕ್ತರಾಗಬೇಕೆಂಬುವರು ಕೇಳತಕ್ಕದ್ದು. ದಾರಾದರೆ ಭಗವತ್ತತ್ತ್ವಗಳ ತಿಳಿಕೋಬೇಕು ಎಂತ ಇಚ್ಛಾ ಇದ್ದರೂನೂ ಕೇಳಿದರೆ ಅವರು ಒಳ್ಳೇ ತತ್ತ್ವಮಾರ್ಗಗಳ ತಿಳಿಯತಾರೆ. (ಇದರ ಮಹಾತ್ಮ್ಯಯೂನೂ, ಇದರಲ್ಲಿ ಹೇಳಿರತಕ್ಕ ವಿಚಾರ ದಾರಿಗೆ ಹೇಳಬಾರದೆಂದರೆ) ಈ ಗ್ರಂಥದ ಅತಿಶಯವೇನು ಮೂಲ ಟೀಕಾದಿ ಗ್ರಂಥಗಳು, ಪುರಾಣಗಳು ವೇದಶ್ರುತಿಗಳು ಅನೇಕ ಪ್ರಕಾರ ವದೆ ಎಂತ ಇತ್ಯಾದಿ ನಿಷ್ಠುರ ವಾಕ್ಯಗಳ ಮಾತನಾಡತಕ್ಕವರಿಗೇನೂ, ಆದರ ವಿಲ್ಲದ, ಭಗವನ್ಮಹಿಮಾ ತಿಳಿಕೊಂಬೋದರಲ್ಲಿ ಆಶಾ ಇಲ್ಲದವರಿಗೆ, ಡಾಂಭಿಕ ಪ್ರದರ್ಶನ ನಿಮಿತ್ತ ತಿಳಿಕೊಂಬೋದು ಎಂತ ಅನತಕ್ಕವರಿಗೆ, ಇನ್ನೂ ಶುದ್ಧ ವಾಗಿ ಪಶುಸದೃಶರಾಗಿ ಇರತಕ್ಕವರಿಗೇನು, ಶಾಸ್ತ್ರ ಓದಿ ಸರ್ವವೂ ತಿಳಿ ಕೊಂಡಿದ್ದೇವು ಈ ಕನ್ನಡಭಾಷಾ ಕಾವ್ಯದಿಂದ ತಿಳಿಕೋಬೇಕಾದ ವಿಷಯ ಏನು ಅದೆ ಎಂತ ಅನತಕ್ಕ ಪಂಡಿತರಿಗೇನು, ಈ ಗ್ರಂಥದಲ್ಲಿ ಇಲ್ಲದ ದೂಷಣೆ ಗಳನ್ನು ಹೇಳಿ ದೂಷಣ ಮಾಡತಕ್ಕವರಿಗೇನು, ಇನ್ನೂ ಚಾಡಿ ಹೇಳತಕ್ಕವರಿ ಗೇನು, ಇದರ ಮಹಾತ್ಮ್ಯ ಎಂಬ ರಸವನ್ನು ಗ್ರಹಿಸೋ ಯೋಗ್ಯತಾ ಇಲ್ಲ ದವರಿಗೇನು ಇಂಥಾವರಿಗೆಲ್ಲಾ ಈ ಗ್ರಂಥವನ್ನ ಹೇಳತಕ್ಕದ್ದಲ್ಲ. (ಆದರೆ ದಾರಿಗೆ ಹೇಳಿ ತೋರಿಸಬೇಕೆಂದರೆ), ನಿರಂತರದಲ್ಲೂ ಶ್ರೀ ಪರಮಾತ್ಮನ ಅನು ಗ್ರಹಕ್ಕೆ ಪಾತ್ರರಾಗಿ ಸದ್ಗತಿ ಐದಬೇಕೆಂಬ ಇಚ್ಛಾ ಉಂಟಾಗಿ, ಷಡ್ಗುಣೈಶ್ವರ್ಯ ಸಂಪನ್ನನಾದ ಶ್ರೀಲಕ್ಷ್ಮೀಪತಿಯಾದ ಶ್ರೀಪರಮಾತ್ಮನ ಪಾದದ್ವಯಗಳೆಂಬ ಕಮಲಗಳಲ್ಲಿ ಭ್ರಮರಸದೃಶವಾದ ಮನಸ್ಸನ್ನು ಇಟ್ಟು, ತದ್ಗತ ಮಹಾತ್ಮೆ ಎನ ತಕ್ಕ ಮಧುವನ್ನು ಪಾನಮಾಡತಕ್ಕವರು ದಾರೋ ಅಂಥಾ ಅಧಿಕಾರಿಗಳಿಗೆ ಅತ್ಯಂತ ಸಂತೋಷದಿಂದ ಈ ಗ್ರಂಥದ ತಾತ್ಪರ್ಯವನ್ನು ತಿಳಿಸೋವನಾಗಬೇಕು ಎಂತ ತಾತ್ಪರ್ಯ. ॥ ೨೧ ॥

**೨. ಭಾವಪ್ರಕಾಶಿಕೆ :**

ಈ ಗ್ರಂಥ ಶ್ರವಣಾದಿಗಳಿಗೆ ಭಗವದ್ಭಕ್ತರೇ ಅಧಿಕಾರಿಗಳೆಂದು ಹೇಳು ತ್ತಾರೆ. ಈ ಗ್ರಂಥವು ಪರಮರಹಸ್ಯವಾದ ಭಗವತ್ತತ್ವಗಳಿಂದ ಕೂಡಿರು ವುದು. ಇದನ್ನು ಭಕ್ತರಾದ ಬ್ರಾಹ್ಮಣರು ಲಕ್ಷ್ಯದಲ್ಲಿಡಬೇಕು. ಸರ್ವದಾ ನಿಷ್ಠುರವಾಕ್ಯಗಳನ್ನೇ ಮಾತನಾಡುತ್ತಿರುವವರು, ಮೂಢರು, ತಾವೇ ಪಂಡಿತ

ರೆಂಬ ಅಹಂಕಾರವುಳ್ಳವರು, ಹಟವಾದಿಗಳು, ಅರಸಿಕರು ಇಂತಹವರಿಗೆ ಇದನ್ನು ಹೇಳಬಾರದು. ಸರ್ವಕಾಲದಲ್ಲಿ ಪರಮಾತ್ಮನ ಪಾದಾರವಿಂದಗಳಲ್ಲಿ ದೃಢಭಕ್ತಿಯುಳ್ಳವರಾರೋ ಅವರಿಗೇನೇ ಇದನ್ನು ಹೇಳತಕ್ಕದ್ದು. ॥೨೦॥

**೩. ಇದಕ್ಕೆ ಭಾವದರ್ಪಣ ಟೀಕಾವ್ಯಾಖ್ಯಾನ ಕೊಟ್ಟಿಲ್ಲ.**

**೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ (ಸಂಸ್ಕೃತಮೂಲ) :**

"ಪರಮು"– ಇತಿ॥ "ಅನಾವಿಷ್ಕುರ್ವನ್ ಅನ್ವಯಾತ್"॥ "ಅನಾರ್ಯಕಾಯಾನೃಜವೇ ಶಠಾಯ ನೈತತ್ ತ್ವಯಾ ದಾಂಭಿಕಾಯಾ"॥ "ಅಶುಶ್ರೂಷೋಃ"॥ ಅಭಕ್ತಾಯ ದುರ್ವಿನೀತಾಯ ಅನ್ಯವಿದ್ಯಾ ಸ್ವಕ್ಷ್ಯಸ್ಯ ವ್ಯಾಖ್ಯಾನ ಶಕ್ತಿಹೀನಾಯ"॥ ಇತಿ ನಿಷೇಧವಚನೇಭ್ಯಃ ಚ"॥ ಅರುಪುವದು–ತಿಳಿಸುವುದು॥ ॥೨೦॥

**ಕನ್ನಡಾರ್ಥ :**

ಪ್ರಸಕ್ತಪದ್ಯದಲ್ಲಿ "ಅನಧಿಕಾರಿಗಳಿಗೆ ಈ ರಹಸ್ಯವಿಷಯಗಳನ್ನು ತಿಳಿಸಕೂಡದು. ಭಗವದ್ಭಕ್ತರಿಗೆ ನಿರೂಪಿಸಬೇಕು"– ಎಂದು ದಾಸವರ್ಯರ ಭಾವ. ಇದಕ್ಕೆ ಅಧಾರ, **ಬ್ರಹ್ಮಸೂತ್ರವಾಕ್ಯ. ಓಂ—ಅನಾವಿಷ್ಕುರ್ವನ್ ಅನ್ವಯಾತ್ ಓಂ** ಎಂದು ತೃತೀಯಾಧ್ಯಾಯದ ಕೊನೆಯ-ಪಾದದಲ್ಲಿ ಉಕ್ತವಾಗಿದೆ, ಗುರುಗಳ **ಸಾಧನೆಗೆ ಸಹಕಾರಿಯಾದ** ತತ್ತ್ವವಿಷಯಗಳನ್ನು **ವಿಶೇಷ** ಪ್ರಸಿದ್ಧ ಇತ್ಯಾದಿ ಆವಿಷ್ಕಾರಗಳಿಲ್ಲದೇ ಉಪದೇಶಿಸಬೇಕು. ಕಂಡ **ಕಂಡ ಸ್ಥಳ**ಗಳಲ್ಲಿ ತತ್ತ್ವೋಪದೇಶಕೂಡದು, ಆದರಿಂದ ಅನಧಿಕಾರಿಗಳು ಶ್ರವಣಮಾಡು ವರು. ಆದರಿಂದ ವಿದ್ಯೆಯು ಫಲಿತವಾಗುವುದಿಲ್ಲ—– ಎಂಬುದೇ ಸೂತ್ರದ ಭಾವಾರ್ಥ. ವಿದ್ಯಾಭಿಮಾನಿದೇವತೆಯು ವಾಯುದೇವರಿಗೆ ಈ ರೀತಿ ಬಿನ್ನವಿಸಿಕೊಳ್ಳುವಳು– "ಹೇ ದಯಾನಿಧೇ, ನನ್ನನ್ನು ಸಂರಕ್ಷಿಸು. ಅನಾರ್ಯನಿಗೂ ಕುಟಿಲನಿಗೂ, ಶಠನಿಗೂ ಉಪದೇಶಿಸಬೇಡ. ಋಜುಸ್ವಭಾವದ ಗುರುಶುಶ್ರೂಷಾ ಇತ್ಯಾದಿ ಸದ್ವೃತ್ತಿಗಳಿಲ್ಲದವರಿಗೆ ಉಪದೇಶಿಸತಕ್ಕದ್ದಲ್ಲ. ಡಾಂಭಿಕರಿಗೆ, ದುರ್ವಿನೀತರಿಗೆ, ವಿಷಯಗ್ರಹಣ ಶಕ್ತಿಯಿಲ್ಲದ ಮೂಢರಿಗೆ ಕೂಡದು–

ಎಂದು ನಿಷೇಧರೂಪ ವಚನಗಳಿರುವುದರಿಂದ, ದಾಸರಾರ್ಯರ ಈ ಭಾವವು ಪರಮಮಾನ್ಯವು. ॥೨೦॥

೫. **ಶ್ರೀಗುರುಹೃದಯಪ್ರಕಾಶಿಕೆ**

ಈ ಗ್ರಂಥ ಪರಮತತ್ತ್ವರಹಸ್ಯವೆಂಬ ವೇದಾಂತಸಾರಾರ್ಥವಾದ್ದರಿಂದ ಭೂಸುರರೆಂಬ ವೇದಾಂತಬಲ್ಲ ಸಜ್ಜನರು ಸದಾ ಪರಮಾದರದಿಂದ ಕೇಳಬೇಕು. ಗ್ರಂಥದಲ್ಲಿ ಇಲ್ಲದದೋಷ ಹೇಳುವ ಪಿಶುನರೆಂಬ ಚಾಡಿಕೋರಜನಕ್ಕೂ, ಹೇಳಿದನ್ನ ತಿಳಿಯತಕ್ಕ ಶಕ್ತಿ ಇಲ್ಲದ ಬಾಲಕಸದೃಶ ಮೂಢರೆಂಬುವರಿಗೂ, ನ್ಯಾಯ ತಿಳಿಯದೆ ವಿರೋಧ ಮಾತನಾಡುವ ನಿಷ್ಠುರಿಗಳೆಂಬ ಜನಕ್ಕೂ, ನಾವೇ ತಿಳಿದವರು ಎಂದು ತಿಳಿಯದಿದ್ದರೂ ಗರ್ವಪಡುವ ಪಂಡಿತಮಾನಿಗಳೆಂಬುವವರಿಗೂ, ವಿಶೇಷಾರ್ಥ ದೊರಕಿತೆಂದು ಸಂತೋಷಪಡದ ಅರಸಿಕರೆಂಬುವರಿಗೂ ಸಹ ಇದು ಹೇಳತಕ್ಕದ್ದಲ್ಲ. ದೇವರ ಪಾದಕಮಲಗಳಿಗೆ ಭ್ರಮರದಂತೆ ಆಸಕ್ತರಾಗುವ ಸದ್ಭಕ್ತರಿಗೆ ಈ ಗ್ರಂಥವನ್ನು ಸಂತೋಷದಿಂದ ಹೇಳಬೇಕು ಎಂದರ್ಥ ॥೨೦॥

# ಸರ್ವವ್ಯಾಖ್ಯಾನಸಾರಸಂಗ್ರಹ

ಶ್ರೀಹರಿಕಥಾಮೃತಸಾರವೆಂಬ ಪ್ರಸಕ್ತಗ್ರಂಥೋಕ್ತರಹಸ್ಯತತ್ತ್ವಗಳ ವಿಷಯಗಳನ್ನು ಯಾರಿಗೆ ಉಪದೇಶಿಸಬೇಕು, ಎಂತಹ ಅನಧಿಕಾರಿಗೆ ಹೇಳಬಾರದು– ಎಂದು ತಿಳಿಸುತ್ತಾರೆ ಪ್ರಸಕ್ತ ಪದ್ಯದಿಂದ.

೧. ಈ ಗ್ರಂಥೋಕ್ತವಿಷಯಗಳು ಅತ್ಯಂತ ರಹಸ್ಯವಾದ ತತ್ತ್ವಗಳಿಂದ ಕೂಡಿವೆ. ಗೂಢಾರ್ಥಭಾವಗಳಿಂದ ಕೂಡಿದ ಈ ತತ್ತ್ವರಹಸ್ಯಗಳನ್ನು ಕೇಳಲು ನಿಜವಾದ ಅಧಿಕಾರಿಗಳೆಂದರೆ, ನಿರ್ಮತ್ಸರಿಗಳಾದ ಜ್ಞಾನಿಗಳಾದ ವಿಪ್ರೋತ್ತಮರು. ಅಂತಹ **ಭೂಸುರರು** ಇದನ್ನು ಆದರಪೂರ್ವಕವಾಗಿ ಕೇಳಬೇಕೆಂದು ದಾಸರಾಯರು ವಿನಯದಿಂದ ಪ್ರಾರ್ಥಿಸುತ್ತಾರೆ.

೨. ಸದ್ವಿಷಯಗಳಲ್ಲಿ ಯಾವಾಗಲೂ ಆಕ್ಷೇಪ ಎತ್ತುವುದು. ಇದರಲ್ಲೇನಿದೆ ? ಅದರಲ್ಲೇನಿದೆ ? ಎಂದು ಸಜ್ಜನರ ಮನಸ್ಸಿಗೆ ನೋವನ್ನುಂಟು ಮಾಡುವ ನಿಷ್ಠುರ ನುಡಿಗಳನ್ನು ಆಡುವವರಿಗೆ ಇದನ್ನು ಉಪದೇಶಿಸಕೂಡದು. ಅವರು ಶ್ರವಣಕ್ಕೆ ಅನಧಿಕಾರಿಗಳು.

೩. ವಿಷಯಗ್ರಹಣ ಸಾಮರ್ಥ್ಯವಿಲ್ಲದವರು **ಮೂಢರು.** ಅಂತಹ ಮೂಢರಿಗೆ ಇದು ಏನೂ ಪ್ರಯೋಜನವಾಗಲಾರದು. ಅವರೂ ಅನಧಿಕಾರಿಗಳು.

೪. "ನಾನು ದೊಡ್ಡ ಪಂಡಿತ. ಇತರರಿಗೆ ಏನೂ ತಿಳಿದಿಲ್ಲ"–ಎಂಬ ಅಹಂಕಾರ ಭಾವನೆಯಿಂದ ಕೂಡಿರುವವನು ಪಂಡಿತನಾದಾಗ್ಯೂ, ಅವನು **ಪಂಡಿತಮಾನಿ** ಎನಿಸುತ್ತಾನೆ. ಅಂತಹ ಗರ್ವಿಗೆ ಇದರ ಉಪದೇಶ ನಿಷ್ಫಲ.

೫. ಯಾವಾಗಲೂ ಚಾಡಿ ಹೇಳುವ ದುಷ್ಟವೃತ್ತಿಯುಳ್ಳ ದುಷ್ಟನಿಗೆ **ಪಿಶುನ**ನೆಂದು ಹೆಸರು. ಅಂತಹ ಪಿಶುಣರು ಶ್ರವಣಾಧಿಕಾರಿಗಳಲ್ಲ.

೬. ಅಸಂಸ್ಕೃತರಾದ ಜನರಿಗೆ **ಅರಸಿಕ**ರೆಂದು ಹೆಸರು. ಅಂತಹವರು ಪ್ರಮೇಯ ರಹಸ್ಯಗಳನ್ನು ಅರಿತು, ತದ್ಗತವಾದ ಭಾವರೂಪವಾದ ರಸವನ್ನು ಅನುಭವಿಸಲಾರರು. ಅಂತಹ ಅರಸಿಕರಿಗಿದು ಪೇಳ್ವುದಲ್ಲ.

೭. ಸರ್ವಕಾಲದಲ್ಲೂ ಭಗವಂತನ ಪಾದಕಮಲಗಳಲ್ಲಿ ಭಕ್ತಿ ಭಾವದಿಂದ ಕೂಡಿದವರಾಗಿ ದುಂಬಿಯಂತೆ ಚರಿಸುತ್ತಿರುವವರೇ ನಿಜವಾದ ಭಗವದ್ಭಕ್ತರು. ಪರಿಪೂರ್ಣನಾದ ಶ್ರೀಹರಿಯ ಚರಣದ್ವಯಗಳೇ **ಭಗವತ್ಪಾದಯುಗಳಗಳು.** ಅಂಬು ಎಂದರೆ ನೀರು. ರುಹ–ಜಲವನ್ನು ಭೇಧಿಸಿಕೊಂಡು ಬರುವ ಕಮಲಕ್ಕೆ **ಅಂಬೋರುಹ**ವೆಂದು ಹೆಸರು. ಅಂತಹ **ಭಗವತ್ಪಾದಯುಗಳಾಂಬುರುಹ** ಎಂಬ ಚರಣಪದ್ಮಗಳಲ್ಲಿ ಪುಷ್ಪಗತ ಮಕರಂದವನ್ನು ಹೀರಿ, ಜೇನನ್ನು ಉತ್ಪತ್ತಿಮಾಡುವ ದುಂಬಿಗೆ **ಮಧುಕರ**ನೆಂದು ಹೆಸರು. ಅಂತಹ ಶ್ರೀಹರಿಯ ಚರಣಾರವಿಂದ ಮಧುಕರರೆಂದೆನಿಸುವ ಹರಿ

ಕಥಾಮೃತಪಾನಾಸಕ್ತರಾದ ಭಗವದ್ಭಕ್ತರೇ ಈ ಪರಮತತ್ತ್ವ ರಹಸ್ಯಗಳನ್ನು ಕೇಳಲು ನಿಜವಾದ ಶ್ರವಣಾಧಿಕಾರಿಗಳು ಅಂತಹವರಿಗೆ ಮಾತ್ರ ಉಪದೇಶಿಸಬೇಕೆಂದು ಹೇಳುತ್ತಾರೆ. ॥೨೦॥

## ಪದ್ಯ ೨೨

**ಮೂಲ :**

**ಲೋಕವಾರ್ತೆಯಿದಲ್ಲ ಪರಲೋ ।**
**ಕೈಕನಾಥನ ವಾರ್ತೆ ಕೇಳ್ವರೆ ।**
**ಕಾಕುಮನುಜರಿಗಿದು ಸಮರ್ಪಕವಾಗಿ ಸೊಗಸುವುದೇ ॥**
**ಕೋಕನದ ಪರಿಮಳವು ಷಟ್ಪದ ।**
**ಸ್ವೀಕರಿಸುವಂದದಲಿ ಜಲಚರ ।**
**ಭೇಕಬಲ್ಲುದೆ ಇದರ ರಸ ಹರಿಭಕುತಗಲ್ಲದಲೆ ॥** ॥೨೨॥

**ಅವತರಣಿಕೆ :**

ಪರಾತ್ಪರನಾದ ಲೋಕಪ್ರಭುವಿನ ಚರಿತ್ರೆ ಇದು. ಲೋಕವಾರ್ತೆಯಲ್ಲ. ಇಂತಹ ಅಪಾರ ಗುಣಗಣಸಂಪನ್ನನ ಚರಿತಾಮೃತರೂಪವಾದ ಈ ಗ್ರಂಥೋಕ್ತ ವಿಷಯವನ್ನು ಕುಟಿಲ ಮನಸ್ಸುಳ್ಳ ದುಷ್ಟರಾದ ಜನರು ಗ್ರಹಿಸಲಾರರು ಎಂದು ಸುಂದರವಾದ ದೃಷ್ಟಾಂತದಿಂದ ವಿವರಿಸುತ್ತಾರೆ. ಪ್ರಸಕ್ತ ಸಂಧಿಗತ ೨೨ನೆಯ ಈ ಪದ್ಯದಿಂದ. ॥೨೨॥

**ಪ್ರತಿಪದಾರ್ಥ :**

**ಇದು**=ಶ್ರೀಹರಿಕಥಾಮೃತಸಾರವೆಂಬ ಈ ಗ್ರಂಥದಲ್ಲಿ ಪ್ರತಿಪಾದಿತವಾದ ತತ್ತ್ವವಿಚಾರಗಳು, **ಲೋಕವಾರ್ತೆಯಲ್ಲ**=ಪ್ರಾಪಂಚಿಕವಾದ ನಶ್ವರ

ವಿಷಯಭೋಗಗಳಿಂದ ಕೂಡಿದ ವಾರ್ತೆಯಲ್ಲ. **ಪರಲೋಕ**=ಮುಕ್ತಿಧಾಮ ಗಳೆನಿಪ ವೈಕುಂಠಾದಿ ಲೋಕಗಳಿಗೆ ಒಡೆಯನಾದ, **ಏಕನಾಥನ**=ಒಬ್ಬನೇ ಸ್ವಾಮಿಯಾದ, (ಅನ್ಯರಾರೂ ಲೋಕನಾಥರಲ್ಲ). ಅದ್ವಿತೀಯನಾದ ಜಗತ್ಪ್ರಭುವಿನ, **ವಾರ್ತೆ**=ಮಹಾಮಹಿಮೆಗಳನ್ನು ತಿಳಿಸುವ ಗ್ರಂಥವಿದು. **ಕೇಳ್ವರೆ**=ವಿಷಯಭೋಗಾಸಕ್ತರಾದ ಕೇವಲ ಐಹಿಕ ಸುಖಾಪೇಕ್ಷಿಗಳಾದವರು ಈ ಗ್ರಂಥೋಕ್ತ ವಿಷಯಗಳನ್ನು ಎಂದಿಗಾದರೂ ಕೇಳುತ್ತಾರೆಯೇ ? ಇಲ್ಲ ವೆಂದು ಅರ್ಥ. **ಇದು**=ಶ್ರೀಹರಿಕಥಾಮೃತವು **ಕಾಕುಮನೆಜರಿಗೆ**=ಕುಟಿಲ ಮನಸ್ಸುಳ್ಳ ವಿಷಯಾಸಕ್ತರಾದ ಜನರಿಗೆ, **ಸಮರ್ಪಕವಾಗಿ**=ಮನಸ್ಸಿಗೆ ತೃಪ್ತಿ ಕರವಾಗಿ, **ತೋರುವುದೇ**=ಗೋಚರಿಸುತ್ತದೆಯೇ ? ಅಂದರೆ, ಸರ್ವಾತ್ಮನಾ ಇಲ್ಲವೆಂದರ್ಥ. **ಕೋಕನದ**=ರಕ್ತವರ್ಣವಿಶಿಷ್ಟವಾದ ಕಮಲದಲ್ಲಿ ಇರುವ, **ಪರಿಮಳವು**=ಸುಗಂಧಯುಕ್ತವಾದ ಮಕರಂದವನ್ನು **ಷಟ್ಪದ**=ಭ್ರಮರವು **ಸ್ವೀಕರಿಸುವಂದದಲಿ**=ಪಾನಮಾಡಿ ಸುಖಪಡುವಂತೆ, **ಜಲಚರ**=ಸದಾ ನೀರಿನಲ್ಲಿಯೇ ಸಂಚರಿಸುವ, **ಭೇಕ**=ಕಪ್ಪೆಯು, **ಬಲ್ಲುದೆ**=ತಿಳಿಯಲು ಸಾಧ್ಯವೇ ? **ಇದರ ರಸ**=ಅದರಂತೆ, ಶ್ರೀಹರಿನಾಮಾಮೃತರಸದ ಸವಿ ಯನ್ನು, **ಹರಿಭಕುವಲ್ಲದೆಲೆ**=ಭಗವದ್ಭಕ್ತರಾದವರು ಮಾತ್ರ ಅನುಭವಿಸಿ, ಸುಖಪಡಬಲ್ಲರು. ॥೨೨॥

# ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :

ಹರಿಭಕ್ತ ಈ ಗ್ರಂಥಾವಲೋಕನ ಮಾಡಿ ಸುಖಪಡತಾನೆ ಎಂತಲೂ ಹೇಳತಾರೆ.

ಲೋಕಕ್ಕೆ ಸಂಬಂಧವಾದ ಪ್ರಾಕೃತ ವಿಷಯಭೋಗಾದಿಗಳಲ್ಲಿ ರುಚ್ಯು ತ್ಪಾದನ ಮಾಡಿ ಕೊಡತಕ್ಕ ಮಾತುಗಳಿಂದ ಯುಕ್ತವಾದ ಗ್ರಂಥವಲ್ಲ. (ಆದರೆ ದಾವದರಿಂದ ಯುಕ್ತವಾಗಿ ಅದೆ ಅಂದರೆ), ಉತ್ತಮವಾದ ವೈಕುಂಠಾದಿ

ಲೋಕಗಳಿಗೆ, ಸರ್ವಚರಾಚರಗಳಿಗೆ ಸದೃಶರಹಿತನಾದ ಸ್ವಾಮಿಯಾದ ಶ್ರೀಪರಮಾತ್ಮನಲ್ಲಿ ನಿರವಧಿಕಭಕ್ತಿಯುಂಟಾಗಿ, ಜ್ಞಾನ-ಭಕ್ತಿ-ವೈರಾಗ್ಯಗಳಿಂದ ಸದ್ಗತಿ ಐದತಕ್ಕ ರುಚ್ಯುತ್ಪಾದಕವಾದ ಸಂಗತಿಗಳು ಇದರಲ್ಲಿ ಹೇಳಲ್ಪಟ್ಟಿವೆ. ಇಂಥಾ ಸಂಗತಿ ಇರುವ ಈ ಗ್ರಂಥಗತ ಮಾತುಗಳು ಎನತಕ್ಕ ದಿವ್ಯ ಶ್ರೀಪರಮಾತ್ಮನ ಕಥಾವನ್ನ, ವಿಷಯಭೋಗನಿಷ್ಠರಾಗಿ ನಶ್ವರವಾದ ಐಶ್ವರ್ಯಾದಿಗಳು ಸುಖಕರಗಳೆಂದು ತಿಳಿದು ಪರಲೋಕವನ್ನ, ಶ್ರೀಪರಮಾತ್ಮನ್ನ ಮರತು ಇರತಕ್ಕ ಮೂಢಜನರು ಕೇಳಲೇ ಕೇಳಲಾರರು. ಇಂಥಾ ಜನರು ವಿಧಿ-ನಿಷೇಧಗಳಿಲ್ಲದೆ ನಾನಾ ಪ್ರಕಾರ ಮನಸ್ಸನ್ನು ಬಿಟ್ಟು ಸಂಚರಿಸತಕ್ಕ ದುಷ್ಟರಾದವರಿಗೆ ಈ ಗ್ರಂಥವೇನು, ಇದರ ಮಹಿಮೆ ಏನು, ಇದರಲ್ಲಿ ಇದ್ದ ರಸವೇನು ಮನಸ್ಸಿಗೆ ತೃಪ್ತಿಕರವಾಗಿ ಶೋಭಿಸೋದಿಲ್ಲ. ಯಾಕೆ ಅಂದರೆ ತಮ್ಮ ಮಾರ್ಗಕ್ಕೆ ವಿರುದ್ಧವಾಗಿ ಇರೋಣದರಿಂದ ಶೋಭಿಸೋದಿಲ್ಲ. ಇದಕ್ಕೆ ದೃಷ್ಟಾಂತ, ರಕ್ತವರ್ಣ ವಿಶಿಷ್ಟವಾದ ಕಮಲಪುಷ್ಪದಲ್ಲಿ, ಸ್ಥಾನಾಂತರದಲ್ಲಿರುವ ಭ್ರಮರ ಹುಡುಕಿಕೊಂಡು ಬಂದು ತದ್ಗತ ಮಕರಂದವನ್ನ ತೆಗೆದುಕೊಂಡು ಸುಖಪಡೋಪಾದಿಯಲ್ಲಿ, ನೀರಿನಲ್ಲಿ ಸದಾ ಸಂಚಾಮಾಡಿಕೊಂಡು ಇರುವ ಕಪ್ಪೆ, ಸರ್ವದಾ ಆ ಕಮಲದ ಸನಿಹದಲ್ಲೇ ಆವಾಸವಾಗಿ ಇರುತ್ತದೆ. ಇದ್ದರೂ ತದ್ಗತ ಮಕರಂದವನ್ನ ಪಾನಮಾಡೋದಕ್ಕೆ ತಿಳಿಯೋದೆ ಅಂದರೆ ತಿಳಿಯಲಾರದು. ತದ್ವತ್ ಅನೇಕ ಪುರಾಣ ಶಾಸ್ತ್ರ ವೇದಗಳು ಓದಿ ಅದರಲ್ಲಿ ಕಪ್ಪೆವತ್ ಆವಾಸವಾದ ಮನಸ್ಸುಳ್ಳವರಾಗಿ, ಅನುಷ್ಠಾನದಿಂದ ರಹಿತರಾಗಿ, ಅಹಂಮಮತಾಯುಕ್ತರಾಗಿ, ವಿಷಯಭೋಗಾದಿಗಳು ಶ್ರೇಷ್ಠ ಎಂತ ಅನುಷ್ಠಾನಯುಕ್ತರಾದವರು, ಈ ಹರಿಕಥಾಮೃತಸಾರದಲ್ಲಿ ವಿದ್ಯಮಾನವಾದ ರಸ ಸ್ವೀಕರಿಸಿ ಅನುಷ್ಠಾನ ಮಾಡೋದಕ್ಕೆ ಅರಿಯರು. ಆದರೆ ದಾರಿಗೆ ಯೋಗ್ಯವಾಗಿ ತೋರತದೆ ಅಂದರೆ, ಈ ಗ್ರಂಥಗತ ದೇವರ ಮಹಾತ್ಮೆ ಎಂಬ ರಸ, ಶ್ರೀಪರಮಾತ್ಮನಲ್ಲಿ ಭಕ್ತಿಮಾಡಬೇಕೆಂಬುವಗೆ ಆಗೋದೆ ಹೊರ್ತು ಇತರರಿಗೇನೂ ಸುಖಕೊಡೋದಿಲ್ಲ ಎಂತ ತಾತ್ಪರ್ಯ. ॥೨೨॥

## (೨) ಭಾವಪ್ರಕಾಶಿಕೆ :

ಲೋಕದಲ್ಲಿ ಪ್ರಾಯಶಃ ಜನರು ಯಾವ ವೃತ್ತಿಯನ್ನು ಆಚರಿಸುತ್ತಿರುವರೋ, ಅದೇ ವೃತ್ತಿಯಲ್ಲಿದ್ದು, ತಮ್ಮಂತಿರುವ ಜನರ ಸಹವಾಸ ಮಾಡು

ವುದು, ತಕ್ಕಂತಹ ಕಥೆಗಳನ್ನೇ ಕೇಳುವ ಸಂಪ್ರದಾಯ ಇರುವುದು. ನಟವಿಟ ಗಾಯಕಾದಿಗಳು, ವಿಶೇಷವಾಗಿ ನಾಟಕಾದಿಗಳು ಮೊದಲಾದವುಗಳಲ್ಲಿ ಪ್ರೀತಿ ಮಾಡುವರು, ಕಾದಂಬರಿಗಳನ್ನು ಓದಿ ಆನಂದ ಪಡುವರು. ಹಾಗೆಯೇ ಭಗವದ್ಭಕ್ತರು ಭಗವಂತನ ಕಥಾಶ್ರವಣ, ಪಠಣ, ಉತ್ಸವಾದಿಗಳನ್ನು ನೋಡಿ ಆನಂದಿಸುವುದೇ ಸಂಪ್ರದಾಯವು. ಆದ್ದರಿಂದ ಸಾಮಾನ್ಯವಾಗಿ ಪರಮಾತ್ಮ ನಲ್ಲಿ ಭಕ್ತಿ ಇಲ್ಲದವರಿಗೆ ಈ ಗ್ರಂಥವು ರುಚಿಸಲಾರದು. ಏಕೆಂದರೆ ಇದು ಕೇವಲ ಭಗವಂತನ ಮಹಿಮೆಯನ್ನೇ ಹೇಳುವುದೇ ಹೊರತು ಸ್ತ್ರೀಪುರುಷರ ವರ್ಣನ ಕಾವ್ಯದಲ್ಲಿ ಭಗವದ್ಭಕ್ತರಿಗಲ್ಲದೆ ಇತರರಿಗೆ ರುಚಿಸಲಾರದು. ಅದು ಹೇಗೆಂದರೆ, ಭ್ರಮರವು ದೂರದಲ್ಲಿ ಹಾರುತ್ತಿದ್ದರೂ, ಕಮಲದಲ್ಲಿರುವ ಮಕರಂದವನ್ನು ವಾಸನೆಯಿಂದ ತಿಳಿದುಬಂದು, ಪಾನಮಾಡುವುದೇ ಹೊರತು, ನೀರಿನೊಳಗೆ ಹರಿದಾಡುವ ಕಪ್ಪೆಯು ಪಾನಮಾಡಬಲ್ಲುದೇ ? ಇದರಂತೆ ಭಕ್ತರಲ್ಲದ ಇತರರಿಗೆ ರುಚಿಸಲಾರದು. ॥೨೨॥

**೩ ಭಾವದರ್ಪಣ**

ಲೋಕೈಕ–ಲೋಕಗಳಲ್ಲಿ ಮುಖ್ಯನಾದವ ಎಂದರ್ಥ. ಷಟ್ಪದ–ಭ್ರಮರ. ಭೇಕ–ಕಪ್ಪೆ. ॥೨೨॥

**೪ ಶ್ರೀವ್ಯಾಸದಾಸ ಸಿದ್ಧಾಂತ ಕೌಮುದಿ :**

"ಲೋಕ"–ಇತಿ ॥ "ಕೇಳ್ಪರೆ". ಕೋಕನದ=ಪದ್ಮಮ್ ॥ ಷಟ್ಪದ=ಭ್ರಮರ.

ಲೌಕಿಕ ಕಾವ್ಯ ಚಂಪೂ ನಾಟಕ ಮುಂತಾದ ಪ್ರಬಂಧಗಳಂತೆ ಇದು ಅಲ್ಲ-ಎಂದು ಮುಂತಾಗಿ ಇದರ ರಹಸ್ಯದ ಮಹತ್ವವನ್ನು ನಿರೂಪಿಸುತ್ತಾರೆ ॥೨೨॥

**(೫) ಶ್ರೀಗುರುಹೃದಯ ಪ್ರಕಾಶಿಕೆ :**

ದಶಕುಮಾರ ಚರಿತ್ರೆ ಎಂಬ ದಂಡೀಕೃತಕಾವ್ಯಾದಿಗಳಂತೆ ಇಲ್ಲದ ಜನ ಪ್ರಸ್ತಾಪವು, ನಾಟಕಾದಿಗಳಂತೆ ಈ ಲೋಕದ ಸ್ತ್ರೀ-ಪುರುಷರ ವಿರಹ-ವ್ಯಥಾದಿ ವ್ಯರ್ಥ ಆಯುರ್ಹರಣ ವಾರ್ತೆಯು ಸಹ ಈ ಗ್ರಂಥವಲ್ಲದ್ದರಿಂದ, ಕಾಕು ಎಂಬ ವಿಕಾರಿಜನಗಳಿಗೆ ಕೇಳುವುದಕ್ಕೆ ಸಮರ್ಪಕವಾಗಿ ಸೊಗಸುವುದಿಲ್ಲ

ಅಂದರೆ ಸೇರುವುದಿಲ್ಲ. ಕೋಕನದ ಎಂಬ ಕೆಂಪುಸ್ಟೈದಿಲೆಯ ಪರಿಮಳವನ್ನು ಷಟ್ಪದವೆಂಬ ತುಂಬಿ ಸ್ವೀಕರಿಸುವಂತೆ ಹರಿಭಕ್ತರು, ಈ ಗ್ರಂಥಸಾರವೆಂಬ ವೇದಾಂತಾಭಿಪ್ರಾಯವನ್ನು ಬಲ್ಲರೇ ಹೊರ್ತು, ಅದೇ ಜಲದಲ್ಲಿರುವ ಭೇಕ ವೆಂಬ ಕಪ್ಪೆ ಕುಮುದಗಂಧವನ್ನು ತಿಳಿಯದಂತೆ, ರಜಸ್ತಮ ಪ್ರಕೃತಿಗಳಿಗೆ ಈ ಗ್ರಂಥಾಭಿಪ್ರಾಯ ರುಚಿಸುವುದಿಲ್ಲವೆಂದರ್ಥ. ॥೨೨॥

## ಸರ್ವವ್ಯಾಖ್ಯಾನಸಾರಸಂಗ್ರಹ

ಹರಿನಾಮಾಮೃತವು ಹರಿಭಕ್ತರಿಗೆ ಮಾತ್ರ ರುಚಿಸುವುದು. ಅಭಕ್ತ ರಾದ ಇತರರಿಗೆ ರುಚಿಸುವುದಿಲ್ಲವೆಂದು ಪ್ರಸಕ್ತ ಪದ್ಯದಿಂದ, ಸದೃಷ್ಟಾಂತ ವಾಗಿ ತಿಳಿಸುತ್ತಾರೆ.

೧. ಈ ಗ್ರಂಥೋಕ್ತ ವಿಷಯಗಳು ರಹಸ್ಯವಾದ ತತ್ತ್ವಾರ್ಥಗಳಿಂದ ಪರ್ಯಾಪ್ತವಾಗಿವೆ. ಜಗತ್ತಿನ ವಿಷಯಗಳಲ್ಲಿಯೇ ನಮ್ಮ ಮನಸ್ಸು ಸದಾ ಆಸಕ್ತವಾಗಿರುವುದು. ಕೇವಲ ಐಹಿಕ ಭೋಗಗಳ ಕಡೆಗೇ ಮನಸ್ಸು ಮತ್ತು ಇಂದ್ರಿಯಗಳು ವಾಲುವುವು. ವಿಷಯಭೋಗಾದಿಗಳಲ್ಲಿ ಆಸಕ್ತವಾದ ಮನಸ್ಸು ಉಳ್ಳವರಿಗೆ ಭಗವತ್ಸಂಬಂಧವಾದ ವಿಚಾರಗಳನ್ನು ಚಿಂತಿಸಲು ಮನಸ್ಸು ಬಾರದು. ಮನಸ್ಸನ್ನು ರಂಜಿಸುವ, ನಾಟಕ, ನೃತ್ಯ, ಕಾದಂಬರಿ, ಕಾಲ್ಪನಿಕ ಕಥೆಗಳೆಲ್ಲವೂ ಕೇವಲ **ಲೋಕವಾರ್ತೆಗಳು.** ಆ ರೀತಿಯಲ್ಲಿ ಲೋಕವಾರ್ತೆ ಯನ್ನು ತಿಳಿಸುವ ಗ್ರಂಥವಿದಲ್ಲ.

೨. **ಪರ** ಎಂದರೆ ಉತ್ತಮೋತ್ತಮವಾದ ಎಂದರ್ಥ. ಅಂತಹ ಜಗತ್ತೆಂದರೆ **ಪರಲೋಕವು.** ಕರ್ಮವಿಮೋಚನಾದ್ವಾರಾ, ನಿತ್ಯಾನಂದ ವನ್ನ ಅನುಭವಿಸುತ್ತಿರುವ ಮೋಕ್ಷಧಾಮಗಳಾದ ವೈಕುಂಠಾದಿ ಲೋಕಗಳು ಪರಲೋಕಗಳು. ಅಲ್ಲಿ ದುಃಖಸ್ಪರ್ಶವೇ ಇಲ್ಲ. ನಶ್ವರವಾದ ಐಹಿಕ ವಿಷಯ ಭೋಗಗಳಿಂದುಂಟಾಗುವ ಆನಂದ ತಾತ್ಕಾಲಿಕ. ಭೋಗಾನಂತರ ದುಃಖವೇ ಪ್ರಾಪ್ತಿ. ಲೋಕವಾರ್ತೆಯ ಲಕ್ಷಣವೇ ಇದು. ಆದರೆ ನಿತ್ಯಾನಂದರೂಪ

ವಾದ ಮೋಕ್ಷವನ್ನು ಹೊಂದುವ ಮುಕ್ತರು ವೈಕುಂಠಾದಿ ಮೋಕ್ಷಧಾಮ ಗಳಲ್ಲಿ ಸುಖಪೂರ್ಣರಾಗಿ ಕ್ರೀಡಿಸುತ್ತಿರುವರು. ಅಂತಹ ಪರಲೋಕಗಳಿಗೆ ಅಧಿಪತಿಯಾದ ಮೋಕ್ಷಪ್ರದನಾದ ಮುಕುಂದನಾಮಕ ಆ ಮುರಹರನೇ **ಪರಲೋಕೈಕನಾಥನು.** ಶ್ರೀಹರಿಯೇ ಚರಾಚರಾತ್ಮಕವಾದ ಸಮಸ್ತ ಜಗತ್ತಿಗೆ ಏಕಮಾತ್ರ ಅಧಿಪತಿಯು. ಸಮಾಭ್ಯಧಿಕಶೂನ್ಯನಾದ ಶ್ರೀಪರ ಮಾತ್ಮನೇ ಅದ್ವಿತೀಯನು.

೩. ಕುಟಿಲಮತಿಯುಳ್ಳ ಮಂದಿಯನ್ನು **ಕಾಕುಮನುಜ**ರೆನ್ನುವರು. ಅವರ ಮನಸ್ಸು ಯಾವಾಗಲೂ ವಕ್ರಗತಿಯಲ್ಲಿಯೇ ಹರಿಯುವುದು. ಗುಣ ಗ್ರಾಹಿಗಳಲ್ಲದ, ಅಂತಹ ಕಾಕುಮನುಜರಿಗೆ ಪರಲೋಕನಾಥನ ಈ ವಾರ್ತೆ ಸೊಗಸುವುದಿಲ್ಲ. ಭಗವತ್ಸಂಬಂಧವಾದ ವಿಷಯಗತ ಆನಂದರಸದ ಸವಿಯನ್ನು ಅವರು ಹೊಂದಲಾರರು. ವಿಷಯಭೋಗಾದಿಗಳು, ಪ್ರಾಪಂಚಿಕ ವಾರ್ತೆಗಳು ಮಾತ್ರ ಅವರ ಮನಸ್ಸಿಗೆ ಹಿಡಿಯುತ್ತವೇ ಹೊರತು, ಆ ಪರಾ ತ್ಪರ ವಸ್ತುವಿನ ಚರಿತಾಮೃತವು ತೃಪ್ತಿಯನ್ನು ಕೊಡುವುದಿಲ್ಲ.

೪. ಪೂರ್ವೋಕ್ತ ಸಂಗತಿಯನ್ನು ಸುಂದರವಾದ ದೃಷ್ಟಾಂತದಿಂದ ಪ್ರತಿಪಾದಿಸುತ್ತಾರೆ. ರಕ್ತವರ್ಣವಿಶಿಷ್ಟವಾದ ತಾವರೆ ಪುಷ್ಪಕ್ಕೆ **ಕೋಕನದ** ಎಂದು ಹೆಸರು. ಅಂತಹ ಕೆಂದಾವರೆಯಲ್ಲಿ ಸುಗಂಧಯುಕ್ತವಾದ ಮಕರಂದ ವಿದೆ. ಭ್ರಮರವು ಎಲ್ಲಿಯೋ ದೂರದಲ್ಲಿ ಹಾರಾಡುತ್ತಿರುವುದು. ತನ್ನ ಸೂಕ್ಷ್ಮವಾದ ಇಂದ್ರಿಯ ಶಕ್ತಿಯಿಂದ ಆ ಕೆಂದಾವರೆ ಪುಷ್ಪಗತ ಮಕರಂದದ ಸುಗಂಧವನ್ನು ಸ್ವೀಕರಿಸಿ, ಆ ತಾವರೆ ಹೂವಿಗೆ ಬಂದು ಆ ಮಕರಂದವನ್ನು ಹೀರುವುದು. ಭ್ರಮರಕ್ಕೆ 6 ಕಾಲುಗಳಿವೆ. ಇದರಿಂದ ಅದಕ್ಕೆ **ಷಟ್ಪದ** ವೆಂದು ಹೆಸರು. ಬಲಪಾರ್ಶ್ವದಲ್ಲಿ ಮೂರು ಮತ್ತು ಎಡಪಾರ್ಶ್ವದಲ್ಲಿ ಮೂರು, ಹೀಗೆ ಆರು ಪಾದಗಳಿರುವ ಷಟ್ಪದವು ಪುಷ್ಪಗತ ಪರಿಮಳವನ್ನು ಗ್ರಹಿಸಬಲ್ಲುದು.

೫. ಆದರೆ ಆ ಕಮಲಪುಷ್ಪವು ಬೆಳೆಯುವ ನೀರಿನಲ್ಲಿಯೇ ಕಪ್ಪೆಯೂ ಸಹ ವಾಸಿಸುವುದು, ಜಲಚರಪ್ರಾಣಿಯಾದ ಆ ಭೇಕವು ಕಮಲದ ಸಮೀಪ

ದಲ್ಲೇ ಇದ್ದರೂ, ಅದರಲ್ಲಿರುವ ಪರಿಮಳವನ್ನು ಆಘ್ರಾಣಿಸಲಾರದು. ದೂರದಲ್ಲಿ ಹಾರಾಡುತ್ತಿರುವ ಭ್ರಮರಕ್ಕೆ ಪರಿಮಳಾಸ್ವಾದನೆಯೇ ಹೊರತು, ಅಲ್ಲಿಯೇ ಇರುವ ಕಪ್ಪೆಗಿಲ್ಲ.

ಅಂತೆಯೇ ಹರಿಯ ಚಾರುಚರಣಗಳಲ್ಲಿ ಭ್ರಮರದಂತೆ ಚರಿಸುತ್ತಿರುವ ಹರಿದಾಸರಿಗೆ ಮಾತ್ರ ಆ ರಸಾಸ್ವಾದನೆಯ ಆನಂದಪ್ರಾಪ್ತಿಯೇ ಹೊರತು; ಅಭಕ್ತರೂ, ವಿಷಯಾದಿ ಸುಖಗಳಲ್ಲಿ ಆಸಕ್ತರೂ ಆದ ಕಾಕುಮನುಜರಿಗಲ್ಲ ಎಂಬುದೇ ಪ್ರಸಕ್ತ ಪದ್ಯದ ತಾತ್ಪರ್ಯಾರ್ಥವು. ॥೨೨॥

## ಪದ್ಯ ೨೩

**ಮೂಲ :**

**ಸ್ವಪ್ರಯೋಜನರಹಿತ ಸಕಲೇ ।**
**ಷ್ಟಪ್ರದಾಯಕ ಸರ್ವಗುಣಪೂ ।**
**ರ್ಣಪ್ರಮೇಯ ಜರಾಮರಣವರ್ಜಿತ ವಿಗತಕ್ಲೇಶ ॥**
**ವಿಪ್ರತಮ ವಿಶ್ವಾತ್ಮ ಘೃಣಿ ಸೂ ।**
**ರ್ಯಪ್ರಕಾಶಾನಂತಮಹಿಮ ಘೃ ।**
**ತಪ್ರತೀಕಾರಾಧಿತಾಂಘ್ರಿ ಸರೋಜ ಸುರರಾಜ ॥** ॥೨೩॥

**ಅವತರಣಿಕೆ :**

ಶ್ರೀಮಧ್ವವಲ್ಲಭನಾದ ಶ್ರೀಹರಿಯೇ ತನ್ನೊಳಗೆ ನಿಂತು ಪ್ರೇರಿಸಿ ನುಡಿಸಿದಂತೆ ರಚಿತವಾಗಿರುವ ಈ ಗ್ರಂಥಪ್ರತಿಪಾದ್ಯನಾದ ಶ್ರೀಪರಮಾತ್ಮನ ಅನಂತಗುಣಗಳನ್ನು ಸ್ತೋತ್ರಮಾಡುತ್ತಾರೆ, ಪ್ರಸಕ್ತ ಸಂದಿಗತ ೨೩ ನೆಯ ಈ ಪದ್ಯದಿಂದ. ॥೨೩॥

**ಪ್ರತಿಪದಾರ್ಥ :**

**ಸ್ವಪ್ರಯೋಜನರಹಿತ**=ಚರಾಚರಾತ್ಮಕವಾದ ಈ ಜಗತ್ತಿನ ಸೃಷ್ಟಿಯಿಂದ ತನಗೇನೂ ಪ್ರಯೋಜನವಿಲ್ಲದಿರುವ, ಆಪ್ತಕಾಮನಾದ, ಪರಾಪೇಕ್ಷಾರಹಿತನಾದ ಶ್ರೀಪರಮಾತ್ಮನೂ, **ಸಕಲೇಷ್ಟಪ್ರದಾಯಕ**=ಸಮಸ್ತರಾದ ತ್ರಿವಿಧ ಜೀವರಿಗೆ ಅವರವರ ಯೋಗ್ಯತಾನುಸಾರ ಅವರ ಅಭಿಲಾಶೆಗಳನ್ನು ಸಲ್ಲಿಸುವ, **ಸರ್ವಗುಣಪೂರ್ಣ**=ಸಮಸ್ತ ಕಲ್ಯಾಣಗುಣಗಳಿಂದ ಪರಿಪೂರ್ಣನಾದ, **ಅಪ್ರಮೇಯ**=ರಮಾಬ್ರಹ್ಮಾದಿಗಳಿಂದಲೂ ಸಾಕಲ್ಯೇನ ತಿಳಿಯಲಸಾಧ್ಯನಾಗಿರುವ, **ಜರಾಮರಣವರ್ಜಿತ**=ಇತರ ಜೀವರಂತೆ ದೇಹವಿಕಾರರೂಪಗಳಾದ ಮುಪ್ಪು, ಸಾವು ಇತ್ಯಾದಿಗಳು ಇಲ್ಲದಿರುವ, ಅಂದರೆ, ಅನಾದ್ಯನಂತಕಾಲದಿಂದಲೂ ನಿರ್ವಿಕಾರನಾಗಿ ಶಶ್ವದೇಕ ಪ್ರಕಾರವಾದ ಶರೀರ ಉಳ್ಳವನು. **ವಿಗತಕ್ಲೇಶ**=ಹೋಗಲ್ಪಟ್ಟ ದುಃಖವುಳ್ಳವನು,ಅಂದರೆ, ತ್ರಿಗುಣಜನ್ಯನಾದ ತಾಪತ್ರಯಗಳು ಆಧಿವ್ಯಾಧಿ ಇತ್ಯಾದಿ ದುಃಖಗಳಿಲ್ಲದವನು,**ವಿಪ್ರತಮ**=ವೇದಾಧ್ಯಯನದಲ್ಲಿ ಶ್ರೇಷ್ಠರಾದ, ವಿಪ್ರವರ್ಣಕ್ಕೆ ಅಭಿಮಾನಿಗಳಾದ ಬ್ರಹ್ಮದೇವರಿಗಿಂತ ಉತ್ತಮೋತ್ತಮನಾದ, **ವಿಶ್ವಾತ್ಮ**=ಜಗದಾಕಾರನಾಗಿ ವಿರಾಡ್ರೂಪವುಳ್ಳ ವಿಶ್ವವ್ಯಾಪಕನಾದ, **ಘೃಣೀ**=ಘೃಣೀನಾಮಕನಾದ, **ಸೂರ್ಯಪ್ರಕಾಶ**=ಕೋಟಿ ಸೂರ್ಯಪ್ರಕಾಶವುಳ್ಳ ದೇಹಕಾಂತಿಯುಳ್ಳ, (ಶ್ರೀಪರಮಾತ್ಮನು "ಘೃಣೀ"ನಾಮಕ ಸೂರ್ಯನು) **ಅನಂತಮಹಿಮ**=ಅಪರಿಮಿತವಾದ ಮಹಾಮಹಿಮ ಸಂಪನ್ನನಾದ, **ಘೃತಪ್ರತೀಕ**=ತನ್ನ ಪ್ರತಿಮಾಸದೃಶರಾದ ಶ್ರೀಲಕ್ಷ್ಮಿದೇವಿಯರ ಕರಕಮಲಗಳಿಂದ. **ಆರಾಧಿತ**=ಚೆನ್ನಾಗಿ ಪೂಜಿಸಲ್ಪಟ್ಟ, **ಅಂಘ್ರಿಸರೋಜ**=ಚರಣಾರವಿಂದಗಳುಳ್ಳ, **ಸುರರಾಜ**=ಬ್ರಹ್ಮಾದಿ ದೇವತಾವರ್ಗಕ್ಕೆ ಪ್ರಭುವಾದ ಶ್ರೀಪರಮಾತ್ಮನು ಎಂದು ನಾನಾ ಪ್ರಕಾರ ಸ್ತೋತ್ರ ಮಾಡಿರುತ್ತಾರೆ. ॥೨೩॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಪೂರ್ವಶ್ಲೋಕವಾದ ಹದಿನೆಂಟನೇ ಶ್ಲೋಕದಲ್ಲಿ ಮಧ್ವವಲ್ಲಭ ತಾನೇ ಹೃದಯದೊಳಿದ್ದು ನುಡಿದನು ಎಂತ ಹೇಳಿದರೂ, ಗ್ರಂಥಕರ್ತೃಗಳಾದ

ಶ್ರೀಜಗನ್ನಾಥದಾಸರಾಯರು ತಾವು ಮಾಡಿದ ಗ್ರಂಥಕ್ಕೆ ಪ್ರತಿಪಾದ್ಯನಾದ ಶ್ರೀಪರಮಾತ್ಮನ್ನ ಈ ಸಂಧಿಯ ಅಂತ್ಯದಲ್ಲಿ ಸ್ತೋತ್ರ ಮಾಡತಾರೆ. ಆ ಪರಮಾತ್ಮ ಎಂಥಾವನೆಂದರೆ–

ಚರಾಚರಗಳ–ಸ್ವಪ್ರಯೋಜದರಹಿತನಾಗಿ–ಸೃಷ್ಟಿಮಾಡಿ ಆಯಾ ಜೀವರಿಗೆ ಅವರವರ ಯೋಗ್ಯತಾನುಸಾರ, ಅಂತ್ಯಕ್ಕೆ ನಿಜಗತಿಗಳ ಕೊಟ್ಟು ಪರ ಪ್ರಯೋಜನ ಮಾಡತಕ್ಕವ. ಸಮಸ್ತವಾದ ತ್ರಿವಿಧಜೀವರಿಗೆ ಇಷ್ಟವಾದ ಸುಖ, ದುಃಖ, ಮಿಶ್ರಸುಖ ಲಿಂಗಭಂಗಾನಂತರ ವ್ಯಕ್ತಮೂಡಿಕೊಡತಕ್ಕವ; ಸಮಸ್ತ ಸುಗುಣಗಳಿಂದ ಚಂದಾಗಿ ಪೂರ್ಣನಾದವ; ರಮಾ-ಬ್ರಹ್ಮಾದಿಗಳಿಂದ ಸಾಕಲ್ಯೇನ ತಿಳಿಸಿಕೊಳ್ಳದವ; ಜೀವರ ಯೋಗ್ಯತಾನುಸಾರ ತಿಳಿಸಿಕೋತಕ್ಕವ; ಬ್ರಹ್ಮಾದಿಗಳೋಪಾದಿಯಲ್ಲಿ ನಶ್ವರವಾದ ದೇಹದಿಂದ ಉತ್ಪನ್ನನ್ನಾಗಿ ತತ್ತ್ಯಾಗರೂಪವಾದ ಮರಣದಿಂದ ರಹಿತನಾದವ. ಅನಾದ್ಯನಂತಕಾಲಕ್ಕೂ ಶಶ್ವದೇಕಪ್ರಕಾರವಾದ ಶರೀರ ಉಳ್ಳವ; ಹೋಗಲ್ಪಟ್ಟ ಕ್ಲೇಶವುಳ್ಳವ (ಅಂದರೆ, ಎಂದಿಗಾದರೂ ದುಃಖವೇನು ತಾಪತ್ರಯವೇನು ಆಧಿ-ವ್ಯಾಧಿಗಳು ಇಲ್ಲದವ, ಜೀವರಿಗೆ ಬಿಂಬನಾಗಿದ್ದರೂ ಅವರಿಗೆ ತ್ರಿಗುಣಗಳಿಂದ ಸಂಭವಿಸ ತಕ್ಕ ಕ್ಲೇಶ-ಸುಖಗಳಿಂದ ದೂರನಾದವ); ವೇದಪಾಠೇತು ವಿಪ್ರಾಃ ಎಂಬ ನ್ಯಾಯದಿಂದ ವೇದಪಾಠದಲ್ಲಿ ಶ್ರೇಷ್ಠನಾದ ವಿಪ್ರ ಎಂತ ನಾಮ ಪಡೆದ ಬ್ರಹ್ಮ ದೇವರಿಗಿಂತಲೂ ಉತ್ತಮನಾದವ; ಜಗದಾಕಾರದಂತೆ ವಿರಾಟರೂಪ ಉಳ್ಳವ; ಕಿರಣಗಳುಳ್ಳ ಸೂರ್ಯಪ್ರಕಾಶ ಏಕಕಾಲದಲ್ಲಿ ಅನಂತವಾಗಿ ಉದಯವಾದರೆ ಎಷ್ಟು ಪ್ರಕಾಶ ಇರುತ್ತದೋ ಅಷ್ಟು ಪ್ರಕಾಶಯುಕ್ತವಾದ ದೇಹಕಾಂತಿ ಉಳ್ಳವ; ಅಪರಿಮಿತವಾದ ಮಹಾಚರಿತ್ರೆ ಉಳ್ಳವ; ಇಂಥಾ ಪರಮಾತ್ಮನಿಗೆ ಮುಖ್ಯಾಧಿಷ್ಠಾನರಾದ, ಪ್ರತಿಮಾಸದೃಶರಾದ ಲಕ್ಷ್ಮೀದೇವೇರ ಕರಗಳಿಂದ ಚಂದಾಗಿ ಪೂಜಿತವಾದ ಪಾದಗಳೆಂಬ ಕಮಲಗಳ ಉಳ್ಳವ (ಎಂದರೆ, ಶುದ್ಧ ಶ್ರೀಭಾಗದಲ್ಲಿ ಎಂತ ತಾತ್ಪರ್ಯ. ಆಗ್ಗೆ ಬ್ರಹ್ಮಾದಿಗಳು ವ್ಯಾವರ್ತರು) ಬ್ರಹ್ಮಾದಿ ದೇವತೆಗಳು ತಮಗೆ ಪ್ರಭು ಎಂತ ಉಪಸನಾ ಮಾಡಿಸಿಕೋತಕ್ಕವನು, ದೈತ್ಯರಿಂದ ಈ ಪ್ರಕಾರ ಉಪಸನಾ ಮಾಡಿಸಿಕೋತಕ್ಕವನಲ್ಲ, ದ್ವೇಷಿ ಎಂತ ಕರಸಿದವನು ಎಂತ ಅರ್ಥ.

ತಾತ್ಪರ್ಯ–ಸರ್ವಗುಣ ಸಂಪೂರ್ಣ ಎಂದರೆ ಅಸದೃಶಗುಣಗಳು ಉಳ್ಳವನೆಂತಲೂ ಅರ್ಥ. ಬ್ರಹ್ಮಾದಿ ದೇವತೆಗಳ, ಇನ್ನೂ ಯಾವತ್ತರ ಸುಗುಣ

ಗಳು ಪರಾಧೀನ ಗುಣಗಳು; ಅಂಥಾ ಗುಣಗಳು ಇಲ್ಲದವ. ಕಲ್ಯಾದಿಗಳ ಗುಣಗಳು ದುಃಖಕಾರಣ ಗುಣಗಳು. ಆದ್ದರಿಂದ, ಈ ಗುಣಗಳು ಶ್ರೀಪರಮಾತ್ಮನಲ್ಲಿ ಇಲ್ಲ. ಸರ್ವಗುಣಸಂಪೂರ್ಣ ಎಂದರೆ ಸರ್ವಪ್ರಾಣಿಗಳ ಗುಣಗಳಿಗಿಂತಲೂ ವಿಲಕ್ಷಣವಾದ ಗುಣಗಳು ಉಳ್ಳವ. ರಮಾದೇವರು ಅಸ್ವತಂತ್ರ ಚೇತನರಾದ್ದರಿಂದ ಜೀವರಲ್ಲಿ ಅಂತರ್ಭೂತರು. ಇವರ ಗುಣಗಳಿಗಿಂತಲೂ ವಿಲಕ್ಷಣಗುಣ ಉಳ್ಳವ. ಸರ್ವಶಬ್ದದಿಂದ ಜೀವರ ಗುಣಗಳೂ ಈಶ್ವರನಲ್ಲಿ ಅದೆ ಎಂದರೆ, ಜೀವರೋಪಾದಿಯಲ್ಲಿ ಅಸ್ವತಂತ್ರ ಗುಣವಿಲ್ಲದೇ ಕೇವಲ ಸ್ವತಂತ್ರ ಗುಣಗಳು ಇರೋಣದರಿಂದ ಸರ್ವಗುಣಸಂಪೂರ್ಣ ಎಂತ ಪ್ರಯೋಗ.

**ವಿಶೇಷಾರ್ಥ :** ಘೃತಪ್ರತೀಕ ಎಂದರೆ,

> **ಘೃತಪ್ರತಿಕಾಂ ತಾಂ ನಿತ್ಯಂ ಘೃತಪೂರ್ಣಾನ್ನದಾಯಿನೀಂ ।**
> **ಯಥೇಷ್ಟ ವಿತ್ತದಾತ್ರೀಂ ಚ ನತೋಸ್ಮ್ಯಭಯದಾಂ ಶ್ರಿಯಂ ॥**

ಎಂತ ಶ್ರೀವಾದಿರಾಜ ಶ್ರೀಪಾದಂಗಳವರು ಲಕ್ಷ್ಮೀಸ್ತೋತ್ರದಲ್ಲಿ ಹೇಳಿದ ಉಕ್ತಿ ಇರುವದ್ದರಿಂದ **ಲಕ್ಷ್ಮೀದೇವರು** ಎಂತ ತಾತ್ಪರ್ಯ. ॥೨೩॥

## (೨) ಭಾವಪ್ರಕಾಶಿಕೆ

ಶ್ರೀಪರಮಾತ್ಮನು ಪರರಿಂದ ಯಾವ ವಿಧವಾದ ಪ್ರಯೋಜನವನ್ನೂ ಅಪೇಕ್ಷಿಸದೆ, ಎಲ್ಲರ ಮನೋಭೀಷ್ಟಗಳನ್ನು ಪೂರ್ಣಮಾಡುವನು. ಸಕಲ ಗುಣಪೂರ್ಣನಾದವನು. ತಿಳಿಯಲಶಕ್ಯವಾದ ಮಹಿಮೆ ಉಳ್ಳವನು. ಮುಪ್ಪು ಸಾವು ದೋಷಗಳಿಲ್ಲದಿರುವವನು. ಯಾವಬಗೆಯ ಕ್ಲೇಶವನ್ನೂ ಹೊಂದದವನು ವಿಜ್ಞಾನದಿಂದ ಪ್ರಕಾಶಮಾನರಾದ ಬ್ರಹ್ಮಾದಿಗಳಿಗಿಂತ ಶ್ರೇಷ್ಠನು. ಪ್ರಪಂಚವನ್ನೇ ವ್ಯಾಪಿಸಿಕೊಂಡಿರುವವನು. ದಯಾವಂತನು. ಸೂರ್ಯಪ್ರಕಾಶ ಪಾರಗಾಣದ ಮಹಿಮೆ ಉಳ್ಳವನು. ತುಪ್ಪದ ರೂಪದಿಂದ ನಿತ್ಯದಲ್ಲಿ ಶ್ರೀಪರಮಾತ್ಮನು ಭೋಜನಕ್ಕೆ ಅನುಕೂಲಳಾಗಿರುವುದರಿಂದ, **ಘೃತಪ್ರತೀಕಾ** ಎಂಬ ಹೆಸರುಳ್ಳ ಶ್ರೀರಮಾದೇವಿಯುವರಿಂದ ಚೆನ್ನಾಗಿ ಪೂಜಿತಪಾದಕಮಲವುಳ್ಳವನು

ಬ್ರಹ್ಮಾದಿದೇವತೆಗಳ ಮಧ್ಯದಲ್ಲಿ ರಾಜಿಸುವುದರಿಂದ **ಸುರರಾಜನು.** ಜಯ ಜಯ ಎಂಬ ಮುಂದಿನ ಪದ್ಯದಲ್ಲಿರುವ ಜಯಶಬ್ದದಲ್ಲಿ ಸಮನ್ವಯ ಮಾಡಬೇಕು. ಜಯ ಎಂದರೆ, ನಿನ್ನ ಜಯವನ್ನು ಲೋಕದಲ್ಲಿ ಪ್ರದರ್ಶನ ಮಾಡೆಂದು ಪ್ರಾರ್ಥನೆ. ॥೨೩॥

**(೩) ಭಾವದರ್ಪಣ ಟೀಕಾ :**

ಸ್ವಪ್ರಯೋಜನೇತಿ॥ ತನಗೆ ಪ್ರಯೋಜನ ಇಲ್ಲದವ. ಅಪ್ರಮೇಯ-ತಿಳೀಲಿಕ್ಕೆ ಅಶಕ್ಯ. ವಿಪ್ರತಮ-ಜ್ಞಾನಿಶ್ರೇಷ್ಠ. ಘೃತಪ್ರತೀಕಾರಾಧಿತಾಂಘ್ರಿ-ಲಕ್ಷ್ಮೀದೇವಿಯಿಂದ ಆರಾಧಿತವಾದ ಪಾದ ಉಳ್ಳವ ಎಂಬರ್ಥ.

**ತದುಕ್ತಂ ಶ್ರೀಮದ್ವಾದಿರಾಜಪೂಜ್ಯ ಚರಣೈಃ**

**"ಘೃತಪ್ರತೀಕಾಂ ತಾಂ ನಿತ್ಯಂ ಘೃತಪೂರ್ಣಾನ್ನ ದಾಯಿನೀಂ ।**
**ಯಥೇಷ್ಟವಿತ್ತದಾತ್ರೀಂಚ ನತೋಽಸ್ಮ್ಯಭಯದಾಂ ಶ್ರೀಯಮಿತಿ॥"**
**ಶ್ರೀಶಗುಣದರ್ಪಣೇ ॥** ॥೨೩॥

**(೪) ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ)**

"ಸ್ವಪ್ರಯೋಜನ"-ಇತಿ ॥ ಇತಃಪರಂ ಆ ಸಮಾಪ್ತಿ ದೃಶಾಪರೋಕ್ಷಪ್ರದಂ ಉಪಾಸ್ಯಂ ಭಗವಂತಂ ಅನುಸ್ಮರತಿ ॥ "ಪೂರ್ಣ"-ಇತ್ಯತಃ ಪರಂ ಅಕಾರಃ ಪ್ರಶ್ಲಿಷ್ಯತೇ ॥ "ವಿಪ್ರತಮಂ ಕವೀನಾಂ"-ಇತಿ ಶ್ರುತ್ಯುಕ್ತ ಪದ ಪ್ರಯೋಗೇನ ಆಮ್ನಾಯ ಮೂಲತಾಂ ಅಭಿಪ್ರೈತಿ ದಾಸರಾಜಃ ॥ "ವಿಶೇಷೇಣ ಪ್ರಕೃಷ್ಟತಮಮ್ ॥ ಪುನಃ ವೈದಿಕ ಪದ ಪ್ರತಿಪದಂ "ಘೃತ"-ಇತಿ ॥ "ಘೃತಪ್ರತೀಕ"-ಇತಿ ಶ್ರುತಿಃ ॥ "ಘೃತಪ್ರತೀಕಾಂತಾಂ"-ಇತಿ ಗುರುಚರಣಾಃ॥ "ರಮಾಶುದ್ಧಾ"-ಇತಿ ಭಗವತ್ಪಾದಾಃ ॥ "ಘೃ-ರಕ್ಷಣ-ದೀಪ್ತ್ಯೋಃ"-ಇತಿ ಪಠಿತತ್ವಾತ್‌ದೀಪ್ತತ್ವಂ ತದರ್ಥಃ-ಇತಿ **ಐತರೇಯ ಟಿಪ್ಪಣ್ಯಾಮ್**॥ ॥೨೩॥

**ಕನ್ನಡಾರ್ಥ :**

"ಸರ್ವಗುಣಪೂರ್ಣಪ್ರಮೇಯ"-ಎಂಬ ಶಬ್ದಪ್ರಯೋಗದಲ್ಲಿ ಪೂರ್ಣ ಮತ್ತು ಪ್ರಮೇಯ ಎಂಬ ಎರಡು ಪದಗಳ ನಡುವೆ ಅಕಾರವಿದೆ. ಆದ್ದರಿಂದ

"ಪೂರ್ಣ" ಮತ್ತು "ಅಪ್ರಮೇಯ" ಎಂದು ಪದವಿಭಾಗ ಮಾಡಿಕೊಳ್ಳಬೇಕು.

"ವಿಪ್ರತಮ" ಎಂಬುದು ವೈದಿಕಪದವು. ಈ ಪದಪ್ರಯೋಗದಿಂದ, ಈ ಪ್ರಬಂಧವು ವೇದಮೂಲವಾಗಿದೆ. ಅಂದರೆ ವೇದಾನುಸಾರಿಯಾಗಿದೆ. –ಎಂದು ದಾಸರಾಯರ ಅಭಿಪ್ರಾಯ. "ವಿಪ್ರತಮ"–ಎಂದರೆ, ವಿಶೇಷವಾಗಿ ಪ್ರಕೃಷ್ಟ, ಅಂದರೆ, ಶ್ರೇಷ್ಠತಮ ಎಂದರ್ಥ. ಇದರಿಂದ "ಬ್ರಹ್ಮಾದಿ ವಿಜ್ಞಾನಿಗಳಿಗಿಂತಲೂ ಪರಮಶ್ರೇಷ್ಠನು" ಎಂದರ್ಥವಾಗುವುದು. "ಘೃತ ಪ್ರತೀಕಾರಾಧಿತ" ಎಂಬಲ್ಲಿ "ಘೃತಪ್ರತೀಕ" ಎಂಬುದೂ ವೈದಿಕ ಪ್ರಯೋಗವೇ ಆಗಿದೆ. **"ಘೃತಪ್ರತೀಕಾ ವಯುನಾನಿವಸ್ತೇ"–ಎಂದು ಶ್ರುತಿ ವಾಕ್ಯ.** ಈ ಶ್ರುತ್ಯುಕ್ತಾನುಸಾರ, **ಶ್ರೀಮದಾಚಾರ್ಯರು "ಘೃತಪ್ರತೀಕಾಂ ತಾಂ"** ಎಂದು ಹೇಳಿದ್ದಾರೆ. "ಘೃತಪ್ರತೀಕಾಸಿ"–ಎಂದರೆ, ಅತಿಶಯ ಪರಿಶುದ್ಧವಾದ ಸ್ವಭಾವವುಳ್ಳ **ಶ್ರೀರಮಾದೇವಿ** ಎಂದು ಅರ್ಥವಾಗುತ್ತೆ. "ಘೃ"–ಎಂಬ ಧಾತುವಿಗೆ "ಸಂರಕ್ಷಣ ಹಾಗೂ ದೀಪ್ತಿ (ಹೊಳೆಯುವುದು) ಎಂಬ ಎರಡರ್ಥಗಳಿವೆ. ಇದರಿಂದ "ಪ್ರಕಾಶಾತ್ಮಕ"ವೆಂದು ಅರ್ಥವನ್ನು **ಐತರೇಯ ಭಾಷ್ಯದಲ್ಲಿ** ನಿರೂಪಿಸಿರುತ್ತಾರೆ. ತೇಜೋಮಯವಾದ ಪ್ರಕಾಶರೂಪದಿಂದ ತುಪ್ಪದಲ್ಲಿ ಇದ್ದು, ಅದರಿಂದ ಪರಮಾತ್ಮನಿಗೆ ತಾನು ಉತ್ತಮ ಪೂಜಾರೂಪವಾದ ಸೇವೆಮಾಡುತ್ತಿರುವುದರಿಂದ **ಶ್ರೀರಮಾದೇವಿಯವರಿಗೆ "ಘೃತ ಪ್ರತೀಕ"**–ವೆಂದು ಹೆಸರು. ಇದರಿಂದ ಘೃತಪ್ರತೀಕಾರಾಧಿತ–ಎಂದರೆ, "ರಮಾಸಮಾರಾಧಿತ" ಎಂಬರ್ಥ. ॥೨೩॥

## (ಅ) ಶ್ರೀಗುರುಹೃದಯ ಪ್ರಕಾಶಿಕೆ :

ಹೀಗೆ ಶ್ರೀಹರಿ ತನ್ನ ಭಕ್ತರಿಗೆ ಈ ಕಾವ್ಯ ಪ್ರಿಯವೆಂದು ತಿಳಿಸಿ ಶ್ರೀಹರಿ ಪ್ರೀತಿಯನ್ನೇ ಪ್ರಾರ್ಥಿಸುತ್ತಾ ಅಧ್ಯಾಯಾರ್ಥ ಸಂಗ್ರಹಿಸಿ ಪೂರ್ತಿಸುತ್ತಾರೆ. 'ಸ್ವಪ್ರಯೋಜನ' ಎಂದು ಮೊದಲು ಮಾಡಿ ಮೂರು ಪದ್ಯತನಕ ಶ್ರೀಹರಿಯ ಜ್ಞಾನಂದಾದ್ಯವತಾರಾದಿ ಸಮಸ್ತ ಸದ್ಗುಣಪೂರ್ಣತ್ವವನ್ನು ವರ್ಣಿಸುತ್ತಾರೆ. ಸ್ವಪ್ರಯೋಜನರಹಿತ ಅಂದರೆ, ಜಗತ್ಸೃಷ್ಟ್ಯಾದಿಗಳಿಂದ ತನಗೆ ಸುಖಾದ್ಯುಪಯೋಗವೇನೂ ಇಲ್ಲದವನು. ಸಕಲೇಷ್ಟಪ್ರದಾಯಕ ಅಂದರೆ, ಭಕ್ತರಿಗೆ ಬೇಕಾದ ಇಷ್ಟಾರ್ಥಗಳನ್ನು ಕೊಡುವಂಥಾವನು. ಸರ್ವಗುಣಪೂರ್ಣ

ಅಂದರೆ, ಜ್ಞಾನಾನಂದಾದ್ಯನಂತರ ಸಮಸ್ತ ಸದ್ಗುಣಪೂರ್ಣನು. ಅಪ್ರಮೇಯ ಅಂದರೆ, ಈತನ ಗುಣರೂಪಾದಿಗಳು ಇಷ್ಟೆಂದು ಪೂರ್ತಿ ತಿಳಿಯುವುದಕ್ಕೆ ರಮಾ-ಬ್ರಹ್ಮಾದಿಗಳಿಗೂ ಅಗೋಚರನು. ಆದ್ದರಿಂದಲೇ ಜರಾಮರಣ ಶೋಕಾದಿ ಸರ್ವದೋಷದೂರನು. ವಿಪ್ರತಮ ಎಂದರೆ, ಅನಂತವೇದವೇತ್ತೃ ಮುಖ್ಯನು. ವಿಶ್ವಾತ್ಮ ಎಂದರೆ, ಮುಕ್ತಾಮುಕ್ತಾ ಜಗತ್ಸ್ವಾಮಿ. ಘೃಣಿ ಎಂದರೆ ಸಂಪೂರ್ಣ ದಯಾಶಾಲಿ. ಸೂರ್ಯಪ್ರಕಾಶನಂತ ಮಹಿಮ ಎಂದರೆ ಸೂರ್ಯಪ್ರಕಾಶದಂತೆ ದೇವಾದಿಗಳಿಗೆ ಗೋಚರನು. ಅನಂತಮಹಿಮ ಅಂದರೆ, ಅಪರಿಮಿತ ಮಹಿಮನು. ಘೃತಪ್ರತೀಕಾರಾಧಿತಾಂಘ್ರಿ ಸರೋಜ ಎಂದರೆ, ಘೃತಪ್ರತೀಕಳೆಂದು ಹೆಸರುಳ್ಳ ರಮಾದೇವಿಯಿಂದ ಪೂಜಿತ ಪಾದಕಮಲನು. ಸುರರಾಜ ಎಂದರೆ, ಸರ್ವದೇವತಾಧಿರಾಜನು ಎಂದರ್ಥ.

'ಘೃತಪ್ರತೀಕಾವಯುನಾನಿವಸ್ತೇ' ಎಂಬ ಶ್ರುತಿಯು ಮತ್ತು 'ಘೃತ ಪ್ರತೀಕಾಂ ತಾಂ ನಿತ್ಯಂ ಘೃತಪೂರ್ಣಾನ್ನದಾಯಿನೀಂ। ಯಥೇಷ್ಟವಿತ್ತ ಧಾತ್ರೀಂ ಚ. . . . . .' ಇತ್ಯಾದಿ ಭಾಷ್ಯಾರ್ಥವೂ,

'ನಾರಾಯಣಂ ಗುಣೈಸ್ಸರ್ವೈರುದೀರ್ಣಂ ದೋಷವರ್ಜಿತಂ। ಜ್ಞೇಯಂ ಗಮ್ಯಂ' ಎಂಬ ಸೂತ್ರಭಾಷ್ಯಾರ್ಥವೂ, 'ಇತ್ಯಸ್ಯ ಹೃದಯಂ ಲೋಕೇನಾ ನ್ಯೋಽಮದ್ವೇದಕಶ್ಚನ' ಎಂಬ ಭಾಗವತಾರ್ಥ ಸಹ ವಿವರಿಸಲ್ಪಟ್ಟಿತು. ॥೨೩॥

# ಸರ್ವವ್ಯಾಖ್ಯಾನಸಾರಸಂಗ್ರಹ

ತಮ್ಮ ಪ್ರಬಂಧದ ಮುಖ್ಯ ವಿಷಯನಾದ ಶ್ರೀಹರಿಯನ್ನು ನಾನಾ ಪ್ರಕಾರವಾಗಿ ಸ್ತೋತ್ರ ಮಾಡುತ್ತಾರೆ–ಸ್ವಪ್ರಯೋಜನರಹಿತ–ಎಂಬ ಪ್ರಸಕ್ತ ೨೩ ನೆಯ ಪದ್ಯದಿಂದ.

೧. ಶ್ರೀಪರಮಾತ್ಮನಿಗೆ ಇತರರ್ಯಾರಿಂದಲೂ ಪ್ರಯೋಜನವಿಲ್ಲ. ಸೃಷ್ಟ್ಯಾದಿ ಸಮಸ್ತ ವ್ಯಾಪಾರ ವಿಶೇಷಗಳನ್ನು ತಾನೇ ಸರ್ವಸ್ವತಂತ್ರನಾಗಿ ನಿರ್ವಹಿಸುತ್ತಿರುವ ಆ ಸರ್ವಶಕ್ತನಿಗೆ ಅದರಿಂದ ಯಾವ ಪ್ರಯೋಜನವೂ

ಇಲ್ಲ. ಸರ್ವಕಾರ್ಯನಿರ್ವಾಹಕನಾದ ಆ ಜಗತ್ಪ್ರಭುವು ಸ್ವರಮರಣನು ಮತ್ತು ಆಪ್ತಕಾಮನು. ಯಾವ ಕಾಲಕ್ಕೂ ಯಾರಿಂದಲೂ ಏನೂ ಆಗಬೇಕಾಗಿಲ್ಲ. ಪರಾಪೇಕ್ಷರಹಿತನು. ಇದರಿಂದ ಶ್ರೀಹರಿಯು **ಸ್ವಪ್ರಯೋಜನರಹಿತನು.**

೨. ಇತರರ್‍ಯಾರಿಂದಲೂ ಸರ್ವತಂತ್ರ ಸ್ವತಂತ್ರನಾದ ಶ್ರೀಪರಮಾತ್ಮನಿಗೆ ಯಾವ ವಿಧವಾದ ಪ್ರಯೋಜನವಿಲ್ಲದಿದ್ದರೂ, ತಾನು ಮಾತ್ರ ತನ್ನಿಂದ ಸೃಷ್ಟರಾದ ತ್ರಿವಿಧಜೀವರ ಯೋಗ್ಯತಾನುಸಾರ ಅವರವರ ಮನೋಭಿಲಾಷೆಗಳನ್ನು ಸಲ್ಲಿಸುವನು. ಇದರಿಂದ ಆ ದಯಾಸಾಗರನು **ಸಕಲೇಷ್ಟಪ್ರದಾಯಕನು.**

೩. ಅನಂತಕಲ್ಯಾಣಗುಣಗಣಪರಿಪೂರ್ಣನು. ಒಂದೊಂದು ಗುಣವೂ ಪರಿಪೂರ್ಣ. ಒಂದೊಂದು ಗುಣದಲ್ಲಿ ಅನಂತಾನಂತಗುಣಗಳು ಅಡಕವಾಗಿವೆ. ಶುಭಗುಣಗಣನಿಧಿಯಾದ ಶ್ರೀಮನ್ನಾರಾಯಣನು ಸಮಸ್ತ ದೋಷವಿದೂರನು. ದೋಷಗಳ ಸ್ಪರ್ಶವೇ ಆ ಅಮಲಗುಣಾಂಬೋಧಿಗಿಲ್ಲ. ಇದರಿಂದ **ಸರ್ವಗುಣಪೂರ್ಣನು.**

೪. ಆತನ ಅಪಾರ ಮಹಿಮೆಗಳನ್ನು ರಮಾಬ್ರಹ್ಮಾದಿಗಳೂ ಸಹ ಸಾಕಲ್ಯೇನ ಆನಾದ್ಯನಂತಕಾಲದಿಂದ ಅರಿಯರು. ಭೂಮಿಯಲ್ಲಿರುವ ಮಣ್ಣಿನ ಕಣಗಳನ್ನಾದರೂ ಎಣಿಸಲು ಸಾಧ್ಯ. ಅಪಾರವಾದ ಜಲರಾಶಿಯ ರೂಪದಲ್ಲಿರುವ ಸಮುದ್ರದ ನೀರಿನ ಕಣಗಳನ್ನಾದರೂ ಎಣಿಸಲು ಸಾಧ್ಯವಾದೀತು. ಆದರೆ ಅನಾದ್ಯಂತಕಾಲದಿಂದ ಅಪಾರ ಗುಣಸಂಪನ್ನನಾದ ಅವನ ಗುಣಗಳನ್ನು ಇಷ್ಟೇ ಎಂದು ಪರಿಗಣಿಸಲು ಯಾರಿಂದಲೂ ಯಾವ ಕಾಲಕ್ಕೂ ಸಾಧ್ಯವೇ ಇಲ್ಲ. ಇದರಿಂದ **ಅಪ್ರಮೇಯನು** (ಮೇಯ–ಎಂದರೆ ತಿಳಿಯಲ್ಪಡುವುದು. ಪ್ರಮೇಯ–ವಿಶೇಷವಾಗಿ ತಿಳಿಯಲ್ಪಡುವುದು. ಅಪ್ರಮೇಯ–ತಿಳಿಯಲ ಸಾಧ್ಯವಾದದ್ದು).

೫. ಸ್ಥೂಲದೇಹಕ್ಕೆ ಮುಪ್ಪು ಸಾವು ಮುಂತಾದ ವಿಕಾರಗಳು ಉಂಟಾಗುವುವು. ಅದಕ್ಕನುಗುಣವಾಗಿ ನಮ್ಮ ಶರೀರವು ನಾನಾಪ್ರಕಾರವಾದ

ವಿರಾಕಗಳನ್ನು ಹೊಂದುವುದು. ಆದರೆ ಅಪ್ರಾಕೃತವಾದ (ಪ್ರಾಕೃತ ಗುಣ ತ್ರಯಗಳಿಂದ ದೂರನಾದ) ಜ್ಞಾನ, ಆನಂದಗಳೇ ದೇಹವನ್ನಾಗಿ ಉಳ್ಳ ಆ ಸಚ್ಚಿದಾನಾಂದಾತ್ಮನಿಗೆ ಜರಾ, ಅಂದರೆ, ಮುಪ್ಪು ಮತ್ತು ಮರಣ. ದೇಹನಾಶ ಇತ್ಯಾದಿ ವಿಕರಗಳಿಲ್ಲ, ನಿರ್ವಿಕಾರನಾದ್ದರಿಂದ **ಜರಾಮರಣ ವರ್ಜಿತನು.**

೬. ಇತರ ಜೀವರಿಗೆ ಆಧಿವ್ಯಾಧಿಗಳ ರೂಪದಲ್ಲಿ ದುಃಖಗಳು ಪ್ರಾಪ್ತಿ ಯಾಗುವುವು. ಇದರಿಂದ ಜೀವರು ಕ್ಲೇಶಯುತರು. ಆದರೆ ಶ್ರೀಪರಮಾತ್ಮ ನಿಗೆ ಅಂತಹ ಬಾಧಾರೂಪವಾದ ಯಾವ ವಿಧವಾದ ದುಃಖಾದಿಗಳಿಲ್ಲ. ಸದಾ ಶಶ್ವದೇಕ ಪ್ರಕಾರನಾಗಿರುವನು. ಅಂತಹ ಸದಾ ಆನಂದಭರಿತನಾದ ಆನಂದ ಕಂದನು **ವಿಗತಕ್ಲೇಶನು.**

೭. **ವಿಪ್ರ**–ಎಂಬ ಶಬ್ದವು ವೈದಿಕ ಪ್ರಯೋಗವು. ಇದಕ್ಕೆ ಶ್ರೇಷ್ಠ ರಾದ ಜ್ಞಾನಿಗಳು ಎಂದರ್ಥ. ವಿಜ್ಞಾನ ತತ್ತ್ವಾಭಿಮಾನಗಳಾದ ಜ್ಞಾನಿ ಶ್ರೇಷ್ಠರಾದ ರಮಾ, ಬ್ರಹ್ಮವಾಯ್ವಾದಿಗಳಿಗೆ **ವಿಪ್ರ** ಎಂದು ಹೆಸರು. ಅಂತಹ ರಮಾಬ್ರಹ್ಮಾದಿಗಳಿಗಿಂತ ಅನಂತಾನಂತ ಕೋಟಿ ಗುಣಗಳಿಂದ ಶ್ರೇಷ್ಠನಾಗಿರು ವುದರಿಂದ **ವಿಪ್ರತಮನು.**

೮. ತನ್ನಿಂದ ಸೃಷ್ಟರಾದ ಜಗತ್ತಿನಲ್ಲಿ ಎಲ್ಲೆಲ್ಲಿಯೂ, ಅಣುರೇಣು ತೃಣಕಾಷ್ಠಾದಿಗಳಲ್ಲಿ ಪರಿಪೂರ್ಣನಾಗಿ ವ್ಯಾಪ್ತನಾಗಿದ್ದಾನೆ. ವಿಶ್ವವ್ಯಾಪಕನಾದ್ದ ರಿಂದ, **ವಿಶ್ವಾತ್ಮನು.**

೯. ಸರ್ವಜೀವರ ಬಿಂಬರೂಪಿಯಾದ ಹರಿಗೆ **ಘೃಣೀ** ಎಂತ ನಾಮ. ಅಂದರೆ, ದಯಾಸಾಗರನೆಂದರ್ಥ. ಅಂತಹ ಕರುಣಾನಿಧಿಯಾದ ಬಿಂಬನು ಘೃಣೀ ಎಂಬ ಸೂರ್ಯನಾಗಿದ್ದು, ತೇಜೋಮಯನಾಗಿದ್ದಾನೆ. ತನ್ನ ತೇಜಸ್ಸಿನ ಪ್ರಭಾವದಿಂದ, ಸೂರ್ಯ, ಚಂದ್ರ, ಅಗ್ನಿ, ನಕ್ಷತ್ರಾದಿಗಳಿಗೆ ತೇಜೋಪ್ರದನಾಗಿದ್ದಾನೆ,

೧೦. ಕೋಟಿ ಸೂರ್ಯಪ್ರಕಾಶಮಾನನಾದ ಆ ಪ್ರಭಾಸಂಪನ್ನನ ಮಹಿಮೆಗಳು ಅಪಾರ, ಅಗಣಿತ ಹಾಗೂ ಅನಂತ. ಇದರಿಂದ **ಅನಂತ ಮಹಿಮನು.**

೮. ಪರಿಶುದ್ಧವಾದ ತುಪ್ಪದಲ್ಲಿ ಶ್ರೀಲಕ್ಷ್ಮೀದೇವಿಯರು ಇದ್ದಾರೆ. ಘೃತಸ್ಥರಾದ ಶ್ರೀರಮಾ ತನ್ನ ರಮಣನಾದ ಶ್ರೀಹರಿಗೆ ಮುಖ್ಯ ಪ್ರತೀಕ ಳೆಂದೆನಿಸುವಳು. ಅಂದರೆ, ಶ್ರೀರಮಾದೇವಿಗೆ **ಘೃತಪ್ರತೀಕ** ಎಂದು ಹೆಸರು. ಘೃ ಎಂಬ ಧಾತುವಿಗೆ. ಘೃ-ರಕ್ಷಣ-ದೀಪ್ತ್ಯೋಃ " ಎಂಬ ಎರಡರ್ಥ ಗಳಿವೆ. ಸಂರಕ್ಷಣ ಹಾಗೂ ಪ್ರಕಾಶಮಾನವಾಗಿ ಹೊಳೆಯುವುದು ಎಂಬ ಅರ್ಥಾನುಸಂಧಾನದಿಂದ ಶುದ್ಧವಾದ ತುಪ್ಪದಲ್ಲಿ ತೇಜೋಮಯವಾದ ಪ್ರಕಾಶರೂಪದಿಂದ ಇದ್ದು, ಶ್ರೀಪರಮಾತ್ಮನಿಗೆ ಸದಾ ಪೂಜಾರೂಪವಾದ ಸೇವೆಯನ್ನು ಶ್ರೀರಮಾ ಮಾಡುತ್ತಿರುವಳು. ಇದರಿಂದ ಘೃತಪ್ರತೀಕನಾಮ ಳಾದ ಇಂದಿರೆಯಿಂದ ನಿರಂತರ ಆರಾಧಿತ ಚರಣಕಮಲಗಳುಳ್ಳವನಾದ್ದರಿಂದ **ಘೃತಪ್ರತೀಕಾರಾಧಿತಾಂಘ್ರಿ ಸರೋಜನು.**

**ಪ್ರಮಾಣ :**

> **ಘೃತಪ್ರತೀಕಾಂ ತಾಂ ನಿತ್ಯಂ ಘೃತಪೂರ್ಣಾನ್ನ ದಾಯಿನೀಂ ।**
> **ಯಥೇಷ್ಟ ವಿತ್ತದಾತ್ರೀಂ ಚ ನತೋಽಸ್ಮ್ಯಭಯದಾಂ ಶ್ರಿಯಮ್॥**

**-ಎಂದು ಶ್ರೀವಾದಿರಾಜತೀರ್ಥರು ಶ್ರೀಶ್ರೀಗುಣಸ್ತವನವೆಂಬ ಗ್ರಂಥದಲ್ಲಿ ಲಕ್ಷ್ಮೀಸ್ತೋತ್ರದಲ್ಲಿ ಹೇಳಿದ್ದಾರೆ.**

೯. ದೇವತಾವರ್ಗದಲ್ಲಿ ಅತ್ಯಂತ ಶ್ರೇಷ್ಠನು. ಅಂತಹ ಸರ್ವೋತ್ತಮ ನಾದ ಶ್ರೀಹರಿಯು **ಸುರರಾಜನು.** ॥೨೩॥

## ಪದ್ಯ ೨೪

**ಮೂಲ :**

**ವನಚರಾದ್ರಿ ಧರಾಧರನೆನಿಸ ಜಯ ।**
**ಮನುಜಮೃಗನರವೇಷ ಜಯ ವಾ ।**
**ಮನ ತ್ರಿವಿಕ್ರಮದೇವ ಜಯ ಭೃಗುರಾಮ ಭೂಮ ಜಯ ॥**
**ಜನಕಜಾವಲ್ಲಭನೆ ಜಯ ರು**
**ಗ್ಮಿಣಿ ಮನೋರಥಸಿದ್ಧಿದಾಯಕ**
**ಜಿನ ವಿಮೋಹಕ ಕಲಿವಿದಾರಣ ಜಯಜಯಾರಮಣ ॥ ॥೨೪॥**

**ಅವತರಣಿಕೆ :**

ಈ ಗ್ರಂಥೋಕ್ತ ವಿಷಯಗಳನ್ನು ಪಠಣ, ಶ್ರವಣ, ಪ್ರವಚನಾದಿಗಳನ್ನು ಮಾಡುವ ಅಧಿಕಾರಿಗಳಿಗೆ ಅನಿಷ್ಟ ನಿವೃತ್ತಿ ದ್ವಾರಾ ಇಷ್ಟಪ್ರಾಪ್ತಿಯಾಗಲಿ ಎಂದು ದುಷ್ಟಶಿಕ್ಷಣ, ಶಿಷ್ಟರಕ್ಷಣಾರ್ಥವಾಗಿ ಧರ್ಮಸಂಸ್ಥಾಪಕನಾದ ಶ್ರೀಹರಿಯು ದಶಾವತಾರ ವರ್ಣನ ಮಾಡುತ್ತಾರೆ ಪ್ರಸಕ್ತ ಸಂಧಿಗತ ೨೪ನೆಯ ಈ ಪದ್ಯದಿಂದ. ॥೨೪॥

**ಪ್ರತಿಪದಾರ್ಥ :**

**ವನಚರ**=ನೀರಿನಲ್ಲಿ ಸಂಚಾರ ಮಾಡುವ ಮತ್ಸ್ಯಾವತಾರಿಯೇ, **ಅದ್ರಿಧರ**=ಮಂದರಪರ್ವತವನ್ನು ತನ್ನ ಬೆನ್ನಿನ ಮೇಲೆ ಧರಿಸಿ ಸಮುದ್ರ ಮಥನಕ್ಕೆ ಪರಮೋಪಕಾರ ಮಾಡಿದ ಕೂರ್ಮನೇ, **ಧರಾಧರನೆ**=ದುರುಳನಾದ ಹಿರಣ್ಯಾಕ್ಷನನ್ನು ಸಂಹರಿಸಿ, ಭೂಮಿಯನ್ನು ಕೋರೆದಾಡಿಗಳಿಂದ ಎತ್ತಿ ಉದ್ಧರಿಸಿದ ವರಹಾರೂಪಿಯೇ (ಇಲ್ಲಿ **ಧರ** ಎಂಬ ಪದವನ್ನು ಅದ್ರಿ ಮತ್ತು ಧರಾ ಎರಡಕ್ಕೂ ಅನ್ವಯಿಸಿಕೊಳ್ಳಬೇಕು.) **ಜಯ**=ಭಕ್ತರಿಗೆ ಜಯಪ್ರದನಾಗು. **ಮನುಜಮೃಗವರವೇಷ**=ಮಾನವ ಮತ್ತು ಸಿಂಹ ಉಭಯರೂಪ ಧಾರಿಯಾದ ಹೇ ನೃಸಿಂಹಮೂರ್ತಿಯೇ, **ಜಯ**=ಮಂಗಳವನ್ನು ನೀಡು. **ವಾಮನ**=ಪ್ರಥಮದಲ್ಲಿ ವಟು ವೇಷದಲ್ಲಿ ಬಂದು ಬಲಿಚಕ್ರವರ್ತಿಯನ್ನು ಭೂದಾನ ಬೇಡಿದ ಸುಂದರರೂಪೀ ವಾಮನಾವತಾರಿಯೇ, **ತ್ರಿವಿಕ್ರಮ ದೇವ**=ದಾನಪಡೆದ ನಂತರ ಸಮಗ್ರ ಬ್ರಹ್ಮಾಂಡವನ್ನೇ ವ್ಯಾಪಿಸಿ, ಸ್ವರ್ಗ ಭೂಪಾತಾಳ ಎಂಬ ಲೋಕತ್ರಯಗಳನ್ನು ಗೆದ್ದ ತ್ರಿವಿಕ್ರಮನೇ, **ಜಯ**=ಮಂಗಳಪ್ರದನಾಗು, **ಭೃಗುರಾಮ**=ಭೃಗಕುಲೋತ್ಪನ್ನನಾದ, **ಭೂಮ**=ಪೂರ್ಣಾನಂದಸ್ವರೂಪಿಯಾದ ಪರಶುರಾಮನೇ **ಜಯ**=ಶುಭವನ್ನು ದಯಪಾಲಿಸು, **ಜನಕಜಾವಲ್ಲಭನೆ**=ಜನಕರಾಜನ ಪುತ್ರಿ ಸೀತಾಪತಿಯಾದ ಶ್ರೀರಾಮಚಂದ್ರನೇ, **ಜಯ**=ಉತ್ಕೃಷ್ಟನಾಗು. **ರುಗ್ಮಿಣಿಮನೋರಥ**=ಲಕ್ಷ್ಮೀರೂಪಳಾದ ರುಕ್ಮಿಣಿಯ ಮನಸ್ಸಿನ ಅಭಿಲಾಷೆಯನ್ನು ಸಲ್ಲಿಸಿದ, **ಸಿದ್ಧಿದಾಯಕ**=ದುಷ್ಟರಾದ ಶಿಶುಪಾಲಾದಿಗಳನ್ನು ಜಯಿಸಿ, ಸಿದ್ಧಿಪ್ರದನಾದ ಕೃಷ್ಣಾವತಾರಿ ಹರಿಯೇ, **ಜಯ**=ಜಯಪ್ರದನಾಗು. **ಜಿನವಿಮೋಹಕ**=ಜಿನನಾಮಕನಾಗಿ ಅವತರಿಸಿ ದೈತ್ಯರಿಗೆ ಮೋಹವನ್ನುಂಟುಮಾಡಿದ

ಬೌದ್ಧಾವತಾರಿಯೇ, **ಕಲಿನಿದಾರಣ**=ಧರ್ಮನಾಶಕರಾದ ಕಲ್ಯಾದಿ ಅಸುರ ರನ್ನು ಸಂಹರಿಸಿದ ಕಲ್ಕಿರೂಪಿಯೇ, **ಜಯ**=ಶುಭವನ್ನುಂಟುಮಾಡು. **ಜಯಾರಮಣ**=ಜಯನಾಮಕ ಲಕ್ಷ್ಮೀದೇವಿಗೆ ಪತಿಯಾದ ಹೇ ಸಂಕರ್ಷಣ ರೂಪೀ ಪರಮಾತ್ಮನೇ ಸಜ್ಜನರಿಗೆ ಶುಭಪ್ರದನಾಗು ಎಂದು ಪ್ರಾರ್ಥಿಸಿದ್ದಾರೆ. ॥೨೪॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ :

ಪೂರ್ವೋಕ್ತ ಪರಮಾತ್ಮ ಈ ಗ್ರಂಥವನ್ನು ಪಠನಾದಿಗಳು ಮಾಡುವ ಅಧಿಕಾರಿಗಳಿಗೆ ಅನಿಷ್ಟ ನಿವೃತ್ತಿ ಮಾಡಿ ಇಷ್ಟಪ್ರಾಪ್ತಿಯನ್ನು ಕೊಡಲಿ ಎಂತ, ದುಷ್ಟಶಿಕ್ಷಣ ಶಿಷ್ಟಪರಿಪಾಲನ ಮಾಡಿದ ಶ್ರೀಹರಿಯ ದಶಾವತಾರವನ್ನು ವರ್ಣನ ಮಾಡತಾರೆ.

ಉದಕದಲ್ಲಿ ಸಂಚಾರ ಮಾಡುವ ಮತ್ಸ್ಯದೋಪಾದಿಯಲ್ಲಿ ಮತ್ಸ್ಯಾವತಾರ ಮಾಡಿ ವೇದೋದ್ಧಾರ ಮಾಡಿದವನೇ, ಮಂದರಗಿರಿಪರ್ವತವನ್ನು ಬೆನ್ನಿಲಿ ಧರಿಸಿ, ಅಮೃತಮಥನ ಕಾರ್ಯ ನಡಿಸಿ ದೇವತೆಗಳಿಗೆ ಅಮೃತಪಾನ ಮಾಡಿಸಿದವನೇ, ಹಿರಣ್ಯಾಕ್ಷನೆಂಬೋ ದೈತ್ಯ ಅಪಹರಿಸಿದ ಭೂಮಿಯನ್ನು ಕೋರೆಹಲ್ಲಿನ ಮ್ಯಾಲೆ ಧರಿಸಿ ಭೂಮಿಯನ್ನು ಉದ್ಧಾರ ಮಾಡಿದ ವರಾಹಾವತಾರನೇ, ಭಕ್ತರಿಗೆ ಜಯರೂಪವಾದ ಮಂಗಳವನ್ನು ಕೊಡು ಅಥವಾ ಉತ್ಕೃಷ್ಟನಾಗು. ಮನುಷ್ಯ ಸಿಂಹ ಈ ಎರಡು ರೂಪವನ್ನು ವಹಿಸಿ ಹಿರಣ್ಯಕಶಿಪುನ ಸಂಹಾರ ಮಾಡಿದವನೇ ಉತ್ಕೃಷ್ಟನಾಗು. ಪ್ರಥಮದಲ್ಲಿ ಸಣ್ಣ ರೂಪನಾಗಿ ಬ್ರಹ್ಮಚಾರಿಯಾಗಿ ಬಲಿಚಕ್ರವರ್ತಿಯಲ್ಲಿ ಭೂದಾನ ಬೇಡಿ ನಂತರ ದೊಡ್ಡ ರೂಪ ತ್ರಿವಿಕ್ರಮಾವತಾರದಿಂದ ಬ್ರಹ್ಮಾಂಡ ವ್ಯಾಪಿಸಿಕೊಂಡಂಥಾ ವಾಮನಾವತಾರನೇ ಉತ್ಕೃಷ್ಟನಾಗು. ಭೃಗಕುಲದಲ್ಲಿ ಜನಿಸಿ ದುಷ್ಟಕ್ಷತ್ರಿಯರ ನಾಶ ಮಾಡಿದಂಥಾ ಪೂರ್ಣಜ್ಞಾನಾನಂದ ಉಳ್ಳ ಶ್ರೀಪರಶುರಾಮದೇವರೇ ಉತ್ಕೃಷ್ಧನಾಗು. ಜನಕರಾಯನ ಪುತ್ರಿಯಾದ ಸೀತಾದೇವೇರ ಪತಿಯಾದ

ಶ್ರೀರಾಮಚಂದ್ರದೇವರೇ ಭಕ್ತರಿಗೆ ಜಯರೂಪವಾದ ಮಂಗಳವನ್ನು ಕೊಡಲಿ ಅಥವಾ ಉತ್ಕೃಷ್ಟನಾಗಲಿ. ಶ್ರೀಲಕ್ಷ್ಮೀದೇವರ ಅಂಶಭೂತರಾದ ರುಗ್ಮಿಣಿ ದೇವೇರ ಮನಸ್ಸಿನಾಗೆ ಇದ್ದಂತೆ ತಾನು ಆಕಿಗೆ ಪತಿಯಾಗಿ ದುಷ್ಟರಾದ ಶಿಶು ಪಾಲಾದಿಗಳನ್ನು ಅವಮಾನ ಮಾಡಿದ ಶ್ರೀಕೃಷ್ಣರೂಪಿ ಪರಮಾತ್ಮನೇ, ಜೈನರು ಎಂತ ನಾಮಾಂಕಿತರಾದ ಅಸುರರಲ್ಲಿ ಅವತಾರ ಮಾಡಿ ಅವರ ಯೋಗ್ಯತಾಕ್ಕೆ ಅನುಸರಿಸಿದ ಶಾಸ್ತ್ರಕಲ್ಪನ ಮಾಡಿ ಅವರನ್ನು ಮೋಹಯುಕ್ತ ರನ್ನಾಗಿ ಮಾಡಿದ ಬೌದ್ಧಾವತಾರನೇ, ಕಲ್ಯಾದಿ ದೈತ್ಯರು ಕಲಿಯುಗ ಅಂತ್ಯ ದಲ್ಲಿ ಅವತರಿಸಿ ರಾಜ್ಯಭಾರ ಮಾಡಿ ಧರ್ಮಾಧರ್ಮಗಳ ನಾಶಮಾಡತಕ್ಕ ಕಲ್ಯಾದಿ ದೈತ್ಯರ ಸಂಹಾರ ಮಾಡುವ ಕಲ್ಕ್ಯವತಾರನೇ ಉತ್ಕೃಷ್ಟನಾಗಲಿ. ಜಯಾನಾಮಕ ಲಕ್ಷ್ಮೀದೇವೇರಿಗೆ ಪತಿಯಾದ ಸಂಕರ್ಷಣಮೂರ್ತಿಯೇ ಮಂಗಳವನ್ನು ಕೊಡಲಿ ಎಂತ ಅರ್ಥ.

**ವಿಶೇಷಾರ್ಥ :** ಸಂಕರ್ಷಣಮೂರ್ತಿಯನ್ನು ಸ್ತೋತ್ರ ಮಾಡಿದ ಕ್ರಮ ಏನೆಂದರೆ, ಭಕ್ತರಿಗೆ ಬರತಕ್ಕ ಅನಿಷ್ಟಗಳನ್ನು ಸಂಹಾರ ಮಾಡಿ ಇಷ್ಟ ಪ್ರಾಪ್ತಿರೂಪವಾದ ಮಂಗಳವನ್ನು ಕೊಡತಕ್ಕ ಭಗವದ್ರೂಪವಾದ್ದರಿಂದ ಅಂತ್ಯದಲ್ಲಿ ಜಯಾನಾಮಕ ಲಕ್ಷ್ಮೀಪತಿ ಸಂಕರ್ಷಣಮೂರ್ತಿಯನ್ನು ಸ್ತೋತ್ರ ಮಾಡಿದ್ದಾರೆ ಎಂತ ತಾತ್ಪರ್ಯ. ॥೨೪॥

**೨ ಭಾವಪ್ರಕಾಶಿಕೆ :**

ಪರಮಾತ್ಮನ ಮತ್ಸ್ಯಕೂರ್ಮಾದಿ ದಶಾವತಾರಗಳನ್ನು ಸ್ತುತಿಸುತ್ತಾರೆ. ಅದ್ರಿಧರಾಧರನೆ–ಎಂಬ ಪದದಲ್ಲಿ "ಧರ"–ಶಬ್ದವನ್ನು ಆವೃತ್ತಿ ಮಾಡಿ ಅರ್ಥ ಮಾಡಬೇಕು. ಅದ್ರಿಧರ=ಕೂರ್ಮಾವತಾರ. ಧರಾಧರ=ಭೂಮಿಯನ್ನು ಧರಿಸಿದ ವರಾಹನೆಂದರ್ಥ. ವಾಮನಾವತಾರ ಮಾಡಿ, ದಾನ ಬೇಡಿ ಭೂಮಿ ಯನ್ನು ಅಳೆಯುವಾಗ ತ್ರಿವಿಕ್ರಮಾವತಾರ ರೂಪವನ್ನು ಧರಿಸಿ ಇರುವ್ರದ ರಿಂದ ವಾಮನಾವತಾರವೇ ತ್ರಿವಿಕ್ರಮಾವತಾರವು. ಮಿಕ್ಕ ಪದಗಳ ಅರ್ಥ ವಿಶದವಾಗಿರುವುದು. ॥೨೪॥

**೩ ಶ್ರೀ ಭಾವದರ್ಪಣ ಟೀಕಾಕಾರರು ಈ ಪದ್ಯಕ್ಕೆ ವ್ಯಾಖ್ಯಾನ ಕೊಟ್ಟಿಲ್ಲ.**

**೪ ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ) :**

"ವನ"–ಇತಿ ॥ ವನಂ-ಜಲಂ ॥ ತಚ್ಚರಃ–ಮತ್ಸ್ಯಃ॥ ಅದ್ರಿಃ–ಮಂದರಃ ॥ ತದ್ಧರಃ ಕೂರ್ಮಃ ॥ ಧರಪದಂ ಉಭಾಯಾನ್ವಯಿಃ ॥ ಧರಾಧರಃ–ಕೋಲಃ ॥ ಮನುಜಮೃಗವರಃ–ನೃಹರಿಃ ॥ ಭೂಮ–ಪೂರ್ಣ ॥ ರುಕ್ಮಿಣೀ ವಲ್ಲಭ–ಇತ್ಯಸ್ಯ ಪ್ರತಿಪದಂ ॥ ತಾಳರಕ್ಷಣಾರ್ಥಂ ವಾ ॥ ನಾರಾಯಣೇತ್ಯಭಿಯುಕ್ತ ಪ್ರಯೋಗವತ್ ॥ ಜಯಾರಮಣ–ಸಂಕರುಷಣ ॥೨೪॥

**ಕನ್ನಡಾರ್ಥ :**

ಪ್ರಸಕ್ತ ಪದ್ಯದಲ್ಲಿ "ವನ"–ಎಂಬ ಪದಕ್ಕೆ ಉದಕ–ಜಲ–ನೀರು ಎಂದರ್ಥ. "ಕಾಡು" ಎಂಬರ್ಥವಲ್ಲ. ಜಲಚರವೆಂದರೆ ಮತ್ಸ್ಯವು. ಅದರಿಂದ ಮತ್ಸ್ಯಾವತಾರ ಎಂದರ್ಥ. ಅದ್ರಿ ಎಂದರೆ ಮಂದರ ಪರ್ವತ. ಅದನ್ನು ಹೊತ್ತವನು ಶ್ರೀಕೂರ್ಮದೇವರು. "ಧರಾಧರ"–ಎಂಬಲ್ಲಿ "ಧರ" ಎಂಬ ಪದವನ್ನು "ಅದ್ರಿಧರ" ಮತ್ತು "ಧರಾಧರ" ಎಂದು ಉಭಯಾನ್ವಯಾರ್ಥಮಾಡಿಕೊಳ್ಳಬೇಕು. ಅದ್ರಿಧರ–ಕೂರ್ಮ. ಧರಾಧರ–ವರಾಹದೇವರು. ಮನುಜಮೃಗವರನೆಂದರೆ, ನರಸಿಂಹ. "ಭೂಮ"–ಎಂಬ ಶಬ್ದಕ್ಕೆ "ಪೂರ್ಣ"ನೆಂದರ್ಥ. "ಜನಕಜಾವಲ್ಲಭ" ಎಂದು ಹೇಳಿದಂತೆ, "ರುಕ್ಮಿಣೀ ವಲ್ಲಭ" ಎಂದು ಹೇಳಬಹುದಾಗಿತ್ತು. ಆದರೆ ಅರ್ಥವಿವರಣೆಗಾಗಿ ಶ್ರೀರುಕ್ಮಿಣೀ ಮನೋರಥಸಿದ್ಧಿಪ್ರದ ಎಂದಿದ್ದಾರೆ. "ನಾರಾ–ಲಕ್ಷ್ಮೀಃ ಪತಿತ್ವೇನ ತದಯನಂ ನಾರಾಯಣಂ"–ಎಂದು ಜ್ಞಾನಿಗಳ ಮತ ಜಯಾರಮಣ–ಜಯಾಪತಿ. ಸಂಕರ್ಷಣರೂಪ. ನಾರಾಯಣಾಭಿನ್ನ ಭಗವದ್ರೂಪ. ॥೨೪॥

**೫. ಶ್ರೀ ಗುರುಹೃದಯ ಪ್ರಕಾಶಿಕೆ :**

ದಶಾವತಾರರೂಪ ದೇವರ ಪ್ರೀತಿ ಪ್ರಾರ್ಥಿಸುತ್ತಾರೆ, ವನಚರ ಎಂದು. ವನವೆಂಬ ಜಲದಲ್ಲಿ ಚರ, ಸಂಚರಿಸುವ ಮತ್ಸ್ಯರೂಪನೆ, ಮಂದರಾದ್ರಿಧರ ಕೂರ್ಮರೂಪನೆ, ಧರಾಧರನಾದ ವರಾಹನೆ, ಮನುಷ್ಯಮೃಗದಂತೆ ರೂಪವುಳ್ಳ ನೃಸಿಂಹನೆ, ವಾಮನಮೂರ್ತಿಯೆ, ತ್ರಿವಿಕ್ರಮನೇ, ಪರಶುರಾಮನೇ, ಭೂಮಾ ಎಂಬ ಪೂರ್ಣಾನಂದವುಳ್ಳ ಜನಕಜಾಪ್ರಿಯ ಶ್ರೀರಾಮರೂಪನೇ, ರುಗ್ಮಿಣೀದೇವಿಯ ಇಷ್ಟಾರ್ಥ ಪೂರ್ತಿಸಿ ಪತಿಯಾದ ಶ್ರೀಕೃಷ್ಣನೇ, ಜಿನ

ಮೊದಲಾದವರನ್ನ ಉಪದೇಶದಿಂದ ಭ್ರಾಂತಿಪಡಿಸಿದ ಬುದ್ಧರೂಪನೆ, ಕಲಿಯನ್ನು ಪರಿಹರಿಸುವ ಕಲ್ಕಿರೂಪನೇ, ಜಯಾದೇವಿಪತಿ ಸಂಕರ್ಷಣಾದ್ಯನೇಕರೂಪನೆ, ಜಯ ಜಯಜಯ ಅಂದರೆ, ನಿನ್ನ ಉತ್ಕೃಷ್ಟತ್ವವನ್ನು ಪ್ರಕಾಶವಾಗಿ ತಿಳಿಸೆಂದರ್ಥ. ॥೨೪॥

# ಸರ್ವವ್ಯಾಖ್ಯಾನಸಾರಸಂಗ್ರಹ

ಶ್ರೀಪರಮಾತ್ಮನ ದಶಾವತಾರಗಳ ಮಹಾಮಹಿಮಾ ವಿಶೇಷವನ್ನು ತಿಳಿಸುತ್ತಾ, ಅನಂತಾವತಾರಿಯಾದ ಪರಿಪೂರ್ಣನಾದ ಭಗವಂತನನ್ನು ಸ್ತೋತ್ರ ಮಾಡುತ್ತಾರೆ–ಪ್ರಸಕ್ತ ಪದ್ಯದಿಂದ.

೧. "ವನ" ಎಂಬ ಪದವು ಬಹ್ವರ್ಥ ಉಳ್ಳದ್ದು. ಸಾಮಾನ್ಯವಾಗಿ ಅರಣ್ಯ ಎಂಬ ಅರ್ಥವಿದೆ. ಆದರೆ "ವನ" ಶಬ್ದಕ್ಕೆ ನೀರು ಎಂತಲೂ ಇನ್ನೊಂದು ಅರ್ಥವಿದೆ. ಅಂತಹ–ನೀರಿನಲ್ಲಿ ಸಂಚರಿಸುವ ಜಲಚರ ಪ್ರಾಣಿಗಳಲ್ಲಿ ಮೀನೂ ಒಂದು. **ವನಚರನಾದ** ಶ್ರೀಪರಮಾತ್ಮನು ಮತ್ಸ್ಯಾವತಾರಿಯಾಗಿ, ಹಯಗ್ರೀವನೆಂಬ ರಾಕ್ಷಸನನ್ನು ಸಂಹರಿಸಿ, ಅವನಿಂದ ಅಪಹರಿಸಲ್ಪಟ್ಟ ವೇದಗಳನ್ನು ತಂದು ಬ್ರಹ್ಮದೇವರಿಗೆ ಒಪ್ಪಿಸಿದ ಧರ್ಮಸಂರಕ್ಷಕನು **ವನೇಚರ**ನಾದ ಮತ್ಸ್ಯರೂಪೀ ಹರಿಯು.

೨. "ಅದ್ರಿ" ಎಂದರೆ ಮಂದರಪರ್ವತ. ಸಮುದ್ರಮಥನ ಕಾಲದಲ್ಲಿ ಮಂದರಗಿರಿಯು ಭಾರದಿಂದ ಸಮುದ್ರದಲ್ಲಿ ಕುಸಿಯಲು, ದೇವತೆಗಳಿಂದ ಪ್ರಾರ್ಥ್ಯಮಾನನಾಗಿ ಶ್ರೀಹರಿಯು ಕೂರ್ಮಾವತಾರ ಧರಿಸಿ, ತನ್ನ ಬೆನ್ನಿನ ಮೇಲೆ ಆ ಗಿರಿಯನ್ನು ನಿರಾಯಾಸವಾಗಿ ಧರಿಸಿ, ಮಥನ ಕಾರ್ಯವು ಸುಗಮವಾಗಿ ನಡೆಯುವಂತೆ ಅನುಗ್ರಹಿಸಿದನು. ಆ ಕೂರ್ಮಾವತಾರಿ ಹರಿಯೇ **ಅದ್ರಿಧರನು.**

೩. ಹಿರಣ್ಯಾಕ್ಷನೆಂಬ ಧುರುಳದೈತ್ಯನು ಭೂದೇವಿಯನ್ನು ಚಾಪೆಯಂತೆ ಸುತ್ತಿ, ಪಾತಾಳಲೋಕಕ್ಕೆ ಅಪಹರಿಸಿಕೊಂಡು ಹೋದಾಗ, ದೈತ್ಯಾರಿಯಾದ ಶ್ರೀಹರಿಯು ವರಾಹರೂಪವನ್ನು ತಾಳಿ, ಸಮುದ್ರತಳಕ್ಕೆ ಇಳಿದು, ದಾನವನನ್ನು ಸಂಹರಿಸಿ, ತನ್ನ ಶೋಭಾಯಮಾನವಾದ ಕೋರೆದಾಡಿಗಳಿಂದ ಭೂಮಿ

ಯನ್ನು ಮೇಲಕ್ಕೆತ್ತಿ ಉದ್ಧರಿಸಿದ ಪರಮ ಕರುಣಾಳು. ಶ್ರೀಹರಿಯೇ **ಧರಾಧರನಾದ** ವರಾಹರೂಪಿಯು.

ಇಲ್ಲಿ "ಧರ"–ಎಂಬ ಪದವನ್ನು ಅದ್ರಿಧರ ಮತ್ತು ಧರಾಧರ ಎಂದು ಪುನರಾನ್ವಯ ಮಾಡಿಕೊಳ್ಳಬೇಕು. ಅದ್ರಿಧರನಾದ ಕೂರ್ಮರೂಪೀ ಹರಿಯು ಧರಾಧರನಾದ ವರಾಹವತಾರಿಯು.

೪. ಭಾಗವತೋತ್ತಮನಾದ ಬಾಲಕ ಪ್ರಹ್ಲಾದನ ಮೊರೆಯನ್ನು ಕೇಳಿ ಶ್ರೀಹರಿಯು ಸರ್ವತ್ರವ್ಯಾಪ್ತನೆಂದು ಉದ್ಘೋಷಿಸಿದ ಬಾಲಕನ ಮಾತನ್ನು ಸತ್ಯಮಾಡುವುದಕ್ಕೆ, ಸ್ತಂಭದಿಂದ ಮೂಡಿಬಂದ ಜನನ ಮರಣ ರಹಿತನಾದ ಅಜನಾಮಕನಾದ ನರಸಿಂಹರೂಪಿ ಹರಿಯನ್ನು ಸ್ತುತಿಸುತ್ತಾರೆ. "ಮನುಜ" ಎಂದರೆ ಮಾನವ. "ಮೃಗವರ"–ಮೃಗವರ್ಗದಲ್ಲಿ ಶ್ರೇಷ್ಠವಾದ ಸಿಂಹ. ಅಂತಹ ನರಸಿಂಹಾವತಾರೀ ಶ್ರೀಹರಿಯೇ **ಮನುಜಮೃಗವರ ವೇಷನು.**

೫. ನೂರನೆಯ ಅಶ್ವಮೇಧಯಾಗದಲ್ಲಿ ನಿರತನಾಗಿ, ಯಜ್ಞದೀಕ್ಷಾ ಪರನಾಗಿದ್ದ ಬಲಿಚಕ್ರವರ್ತಿಯ ಬಳಿಗೆ ಹೋಗಿ, ತನ್ನ ಸುಂದರವಾದ ವಟು ವೇಷದಿಂದ ಮೋಹಗೊಳಿಸಿದ **ವಾಮನರೂಪಿ ಶ್ರೀಹರಿಯು,** ಭೂದಾನ ವನ್ನು ಬೇಡಿ, ತನ್ನ ಎರಡು ಪಾದಗಳಿಂದ ಚತುರ್ದಶಭುವನಗಳನ್ನು ವ್ಯಾಪಿಸಿ ಕೊಂಡು **ತ್ರಿವಿಕ್ರಮನಾದ.** ವಾಮನನಾಗಿ ಬಂದ. ತ್ರಿವಿಕ್ರಮನಾಗಿ ಬೆಳೆದ. ತನ್ನದೇ ಆದ ಬ್ರಹ್ಮಾಂಡವನ್ನು ಭೂದಾನವ್ಯಾಜದಿಂದ ಅಳೆದು, ಬಲಿಯಿಂದ ಸ್ವಾಧೀನಪಡಿಸಿಕೊಂಡ **ವಾಮನ ತ್ರಿವಿಕ್ರಮ** ರೂಪಗಳನ್ನು ಸ್ತೋತ್ರ ಮಾಡಿದ್ದಾರೆ.

೬. ಭೃಗುಕುಲದಲ್ಲಿ ಅವತರಿಸಿ, ರೇಣುಕಾ ಜಮದಗ್ನಿಯರ ಪುತ್ರನಾಗಿ ಪ್ರಕಟನಾಗಿ, ದುಷ್ಟಕ್ಷತ್ರಿಯರನ್ನು ನಾಶಗೈದ **ಭೃಗುರಾಮ** ನಾಮಕನಾದ ಪರಶುರಾಮಾವತಾರಿ ಶ್ರೀಹರಿಯನ್ನು ಸ್ತುತಿಸುತ್ತಾರೆ. ತನ್ನ ಸಕಲ ಗುಣ ರೂಪ, ಕ್ರಿಯಾದಿಗಳಲ್ಲಿ ಪರಿಪೂರ್ಣನಾಗಿರುವುದರಿಂದ, ಶ್ರೀಪರಮಾತ್ಮನಿಗೆ **ಭೂಮ** ಎಂದು ಹೆಸರು. ಅಂತಹ ಭೂಮನಾದ ಭೃಗುರಾಮನು ನಮಗೆ ಮಂಗಳಪ್ರದನಾಗಲಿ.

೭. ಜನಕಮಹಾರಾಜನ ಮಗಳಾದ ಜಾನಕಿಯನ್ನು ಪ್ರಬಲವಾದ ಶಿವಧನುಸ್ಸನ್ನು ಭಂಗಮಾಡುವ ವ್ಯಾಜದಿಂದ, ಸೀತೆಯನ್ನು ಪಾಣಿಗ್ರಹಣ ಪೂರ್ವಕ ಸ್ವೀಕರಿಸಿದ ಜಾನಕೀಪತಿಯಾದ ಶ್ರೀರಾಮಚಂದ್ರಮೂರ್ತಿಯೇ **ಜನಕಜಾವಲ್ಲಭನು.** ಭೃಗುರಾಮನಾದ ಪರಶುರಾಮರೂಪ ಒಂದು. ಸೀತಾರಾಮನಾದ ರಾಮಾವತಾರ ಒಂದು. ಇವೆರಡೂ ಸ್ವಗತಭೇದವಿವರ್ಜಿತ ರೂಪಗಳು.

೮. ಶ್ರೀಲಕ್ಷ್ಮೀದೇವಿಯರ ಅವತಾರರೂಪಳಾದ ರುಕ್ಮಿಣಿಯು ವಿಪ್ರನ ಕೈಲಿ ಬರೆದು ಕಳುಹಿಸಿದ ಪತ್ರದ ಪ್ರಕಾರ, ಅವಳ ಮನೋರಥವನ್ನು ಸಲ್ಲಿಸಿ, ದುಷ್ಟರಾದ ರುಕ್ಮಿ, ಶಿಶುಪಾಲಾದಿಗಳನ್ನು ಪರಾಭವಗೊಳಿಸಿದ ಕೃಷ್ಣಾವತಾರೀ ಶ್ರೀಹರಿಯು ರುಕ್ಮಿಣಿ **ಮನೋರಥ ಸಿದ್ಧಿದಾಯಕನು.**

೯. ಅಸುರರಲ್ಲಿ ಅವತಾರ ಮಾಡಿ, ಮೋಹಶಾಸ್ತ್ರಗಳನ್ನು ಕಲ್ಪನ ಮಾಡಿ, ದೈತ್ಯರನ್ನು ತನ್ನ ಮಾಯೆಯಿಂದ ಮೋಹಗೊಳಿಸಿದ ಬೌದ್ಧಾವತಾರೀ ಶ್ರೀಪರಮಾತ್ಮನು **ಜಿನಮೋಹಕನು.**

೧೦. ಕಲಿಯುಗದ ಅಂತ್ಯದಲ್ಲಿ ಅವತರಿಸಿ, ಧರ್ಮಕಟಂಕರಾದ ಕಲ್ಯಾದಿದೈತ್ಯರ ಸಂಹಾರಮಾಡಿದ **ಕಲಿನಿದಾರಣನೇ** ಕಲ್ಕ್ಯವತಾರೀ ಶ್ರೀಹರಿಯು.

೧೧. ಇಂತು, ಮತ್ಸ್ಯಾದಿ ಕಲ್ಕಿಪರ್ಯಂತ ಶ್ರೀಹರಿಯ ದಶಾವತಾರಗಳನ್ನು ಸ್ತುತಿಸುತ್ತಾ, ಅಂತ್ಯದಲ್ಲಿ ಜಯಾನಾಮಕಳಾದ ಲಕ್ಷ್ಮೀದೇವಿಯರ ಪತಿಯಾದ **ಜಯಾರಮಣ** ನಾಮಕನಾದ ಶ್ರೀಸಂಕರ್ಷಣರೂಪೀ ಶ್ರೀಪರಮಾತ್ಮನು ಈ ಗ್ರಂಥೋಕ್ತ ವಿಷಯಗಳನ್ನು ಪಠಣ, ಶ್ರವಣ, ಪ್ರವಚನಾದಿಗಳನ್ನು ಮಾಡುವ ಅಧಿಕಾರಿಗಳಿಗೆ,ಜಯ ಅಂದರೆ ಮಂಗಳವನ್ನು ಉಂಟು ಮಾಡಲಿ ಎಂದು ಸ್ತೋತ್ರ ಮಾಡಿದ್ದಾರೆ. ॥೭೪॥

## ಪದ್ಯ ೨೫

**ಮೂಲ :**

**ಸಚ್ಚಿದಾನಂದಾತ್ಮ ಬ್ರಹ್ಮಕ ।**
**ರಾರ್ಚಿತಾಂಘ್ರಿಸರೋಜ ಸುಮನಸ ।**
**ಪ್ರೋಚ್ಚ ಸನ್ಮಂಗಳದ ಮಧ್ವಾಂತಃಕರಣ ರೂಢ ॥**
**ಅಚ್ಯುತ ಜಗನ್ನಾಥ ವಿಠ್ಠಲ ।**
**ನಿಚ್ಚ ಮೆಚ್ಚಿದ ಜನರ ಬಿಡ ಕಾ।**
**ಡ್ಗಿಚ್ಚನುಂಡಾರಣ್ಯದೊಳು ಗೋಗೋಪರನು ಕಾಯಿದಾ ॥**

||೨೫||

**ಅವತರಣಿಕೆ :**

ಶ್ರೀ ಪರಮಾತ್ಮನ ಕರುಣಾರಸಪೂರಿತವಾದ ವಾತ್ಸಲ್ಯ ಹಾಗೂ ಸ್ವಜನರನ್ನು ಸಂರಕ್ಷಿಸುವ ಪರಿಯನ್ನು ತಿಳಿಸುತ್ತಾರೆ, ಪ್ರಸಕ್ತ ಸಂಧಿಗತ ೨೫ ನೆಯ ಈ ಪದ್ಯದಿಂದ.

**ಪ್ರತಿಪಧಾರ್ಥ :**

**ಸಚ್ಚಿದಾನಂದಾತ್ಮ**= ನಿರ್ದುಷ್ಟವಾದ, ಜ್ಞಾನ ಮತ್ತು ಆನಂದ ಪರಿಪೂರ್ಣವಾದ ಶರೀರವುಳ್ಳ ಶ್ರೀ ಪರಬ್ರಹ್ಮನು, **ಬ್ರಹ್ಮ**=ಚತುರ್ಮುಖಬ್ರಹ್ಮದೇವರ, **ಕರ** = ಕೈಗಳಿಂದ, **ಅರ್ಚಿತ** = ಪೂಜಿಸಲ್ಪಟ್ಟ, **ಅಂಘ್ರಿ ಸರೋಜ**=ಪಾದಕಮಲಗಳುಳ್ಳವನು. **ಸುಮನಸ** = ರುದ್ರಾದಿ ಸಮಸ್ತ ದೇವತೆಗಳಿಂದ. **ಪ್ರೋಚ್ಚ** = ಸ್ತುತ್ಯನಾದವನು. **ಸನ್ಮಂಗಳದ**=ಸಮೀಚೀನವಾದ ಜ್ಞಾನಭಕ್ತಿವೈರಾಗ್ಯಾದಿ ದೈವೀಸಂಪತ್ತನ್ನು ಇಹದಲ್ಲಿ ಕೊಟ್ಟು, ಪರದಲ್ಲಿ ಮೋಕ್ಷವೆಂಬ ನಿತ್ಯಾನಂದರೂಪವಾದ ಮಂಗಳವನ್ನು ಕೊಡುವ,

**ಮಧ್ವಾಂತಃ ಕರಣ ರೂಢ** = ಶ್ರೀ ಮಧ್ವಮುನಿಗಳಿಗೆ ಪ್ರೀತಿಯಾದವನಾದ (ಅವರ ಅಂತರಂಗಸ್ಥನಾಗಿ, ಆನಂದವನ್ನು ಕೊಡುವ), **ಅಚ್ಯುತ** = ನಾಶ ರಹಿತನಾದ, **ಜಗನ್ನಾಥವಿಠ್ಠಲ** = ಜಗತ್ಪ್ರಭುವಾದ ದಾಸರಾಯರ ಅಂಕಿತ ನಾಮಾಖ್ಯನಾದ ಶ್ರೀಲಕ್ಷ್ಮೀನರಸಿಂಹ ದೇವರು, **ನಿಚ್ಚ**=ಭಕ್ತಿಪೂರ್ವಕ ವಾಗಿ, (ದೃಢವಾಗಿ), **ನೆಚ್ಚಿದ**=ಅವನೇ ಗತಿ ಎಂದು ನಂಬಿದ, **ಜನರ**= ಭಕ್ತ ಜನರನ್ನು, **ಬಿಡ**=ಯಾವ ಕಾಲಕ್ಕೂ ಕೈಬಿಡದೆ ಸಲಹುವನು. **ಕಾಡ್ಗಿಚ್ಚ**=ಅರಣ್ಯದಲ್ಲಿ ಒದಗಿದ ಕಾಡುಕಿಚ್ಚನ್ನು, **ಉಂಡು**=ನುಂಗಿದವ ನಾಗಿ, **ಅರಣ್ಯದೊಳು**=ಕಾಡಿನಲ್ಲಿ, **ಗೋ**=ಗೋಸಮೂಹವನ್ನೂ, **ಗೋಪರನು**=ಗೋಪಾಲರ ವೃಂದವನ್ನೂ, **ಕಾಯಿದಾ**=ಸಂರಕ್ಷಿಸಿದನು. ||೨೫||

## ವ್ಯಾಖ್ಯಾನಗಳು

### ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ :

ಶ್ರೀಪರಮಾತ್ಮಗೆ ಸ್ವಜನರಕ್ಷಕತ್ವವನ್ನು ಶಾಸ್ತ್ರಪ್ರಮಾಣಗಳಿಂದ ಹೇಳಿ ಶ್ರೀಪರಮಾತ್ಮನ ಸ್ತೋತ್ರ ಮಾಡುತಾರೆ.

ನಿರ್ದುಷ್ಟಗಳಾದ ಜ್ಞಾನವೇನು ಸಂತೋಷವೇನು ಶರೀರ ಉಳ್ಳವ ನಾಗಿರುವ ಶ್ರೀಪರಮಾತ್ಮನು (ಜೀವನೂನೂ ಅಂಥಾವನೇವೇ ಆದರೂ ನಿರ್ದುಷ್ಟಶಬ್ದದಿಂದ ಜೀವನ ವ್ಯಾವೃತ್ತಿ) ಬ್ರಹ್ಮದೇವರ ಕರಗಳಿಂದ ಪೂಜಿತ ವಾದ ಪಾದಗಳೆಂಬೋ ಕಮಲಗಳು ಉಳ್ಳವ. ರುದ್ರಾದಿ ದೇವತೆಗಳಿಂದ ಸ್ತುತ್ಯನಾದವ, ಸಮೀಚೀನವಾದ ಐಶ್ವರ್ಯವೇನು, ಜ್ಞಾನ-ಭಕ್ತಿ-ವೈರಾಗ್ಯ ಮೊದಲಾದ ಮಂಗಳಗಳನ್ನ ಇಹದಲ್ಲಿ ಕೊಟ್ಟು, ಪರದಲ್ಲಿ ಮಹಾಮೋಕ್ಷಾಖ್ಯ ಮಂಗಳವನ್ನೂ ಕೊಡತಕ್ಕವ. ಸಜ್ಜನರಲ್ಲಿ ಪರಮಾಂತಃಕರಣ ಮಾಡಿ ಶ್ರೀಮದಾನಂದತೀರ್ಥರಿಂದ ಸಚ್ಛಾಸ್ತ್ರವನ್ನ ರಚನಾ ಮಾಡಿಸಿ ಆ ಮೂಲಕ ದಿಂದ ಭಗವದ್ಭಕ್ತರನ್ನ ರಕ್ಷಣೆ ಮಾಡಿದವ (ಶ್ರೀಮಧ್ವಾಚಾರ್ಯರಿಗೂ ಪ್ರೀತಿ ಯಾದವ). ನಾಶರಹಿತನಾದವ, ಜಗತ್ತಿಗೆ ಸ್ವಾಮಿಯಾದವ, ಪಾಪಪರಿಹಾರ ಮಾಡತಕ್ಕವ. (ಇಂಥಾಪರಮಾತ್ಮ) ನಿಶ್ಚಯವಾಗಿ ಸರ್ವೋತ್ತಮನೇ ಎಂದು

ಮೆಚ್ಚಿ, ಅವನೇ ಗತಿ ಎಂತ ನಂಬಿದಂಥ ಭಕ್ತಜನರನ್ನ ದಾವಕಾಲಕ್ಕೂ ಬಿಡ ತಕ್ಕವನಲ್ಲ. ಆಕಳುಗಳನ್ನೇನು, ಗೋಪಾಲಕರನ್ನೇನು ಇವರನ್ನ ಅಡವಿಯಲ್ಲಿ ಬಂದಂಥಾ ಕಾಡುಕಿಚ್ಚು ಎಂಬ ಅಗ್ನಿ ಸಮೂಹವನ್ನು ನುಂಗಿದವನಾಗಿ, ನಿದ್ರಾಯುಕ್ತರಾದ ಗೋವುಗಳ ಗೋಪಾಲಕರನ್ನ ರಕ್ಷಿಸೋವನಾಗಿದ್ದಾನೆ.

**ವಿಶೇಷಾರ್ಥ:** ಸುಮನಸಪ್ರೋಕ್ಷ್ಯ ಎಂದರೆ, ಬ್ರಹ್ಮದೇವರಿಗೆ ಮಹತತ್ತ್ವಾದಿ ಯಾವತ್ತೂ ತತ್ತ್ವಗತ ಶ್ರೀಪರಮಾತ್ಮನ ಪಾದಸೇವಾ ಉಂಟು. **ರುದ್ರಾದಿಗಳಿಗೆ ಮಹತತ್ತ್ವಗತ ಶ್ರೀಪರಮಾತ್ಮನ ಪಾದಸೇವಾ ಇಲ್ಲ,** ವಿನುತತ್ವ ಮಾತ್ರವೇ, ರಮಾದೇವೇರಿಗೆ ಅವ್ಯಾಕೃತಾಕಾಶಾಂತವರಿಗೂ ಸೇವಾದಿಗಳು ಉಂಟು. ಪರಮಾತ್ಮನ ಸ್ವರಮಣಪ್ರದೇಶದಲ್ಲಿ ವಿನುತತ್ವ ಮಾತ್ರವೇ, ಅಲ್ಲಿ ಪ್ರವೇಶ ಇಲ್ಲ ಎಂತ ತಾತ್ಪರ್ಯ. ॥೨೫॥

**೨. ಭಾವಪ್ರಕಾಶಿಕೆ :**

ಭಕ್ತವತ್ಸಲನಾದ ಶ್ರೀಹರಿಯು ಯಾರನ್ನು ಉದ್ಧರಿಸಬೇಕೆಂದು ತನ್ನ ಮನಸ್ಸಿಗೆ ತೋರುವುದೋ ಅವರನ್ನು ಎಂದಿಗೂ ಬಿಡನು. ಅಂದರೆ, ಯಾವನು ಮಾಡುವ ಭಕ್ತಿಯಿಂದ ಪರಮಾತ್ಮನು ಮೆಚ್ಚುವಂತೆ ಮಾಡು ವನೋ, ಅವನಿಗೆ ಪರಮಾತ್ಮನು ಒಲಿವನೆಂದು ಹೇಳುತ್ತಾ ಈ ಸಂಧಿಯನ್ನು ಮುಗಿಸುತ್ತಾರೆ.

ಶ್ರೀಪರಮಾತ್ಮನು ಸಚ್ಚಿದಾನಂದಸ್ವರೂಪನು. ಬ್ರಹ್ಮದೇವರ ಕರಗಳಿಂದ ಪೂಜಿತವಾದ ಪಾದಕಮಲಗಳುಳ್ಳವನು. ದೇವೋತ್ತಮನು. ಎಲ್ಲಾ ಭಕ್ತರಿಗೂ ಮಂಗಳಪ್ರದನು. ಶ್ರೀಮನ್ಮಧ್ವಾಚಾರ್ಯರ ಹೃತ್ಕಮಲದಲ್ಲಿ ವಾಸ ಮಾಡುವವನು. ಶ್ರೀಕೃಷ್ಣಾವತಾರದಲ್ಲಿ ಗೋವುಗಳನ್ನು ಕಾಯುತ್ತಾ, ಯಮುನಾ ನದಿಯ ತೀರದಲ್ಲಿ ಒಂದು ಕಾಡಿನಲ್ಲಿ ನಂದಗೋಪ ಮೊದಲಾದ ಗೋಪಾಲಕರು ಗೋವುಗಳಿಂದ ಕೂಡಿ, ಮಲಗಿರಲು, ರಾತ್ರಿಯಲ್ಲಿ ಕಾಡುಕಿಚ್ಚು ಬಂದು ವನವನ್ನು ಸುಡುತ್ತಿರಲು ಅಲ್ಲಿದ್ದವರೆಲ್ಲವೂ ಭೀತರಾಗಿ ಕೃಷ್ಣನನ್ನು ಮೊರೆಹೊಕ್ಕರು. ಆಗ ಕೃಷ್ಣನು—

**"ನಿಮೀಲಯತ ಮಾಭೈಷ್ಟ ಲೋಚನಾನೀತ್ಯ ಭಾಷತ ।
ತಥೈವ ಮೀಲಿತಾಕ್ಷೇಷು ಭಗವಾನಗ್ನಿಮುಲ್ಬಣಂ ।
ಪೀತ್ವಾಮುಖೇನ ತಾನ್ ಕೃಛ್ರಾದ್ಯೋಗಾಧೀಶೋವ್ಯ
ಮೋಚಯತ್ ॥"**

ಶ್ರೀಕೃಷ್ಣನು ಗೋಪಾಲಕರನ್ನು ನೋಡಿ, ಭಯಪಡಬೇಡಿರಿ. "ನೀವೆಲ್ಲರೂ ಕಣ್ಣುಮುಚ್ಚಿಕೊಳ್ಳಿರಿ"–ಎಂದು ಹೇಳಿ, ಆ ಘೋರವಾದ ಕಾಡುಕಿಚ್ಚನ್ನು ನುಂಗಿಬಿಟ್ಟು, ಯೋಗಿಗಳರಸನಾದ ಸ್ವಾಮಿಯು ಗೋವುಗಳನ್ನು ಗೋಪಾಲಕರನ್ನು ಅಗ್ನಿಯಿಂದ ರಕ್ಷಿಸಿದನೆಂದು **ಭಾಗವತ ದಶಮಸ್ಕಂಧದಲ್ಲಿ** ಹೇಳಿರುವರು. ನಾಶರಹಿತನಾದ ಶ್ರೀಜಗನ್ನಾಥವಿಠ್ಠಲನು **"ಯಮೇವೈಷವೃಣುತೆ ತೇನಲಭ್ಯಃ"**–ಎಂದು ಶ್ರುತಿಯಲ್ಲಿ ಹೇಳಿರುವಂತೆ, ಯಾರು ತನ್ನಲ್ಲಿ ಭಕ್ತಿಮಾಡಿ, ತನ್ನನ್ನು ಮೆಚ್ಚಿಸುವರೋ, ತಾನು ಯಾರ ಭಕ್ತಿಗೆ ಮೆಚ್ಚುವನೋ, ಅವರನ್ನು ಎಂದಿಗೂ ಕೈಬಿಡನು. ॥೨೫॥

**೩ ಭಾವದರ್ಪಣ ಟೀಕಾ :**

ಸಚ್ಚಿದಾನಂದಾತ್ಮೇತಿ ॥ ನಿಚ್ಚ–ನಿರ್ಮಲವಾಗಿ. ಪ್ರೋಚ್ಚ–ಪ್ರಕರ್ಷೇಣ ಉಚ್ಚ ಎಂಬಂರ್ಥ.

ಇತಿ ಶ್ರೀಮತ್ಕವಿಕುಲತಿಲಕ ಶ್ರೀಮಜ್ಜಗನ್ನಾಥದಾಸರಾಜವಿರಚಿತ ಶ್ರೀಮದ್ಧರಿಕಥಾಮೃತ ಸಾರಸ್ಯ **ಭಾವದರ್ಪಣ ಟೀಕಾಯಾಂ ಕಮಲಾಪತಿ ದಾಸ ಹೃದ್ಗತೇನ** ಶ್ರೀಹರಿಣಾಕೃತಾಯಾಂ **ಸರ್ವಪ್ರತೀಕಸಂಧಿಃ** ಪರ್ಯವಸಿತಃ. ॥೨೫॥

**೪ ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ) :**

ಉಪಸಂಹರತಿ– "ಸಚ್ಚಿದಾನಂದಾತ್ಮ" ಇತಿ ॥ ಸುಮನಸ–ದೇವ ॥ ಪ್ರೋಚ್ಚ–ಉತ್ತಮಃ ॥ ಏಕಪದಂವಾ ॥ "ಮುಖ್ಯೇಷ್ಟಂ ವಾ ಸುಮನಸಾಂ" ಇತ್ಯುಕ್ತೇಃ ॥ ನಿಚ್ಚ–ಸಮೀಚೀನಂ (ತಯಾ)॥ ನೆಚ್ಚ–ವಿಶ್ವಸ್ತಃ ॥

ಇತಿ ಶ್ರೀಮದ್‌ಹರಿಕಥಾಮೃತಸಾರ ಟೀಕಾಯಾಂ ಸೋದೇಶಾನು ಗೃಹೀತ ಶ್ರೀನಿವಾಸಾಚಾರ್ಯ ಸುತ **ವಾದಿರಾಜಾರ್ಯ** ವಿರಚಿತಯಾಂ **ವ್ಯಾಸದಾಸ ಸಿದ್ಧಾಂತ ಕೌಮುದ್ಯಾಂ ಸರ್ವಪ್ರತೀಕಸಂಧಿಃ॥ ಸಮಾಪ್ತಃ॥**
॥೨೫॥

**ಕನ್ನಡಾರ್ಥ :**

"ಸಚ್ಚಿದಾನಂದಾತ್ಮ"–ಎಂಬ ಈ ಪದ್ಯದಿಂದ ಪ್ರಸಕ್ತ ಸಂಧಿಯನ್ನು ಉಪಸಂಹರಿಸುತ್ತಾರೆ. ಸುಮನಸ–ಎಂದರೆ ದೇವತೆಗಳೆಂದರ್ಥ. ಪ್ರೋಚ್ಚ–ಎಂದರೆ, ಉತ್ತಮವೆಂಬ ಅರ್ಥ. ಸುಮನಸಪ್ರೋಚ್ಚ–ಎಂದರೆ,ದೇವೋತ್ತಮ ಎಂಬರ್ಥ. **ಶ್ರೀಮಧ್ವಾಚಾರ್ಯರು ಅನುವ್ಯಾಖ್ಯಾನದಲ್ಲಿ**– "ಶ್ರೀಪರಮಾತ್ಮನು ಉತ್ತಮರಾದ ದೇವತೆಗಳಿಗೆ ಇಷ್ಟದೈವನು. ಅತಿಪ್ರಿಯತಮನು." ಎಂದು ಹೇಳಿರುತ್ತಾರೆ. "ನಿಚ್ಚ ನೆಚ್ಚಿದ"–ಎಂಬ ಪದಕ್ಕೆ ಸಮೀಚೀನವಾದ ದೃಢವಾದ ಶಾಸ್ತ್ರವಿಹಿತವಾದ ಭಕ್ತಿಯಿಂದ ನಂಬಿರುವ–ಎಂದು ಅರ್ಥಮಾಡಬೇಕು.

ಇಂತು ಶ್ರೀಹರಿಕಥಾಮೃತಸಾರ ಟೀಕಾ **ವ್ಯಾಸದಾಸ ಸಿದ್ಧಾಂತ ಕೌಮುದೀ** ಎಂಬ ಸಂಸ್ಕೃತ ವ್ಯಾಖ್ಯಾನದ ಕನ್ನಡಾರ್ಥವು ಮುಗಿಯಿತು. ೧೦ ನೆಯ ಸಂಧಿ **ಸರ್ವಪ್ರತೀಕಸಂಧಿಯು** ಸಮಾಪ್ತಿಯಾಯಿತು. ॥೨೫॥

**೫ ಶ್ರೀಗುರುಹೃದಯ ಪ್ರಕಾಶಿಕೆ :**

ದೇವರಿಗೆ ಸ್ವಜನರಕ್ಷಕತ್ವವನ್ನು ಶಾಸ್ತ್ರಪ್ರಾಮಾಣ್ಯದಿಂದ ತೋರಿಸಿ ಪ್ರಾರ್ಥಿಸುತ್ತಾರೆ. ಸಚ್ಚಿದಾನಂದ ಅಂದರೆ ಉತ್ಕೃಷ್ಟಾನಂದ ಜ್ಞಾನಸ್ವರೂಪನು, ಬ್ರಹ್ಮಾದಿ ಸರ್ವಪೂಜ್ಯಚರಣನು.ಆದ್ದರಿಂದ ಸುಮನಸಪ್ರೋಚ್ಯ,ಅಂದರೆ,ಸರ್ವದೇವೋತ್ತಮನು. ಸನ್ಮಂಗಳದ ಎಂದರೆ ನಿರ್ದುಷ್ಟಶುಭಪ್ರದನಾದವನು, ಶ್ರೀಮಧ್ವಾಚಾರ್ಯರ ಹೃತ್ಕಮಲ ನಿವಾಸಿಯಾದವನು, ಚ್ಯುತಿರಹಿತನು ಆದ ಜಗನ್ನಾಥವಿಠ್ಠಲ ಸ್ವಾಮಿ ನಿತ್ಯದಲ್ಲೂ ತನ್ನನ್ನು ಮೆಚ್ಚಿದ ಅಂದರೆ, ಪರಮಭಕ್ತಿಯಿಂದ ಪ್ರೀತಿಸುವ ಜನರನ್ನು ಬಿಡದೇ ಕಾಪಾಡುವಂಥಾವನು. ಕಾಡ್ಗಿಚ್ಚನ್ನು ಪಾನಮಾಡಿ ಅರಣ್ಯದಲ್ಲಿ ತನ್ನ ಪರಮಭಕ್ತರಾದ ಪ್ರೀತಿಪಾತ್ರರಾದ ಗೋವು ಮತ್ತು ಗೋಪಾಲಕರನ್ನು ರಕ್ಷಿಸಿದನು ಎಂಬ ಶ್ರೀಭಾಗವತ ಶಾಸ್ತ್ರವೇ ಇದಕ್ಕೆ ಸಾಕ್ಷಿ ಎಂದರ್ಥ. ॥೨೫॥

# ಹತ್ತನೇ ಸಂಧಿಗತ ಪ್ರಮೇಯಗಳು

ಈ ಸಂಧಿಯಲ್ಲಿ ಶ್ರೀಹರಿಯು ನಿರ್ವ್ಯಾಜಭಕ್ತರ ಲಕ್ಷಣವನ್ನು ತಿಳಿಸುತ್ತಾ, ಶ್ರೀಹರಿಯ ಪಾದ ನಿರ್ವ್ಯಾಜವಾಗಿ ಸೇವಿಸುವವರಿಗೆ ಸಮಸ್ತದೇವತೆಗಳೂ ಪರಮಾನುಗ್ರಹ ಮಾಡಿ ಸಹಾಯಕರಾಗಿ ಸಾಧನೆ ಮಾಡಿಸುತ್ತಾರೆಂತಲೂ, ಬಾಹ್ಯಪ್ರಜ್ಞೆ ಇಲ್ಲದೆ ದೇವರನ್ನು ಧ್ಯಾನಿಸುವ ಅಸಂಪ್ರಜ್ಞಾತಧ್ಯಾನಿಗಳಿಗೆ ವಿಧಿ-ನಿಷೇಧಗಳ ಲೇಪವಿಲ್ಲವೆಂದು ದೃಷ್ಟಾಂತಗಳಿಂದ ತಿಳಿಸಿ, ರೋಮಕೂಪಗಳಲ್ಲಿ ಮೂರುಕೋಟಿ ತೀರ್ಥಾಭಿಮಾನಿಗಳಿರುವರೆಂತ ತಿಳಿದು, ಹೃದ್ಗತ ಪರಮಾತ್ಮನಿಗೆ ಅಭಿಷೇಕವೆಂದು ಯಾವ ನೀರಿನಲ್ಲಿ ಸ್ನಾನಮಾಡಿದರೂ ಗಂಗಾದಿ ತೀರ್ಥಾಭಿಮಾನಿಗಳು ತಾವಾಗಿ ಒಲಿದು ಅಲ್ಲಿದ್ದು ಸಕಲ ಪುರುಷಾರ್ಥಗಳನ್ನೂ ಕೊಡುವರೆಂಬ ವಿಶೇಷ ಪ್ರಮೇಯವನ್ನು ತಿಳಿಸಿರುತ್ತಾರೆ. ಜೀವರುಗಳು ತಮ್ಮಲ್ಲಿರುವ ಅಲ್ಪಕರ್ತೃತ್ವವನ್ನು ಮರೆತು ತಾವೇ ಸ್ವತಂತ್ರಕರ್ತೃಗಳೆಂದೂ, ಸ್ವತಂತ್ರಭೋಕ್ತೃಗಳೆಂದೂ, ಸರ್ವಕ್ಕೂ ತಾವೇ ಸ್ವಾಮಿಗಳೆಂದೂ ಅಜ್ಞಾನದಿಂದ ಭ್ರಾಂತರಾಗಿ, ದುರಭಿಮಾನದಿಂದ ಅನಂತಜನ್ಮಾಪಾದಕಕರ್ಮಗಳಿಗೆ ಕಾರಣರಾಗುತ್ತಿರುತ್ತಾರೆ. ಇದನ್ನು ಬಿಟ್ಟು ಸರ್ವಕ್ಕೂ ಸರ್ವಪ್ರೇರಕ, ಸರ್ವಸ್ವತಂತ್ರನಾದ ಸ್ವಾಮಿ ಶ್ರೀಹರಿಯೆಂದು ಭಾವಿಸಿ ಸರ್ವಕರ್ಮಗಳನ್ನೂ ಆತನ ಪಾದದಲ್ಲೇ ಸಮರ್ಪಿಸಿ ಆಚರಿಸಿ ಅವುಗಳ ಪುಣ್ಯಭಾಗಿಗಳಾಗಬೇಕೆಂದು ಬಹು ದೃಷ್ಟಾಂತಗಳಿಂದ, ಶ್ರೀವಿಷ್ಣುತೀರ್ಥರಿಂದ ರಚಿಸಲ್ಪಟ್ಟಿರುವ ಷೋಡಶೀ ಗ್ರಂಥದಲ್ಲಿ ಬಂಧಕಪ್ರಕರಣ ಬಂಧಕನಿವೃತ್ತಿ ಪ್ರಕರಣವೆಂಬುದಾಗಿ ಹೇಳಿರುವ ಪ್ರಮೇಯಗಳನ್ನೇ ಇಲ್ಲಿ ವರ್ಣಿಸಿರುತ್ತಾರೆ. ಸಂಧಿಯು ಕೊನೆಯಲ್ಲಿ ಈ ಮಹಾಗ್ರಂಥಗತ ಮಹಾಮಹಿಮೆಯನ್ನು, ಅದಕ್ಕೆ ಅಧಿಕಾರಿಗಳನ್ನೂ ಹೇಳಿ, ಹೃದಯಂಗಮವಾಗಿ ಪರಮಾತ್ಮನನ್ನು ಸ್ತೋತ್ರಮಾಡಿ ಉಪರಮಿಸಿರುತ್ತಾರೆ.

## ಸರ್ವವ್ಯಾಖ್ಯಾನಸಾರಸಂಗ್ರಹ

ಭಕ್ತವತ್ಸಲನಾದ ಶ್ರೀಪರಮಾತ್ಮನ ಗುಣಾತಿಶಯಗಳನ್ನು ಕೊಂಡಾಡುತ್ತಾ, ಅವನ ಭಕ್ತರ ಸಂರಕ್ಷಣಾತ್ಮಗುಣವನ್ನು ತಿಳಿಸುತ್ತಾರೆ ಪ್ರಸಕ್ತ ಪದ್ಯದಿಂದ. ಸಂಧಿಗತ ವಿಷಯವನ್ನು ಉಪಸಂಹರಿಸುತ್ತಾರೆ ೨೫ ನೆಯ ಈ ಪದ್ಯದಿಂದ.

೧. **ಸತ್** ಎಂದರೆ, ಸಮೀಚೀನವಾದ, ಇತರರ್‍ಯಾರಲ್ಲಿಯೂ ಇಲ್ಲದ ನಿರತಿಶಯುವಾದ ಅಪ್ರಾಕೃತ ಸ್ವಭಾವವುಳ್ಳ ಎಂದರ್ಥ. **ಚಿತ್** ಎಂದರೆ ಜ್ಞಾನ. ಶ್ರೀಪರಮಾತ್ಮನ ಜ್ಞಾನ ಅಪರಿಮಿತವಾದದ್ದು. ನಿರ್ದುಷ್ಟವಾದದ್ದು. ಲವಲೇಶವೂ ದೋಷಗಳು ಇಲ್ಲ. **ಆನಂದ,** ಎಂದರೆ ನಿತ್ಯವಾದ ಸುಖ. **ಆತ್ಮ** ಎಂದರೆ ಶ್ರೀಪರಮಾತ್ಮನೇ ಸಮೀಚೀನವಾದ ಜ್ಞಾನಾನಂದ ಸ್ವರೂಪನೆಂದರ್ಥ. ಅವನ ಸ್ವರೂಪವೇ ಜ್ಞಾನಾನಂದಮಯವಾದ ಶರೀರವು. ಅನಂತಕಲ್ಯಾಣ ಗುಣಗಣ ವಿಶಿಷ್ಟನು. ಆತನ ಜ್ಞಾನ,ಆನಂದಾದಿಗುಣಗಳೆಲ್ಲವೂ ಪರಿಪೂರ್ಣವೇ. ಅಸ್ಪೃಷ್ಟದೋಷವುಳ್ಳದ್ದು. ಇದರಿಂದ ನಿತ್ಯಾನಂದುದ್ರಿಕ್ತನಾದ ಸರ್ವೇಶನೇ **ಸಚ್ಚಿದಾನಂದಾತ್ಮನು.**

೨. ಜೀವೋತ್ತಮರಾದ ಚತುರ್ಮುಖ ಬ್ರಹ್ಮದೇವರು ತಮ್ಮ ಕರಾರ ವಿಂದಗಳಿಂದ ಆ ಪರಬ್ರಹ್ಮಮೂರ್ತಿಯನ್ನು ಸದಾ ಪೂಜಿಸುತ್ತಿರುವರು. ಇದ ರಿಂದ **ಬ್ರಹ್ಮಕರಾರ್ಚಿತಾಂಘ್ರಿ ಸರೋಜನು.**

೩. ಶುದ್ಧಮನಸ್ಕರಾದ ದೇವತೆಗಳಿಗೆ **ಸಮನಸರೆಂದು** ಹೆಸರು. ಅಂತಹ ರಮಾಬ್ರಹ್ಮಾದಿ ದೇವತಾಗಣದಲ್ಲಿ **ಪ್ರೋಚ್ಚ** ಎಂದರೆ ಪರಮಶ್ರೇಷ್ಠ ನೆಂದರ್ಥ. ದೇವತಾವರ್ಗದಿಂದ ಸ್ತುತ್ಯಮಾನನಾದ, ಆ ಜಗದೀಶನು **ಸುಮನಸ ಪ್ರೋಚ್ಚನು.** ಅಂದರೆ ದೇವೋತ್ತಮನು.

೪. ಕರುಣಾಮಯನಾದ ಕಮಲನಾಭನು ತನ್ನ ಕಿಂಕರರಿಗೆ ಒದಗುವ ಸಮಸ್ತ ವಿಪತ್ತುಗಳನ್ನೂ ಪರಿಹರಿಸಿ, ಅವರಿಗೆ ಇಹದಲ್ಲಿ ಭಾಗ್ಯಾದಿಗಳನ್ನು ನೀಡುವುದಲ್ಲದೆ, ಸತ್ಸಾಧನೆಗೆ ಸಹಕಾರ ಸಾಮಗ್ರಿಗಳಾದ ಜ್ಞಾನ, ಭಕ್ತಿ, ವೈರಾಗ್ಯಗಳೆಂಬ ದೈವೀಸಂಪತ್ತನ್ನು ಕರುಣಿಸುವನು. ಅಂತ್ಯದಲ್ಲಿ ಲಿಂಗಭಂಗ ದ್ವಾರಾ, ಕರ್ಮವಿಮೋಚನೆಗೈದು, ಸ್ವಸ್ವರೂಪಗತ ಆನಂದದನ್ನು ಪ್ರಕಟ ಮಾಡಿ, ಪರಮಪುರುಷಾರ್ಥರೂಪವಾದ ಮೋಕ್ಷಾನಂದವನ್ನು ನೀಡುವನು. ಇದರಿಂದ ಆ ಮಂಗಳವಿಗ್ರಹನು **ಸನ್ಮಂಗಳದನು.**

೫. ಸಚ್ಛಾಸ್ತ್ರಗಳನ್ನು ಬೋಧಿಸುವ ಸಲುವಾಗಿ ಭಗವದಾಜ್ಞೆಯಿಂದ ಭೂತಳದಲ್ಲಿ ಅವತರಿಸಿದ ಶ್ರೀವಾಯುದೇವರ ತೃತೀಯಾವತಾರಭೂತರಾದ ಶ್ರೀಮನ್ಮಧ್ವಮುನಿಮಾನಸಮಂದಿರನಾಗಿದ್ದಾನೆ. ಅವರ ಅಂಥರಂಗಸ್ಥನಾಗಿ ಅವರ ದ್ವಾರಾ ತತ್ತ್ವಮಾರ್ಗಪ್ರದರ್ಶನ ಮಾಡಿಸಿದ ಆ ಮಧ್ವಮುನಿಮಾನಸ ಮಂದಿರನನ್ನು **ಮಧ್ವಾಂತಃಕರಣರೂಢನೆಂದಿದ್ದಾರೆ.**

೬. ಸರ್ವಕಾಲಕ್ಕೂ, ನಾಶರಹಿತನು. ಇತರರಂತೆ ಚತುರ್ವಿಧನಾಶಗಳಿಂದ ರಹಿತನು. ನಿರ್ವಿಕಾರನು. ಸದಾ ಶಶ್ವದೇಕಪ್ರಕಾರನಾಗಿ ವಿರಾಜಿಸುವ ಶಾಶ್ವತಸ್ವರೂಪನು. ಇದರಿಂದ **ಅಚ್ಯುತನಾಮಕನು.**

೭. ತನ್ನನ್ನೇ ನಂಬಿ, ಆತನ ಪಾದಕಂಜಗಳಲ್ಲಿ ದೃಢವಾದ ಭಕ್ತಿಯುಳ್ಳ ಸುಜನರೇ **ನಿಚ್ಚ ಮೆಚ್ಚಿದ ಜನರು.** ಅನ್ಯಥಾಶರಣಂ ನಾಸ್ತಿ, ತ್ವಮೇವ ಶರಣಂಮಮ ಎಂಬ ಅನ್ಯನ್ಯ ಭಕ್ತವೃಂದವನ್ನು ಸರ್ವವಿಪತ್ತುಗಳಿಂದ ಸಂರಕ್ಷಿಸುವನು. ಅವರನ್ನು ಎಂದೆಂದಿಗೂ ಕೈಬಿಡುವುದಿಲ್ಲ. ಇದಕ್ಕೆ ದೃಷ್ಟಾಂತವಾಗಿ **ಶ್ರೀಮದ್ಭಾಗವತ ದಶಮಸ್ಕಂದಗತ** ಪ್ರಸಂಗ ವಿಶೇಷವನ್ನು ತಿಳಿಸುತ್ತಾರೆ.

ಒಮ್ಮೆ ನಂದಗೋಕುಲದ ಸಮಸ್ತ ಗೋವೃಂದ ಹಾಗೂ ನಂದಾದಿ ಗೋಪಾಲಕರು ವನವಿಹಾರಕ್ಕಾಗಿ ಹೊರಟಿದ್ದಾರೆ. ಕ್ರೀಡಾದಿಗಳನಂತರ, ಆಯಾಸದಿಂದ ಮಲಗಿರಲು,ರಾತ್ರಿಯಲ್ಲಿ ಕಾಳ್ಗಿಚ್ಚು ವ್ಯಾಪಿಸಿಕೊಂಡು, ಅರಣ್ಯವನ್ನು ಸುಡಲಾರಂಭಿಸಿತು. ಆಗ ಗೋವೃಂದವು ಚದುರಿ ದಿಕ್ಕಾಪಾಲಾಗಿ ಓಡಲು ಆರಂಭಿಸಿದವು. ಗೋಪಾಲಕರು ಭಯದಿಂದ ತತ್ತರಿಸಿದರು. ಆಗ ದಯಾಮಯನಾದ ಶ್ರೀಕೃಷ್ಣನು, ಅವರಿಗೆ ಅಭಯ ಪ್ರದಾನ ಮಾಡಿ, ದಟ್ಟವಾಗಿ ವ್ಯಾಪಿಸಿಕೊಂಡು ಮುನ್ನುಗ್ಗಿ ಬರುತ್ತಿರುವ ಆ ಕಾಡ್ಗಿಚ್ಚನ್ನು ನುಂಗಿ,ಸಕಲರನ್ನೂ ಆ ಮಹಾವಿಪತ್ತಿನಿಂದ ಪಾರುಮಾಡಿದನು. ಇಂತಹ ಕರುಣಾಸಾಗರನಾದ ಕಮಲಾಪತಿಯು ತನ್ನ ನಂಬಿದವರಿಗೆ ಸದಾ ಬೆಂಬಲಿಗನಾಗಿದ್ದು ಸಂರಕ್ಷಕನಾಗಿರುವನೆಂದು ತಿಳಿಸುತ್ತಾ, ತಮ್ಮಲ್ಲಿ ತಮ್ಮ ಇಷ್ಟದೈವನೂ, ಉಪಾಸ್ಯಮೂರ್ತಿಯೂ ಆದ ಗರುಡವಾಹನ ಶ್ರೀಲಕ್ಷ್ಮೀನರಸಿಂಹದೇವರು ಬಿಂಬನಾಗಿ ನಿಂತು ನುಡಿಸಿದ ಸಂಧಿಗತ ತತ್ತ್ವಗಳನ್ನು **ಆ ಜಗನ್ನಾಥವಿಠ್ಠಲನ** ಪಾದಜಲಜಗಳಲ್ಲಿ ಅರ್ಪಿಸುತ್ತಾ, ಪ್ರಸಕ್ತ ಸಂಧಿಯನ್ನು ಉಪಸಂಹರಿಸುತ್ತಾರೆ.

ಇಂತು ೧೦ ನೆಯ ಸಂಧಿಯಾದ **ಸರ್ವಪ್ರತೀಕಸಂಧಿಯಲ್ಲಿ** ಪ್ರಸಕ್ತ ೨೫ ನೆಯ ಪದ್ಯದ ಉಪಸಂಹಾರರೂಪವಾದ **ಸರ್ವವ್ಯಾಖ್ಯಾನ ಸಾರ ಸಂಗ್ರಹವು** ಪರಿಸಮಾಪ್ತಿಯಾಯಿತು.

**॥ ಶ್ರೀಗರುಡವಾಹನ ಲಕ್ಷ್ಮೀನರಸಿಂಹಾಭಿನ್ನ**
**ಶ್ರೀ ಜಗನ್ನಾಥವಿಠ್ಠಲಾರ್ಪಣಮಸ್ತು ॥**

# ಶುದ್ಧಾಶುದ್ಧ ಪತ್ರಿಕೆ

| ಕ್ರಮಸಂಖ್ಯೆ | ಪುಟಸಂಖ್ಯೆ | ಸಾಲುಸಂಖ್ಯೆ | ತಪ್ಪು | ಸರಿ |
|---|---|---|---|---|
| 1 | 2 | 3 | 4 | 5 |
| 1 | 2 | 6 | ಅಸುಸರಾಗಲೀ | ಅಸುರರಾಗಲಿ |
| 2 | 4 | 23 | ಅ | ಆ |
| 3 | 7 | 16 | ತೊರೆದು. ಶ್ರೀಹರಿಯೇ | ತೊರೆದು, ಸರ್ವಜ್ಞನೂ ಶ್ರೀಹರಿಯೇ |
| 4 | 7 | 25 | ಭಗವತ್ತ್ರೀತಿಗೆ | ಭಗವತ್ಪ್ರೀತಿಗೆ |
| 5 | 8 | 2 | ವಿಭೂತಿ ರೂಪಗಳನ್ನೇ | ವಿಭೂತಿ ರೂಪಗಳನ್ನು |
| 6 | 9 | 21 | ಕನ್ನಡಸಾಹಿತ್ಯವೆಂದು | ಕನ್ನಡಕಾವ್ಯವೆಂದು |
| 7 | 10 | 5 | ಮುಕುಂದನ ಮುಕ್ತಿಪ್ರದವಾದ | ಮುಕ್ತಿಪ್ರದನಾದ ಮುಕುಂದನ |
| 8 | 14 | 6 | ಅನುಕೂಲಕ್ಕಾಗಿ | ಅನುಕೂಲರಾಗಿ |
| 9 | 16 | 9 | ಶ್ರೀ ಲಕ್ಷ್ಮೀದೇವರ | ಶ್ರೀಲಕ್ಷ್ಮೀದೇವೇರೇ |
| 10 | 16 | 13 | ಅನುಕೂಲರಾಗಿಯೂ | ಅನುಕೂಲರಾಗಿನ್ನೂ |
| 11 | 16 | 23 | ಭಗವದಧೀನರಿಗೆ | ಭಗವದ್ದಾಸರಿಗೆ |
| 12 | 16 | 23 | ಪರಾಭವವಿಲ್ಲವೆಂದು ಹೇಳುತ್ತಾರೆ | ಪರಾಭವವಿಲ್ಲವೆಂದು ಸಂಧಿಯ ಮುಖ್ಯವಾದ ಸಾರಾಂಶವನ್ನು ಹೇಳುತ್ತಾರೆ |
| 13 | 17 | 4 | ಸುಲಭ ಸಾಧನವನ್ನೇ | ಸುಖಸಾಧನವನ್ನೇ |
| 14 | 17 | 6–7 | ಕಷ್ಟಪಟ್ಟಿದ್ದಕ್ಕಾಗಿ | ಕಷ್ಟಪಟ್ಟಿದ್ದಾಗಿ |

| 1 | 2 | 3 | 4 | 5 |
|---|---|---|---|---|
| 15 | 17 | 8 | ಕಂಜದನು ಕಾವೇಶತೋ | ಕಿಂಚಿದಸುರಾವೇಶತೋ |
| 16 | 17 | 11 | ಕಿಂಚಿದ್ದು ಖ | ಕಿಂಚಿದ್ದುಃಖ |
| 17 | 17 | 15 | ಪ್ರತಿಬಂಧಕ ವಾಗುವು ದಿಲ್ಲವೋ | ಪ್ರತಿಬಂಧಕವಾಗಲಿಲ್ಲವೋ |
| 18 | 18 | 8–9 | ಸನ್ನಿರುದ್ಧಾವಾವೃತ್ಯಾನಾ | ಸನ್ನಿರುದ್ಧಾವಾವೃತ್ಯಾವಾ |
| 19 | 18 | 14 | ಪ್ರತೀಕೋಪಾಸ್ತಾ | ಪ್ರತಿಕೋಪಾಸ್ತೌ |
| 20 | 18 | 16 | ಇತ್ಯಾಲೋಡ | ಇತ್ಯಾಲೋಚ್ಯ |
| 21 | 25 | 18 | ಜಂ | ಓಂ |
| 22 | 25 | 19 | ಸನ್ವಂತ್ವಾವನು | ಸನ್ವಂತ್ವಾವಸು |
| 23 | 25 | 20 | ಜಂ | ಓಂ |
| 24 | 25 | 21 | ಏಕಾದಶಿ | ಏಕಾದಶ |
| 25 | 26 | 15 | ಸಂತೋಷಪಡಿಸುವರಿಗೆ | ಸಂತೋಷಪಡುವರಿಗೆ |
| 26 | 26 | 18 | ಅಧಿ | ಆಧಿ |
| 27 | 26 | 21 | ಭಾವಾರ್ಥ | ಭಾಗವತಾರ್ಥ |
| 28 | 27 | 10 | ಶ್ರೀ | ಶ್ರೀಃ |
| 29 | 27 | 10 | ತದ್ವದಂತಃ | ತದ್ವಂತಃ |
| 30 | 27 | 16 | ಮನಸ್ಸನ್ನೇ | ಮನಸ್ಸನ್ನು |
| 31 | 33 | 8 | ಅವರನ್ನು | ಅವರನ್ನೇ |
| 32 | 83 | 18 | ನತ್ವಮ್ಯೃತವಾಸಂ | ನತ್ವಮ್ಮೃತವಾಸಂ |
| 33 | 33 | 21 | ಘುಕ | ಝಿಕ |
| 34 | 34 | 7 | ನಾಪಜ್ಞಾಹಾರ್ಹಃ | ನಾವಜ್ಞಾಹಾರ್ಹಃ |
| 35 | 34 | 9 | ಉದಾಸ್ತೀ | ಉದಾಸ್ತೇ |
| 36 | 34 | 9 | ಆಜ್ಞೋಲ್ಕಃ | ಅಜ್ಞೋಲ್ಕಃ |
| 37 | 34 | 10 | ಕಟಾಕ್ಷೇ | ಕಟಾಕ್ಷಿ |
| 38 | 34 | 10 | ಅಶ್ನಾನ್ಯನಂತಃ | ಅಶ್ನಾತ್ಯನಂತಃ |

| 1 | 2 | 3 | 4 | 5 |
|---|---|---|---|---|
| 39 | 34 | 12 | ಭವತು | ಭವತ್ವ |
| 40 | 34 | 14 | ಸಮವನುಶಾಸ್ತಿ | ಸಮನುಶಾಸ್ತಿ |
| 41 | 34 | 20 | ತರಂಗಗಳಿಂದ | ಮಂಗಲ ತರಂಗಗಳಿಂದ |
| 42 | 34 | 20 | ಉಪ್ಪುನೀರು | ಉಪ್ಪಿನಿಂದ |
| 43 | 35 | 14 | ತದಭಿಮಾನಿಗಳಿಲ್ಲಿ | ತದಭಿಮಾನಿಗಳಲ್ಲಿ |
| 44 | 36 | 15 | ವ್ಯಾಪ್ತರೂಪಗಳಿಂದ | ಸಕಲ ಜಡವಸ್ತುಗಳಲ್ಲಿ ವ್ಯಾಪ್ತರೂಪಗಳಿಂದ |
| 45 | 37 | 23-24 | ಭಗವತ್ಸನ್ನಿಧಾನ ವಿಶಿಷ್ಟವಾದ | ಭಗವತ್ಸನ್ನಿಧಾನ ವಿಶೇಷ ದಿಂದಲೇ |
| 46 | 40 | 4 | ಪ್ರಬಲವಾದ | ತ್ರುಟಿಲವಾದಿ |
| 47 | 40 | 5 | ಇತ್ಯಾದಿ, ಮೂರು ಲೋಕ ದೊಳು | ಇತ್ಯಾದಿ ತನ್ನ ಇಡೀ ಆಯು ರ್ಮಾನರೂಪವಾದಕಾಲವು, ಪುಣ್ಯಕಾಲವು-ಅತ್ಯಂತಶುಭ ಮುಹೂರ್ತಗಳಾಗುವುವು, ಮೂರು ಲೋಕದೊಳು |
| 48 | 40 | 6-7-8 | ಪಾತಾಳದಲ್ಲಿರುವ .........ಸರ್ವಜೀವರು | ಪಾತಾಳದಲ್ಲಿರುವ, ಸರ್ವ ಜೀವರು |
| 49 | 40 | 12 | ಬೀಜಯುಕ್ತ | ವೇದೋಕ್ತ |
| 50 | 41 | 15 | ಕರ್ಮಗಳನ್ನೂ | ಕರ್ಮಗಳೂನೂ |
| 51 | 42 | 8 | ಭಾಗವತ ಏಕಾದಶಸ್ಕಂದ ವ್ಯಾಖ್ಯಾನುಸಾರವಾಗಿ | ಭಾಗವತ ಏಕಾದಶಸ್ಕಂದದ ವಾಕ್ಯಾನುಸಾರವಾಗಿ |
| 52 | 42 | 12 | ಸರ್ನತ್ರ | ಸರ್ವತ್ರ |
| 53 | 42 | 13 | ವ್ಯಾಖ್ಯಾನುಸಾರ | ವಾಕ್ಯಾನುಸಾರ |
| 54 | 42 | 15 | ಇಲ್ಲವರೆಂದರ್ಥ | ಇಲ್ಲದವರೆಂದರ್ಥ |
| 55 | 42 | 16 | ಅಜ್ಞಾನ | ಆ ಜ್ಞಾನ |

| 1 | 2 | 3 | 4 | 5 |
|---|---|---|---|---|
| 56 | 44 | 7 | ಚೊತ್ಥಾಯ | ಚೋತ್ಥಾಯ |
| 57 | 44 | 17 | ಅನ್ಯರಾಹು | ಅನ್ಯದಾಹು |
| 58 | 44 | 18 | ತಸ್ಯಾರನ್ಯೋತ್ತರಂ | ತಸ್ಕರಸ್ಯೋತ್ತರಂ |
| 59 | 44 | 20 | ತಾಸ್ತೀ | ತಾಸ್ತೇ |
| 60 | 44 | 25 | ಸಂಸ್ಟಷ್ಟಿಂ | ಸಂಸೃಷ್ಟಂ |
| 61 | 45 | 1 | ಮಾಯಾವಾದಾಖ್ಯ | ಮಾಯಾವಾದ್ಯಾಖ್ಯ |
| 62 | 45 | 9 | ಇತ್ಯಾದ್ಯನುಸಂಧಾನತ್ರಣಾಂ | ಇತ್ಯಾದ್ಯನುಸಂಧಾನತೃಣಾಂ |
| 63 | 45 | 13 | ಕುರ್ಯಾಃ | ಕುರ್ಯುಃ |
| 64 | 45 | 14 | ಪ್ರೀತಿಸ್ಯಾತ್ | ಪ್ರೀತಿಃ ಸ್ಯಾತ್ |
| 65 | 45 | 19 | ಮೋಹಮುಪಾಸ್ತಿಂ | ಸೋಹಮುಪಾಸ್ತಿಂ |
| 66 | 45 | 19 | ಚಂ | ಚರೀ |
| 67 | 45 | 21 | ದೀಯೇತ್ | ದೀಯತೇ |
| 68 | 45 | 23 | ವಿಜಯರಾಜಾಶ್ವ | ವಿಜಯರಾಜಾಶ್ಚ |
| 69 | 46 | 4 | ಯದ್ಯಪ್ಯೇನಮೇವ | ಯದ್ಯಪ್ಯೇವಮೇವ |
| 70 | 47 | 10 | ಧ್ಯಾನೋಪಾಸಕನಿಗೆ | ಧ್ಯಾನೋಪಾಸನೆಗೆ |
| 71 | 46 | 11 | ಶಾಸ್ತ್ರಸಮ್ಮತವೂ ಇವೆ | ಶಾಸ್ತ್ರಸಮ್ಮತವೂ ಆಸನಾದಿ ನಿಯಮಗಳಂತೆ ಕಾಲದೇಶಗಳ ನಿಯಮವೂ ಇವೆ |
| 72 | 48 | 9 | ಅವರಿಗೆ | ಅವರವರಿಗೆ |
| 73 | 48 49 | 23–1 | ಪರಿಪೂರ್ಣನಾಗಿದ್ದಾನೆ | ಪರಿಪೂರ್ಣನಾಗಿ ವ್ಯಾಪ್ತನಾಗಿದ್ದಾನೆ |
| 74 | 50 | 18-19 | ಅಭಿವ್ಯಂಜಕ ಶಕ್ತಿಪ್ರದಾನವಾಗಿರುವುದರಿಂದಲೇ | ಅಭಿವ್ಯಂಜಕ ಶಕ್ತಿಪ್ರದನಾಗಿರುವುದರಿಂದಲೇ |
| 75 | 50 | 20 | ಅರ್ಥಾನುಪತ್ತಿ | ಅರ್ಥಾನುಪತ್ತಿ |
| 76 | 55 | 3 | ಮೊದಲಾದ | ಮೊದಲಾದವುಗಳ |

| 1 | 2 | 3 | 4 | 5 |
| --- | --- | --- | --- | --- |
| 77 | 56 | 16 | ದೊಣೆಗಳಿಂದ | ದೊಣೆಗಳಿಂಬ |
| 78 | 57 | 3 | ೫ | ೪ |
| 79 | 60 | 3 | ಶರೀರಗತ ರೋಮಕಂಪ ಗಳಿಲ್ಲ | ಶರೀರಗತರೋಮಕೂಪ ಗಳಲ್ಲಿ |
| 80 | 63 | 10 | ಸುದರ್ಶಿತಃ | ಸುದುರ್ಪಶಃ |
| 81 | 66 | 11 | ಮಾಡುವ ಜಲವು | ಮಾಡುವುದು |
| 82 | 75 | 6 | ಪ್ರಾಪ್ತವಾಗಕ್ಕಿಂತ | ಪ್ರಾಪ್ತವಾಗದಕ್ಕಿಂತ |
| 83 | 77 | 25 | ನಾನ್ಯಥಾಃ | ನಾನ್ಯಥಾ |
| 84 | 85 | 17 | ಅಸುರರಲ್ಲಿದು | ಅಸುರರಲ್ಲಿದ್ದು |
| 85 | 91 | 4 | ಸುಖಮೇವೋತ್ತರೋತ್ತಂ | ಸುಖಮೇವೋತ್ತರೋತ್ತರಂ |
| 86 | 91 | 16 | ಅಧಂ | ಅಘಂ |
| 87 | 92 | 7 | ಜೀವರಲ್ಲಿದ್ದನೇನು | ಜೀವರಲ್ಲಿದ್ದರೇನು |
| 88 | 94 | 7 | ಚ್ಯುತ | ಚ್ಯುತನ |
| 89 | 98 | 23 | ಸೆ,ರಿದ | ಸೇರಿದ |
| 90 | 112 | 21 | ಭೌದ್ಧಿಕ | ಬೌದ್ಧಿಕ |
| 91 | 116 | 1 | ಸ್ವಚ್ಛವಾನ | ಸ್ವಚ್ಛವಾಗಿ |
| 92 | 117 | 22 | ಜಿಹ್ವಾಗ್ರೇ | ಜಿಹ್ವಾಗ್ರೇ |
| 93 | 117 | 22 | ಸಸ್ತಿ | ನಾಸ್ತಿ |
| 94 | 119 | 5 | ಶಕ್ತ್ಯಾತ್ಮ | ಶಕ್ತ್ಯಾತ್ಮಕ |
| 95 | 122 | 16 | ಅಹಂಮಮತಾ ವಿಚಾರವೇ | ಅಹಂಮಮತಾದೋಷ ವಿಚಾರವೇ |
| 96 | 122 | 24 | ಕೃಷ್ಣಾಜಿನೋದ್ವ್ಯಾಸ ನೋಪವಿಷ್ಟನಾಗಿ | ಕೃಷ್ಣಾಜಿನಾದ್ವ್ಯಾಸನೋಪ ವಿಷ್ಟನಾಗಿ |
| 97 | 126 | 9 | ಗೈದರೇನು | ಗೈಸಿದರೇನು |
| 98 | 128 | 5 | ಅತ್ಯಾಗ್ರಹಪೂರ್ವಕ ದಾಗಿನ್ನೂ | ಅತ್ಯಾಗ್ರಹಪೂರ್ವಕ ವಾಗಿನ್ನೂ |

| 1 | 2 | 3 | 4 | 5 |
|---|---|---|---|---|
| 99 | 129 | 2 | ಜಹ್ವೋಪಸ್ಥಂ | ಜಿಹ್ವೋಪಸ್ಥಂ |
| 100 | 129 | 20 | ಕರ್ಮಸ | ಕರ್ಮನ |
| 101 | 129 | 22 | ಜಯಿಸಿದವನಿಗೆ | ಜಯಿಸದವನಿಗೆ |
| 102 | 130 | 5 | ಕಾಮನ ಬಲಿಗೆ | ಕಾಮನ ಬಲಿಗೆ |
| 103 | 132 | 7 | ಪಾಠಪ್ರಚನಾದಿಗಳನ್ನು | ಪಾಠಪ್ರವಚನಾದಿಗಳನ್ನು |
| 104 | 137 | 11 | ಸ್ಮರಿಸಿದವನ | ಸ್ಮರಿಸದವನ |
| 105 | 142 | 15 | ಕಾವ್ಯವಿಲ್ಲವೆಂದರೆ | ಕಾವ್ಯವಿದಲ್ಲವೆಂದರೆ |
| 106 | 145 | 19 | ೪ | ೫ |
| 107 | 146 | 8 | ಹರಿಪದಾಖ್ಜದಿ | ಹರಿಪದಾಬ್ಜದಿ |
| 108 | 146 | 9 | ವೃಂ | ವುಂ |
| 109 | 146 | 17 | ೭೯ | ೧೯ |
| 110 | 147 | 15 | ದಾರಿಗೆಅಶ್ಲಾಘ್ಯ | ದಾರಿಗೆ ಶ್ಲಾಘ್ಯದಾರಿಗೆ ಅಶ್ಲಾಘ್ಯ |
| 111 | 150 | 10 | ಶ್ರೀಹರಿಯು | ಶ್ರೀಹರಿಯಲ್ಲಿ |
| 112 | 159 | 21 | ಋಜುಸ್ವಭಾವದ ಗುರು | ಋಜುಸ್ವಭಾವದ ಸಜ್ಜನರಿಗೆ ಸದಾ ಉಪದೇಶಿಸು ಎಂದು ಈ ಗ್ರಂಥೋಕ್ತ ವಿಷಯಗಳನ್ನು |
| 113 | 160 | 1 | ದಾಸರಾರ್ಯರ | ದಾಸರಾಯರ |
| 114 | 163 | 15 | ಹರಿಭಕುವಲ್ಲದೆಲೆ | ಹರಿಭಕುತಗಲ್ಲದೆಲೆ |
| 115 | 165 | 8 | ಕಾವ್ಯದಲ್ಲಿ | ಕಾವ್ಯವಲ್ಲ |
| 116 | 167 | 13 | ಪರಾತ್ವದ | ಪರಾತ್ಪರ |
| 117 | 169 | 12 | ನಾದ | ವಾದ |
| 118 | 171 | 13 | ಶ್ಧೀ | ಶ್ರೀ |
| 119 | 176 | 4 | ವಿಕರಗಳಿಲ್ಲ | ವಿಕಾರಗಳಿಲ್ಲ |